ॐ

ॐश्रीमन्महागणाधिपतये नमः

ॐ नमो वेदपुरुषाय

# ಶ್ರಾದ್ಧಪ್ರಯೋಗಃ (ಆಶ್ವಲಾಯನೀಯಃ)

## ಕನ್ನಡಭಾಷಾನುವಾದಟಿಪ್ಪಣ್ಯಾದಿಭಿಃ ಸಹಿತಃ

ಸಂಪಾದಕಃ

**ಬಾಲಸುಬ್ರಹ್ಮಣ್ಯ ಭಟ್ಟಃ. ಕೇ**

ಬೆಂಗಳೂರು

**ಮುದ್ರಣ ಸಹಾಯ**

**ಜನಸೇವಾ ಚಾರಿಟೇಬಲ್ ಅಸೋಸಿಯೇಷನ್ (ರಿ.) ಬೆಂಗಳೂರು**

**ಶ್ರಾದ್ಧಪ್ರಯೋಗಃ(ಆಶ್ವಲಾಯನೀಯಃ)**

ಕನ್ನಡಭಾಷಾನುವಾದ ಟಿಪ್ಪಣ್ಯಾದಿ ಸಹಿತಃ

(ಆಶ್ವಲಾಯನಸೂತ್ರಾನುಸಾರಿ ಪಾರ್ವಣ, ಸಂಕಲ್ಪಾದಿ ಶ್ರಾದ್ಧಾದಿಗಳ ಪ್ರಯೋಗಸಂಗ್ರಹಾತ್ಮಕ )

**ಮೊದಲ ಮುದ್ರಣ:** 2022

**ಪ್ರತಿಗಳು:** 500

**ಮುಖಬೆಲೆ:** 250/-

**ಹಕ್ಕು:** ಸಂಪಾದಕರದ್ದು

ಸಂಪಾದಕಃ
ಬಾಲಸುಬ್ರಹ್ಮಣ್ಯ ಭಟ್ಟಃ. ಕೇ
ಬೆಂಗಳೂರು
ದೂರವಾಣಿ; 9886193144

ಮುದ್ರಣ ಸಹಾಯ

**ಜನಸೇವಾ ಚಾರಿಟೇಬಲ್ ಅಸೋಸಿಯೇಷನ್ (ರಿ.) ಬೆಂಗಳೂರು**

Printed at:**Sri yanthrodharaka printers And publisher Bangalore**
**Mob: 9448795121/ 9886071144**
**Email: sypp2019@gmail.com**

# ಮುನ್ನುಡಿ

श्रीः

॥ श्रीशङ्करः शरणम् ॥

ಧರ್ಮಸಿಂಧುಕಾರರು ಶ್ರಾದ್ಧಶಬ್ದದ ನಿರ್ವಚನ ಮಾಡಬೇಕಾದರೆ "पित्रादीन् मृतानुद्दिश्य विहिते काले देशे पक्वान्नामान्न-हिरण्यान्यतमद्रव्यस्य विधिना दानम्" ಮೃತರಾದ ಪಿತ್ರಾದಿಗಳನ್ನು ಉದ್ದೇಶಿಸಿ ಯೋಗ್ಯವಾದ ಕಾಲ ಹಾಗು ದೇಶದಲ್ಲಿ ಪಕ್ವಾನ್ನ ಅಥವಾ ಆಮಾನ್ನ ಅಥವಾ ಹಿರಣ್ಯ ಇವುಗಳಲ್ಲಿ ಒಂದನ್ನು ಶಕ್ಯನುಸಾರವಾಗಿ ದಾನಮಾಡುವುದು ಎಂದು ಹೇಳಿದ್ದಾರೆ. ಶ್ರಾದ್ಧದಲ್ಲಿ ಅಗ್ನೌಕರಣ, ಪಿಂಡದಾನ, ಬ್ರಾಹ್ಮಣಭೋಜನಗಳು ಮುಖ್ಯವಾಗಿವೆ. ಈ ಅರ್ಥವನ್ನು ಹೇಳುವ ವಚನವು ಹೀಗಿದೆ –

होमश्च पिण्डदानञ्च तथा ब्राह्मणभोजनम् ।
श्राद्धशब्दाभिधेयं स्यादेकस्मिन्नौपचारिकम् ॥

''ಹೋಮ(ಅಗ್ನೌಕರಣ), ಪಿಂಡದಾನ, ಬ್ರಾಹ್ಮಣಭೋಜನ ಇವುಗಳು ಶ್ರಾದ್ಧದಲ್ಲಿ ಮುಖ್ಯವಾಗಿದ್ದು ಇವುಗಳಲ್ಲಿ ಒಂದೊಂದಕ್ಕೆ ಶ್ರಾದ್ಧವೆಂದು ಹೇಳುವುದು ಗೌಣವಾಗಿದೆ.'' ಹೀಗೂ ವಚನವಿರುವುದರಿಂದ ಸಾಮರ್ಥ್ಯವಿಲ್ಲದವರು ಪಿಂಡದಾನಾದಿಗಳನ್ನು ಮಾಡದೆ ಅತ್ಯಂತ ಅಸಾಮರ್ಥ್ಯವಿರುವಾಗ ಬ್ರಾಹ್ಮಣಬೋಜನವನ್ನು ಮಾಡಿಸಿದರೂ ಶ್ರಾದ್ಧದ ಸಾಮಾನ್ಯ ಫಲಬರುವದೆಂದು ಗೊತ್ತಾಗುತ್ತದೆ.

यजुषां पिण्डदानं तु बह्वृचानां द्विजार्चनम् ।
श्राद्धशब्दाभिधेयं स्यादुभयं सामवेदिनाम् ॥

''ಯಜುರ್ವೇದಿಗಳಿಗೆ ಪಿಂಡದಾನ, ಋಗ್ವೇದಿಗಳಿಗೆ ದ್ವಿಜಾರ್ಚನ, ಸಾಮವೇದಿಗಳಿಗೆ ಇವೆರಡೂ ಮುಖ್ಯವಾಗಿದೆ'' ಈ ವಚನದಿಂದಲೂ ಹಿಂದೆ ಹೇಳಿದ ಸಾಮಾನ್ಯಫಲಕ್ಕೆ ಪುಷ್ಟಿ ಸಿಗುತ್ತದೆ. ನಾಸ್ತಿಕರಂತೆ ಮರಣೋತ್ತರದಲ್ಲಿ ಪಿತೃಗಳು ಇರುವುದಿಲ್ಲವೆಂದು ಅಶ್ರದ್ಧೆಯಿಂದ ಶ್ರಾದ್ಧಮಾಡದಿದ್ದರೆ ಪಿತೃಗಳು ಅವನ ರಕ್ತಪಾನಮಾಡುವರೆಂಬ ವಚನವೂ ಇದೆ.

ಶ್ರಾದ್ಧವೆಂದರೆ ಶ್ರದ್ಧೆಯಿಂದ ಮಾಡುವ ಪಿತೃಕರ್ಮ ಇದರಿಂದ ಪಿತೃಗಳು ಯಾವುದೇ ರೂಪದಿಂದ ಇದ್ದರೂ ಅವರಿಗೆ ಶ್ರಾದ್ಧದಿಂದ ಆಹಾರ ದೊರೆಯುವದು. ಸರ್ಪವಾಗಿದ್ದರೆ ವಾಯುರೂಪದಿಂದ ವೃಷಭವಾಗಿದ್ದರೆ ತೃಣರೂಪದಿಂದ ಅವರಿಗೆ ಆಹಾರವು ದೊರೆತು ತೃಪ್ತಿಯನ್ನು ಪಡೆಯುವರು. ಅವರು ತೃಪ್ತರಾದರೆ ಕರ್ತೃವಿಗೆ ಆಯುಷ್ಯ, ಧನ, ಸಂತತಿ, ವಿದ್ಯೆಗಳನ್ನು ಕೊಡುವರೆಂದು ಶ್ರಾದ್ಧಪ್ರಕರಣದಲ್ಲಿ ಹೇಳಿದ್ದಾರೆ. ಶ್ರಾದ್ಧಮಾಡುವುದು ಪುತ್ರನ ಕರ್ತವ್ಯವಾಗಿದ್ದು ತಪ್ಪದೆ ಆಚರಿಸಬೇಕು.

ಧರ್ಮಶಾಸ್ತ್ರದಲ್ಲಿ ಒಂದು ವರ್ಷಕ್ಕೆ ೯೬ ಶ್ರಾದ್ಧಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಆದರೆ ಈಗಿನ ಕಾಲದಲ್ಲಿ ಅವುಗಳನ್ನು ಮಾಡುವದು ದುಸ್ತರವಾಗಿರುವದರಿಂದ ಕಾಲಶ್ರಾದ್ಧ ಹಾಗು ಮಹಾಲಯಶ್ರಾದ್ಧವನ್ನಾದರೂ ತಪ್ಪದೆ ಮಾಡಬೇಕೆಂದು ಶಾಸ್ತ್ರದಲ್ಲಿ ಬರೆದಿದ್ದಾರೆ. ಮೀಮಾಂಸಕರಮತದಲ್ಲಿ ಕರ್ಮವೇ ಪ್ರಧಾನವಾಗಿದ್ದು. ಶ್ರಾದ್ಧದಿಂದ ಪಿತೃತೃಪ್ತಿಮಾತ್ರ ಉಂಟಾಗಿ ಬೇರೆ ಫಲವಿಲ್ಲವೆಂದು ಅಭಿಪ್ರಾಯಪಡುತ್ತಾರೆ ಆದರೆ ಪ್ರಯೋಜನವಿಲ್ಲದೆ ಜನರಿಗೆ ಶ್ರಾದ್ಧದಲ್ಲಿ ಪ್ರವೃತ್ತಿಯಾಗದೆ ಬಿಡುವ ಪ್ರಸಂಗ ಬರಬಹುದೆಂದು ಧರ್ಮಶಾಸ್ತ್ರಗಳಲ್ಲಿ ಶ್ರಾದ್ಧದ ಬಗ್ಗೆ ವಿಸ್ತೃತವಾದ ವರ್ಣನೆಯಿದೆ.

जीवतो वाक्यकरणात् प्रत्यब्दं भूरिभोजनात् ।
गयायां पिण्डदानाच्च त्रिभिः पुत्रस्य पुत्रता ॥

ಜೀವಿಸಿರುವಾಗ ತಂದೆಯ ಮಾತುಕೇಳುವದು, ಪ್ರತಿವರ್ಷಶ್ರಾದ್ಧಮಾಡುವದು, ಗಯೆಯಲ್ಲಿ ಪಿಂಡದಾನಮಾಡುವದು, ಈ ಮೂರು ಕರ್ಮಗಳಿಂದ ಪುತ್ರನಿಗೆ ಪುತ್ರತ್ವಬರುವದೆಂದು ಹೇಳಿದ್ದಾರೆ.

ಶ್ರಾದ್ಧಪ್ರಯೋಗಗಳು ದೇಶಭೇದದಿಂದ ಹಾಗು ಶಾಖಾಭೇದದಿಂದ ವಿಭಿನ್ನವಾಗಿರುವದರಿಂದ ಪ್ರಯೋಗವನ್ನು ಅಚರಿಸುವಾಗ ಸಂಶಯಗಳು ಬರುವುದು ಸಹಜ. ಈ ಸಂಶಯಗಳನ್ನು ನಿವಾರಿಸಲು ಎಲ್ಲ ಸ್ಮೃತಿಗಳನ್ನು ಹಾಗು ಅವುಗಳಲ್ಲಿಯ ಪ್ರಯೋಗಗಳನ್ನು ವಿಮರ್ಶಿಸಿ ಪ್ರಯೋಗದ ಅರ್ಥವನ್ನೂ ಪ್ರಮಾಣಪೂರ್ವಕವಾಗಿ ಬರೆದು ವೇ.ಶ್ರೀ. ಬಾಲಸುಬ್ರಹ್ಮಣ್ಯಭಟ್ಟರು ಎಲ್ಲ ಲೌಕಿಕರಿಗೆ ಹಾಗು ವೈದಿಕರಿಗೆ ಮಹೋಪಕಾರ ಮಾಡಿದ್ದಾರೆ. ಪ್ರಯೋಗದಲ್ಲಿ ಭಿನ್ನತೆ ಕಂಡಾಗ ಅದರ ಸಮನ್ವಯವು ಅತಿ ಮಹತ್ವದಾಗಿದ್ದು ಎಲ್ಲ ಶ್ರಾದ್ಧೀಯವಿಷಯಗಳನ್ನು ಉತ್ತಮರೀತಿಯಿಂದ ನಿರೂಪಿಸಿದ್ದಾರೆ. ಈ ಪುಸ್ತಕದ ಪಠನದಿಂದ ಎಲ್ಲರೂ ಶ್ರೇಯೋಭಾಗಿಗಳಾಗಲೆಂದು ಅಪೇಕ್ಷಿಸುತ್ತೇವೆ.

श्रीशके १९४२ शार्वरि-
वत्सरीयफाल्गुन-
शुक्लसप्तम्यां
स्थिरवारे
व्यावहारिकदिनांक:
२०-०३-२०२१

राजेश्वरशास्त्री
श्रीमज्जगद्गुरुशङ्कराचार्य-
संस्कृतपाठशाला
धारवाड

# ಪ್ರಸ್ತಾವನಾ

ಆಶ್ವಲಾಯನಾದಿ ಕಲ್ಪಸೂತ್ರಕಾರರನ್ನು, ಸ್ಮೃತಿನಿಬಂಧನಕಾರರನ್ನು ಮತ್ತು ಸಮಸ್ತ ಪ್ರಯೋಗಗ್ರಂಥಕಾರರನ್ನು ಸ್ಮರಿಸಿ, ನಮ್ಮಿಂದ ಸಂಗ್ರಹಿಸಲ್ಪಟ್ಟಿರುವ ''ಶ್ರಾದ್ಧಪ್ರಯೋಗಃ (ಅಶ್ವಲಾಯನೀಯಃ)'' ಪುಸ್ತಕ ವಿಷಯದ ಮುನ್ನುಡಿಯಾಗಿ ಕೆಲವು ವಿಷಯಗಳನ್ನು ಪ್ರಸ್ತುತಪಡಿಸಲು ಇಚ್ಛಿಸಿರುವೆನು.

ಆಶ್ವಲಾಯನಾದಿ ಗೃಹ್ಯಸೂತ್ರಾನುಸಾರಿಗಳಾದ ನಾವು ಪಾರಂಪರ್ಯಕ್ರಮದಂತೆ ನಮ್ಮ ಸ್ವಸೂತ್ರವನ್ನನುಸರಿಸಿ ಗರ್ಭಾಧಾನಪ್ರಭೃತಿ ಸಂಸ್ಕಾರಗಳನ್ನು, ಪಾಕಯಜ್ಞಾದಿಗಳನ್ನು, ಶ್ರಾದ್ಧಾದಿ ಕರ್ಮಗಳನ್ನು, ಆಚರಿಸುತ್ತಿರುವುದು ಸರ್ವವಿದಿತವಿಷಯವೇ ಆಗಿದೆ. ಆಂತಹ ಕರ್ಮಗಳ ಅನುಷ್ಠಾನಕ್ಕೆ "श्रुतिः स्मृतिः सदाचारः स्वस्य च प्रियमात्मनः। एतच्चतुर्विधं प्राहुः साक्षाद्धर्मस्य लक्षणम्" ಎಂಬಂತೆ ಶ್ರುತಿ, ಸ್ಮೃತಿ, ಸದಾಚಾರ ಮತ್ತು ತನಗೆ ಪ್ರಿಯವಾದದ್ದು, ಇವು ನಾಲ್ಕು ಪ್ರಾಮಾಣ್ಯವಾಗಿರುತ್ತದೆ. ಯಾವುದಾದರೊಂದು ವಿಷಯದಲ್ಲಿ ಇವುಗಳ ಅಭಿಪ್ರಾಯವು ಪರಸ್ಪರವಿರೋಧವಾಗಿದ್ದಾಗ "श्रुतिस्मृतिपुराणेषु विरुद्धेषु परस्परम्। पूर्वपूर्वं बलीयस्यादिति वेदविदो विदुः" ಎಂಬಂತೆ ಪುರಾಣವಚನಕ್ಕಿಂತ ಸ್ಮೃತಿವಚನಗಳು ಮತ್ತು ಸ್ಮೃತಿವಚನಕ್ಕಿಂತ ಶ್ರುತಿವಚನಗಳು ಅಧಿಕ ಪ್ರಾಮಾಣ್ಯವೆನಿಸುತ್ತದೆ. ಹಾಗೆಯೇ ಮೂರನೇ ಪ್ರಮಾಣವಾದ ಸದಾಚಾರಕ್ಕೆ ಅನೇಕ ವ್ಯಾಖ್ಯಾನಗಳಿದ್ದು "यस्मिन् देशे य आचारः पारम्पर्यक्रमागतः। श्रुतिस्मृत्यविरोधेन सदाचारः स उच्यते" ಶ್ರುತಿಸ್ಮೃತಿಗೆ ವಿರೋಧವಲ್ಲದ ದೇಶಾಚಾರಗಳು ಪಾರಂಪರ್ಯಕ್ರಮಗಳು ಸದಾಚಾರವೆಂದು ಕರೆಯಲ್ಪಡುತ್ತದೆ ಎಂಬ ವ್ಯಾಖ್ಯಾನವು ಅತ್ಯುತ್ತಮವೆನಿಸುತ್ತದೆ. ಮತ್ತು ಸ್ಮತಿಗಳಲ್ಲಿ ಪಿತೃವ್ಯಭ್ರಾತ್ರಾದಿಗಳಶ್ರಾದ್ಧದಲ್ಲಿ ಪಾರ್ವಣೈಕೋದ್ದಿಷ್ಟಗಳ ವಿಕಲ್ಪವಿದ್ದು ಸ್ಪಷ್ಟನಿರ್ದೇಶನ ಸಿಗದಿದ್ದಾಗ "देशधर्मं समाश्रित्य वंशधर्मं तथाऽपरम्। सूरयः श्राद्धमिच्छन्ति पार्वणं च क्षयेहनि" ಎಂಬಂತೆ ಸ್ಮತಿಗಳಲ್ಲಿ ವಿಕಲ್ಪಗಳಿದ್ದು ಕಲ್ಪಸೂತ್ರಗಳಲ್ಲಿ ಮಾರ್ಗದರ್ಶನವಿಲ್ಲದಿದ್ದಾಗ ದೇಶಧರ್ಮವನ್ನೋ ವಂಶಧರ್ಮವನ್ನೋ ಅನುಸರಿಸಿ ಶ್ರಾದ್ಧಾದಿಗಳ ಅನುಷ್ಠಾನ ಯುಕ್ತವಾಗಿರುತ್ತದೆ. ಹಾಗು ಪ್ರಯೋಗಗಳಲ್ಲಿ ವಿಕಲ್ಪಗಳಿದ್ದಾಗ ಅಲ್ಲಿ ಶ್ರುತಿಸ್ಮೃತ್ಯವಿರೋಧವಾದ ಸ್ವೇಚ್ಛೆಯು ಪ್ರಮಾಣವೆನಿಸಲ್ಪಡುತ್ತದ್ದೆ. ಆ ವಿಕಲ್ಪಗಳಿಗೆ ಸ್ಮೃತಿಗೃಹ್ಯಗಳಲ್ಲಿನ ಭಿನ್ನ ವಚನಗಳು ಕಾರಣವಾದಾಗ "कल्पस्मृत्योर्विरोधे तु कलौ प्रत्यक्षश्रुतिमूलत्वेन कल्पसूत्रं प्रबलम्" ಎಂಬ ಹೇಮಾದ್ರಿವಚನದಂತೆ ಸ್ಮೃತಿ ಮತ್ತು ಗೃಹ್ಯಸೂತ್ರಗಳಲ್ಲಿನ ವಿಕಲ್ಪಗಳಲ್ಲಿ ಗೃಹ್ಯೋಕ್ತವು ಪ್ರಬಲವು. ಹಾಗು "यः स्वसूत्रमतिक्रम्य परसूत्रेण वर्तते ॥ अप्रमाणमृषिं कृत्वा सोऽप्यधर्मेण युज्यते। तस्मात्सर्वप्रयत्नेन स्वसूत्रं न विलङ्घयेत्"

ಎಂಬಂತೆ ಭಿನ್ನ ಗೃಹ್ಯಸೂತ್ರಗಳಲ್ಲಿ ಪ್ರಯೋಗಾಂತರಗಳಿದ್ದಾಗ, ಸ್ವಸೂತ್ರವಚನವನ್ನನುಸರಿಸಿಯೇ ಕರ್ಮವನ್ನು ಅನುಷ್ಠಿಸಬೇಕು ಮತ್ತು ಸ್ವಸೂತ್ರಕ್ಕಿಂತ ಪರಸೂತ್ರದಲ್ಲಿ ಪ್ರಯೋಗವು ವಿಸ್ತೃತವಾಗಿದ್ದು ಅದು ತನಗೆ ಪ್ರಿಯವಾಗಿದ್ದ ಪಕ್ಷದಲ್ಲೂ "बह्वल्पं वा स्वशाखोक्तं यस्य कर्म प्रचोदितम्। तस्य तावति शास्त्रार्थे कृते सर्वं कृतं भवेत् " ಎಂಬ ಸ್ಮೃತಿವಚನದಂತೆ ಸ್ವಸೂತ್ರೋಕ್ತ ರೀತ್ಯಾ ಕರ್ಮಾನುಷ್ಠಾನವು ಯುಕ್ತ.

ಇಂತಹ ವಿಷಯಗಳನ್ನನುಸರಿಸಿ ನಮ್ಮ ಪೂರ್ವಜರಿಂದ ಪ್ರಯೋಗಪಾರಿಜಾತ, ಸಂಸ್ಕಾರಕೌಸ್ತುಭ, ಪ್ರಯೋಗರತ್ನ, ಬ್ರಹ್ಮಕರ್ಮಸಮುಚ್ಚಯ ಇತ್ಯಾದ್ಯನೇಕ ಪ್ರಯೋಗಗ್ರಂಥಗಳು ರಚಿಸಲ್ಪಟ್ಟಿದ್ದು ಅವುಗಳ ಸಹಾಯದಿಂದ ಸದ್ವೈದಿಕರು ಪ್ರಸಕ್ತ ವೈದಿಕಕರ್ಮಗಳನ್ನು ಅನುಷ್ಠಿಸುತ್ತಿರುವುದೂ ಸರ್ವವಿದಿತ. ಹಾಗಿರುವಾಗ ವರ್ತಮಾನದಲ್ಲಿ ಕಾಲದ ವೈಪರೀತ್ಯದಿಂದಲೋ ಅಜ್ಞಾನದಿಂದಲೋ ಅನೇಕ ಅವೈದಿಕ ದೇಶಾಚಾರಗಳು ಮತ್ತು ಅವೈದಿಕ ಜನಪದ ಧರ್ಮಗಳು ವೈದಿಕಕ್ರಿಯಾಭಾಗಗಳ ಒಳನುಸುಳಿ ''ಶಾಸ್ತ್ರಾದ್ರೂಢಿರ್ಬಲೀಯಸಿ'' ಎಂಬ ವ್ಯಂಗ್ಯೋಕ್ತಿಯಂತೆ ''ಮೂಲಪ್ರಯೋಗವನ್ನೇ'' ಮರೆಮಾಚಿದ್ದು ಮತ್ತು ಅಂತಹ ಅವೈದಿಕ ವಿಚಾರಗಳನ್ನೊಳಗೊಂಡ ಅನೇಕ ಪ್ರಯೋಗಗ್ರಂಥಗಳು ಅಲ್ಲಲ್ಲಿ ಪ್ರಾಂತೀಯ ಭಾಷೆಯಲ್ಲಿ ರಚನೆಯಾಗಿ ಸೂತ್ರ, ಸ್ಮೃತಿ, ನಿಬಂಧನಗ್ರಂಥಗಳ ಆಶಯವನ್ನು ಮೂಲೆಗೆ ತಳ್ಳಿದ್ದು ಮಾತ್ರ ನೋವಿನ ವಿಷಯ. ಅಂತಹ ಅವೈದಿಕ ಪ್ರಯೋಗಗಳನ್ನು ನಿವಾರಿಸಲು ಕೆಲ ವಿದ್ವದ್ವರೇಣ್ಯರು ''ಆಚಾರೇಂದು, ಶ್ರಾದ್ಧಮಂಜರಿ, ಗೃಹ್ಯಾಗ್ನಿಸಾಗರ'' ಇತ್ಯಾದಿ ಸತ್ಪ್ರಯೋಗಗ್ರಂಥಗಳನ್ನು ರಚಿಸಿ ನಮಗೆ ಮಹದುಪಕಾರವನ್ನು ಮಾಡಿರುವುದು ಸ್ತುತ್ಯರ್ಹವಾದ ಸಂಗತಿಯಾಗಿದೆ.

"श्राद्धात्परतरं नान्यच्छ्रेस्करमुदाहृतम्। तस्मात्सर्वप्रयत्नेन श्राद्धं कुर्याद्विचक्षणः" ಎಂಬಂತೆ ನಮ್ಮ ಸಂಸ್ಕೃತಿಯಲ್ಲಿ ಶ್ರಾದ್ಧಪ್ರಯೋಗಕ್ಕೆ ವಿಶೇಷವಾದಸ್ಥಾನವಿದ್ದು "देवकार्यादपि सदा पितृकार्यं विशिष्यते। देवताभ्यः पितृणां हि पूर्वमाप्यायनं शुभम्"ಎಂಬಂತೆ ದೇವಕಾರ್ಯಕ್ಕಿಂತ ಪಿತೃಕಾರ್ಯವನ್ನು ಅಧಿಕ ಶ್ರದ್ಧಾಭಕ್ತಿಪುರಸ್ಸರವಾಗಿ ಅನುಷ್ಠಿಸುತ್ತಿರುವುದು ನಮಗೆ ತಿಳಿದಿರುವ ಸಂಗತಿಯೇ. ಮತ್ತು ಅನೇಕ ಸ್ಮೃತಿ ಮತ್ತು ನಿಬಂಧನ ಗ್ರಂಥದ ಬಹುಭಾಗವನ್ನು ಶ್ರಾದ್ಧಮೀಮಾಂಸೆಯು ಆವರಿಸಿರುವುದು ನಮ್ಮ ಹಿರಿಯರಿಗೆ ಪಿತೃಕರ್ಮಗಳಲ್ಲಿದ್ದ ಅಪರಿಮಿತ ಶ್ರದ್ಧಾಭಕ್ತಿಯ ದ್ಯೋತಕವಾಗಿರುತ್ತದೆ. ನಿರ್ಧನನೂ ಅಶಕ್ತನೂ ಆದ ಕರ್ತೃವು ಗೋವಿಗೆ ಹುಲ್ಲು, ಯಥಾಶಕ್ತಿ ದ್ರವ್ಯದಾನ, ಶ್ರಾದ್ಧೋಕ್ತಮಂತ್ರಪಠನ ಇತ್ಯಾದಿರೂಪದಲ್ಲಿ ಶ್ರಾದ್ಧವನ್ನಾಚರಿಸಲು ಸ್ಮೃತಿಪುರಾಣಗಳು ಮಾರ್ಗವನ್ನಿತ್ತದ್ದು ನಮ್ಮ ಋಷಿಮುನಿಗಳ ಕಾರುಣ್ಯವನ್ನು ಸೂಚಿಸುತ್ತದೆ. ಅದರಲ್ಲೂ ಅತ್ಯಶಕ್ತನು ವನಪ್ರದೇಶಕ್ಕೆಹೋಗಿ ಅಲ್ಲಿರುವ ಹುಲ್ಲು,ಕಂದಗಳನ್ನೇ ಪಿತೃಗಳನ್ನುದ್ದೇಶಿಸಿ ನ ಮೇಸ್ತಿ ವಿತ್ತಂ

ಇತ್ಯಾದಿ ಪ್ರಾರ್ಥನೆಯನ್ನು ಮಾಡಿ ಪಿತೃಗಣಗಳಲ್ಲಿ ಲೋಕಪಾಲಕರಲ್ಲಿ ನಿವೇದಿಸುವ ಪ್ರಕ್ರಿಯೆಯಂತೂ ಕಲ್ಲುಮನಸ್ಸನ್ನೂ ಕರಗಿಸುವಂತಹದ್ದು.

ಪ್ರಸಕ ಆಶ್ವಲಾಯನಸೂತ್ರಾವಲಂಬಿಗಳಾದ ನಮ್ಮಲ್ಲಿ ಅಗ್ನಿಯಲ್ಲಿ ಹೋಮಿಸುವ ಮತ್ತು ಪಾಣಿಯಲ್ಲಿ ಹೋಮಿಸುವ ಅರ್ಥಾತ್ ಅಗ್ನೌಕರಣ, ಪಾಣೌಕರಣವೆಂಬ ಎರಡು ಪದ್ದತಿಗಳು ''ಪ್ರತ್ಯಾಬ್ದಿಕಶ್ರಾದ್ಧ''ದಲ್ಲಿದ್ದು. ದ್ರಾವಿಡಾಚಾರದಲ್ಲಿ ''ಪಿಂಡಪಿತೃಯಜ್ಞವ್ಯತಿಷಂಗಪಾರ್ವಣ ವಿಧಿಯನ್ನನುಸರಿಸಿ'' ಹವಿಃಶ್ರಪಣಾನಂತರ ಔಪಾಸನಾಗ್ನಿಯ ಸ್ವಲ್ಪಭಾಗವನ್ನು ಪ್ರಣಯನಮಾಡಿ ಆಗ್ನೇಯಭಾಗದಲ್ಲಿ ಸ್ಥಾಪಿಸಿ ''ಅತಿಪ್ರಣೀತಾಗ್ನಿ''ಯಲ್ಲಿ ಅಥವಾ ಔಪಾಸನಾಗ್ನಿಯಲ್ಲಿ ಹೋಮಿಸುವ ಅಗ್ನೌಕರಣವಿಧಿಯ ಶ್ರಾದ್ದವು ಬಳಕೆಯಲ್ಲಿದ್ದು. ಆಂಧ್ರ, ಕರ್ನಾಟಕ, ಮಹಾರಾಷ್ಟ್ರಾದಿಗಳಲ್ಲಿ ''ಪಕ್ವಾನ್ನ''ದಿಂದ ಪಿತ್ರ್ಯಬ್ರಾಹ್ಮಣನ ಕರದಲ್ಲಿ ಹೋಮಿಸುವ ''ಪಾರ್ವಣ'' ರೂಪ ಶ್ರಾದ್ಧವು ಆಚರಣೆಯಿದ್ದು ಉಭಯಪಕ್ಷಗಳೂ ಪೂರ್ವಾಚಾರ್ಯರಿಗೆ ಸಮ್ಮತವಾಗಿರುತ್ತದೆ ಮತ್ತು ಶ್ರಾದ್ಧಮಂಜರ್ಯಾದಿ ಗ್ರಂಥಗಳು ಇವುಗಳ ಬಗ್ಗೆ ವಿಸ್ತೃತ ವಿವರವನ್ನಿತ್ತಿರುತ್ತದೆ ಹಾಗೆಯೇ ಸಂಕಲ್ಪಶ್ರಾದ್ಧ, ಆಮಶ್ರಾದ್ಧ, ಮಹಾಲಯ, ತೀರ್ಥಶ್ರಾದ್ಧ ಇವುಗಳ ವಿಸ್ತೃತವಿವರಣೆಗಳು ಅಲ್ಲಿದ್ದು ಆಶ್ವಲಾಯನಿಗಳಿಗೆ ಸೂಕ್ತ ಮಾರ್ಗದರ್ಶಿಯಾಗಿದೆ.

ಪ್ರಕೃತ ನಮ್ಮಿಂದ ಸಂಗ್ರಹಿಸಲ್ಪಟ್ಟಿರುವ ಈ ಪ್ರಯೋಗಗ್ರಂಥದಲ್ಲಿ ಮೇಲ್ಕಂಡ ವಚನಗಳನ್ನನುಸರಿಸಿ ಗೃಹ್ಯಸೂತ್ರ, ಪರಿಶಿಷ್ಟ, ಆಶ್ವಲಾಯನಸ್ಮೃತಿ, ಗೃಹ್ಯಭಾಷ್ಯ, ಕಾರಿಕೆ, ಸದಾಚಾರ ಇವುಗಳನ್ನು ಕ್ರಮವಾಗಿ ಅನುಸರಿಸಿ ಪ್ರಯೋಗವು ಸಂಗ್ರಹಿಸಲ್ಪಟ್ಟಿರುತ್ತದೆ. ಕೆಲ ವಿಶೇಷಾಂಶಗಳು ಅಲ್ಲಲ್ಲಿ ಪ್ರತಿಪಾದಿಸಲ್ಪಟ್ಟಿದ್ದು, ವಿಕಲ್ಪಯುಕ್ತವೂ, ಸಂದೇಹಾಸ್ಪದವೂ ಆಗಿ ನಮ್ಮನ್ನು ಕಾಡುತ್ತಿರುವ ಬಹುಪಾಲು ವಿಷಯಗಳ ಸ್ಪಷ್ಟೀಕರಣಕ್ಕೆ ಪ್ರಯತ್ನಿಸಿರುತ್ತೇವೆ. ''ದಾನಾಂತದಲ್ಲಿ ಅರ್ಘ್ಯಶೇಷದ ವಿನಿಯೋಗ''ವೇನೆಂಬ ಬಗೆ ಇರಬಹುದು, ''ಪಾಣಿಹೋಮದಲ್ಲಿ ಅನುಜ್ಞಾದಿ''ಗಳು ಅವಶ್ಯವೇ ಇಲ್ಲವೇ ಎಂಬ ವಿಷಯವೇ ಇರಬಹುದು, ''ವರಯಾಚನೆ ಬ್ರಾಹ್ಮಣ ವಿಸರ್ಜನೆಯ ಪೂರ್ವದಲ್ಲೋ ಪರದಲ್ಲೋ'' ಎಂಬ ವಿಷಯವಿರಬಹುದು. ಅಲ್ಲಲ್ಲಿ ಇಂತಹ ವಿಷಯಗಳ ಬಗ್ಗೆ ಸೂಕ್ತ ಟಿಪ್ಪಣಿಗಳ ಮೂಲಕ ಸಂದೇಹ ನಿವಾರಣೆಗೆ ಹೆಚ್ಚು ಒತ್ತನ್ನು ಕೊಟ್ಟು ಆಶ್ವಲಾಯನ ಪ್ರತ್ಯಾಬ್ದಿಕಶ್ರಾದ್ಧಪ್ರಯೋಗವು ಯಥಾಮತಿ ಸಂಪಾದಿಸಲ್ಪಟ್ಟಿರುತ್ತದೆ. ಹಾಗೆಯೇ ಸಾಂಕಲ್ಪಿಕಶ್ರಾದ್ಧ, ಆಮಹಿರಣ್ಯಶ್ರಾದ್ಧಗಳ ಪ್ರಯೋಗವನ್ನು ಕ್ಲುಪ್ತವಾಗಿ ಸಂಗ್ರಹಿಸಲ್ಪಟ್ಟಿದೆ ಅಲ್ಲಿಯೂ ಆವಾಹನಾದಿಗಳ ವಿಷಯದಲ್ಲಿ ವಿಕಲ್ಪಗಳಿದ್ದು ಪಕ್ಷದ್ವಯವನ್ನೂ ಪ್ರದರ್ಶಿಸಲ್ಪಟ್ಟಿರುತ್ತದೆ. ಹಾಗೆಯೇ ಪಿತೃವ್ಯಾದಿಗಳ ಶ್ರಾದ್ದಗಳಲ್ಲಿರುವ ಪಾರ್ವಣೈಕೋದ್ದಿಷ್ಟ ವಿಕಲ್ಪಗಳನ್ನು ವಿವರಿಸಿದ್ದು ತದುಪಯೋಗಿ ಏಕೋದ್ದಿಷ್ಟಶ್ರಾದ್ದ ಪ್ರಯೋಗವನ್ನು ಸಂಪಾದಿಸಿರುತ್ತೇವೆ. ಈ ಪ್ರಯೋಗವು ಸಂಕೀರ್ಣವಾಗಿದ್ದು

ನಿಬಂಧನಗಳಲ್ಲೂ ನವ,ಮಿಶ್ರ,ಪುರಾಣಾಖ್ಯ ಏಕೋದ್ದಿಷ್ಟಗಳ ಭಿನ್ನತೆಯ ಬಗ್ಗೆ ಸ್ಪಷ್ಟವಾದ ನಿರ್ದೇಶವಿಲ್ಲ. ಅದ್ದರಿಂದ ಅಲಲ್ಲಿ ಸಿಕ್ಕ ತುಣುಕುಗಳನ್ನೆ ಗ್ರಹಿಸಿ ಯಥಾಮತಿ ಪ್ರಯೋಗವು ಸಂಗ್ರಹಿಸಲ್ಪಟ್ಟಿದೆ. ಮತ್ತು ಬಹೂಪಯೋಗಿ ಮಹಾಲಯಶ್ರಾದ್ಧಪ್ರಯೋಗವೂ ಇಲ್ಲಿ ಸಂಗ್ರಹಿತವಾಗಿದ್ದು ಮಾತ್ರಾದಿ-ವರಣ ಮತ್ತು ಅರ್ಘ್ಯಪಿಂಡಪ್ರದಾನಗಳಲ್ಲಿರುವ ವಿಭಿನ್ನಪ್ರಯೋಗವನ್ನು ವಿವರಿಸಿ ಶಿಷ್ಟಪರಿಗೃಹೀತ ಮಾರ್ಗವನ್ನನುಸರಿಸಿ ಪ್ರಯೋಗವು ಯಥಾಮತಿ ಸಂಗ್ರಹಿಸಲ್ಪಟ್ಟಿರುತ್ತದೆ.

ಪ್ರಯೋಗಭಾಗದ ಕೆಳಪಂಕ್ತಿಯಲ್ಲಿ ಅದರ ಸಂಕ್ಷಿಪ್ತ ಭಾಷಾಂತರವು ಕನ್ನಡಭಾಷೆಯಲ್ಲಿ ಮುದ್ರಿಸಲ್ಪಟ್ಟಿರುತ್ತದೆ ಮತ್ತು ಗ್ರಂಥದ ಕೊನೆಯಲ್ಲಿ ''ಅನುಬಂಧ''ವೆಂಬ ಭಾಗವೊಂದಿದ್ದು ಅದು ಪ್ರಯೋಗದಲ್ಲಿ ಏರ್ಪಡುವ ಸಂದೇಹನಿವಾರಣೆಗೆ ಮತ್ತು ವಿಕಲ್ಪಗಳ ವಿಮರ್ಶೆಗೆ ಹಾಗು ಸೂತ್ರಾನುಸಾರಿಪ್ರಯೋಗದ ವಿವರಣೆಗೆ ಮೀಸಲಾಗಿದೆ. ಹಾಗೆಯೇ ಪ್ರಯೋಗದಲ್ಲಿ ಅಲ್ಲಲ್ಲಿ ಟಿಪ್ಪಣಿ ಸಂಖ್ಯೆಯನ್ನು ಮುದ್ರಿಸಿದ್ದು ಅದರ ವಿವರವೂ ಅನುಬಂಧದಲ್ಲಿರುತ್ತದೆ.

ಗ್ರಂಥ ಸಂಪಾದನೆಗೆ ಅಂತಃಶಕ್ತಿಯನ್ನು ಒದಗಿಸಿದ ''ಕಾಂಚೀಕಾಮಕೋಠಿ ಪರಮಾಚಾರ್ಯ ಅನಂತಶ್ರೀ ವಿಭೂಷಿತ ಚಂದ್ರಶೇಖರೇಂದ್ರಸರಸ್ವತಿಮಹಾಸ್ವಾಮಿ''ಗಳನ್ನು ಸ್ಮರಿಸಿ, ಈ ಪುಸ್ತಕಕ್ಕೆ ಮುನ್ನುಡಿಯನ್ನು ರಚಿಸಿ ಪುಸ್ತಕದ ಗೌರವವನ್ನು ಎತ್ತರಿಸಿದ ''ನ್ಯಾಯಚೂಡಾಮಣಿ ರಾಜೇಶ್ವರಶಾಸ್ತ್ರಿ''ಗಳವರಿಗೆ ಧನ್ಯತಾ ಭಾವವನ್ನರ್ಪಿಸಿ, ಈ ಗ್ರಂಥದ ಪ್ರಕಟಣೆಗೆ ಮಾರ್ಗದರ್ಶನವನ್ನಿತ್ತ ವಿದ್ವದ್ವರೇಣ್ಯರಾದ ''ಸ್ಮಾರ್ತಾಗ್ನಿಮಾನ್ ವೇದಬ್ರಹ್ಮಶ್ರೀ ತಲಾರೆ ವಾಮನಭಟ್ಟರು, ವೇದಬ್ರಹ್ಮಶ್ರೀ ಹಂಪಿಹೊಳೆ ಮಧುಸೂದನಶಾಸ್ತ್ರಿಗಳು, ವೇದಬ್ರಹ್ಮಶ್ರೀ ಪ್ರಭಾಕರಜೋಗಳೇಕರ, ವೇದಬ್ರಹ್ಮಶ್ರೀ ಗಣೇಶಜೋಗಳೇಕರ(ಗೋಕರ್ಣ), ವೇದಬ್ರಹ್ಮಶ್ರೀ ವಿದ್ಯಾಶಂಕರ ಭಟ್(ಮಂಗಳೂರು), ವೇದಬ್ರಹ್ಮಶ್ರೀ ನಿತ್ಯಾನಂದ ದೇಸಾಯಿ(ಹುಬ್ಬಳ್ಳಿ)'' ಇತ್ಯಾದಿ ಮಹನೀಯರಿಗೆ ಮತ್ತು ಗ್ರಂಥದ ಶೋಧನೆಗೆ ಬಹುವಾಗಿ ಉಪಕರಿಸಿದ ನನ್ನ ಪ್ರಿಯಮಿತ್ರ ''ವೇದಬ್ರಹ್ಮಶ್ರೀ ಸಂತೋಷಶರ್ಮ(ಬೆಂಗಳೂರು)'' ಇವರಿಗೆ ಪ್ರಣತಿಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಾ, ಅನೇಕ ಗುರು ಹಿರಿಯ ಮತ್ತು ವಿದ್ವಾಂಸರ ಮಾರ್ಗದರ್ಶನ ಮತ್ತು ಅನುಗ್ರಹದಿಂದ ಸಂಗ್ರಹಿಸಲ್ಪಟ್ಟ ಈಗ್ರಂಥವು ಜಿಜ್ಞಾಸುಗಳ ಉಪಕಾರಿಯಾಗಿ ಪ್ರಯೋಗಜ್ಞರ ಮನ್ನಣೆಗೆ ಮತ್ತು ಗೌರವಕ್ಕೆ ಪ್ರಾಪ್ತವಾಗುತ್ತದೆ ಎಂದು ಆಶಿಸುತ್ತೇವೆ.

ಇಂತಿ ಸಜ್ಜನವಿದ್ವಜ್ಜನವಿಧೇಯ

**ಬಾಲಸುಬ್ರಹ್ಮಣ್ಯ ಭಟ್ .ಕೇ**

ಬೆಂಗಳೂರು

# ವಿಷಯಾನುಕ್ರಮಣಿಕಾ


| ವಿಷಯ | ಪುಟಸಂಖ್ಯೆ |
|---|---|
| ಪ್ರಾಚೀನದಿನಕೃತ್ಯ | 1 |
| ಸಾಂವತ್ಸರಿಕಶ್ರಾದ್ಧಪ್ರಯೋಗಃ | 4 |
| ಮಾತೃಶ್ರಾದ್ಧೇ ವಿಶೇಷಃ | 53 |
| ಶ್ರಾದ್ಧಾಂಗತರ್ಪಣವಿಧಿಃ | 55 |
| ಪಿತೃವ್ಯಾದಿಗಳ ಶ್ರಾದ್ಧದಲ್ಲಿ ಪಾರ್ವಣೈಕೋದ್ದಿಷ್ಟ ವಿಚಾರ | 57 |
| ಸಾಂಕಲ್ಪಿಕಶ್ರಾದ್ಧಪ್ರಯೋಗಃ | 59 |
| ಆಮಹಿರಣ್ಯಶ್ರಾದ್ಧವಿಧಿಃ | 80 |
| ಬ್ರಹ್ಮಾರ್ಪಣಶ್ರಾದ್ಧವಿಧಿಃ | 93 |
| ಶ್ರಾದ್ಧಾನುಕಲ್ಪಗಳು | 94 |
| ಅತಿಕ್ರಾಂತಶ್ರಾದ್ಧಪ್ರಯೋಗಃ | 95 |
| ವಿಧವಾಸ್ತ್ರೀಕರ್ತೃಕಶ್ರಾದ್ಧಪ್ರಯೋಗಃ | 95 |
| ಅನುಪನೀತಕರ್ತೃಕಶ್ರಾದ್ಧಪ್ರಯೋಗಃ | 97 |
| ದರ್ಭಬಟುಶ್ರಾದ್ಧವಿಧಿಃ | 97 |
| ಪುರಾಣೈಕೋದ್ದಿಷ್ಟಶ್ರಾದ್ಧವಿಧಿಃ | 99 |
| ಅಥ ಶ್ರಾದ್ಧಭೋಜನೇ ಪ್ರಾಯಶ್ಚಿತ್ತಾನಿ | 110 |
| ಶ್ರಾದ್ಧೇ ಸಂಭಾವ್ಯಾನಿ ಪ್ರಾಯಶ್ಚಿತ್ತಾನಿ | 111 |
| ವಿಷ್ಣ್ವರ್ಥವಿಪ್ರವರಣಪಕ್ಷೇವಿಶೇಷಾಃ | 114 |
| ಮಹಾಲಯಶ್ರಾದ್ಧಪ್ರಯೋಗಪ್ರಸ್ತಾವಃ | 115 |
| ಮಹಾಲಯಶ್ರಾದ್ಧಪ್ರಯೋಗಃ | 121 |
| ವಿಧವಾಕರ್ತಕಮಹಾಲಯಃ | 159 |
| ತೀರ್ಥಶ್ರಾದ್ಧಪ್ರಯೋಗಃ | 160 |
| ತೀರ್ಥಶ್ರಾದ್ಧಾನುಕಲ್ಪಃ(ತ್ರಿಸ್ಥಲೀಸೇತುಸಾರೋಕ್ತಃ) | 162 |
| ಅಥ ಶ್ರಾದ್ಧಭೋಜನೇ ಪ್ರಾಯಶ್ಚಿತ್ತಾನಿ | 163 |
| ಅನುಬಂಧಃ | 164 |
| ಶ್ರಾದ್ಧೋಪಯೋಗಿ ವಿಷಯಗಳು | 193 |

# ಶ್ರಾದ್ಧದಿನಾತ್ಪ್ರಾಚೀನದಿನಕೃತ್ಯಮ್

ಶ್ರಾದ್ಧಮಾಚರಿಷ್ಯನ್ ಪೂರ್ವೇದ್ಯುರಹನ್ಯೇವ ಶ್ರಾದ್ಧಭೂಮಿಂ ಪಾಕಭೂಮಿಂ ಚ ಪರಿಗೃಹ್ಯ ವಿವಿಕ್ತಾಂ ಕೃತ್ವಾ ಗೋಮಯಾದಿನಾ ತತ್ಸ್ಥಾನೇಲೇಪನಂ ಕಾರಯಿತ್ವಾ। ದೃಷದುಪಲಶಿಲಾಪೇಷಣಯಂತ್ರಭೋಜನಪಾತ್ರದರ್ವೀಪ್ರಭೃತೀನಿ ಶುಚೀನಿ ವಿಧಾಯ। ನೂತನಮೃದ್ಭಾಂಡಾನಿ ತಾಮ್ರಾದಿಯೋಗ್ಯಭಾಂಡಾನಿ ವಾ ಪಾಕಯೋಗ್ಯಾನಿ ಸಮಾಹೃತ್ಯ, ಶ್ರಾದ್ಧಾದಿಷೂಪಯೋಕ್ಷ್ಯಮಾಣಾನಶೇಷಾನ್ ಪದಾರ್ಥಾನ್ಸಮಾಹೃತ್ಯ, ವಸ್ತ್ರಶುದ್ಧ್ಯಾದಿಕಂ ವಿಧಾಯ ನಿರಾಮಿಷಮೇಕವಾರಂ ಭುಕ್ತ್ವಾ ರಾತ್ರೌ ಸಾಯಮೌಪಾಸನಂ ಹುತ್ವಾ ಹವಿರರ್ಹಾನ್ ಬ್ರಾಹ್ಮಣಾನ್ನಿಮಂತ್ರಯೇತ್। ದೈವೇ ದ್ವೌ, ತ್ರೀನ್ಪಿತ್ರ್ಯ ಏಕೈಕಂ ವೋಭಯತ್ರ ಇತಿ। ತದ್ಯಥಾ;

ಪವಿತ್ರಂ ಧೃತ್ವಾಚಮ್ಯ, ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ''**ಪುರೂರವಾರ್ದ್ರವಸಂಜ್ಞಕಾನಾಂ ವಿಶ್ವೇಷಾಂ ದೇವಾನಾಂ**'' ಪ್ರಾಚೀನಾವೀತೀ ''**ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನಾಂ ..ಶರ್ಮಣಾಂ ..ಗೋತ್ರಾಣಾಂ ವಸುರುದ್ರಾದಿತ್ಯಸ್ವರೂಪಾಣಾಂ**'' (ಮಾತುಃ ಶ್ರಾದ್ಧೇ ತು ''ಮಾತೃಪಿತಾಮಹೀಪ್ರಪಿತಾಮಹೀನಾಂ ..ದಾನಾಂ ..ಗೋತ್ರಾಣಾಂ ವಸು.....ಣಾಂ'' ಇತ್ಯಾದ್ಯೂಹಃ) (ಸವ್ಯಮ್) ''**ಏತೇಷಾಂ ಶ್ರೇಯೋರ್ಥಂ ಮೋಕ್ಷಾರ್ಥಂ ತೃಪ್ತ್ಯರ್ಥಂ ಮಮ ಪಿತೄಣಾಂ ಪ್ರತಿಸಾಂವತ್ಸರಿಕಶ್ರಾದ್ಧಂ ಸದೈವಂ ಸಪಿಂಡಂ ಸಾಗ್ನೌಕರಣಂ ಪಾರ್ವಣೇನ ವಿಧಿನಾ ಶ್ವಃ ಕರಿಷ್ಯೇ**'' ಇತಿ ಸಂಕಲ್ಪ್ಯ। ತತ್ತದ್ಬ್ರಾಹ್ಮಣಾನಾಂ ಗೃಹಂ ಗತ್ವಾ ಭುಕ್ತವತ್ಸು ತಾನ್ನಿಮಂತ್ರಯೇತ್।

---

### ಶ್ರಾದ್ಧದಪೂರ್ವದಿನಕೃತ್ಯ

ಶ್ರಾದ್ಧಕರ್ತೃವು ಪೂರ್ವದಿನದಂದು ಪ್ರಾತಃಕಾಲದಲ್ಲಿಯೇ ಶ್ರಾದ್ಧಭೂಮಿಯನ್ನು ಮತ್ತು ಪಾಕಶಾಲೆಯನ್ನು ಗೋಮಯಸಾರಿಸಿ ಶುದ್ಧಿಗೊಳಿಸಿ. ಶ್ರಾದ್ಧೋಪಯೋಗಿ ಭಾಂಡಾದಿವಸ್ತುಗಳನ್ನು ಶುದ್ಧಿಗೊಳಿಸಿ ಒಂದೆಡೆಗೆ ಅಣಿಗೊಳಿಸಬೇಕು. ಶ್ರಾದ್ಧೋಪಯೋಗಿ ವಸ್ತ್ರಗಳನ್ನು ಒಗೆದು ಒಣಗಿಸಿ ಅಣಿಗೊಳಿಸಬೇಕು. ಆನಂತರ ಸಾಯಮೌಪಾಸನದ ಆನಂತರ ಶ್ರಾದ್ಧಯೋಗ್ಯಬ್ರಾಹ್ಮಣರನ್ನು ನಿಮಂತ್ರಿಸಬೇಕು. ದೇವಸ್ಥಾನಕ್ಕೆ ಇಬ್ಬರು ಮತ್ತು ಪಿತೃಸ್ಥಾನಕ್ಕೆ ಮೂವರು ಅಥವಾ ಪ್ರತಿಸ್ಥಾನಕ್ಕೂ ಒಬ್ಬೊಬ್ಬರು ಎಂಬಂತೆ ನಿಮಂತ್ರಣಮಾಡುವುದು ಅದರಕ್ರಮವು ಹೀಗಿದೆ;–

ಕರ್ತೃವು ಪವಿತ್ರವನ್ನುಧರಿಸಿ ಆಚಮನವನ್ನು ಮಾಡಿ, ಪ್ರಾಣಾಯಾಮವನ್ನು ಮಾಡಿ ದೇಶಕಾಲವನ್ನು ಸ್ಮರಿಸಿ ''**ಪುರೂರವಾ... ದಿಂದ ...ಶ್ವಃ ಕರಿಷ್ಯೇ**''ವರೆಗೆ ಹೇಳಿ ಸಂಕಲ್ಪ ಮಾಡಿಕೊಳ್ಳಬೇಕು. ಆನಂತರ ಆಆಬ್ರಾಹ್ಮಣರ ಮನೆಗೆ ಹೋಗಿ ಅವರ ರಾತ್ರಿ ಬೋಜನಾನಂತರ ಅವರನ್ನು ವರಿಸಬೇಕು.

ದೇವಾರ್ಥಬ್ರಾಹ್ಮಣಗೃಹಂ ಗತ್ವಾ, ಉಪವೀತೀ ಪ್ರಾಙ್ಮುಖೋಪವಿಷ್ಟಸ್ಯ ವಿಪ್ರಸ್ಯ ದಕ್ಷಿಣಂ ಜಾನು ಪಾದಂ ವಾ ಸ್ಪೃಷ್ಟ್ವಾ **''ಅಸ್ಮತ್ಪಿತುಃ ..ಶರ್ಮಣಃ ..ಗೋತ್ರಸ್ಯ ಪ್ರತಿಸಾಂವತ್ಸರಿಕಶ್ರಾದ್ಧಂ ಶ್ವಃ ಭವಿತಾ ತತ್ರ ಪುರೂರವಾರ್ದ್ರವಸಂಜ್ಞಕಾನಾಂ ವಿಶ್ವೇಷಾಂ ದೇವಾನಾಂ ಸ್ಥಾನೇ ತ್ವಯಾ ಕ್ಷಣಃ ಕರಣೀಯಃ''** {''ಓಮ್ ತಥಾ'' ಇತಿ ಪ್ರ+} (ಬ್ರಾಹ್ಮಣದ್ವಿತ್ವೇ ಏವಂ ದ್ವಿತೀಯಸ್ಯಾಪಿ)॥

ತತಃ ಪಿತ್ರ್ಯರ್ಥಬ್ರಾಹ್ಮಣಗೃಹಂ ಗತ್ವಾ, ಪ್ರಾಚೀನಾವೀತೀ ಉದಙ್ಮುಖೋಪವಿಷ್ಟಸ್ಯ ವಿಪ್ರಸ್ಯ ದಕ್ಷಿಣಂ ಪಾದಂ ಜಾನು ವಾ ಸ್ಪೃಷ್ಟ್ವಾ **''ಅಸ್ಮತ್ಪಿತುಃ ..ಶರ್ಮಣಃ ..ಗೋತ್ರಸ್ಯ ಪ್ರತಿಸಾಂವತ್ಸರಿಕಶ್ರಾದ್ಧಂ ಶ್ವಃ ಭವಿತಾ ತತ್ರಾಸ್ಮತ್ಪಿತೃಪಿತಾಮಹಪ್ರಪಿತಾಮಹಾನಾಂ ..ಶರ್ಮಣಾಂ ..ಗೋತ್ರಾಣಾಂ ವಸುರುದ್ರಾದಿತ್ಯಸ್ವರೂಪಾಣಾಂ ಸ್ಥಾನೇ ತ್ವಯಾ ಕ್ಷಣಃ ಕರಣೀಯಃ**(ಬ್ರಾಹ್ಮಣತ್ರಯಪಕ್ಷೇ ತತ್ತದ್ಬ್ರಾಹ್ಮಣಾನಾಂ ಗೃಹಂ ಗತ್ವಾ 'ಅಸ್ಮತ್ಪಿತುಃ ..ಶರ್ಮಣಃ ..ಗೋತ್ರಸ್ಯ ವಸುಸ್ವರೂಪಸ್ಯ ಸ್ಥಾನೇ' ಇತ್ಯಾದಿವ್ಯೂಹಃ) {''ಓಮ್ ತಥಾ'' ಇತಿ ಪ್ರ+}॥

ಏವಂ ನಿಮಂತ್ರ್ಯ ನಿಯಮಾನ್ ಶ್ರಾವಯೇತ್ **''ಅಕ್ರೋಧನೈಃ ಶೌಚಪರೈಃ ಸತತಂ ಬ್ರಹ್ಮಚಾರಿಭಿಃ। ಭವಿತವ್ಯಂ ಭವದ್ಭಿಶ್ಚ ಮಯಾ ಚ ಶ್ರಾದ್ಧಕಾರಿಣಾ''** ಇತಿ॥ {ಬ್ರಾಹ್ಮಣಾಸ್ತು **''ಇಯಂ ರಜನೀ ಅವಿಘ್ನೇನ ಗತಾ ಯದಿ ತಥಾಽಸ್ತ್ವಿತಿ''** ಪ್ರತಿಬ್ರೂಯುಃ॥} ಸ್ವಸ್ಯ ನಿಮಂತ್ರಣಾಸಾಮರ್ಥ್ಯೇ ತು ಸುತೇನ ಶಿಷ್ಯೇಣ ಸಜಾತೀಯೇನ ಯೇನ ಕೇನಚಿತ್ಸಾಧುನಾಽಽಪ್ತೇನ ವಾ ಕಾರಯೇತ್॥

---

ವಿಶ್ವೇದೇವಾರ್ಥ ಬ್ರಾಹ್ಮಣನ ಮನೆಗೆ ಹೋಗಿ ಪ್ರಾಙ್ಮುಖನಾದ ಆತನ ದಕ್ಷಿಣಮೊಣಗಾಲು ಅಥವಾ ಪಾದವನ್ನು ಮುಟ್ಟಿ **''ಅಸ್ಮತ್ಪಿತುಃ..''** ವಿನಿಂದಾರಂಭಿಸಿ **''..ಕ್ಷಣಃ ಪುರೂರವಾ..ಕರ್ತವ್ಯಃ''** ಎಂಬಲ್ಲಿಯವರೆಗೆಹೇಳಿವರಣಮಾಡಬೇಕು(ಎರಡುಬ್ರಾಹ್ಮಣವರಣಪಕ್ಷದಲ್ಲಿಮತ್ತೊಬ್ಬಬ್ರಾಹ್ಮಣನನ್ನೂ ಹೀಗೇ ವರಿಸುವುದು). ಆನಂತರ ಪಿತ್ರರ್ಥ ಬ್ರಾಹ್ಮಣರ ಮನೆಗೆ ಹೋಗಿ ಉದಙ್ಮುಖನಾದ ಆತನ ದಕ್ಷಿಣಮೊಣಗಾಲು ಅಥವಾ ಪಾದವನ್ನು ಮುಟ್ಟಿ **''ಅಸ್ಮತ್ಪಿತುಃ..''** ವಿನಿಂದಾರಂಭಿಸಿ **''..ಕರಣೀಯಃ''** ಎಂಬಲ್ಲಿಯವರೆಗೆ ಹೇಳಿ ವರಣ ಮಾಡಬೇಕು. ಹೀಗೆ ವರಣವನ್ನು ಮಾಡಿ ಅವರಿಗೆ **''ಅಕ್ರೋಧನೈಃ..''** ಇತ್ಯಾದಿ ಶ್ರಾದ್ಧನಿಯಮವನ್ನು ನಿವೇದಿಸಬೇಕು. ಅದಕ್ಕೆ ಬ್ರಾಹ್ಮಣರು ಇಯಂ ರಜನೀ.. ಎಂಬ ಪ್ರತಿವಚನವನ್ನೀಯಬೇಕು. (ಮೂರುಬ್ರಾಹ್ಮಣಪಕ್ಷದಲ್ಲಿ ಪ್ರತಿ ಬ್ರಾಹ್ಮಣರ ಮನೆಗೆ ಹೋಗಿಅಸ್ಮತ್ಪಿತುಃ ಇತ್ಯಾದಿ ಊಹದಿಂದ ವರಣಮಾಡಬೇಕು) ಸ್ವಯಂ ತಾನೇ ಬ್ರಾಹ್ಮಣರ ಮನೆಗೆ ಹೋಗಿ ವರಣಮಾಡಲು ಅಶಕ್ತನಾಗಿದ್ದರೆ ಪುತ್ರನನ್ನು ಅಥವಾ ಶಿಷ್ಯನನ್ನು ಅಥವಾ ಸವರ್ಣೀಯ ಆಪ್ತನನ್ನು ಆಕಾರ್ಯದಲ್ಲಿ ನಿಯೋಜಿಸಬೇಕು.

## ಶ್ರಾದ್ಧದಿನಾತ್ಪ್ರಾಚೀನದಿನಕೃತ್ಯಮ್

ಪೂರ್ವೇದ್ಯುಃ ಕಥಂಚಿನ್ನಿಮಂತ್ರಣಾಸಂಭವೇ ಶ್ರಾದ್ಧದಿನ್ಯೈವ ಪ್ರಾತಃ ಕೃತನಿತ್ಯಕ್ರಿಯಃ ಪ್ರಾತರೌಪಾಸನಾಂತೇ ದೇಶಕಾಲೌ ಸ್ಮೃತ್ವಾ **''..ಪ್ರತಿಸಾಂವತ್ಸರಿಕಶ್ರಾದ್ಧಮದ್ಯ ಕರಿಷ್ಯೇ''** ಇತ್ಯಾದಿ ಕೃತಸಂಕಲ್ಪಃ ಬ್ರಾಹ್ಮಣಾನಾಂ ಗೃಹಂ ಗತ್ವಾ ತಾನ್ನಿಮಂತ್ರಯೇತ್॥

ಶ್ರಾದ್ಧದಿನೇಪೂರ್ವಾಹ್ಣಏವಗೃಹಮಾಗತೇಭ್ಯಃಬ್ರಾಹ್ಮಣೇಭ್ಯಃತಾಂಬೂಲಕೃಸರೇದತ್ವಾ,ಅಭ್ಯಜ್ಯ ಸಂಸ್ನಾಪ್ಯ ಸ್ವಯಂ ಸ್ನಾತ್ವಾ ಕುತಪಕಾಲೇ ಶ್ರಾದ್ಧಮಾರಭೇತ। ದ್ವಾದಶಘಟಿಕಾದೂರ್ಧ್ವಂ ಚೇತ್ ತೈಲಾದಿಕಂ ದತ್ವಾ ಪ್ರೇಷ್ಯಾನ್ ಪ್ರೇಷಯೇತ್। ದ್ವಾದಶ್ಯಾಂ ತೈಲಸ್ನಾನನಿಷೇಧಾದಾಮಲಕಕಲ್ಕಂ ದದ್ಯಾತ್। ದರ್ಶೇ ಆಮಲಕಕಲ್ಕಸ್ಯಾಪಿ ನಿಷೇಧಾತ್ ಶುದ್ಧೋದಕೇನ್ಯೈವ ಸ್ನಾನಂ ಯುಕ್ತಮ್॥

★★★★★★★★

---

ಯಾವುದಾದರು ಕಾರಣಾಂತರದಿಂದ ಪೂರ್ವದಿನದಂದು ವರಣ ಸಾಧ್ಯವಾಗದಿದ್ದರೆ ಶ್ರಾದ್ಧದದಿನದಂದೇ ಪ್ರಾತರೌಪಾಸನಾನಂತರ ದೇಶಕಾಲವನ್ನು ಸ್ಮರಿಸಿ **''..ಶ್ರಾದ್ಧಂ.. ಅದ್ಯ ಕರಿಷ್ಯೇ''** ಇತ್ಯಾದಿ ಸಂಕಲ್ಪಿಸಿ ವರಣವನ್ನು ಮಾಡುವುದು.

ವರಿಸಲ್ಪಟ್ಟ ಬ್ರಾಹ್ಮಣರು ಪೂರ್ವಾಹ್ಣದಲ್ಲಿಯೇ ಶ್ರಾದ್ಧಗೃಹಕ್ಕೆ ಬರಬೇಕು. ಹಾಗೆ ಬಂದ ಬ್ರಾಹ್ಮಣರಿಗೆ ಕರ್ತೃವು ತಾಂಬೂಲ ಕೃಸರ(ಎಳ್ಳುಂಡೆ)ಗಳನ್ನು ಕೊಟ್ಟು ಅವರಿಗೆ ಅಭ್ಯಂಜನ ಸ್ನಾನವನ್ನು ಮಾಡಿಸಬೇಕು. ಬ್ರಾಹ್ಮಣರು 12ಘಳಿಗೆಯೊಳಗೆ(ಸುಮಾರು 10.45 ಘಂಟೆ) ಬರದಿದ್ದರೆ ಅವರವರಮನೆಗೆ ಅಭ್ಯಂಜನಕ್ಕೆ ತೈಲಾದಿಗಳನ್ನು ಪುತ್ರಾದಿಗಳ ಕೈಯ್ಯಲ್ಲಿ ಕಳುಹಿಸುವುದು. ಶ್ರಾದ್ಧದಂದು ದ್ವಾದಶಿತಿಥಿಯಾಗಿದ್ದರೆ ತೈಲಾಭ್ಯಂಜನ ನಿಷೇಧವಿರುವುದರಿಂದ ತೈಲಾಭ್ಯಂಜನೆಯಿಲ್ಲ, ನೆಲ್ಲಿಯಸಾರ(ಚಟ್ಟು)ವನ್ನು ಬಳಸುವುದು ಹಾಗೆಯೇ ಅಮಾವಾಸ್ಯೆಯಂದು ನೆಲ್ಲಿಯಸಾರ(ಚಟ್ಟು)ಕ್ಕೂ ನಿಷೇಧವಿರುವುದರಿಂದ ಕೇವಲ ಶುದ್ಧಜಲದಿಂದಲೇ ಸ್ನಾನವು ಯುಕ್ತ. ಹಾಗೆಯೇ ಶ್ರಾದ್ಧದಪೂರ್ವದಿನದಂದು ಮತ್ತು ಶ್ರಾದ್ಧದಿನದಂತು ಕರ್ತೃವಿಗೆ ಮತ್ತು ಭೋಕ್ತೃಗಳಿಗೆ ಬ್ರಹ್ಮಚರ್ಯಾದಿನಿಯಮಗಳು ಅವಶ್ಯ. ಎರಡೂ ದಿನ ಕರ್ತೃವಿಗೆ ರಾತ್ರಿ ಭೋಜನ ನಿಷೇಧ. ಭೋಕ್ತೃವಿಗೆ ಶ್ರಾದ್ಧದಂದು ರಾತ್ರಿ ಭೋಜನನಿಷೇಧವಿದೆ

★★★★★★★★

# ಪ್ರತಿಸಾಂವತ್ಸರಿಕಶ್ರಾದ್ಧಪ್ರಯೋಗಃ (ಆಶ್ವಲಾಯನೀಯಃ)

ಓಂ ಶ್ರೀ ಗಣೇಶಾಯ ನಮಃ

(ಕರ್ತಾ ಪೂರ್ವೇದ್ಯುಸ್ತದ್ದಿನೇ ವಾ ಬ್ರಾಹ್ಮಣಾನ್ನಿಮಂತ್ರಯೇತ್ ಶ್ರಾದ್ಧದಿನೈವ ನಿಮಂತ್ರಣಪಕ್ಷೇ ಬ್ರಾಹ್ಮೇ ಮುಹೂರ್ತೇ ಉತ್ಥಾಯ [6]ದಂತಧಾವನವರ್ಜಂ ಶೌಚವಿಧಿಂ ವಿಧಾಯ ಪ್ರಾತಃ ಸಂಧ್ಯಾಮುಪಾಸ್ಯೌಪಾಸನಂ ಹುತ್ವಾ ಬ್ರಾಹ್ಮಣಾನಾಂ ಗೃಹಂ ಗತ್ವಾ ತಾನ್ನಿಮಂತ್ರಯೇತ್ ಪೂರ್ವಾಹ್ಣ ಏವ ಗೃಹಮಾಗತೇಭ್ಯಃ ಬ್ರಾಹ್ಮಣೇಭ್ಯಃ [7]ತಾಂಬೂಲಕೃಸರೇ ದತ್ವಾ, [8]ಅಭ್ಯಜ್ಯ ಸಂಸ್ನಾಪ್ಯ, ಸ್ವಯಂ ಮಧ್ಯಾಹ್ನಕಾಲೇ ನದ್ಯಾದೌ ಯಥಾಲಾಭಂ ತೀರ್ಥೇ ವಾ ಮಾಧ್ಯಾಹ್ನಿಕಸ್ನಾನಂ ಶ್ರಾದ್ಧಾರ್ಥಂ ಸ್ನಾನಂ ಚ ತಂತ್ರೇಣ ಕೃತ್ವಾ ಧೃತಶುಕ್ಲವಸ್ತ್ರೋಪವಸ್ತ್ರಃ ಮಾಧ್ಯಾಹ್ನಿಕಸಂಧ್ಯಾಮುಪಾಸ್ಯ। ಶ್ರಾದ್ಧಾವಶ್ಯಕಾನ್ಪದಾರ್ಥಾನೇಕತ್ರ ಸಂಭೃತ್ಯ [10]ಕುತಪಕಾಲೇ ಗೋಮಯೋಪಲಿಪ್ತೇ ದೇಶೇ ಕುಶೋರ್ಣಾಜಿನಾಸನೇಷ್ವೇಷಾಮನ್ಯತಮಾಸನೇವೋಪವಿಶ್ಯ ಶ್ರಾದ್ಧಮಾರಭೇತ॥)

[11]‘‘**ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ। ಅತಪ್ತತನೂರ್ನ ತದಾಮೋ ಅಶ್ನುತೇ ಶೃತಾಸ ಇದ್ವಹಂತಸ್ತತ್ಸಮಾಶತ**’’ ಇತಿ ಬ್ರಹ್ಮಗ್ರಂಥಿಯುತಂ [12]ತ್ರಿದರ್ಭಪವಿತ್ರಂ ಧೃತ್ವಾ ದ್ವಿರಾಚಮ್ಯ॥ ‘‘**ಪೃಥ್ವಿ ತ್ವಯಾ ಧೃತಾ ಲೋಕಾ ದೇವಿ ತ್ವಂ ವಿಷ್ಣುನಾ**

---

## ಪ್ರತಿಸಾಂವತ್ಸರಿಕಶ್ರಾದ್ಧಪ್ರಯೋಗವು

ಶ್ರಾದ್ಧಕರ್ತೃವು ಶ್ರಾದ್ಧದಪೂರ್ವದಿನದಂದು ಬ್ರಾಹ್ಮಣವರಣವನ್ನು ಮಾಡಿರದಿದ್ದು ಅಂದೇ ವರಣ ಮಾಡುವ ಪಕ್ಷದಲ್ಲಿ ಬ್ರಾಹ್ಮಮುಹೂರ್ತದಲ್ಲೆದ್ದು ಹಲ್ಲನ್ನುಜ್ಜದೆ ಶೌಚಾದಿ ನಿತ್ಯಕ್ರಿಯೆಯನ್ನು ಮಾಡಿ ಪ್ರಾತಃಸಂಧ್ಯೆ ಮತ್ತು ಔಪಾಸನೆಯನ್ನು ಅನುಷ್ಠಿಸಿ. ಭೋಕ್ತೃಗಳಮನೆಗೆ ಹೋಗಿ ಅವರನ್ನು ವರಣಮಾಡಿ ಕ್ಷಣವನ್ನಿತ್ತು ಶ್ರಾದ್ಧಕ್ಕೆ ಆಹ್ವಾನವನ್ನಿಯ್ಯುವುದು. ಪೂರ್ವಾಹ್ಣದಲ್ಲೇ ಮನೆಗೆ ಬಂದ ಬ್ರಾಹ್ಮಣರಿಗೆ ಕೃಸರತಾಂಬೂಲಗಳನ್ನು ಕೊಟ್ಟು ಸತ್ಕರಿಸಿ ಅಭ್ಯಂಜನ ಸ್ನಾನವನ್ನು ಮಾಡಿಸಿ. ಸ್ವಯಂ ಮಧ್ಯಾಹ್ನಕಾಲದಲ್ಲಿ ನದ್ಯಾದಿಗಳಲ್ಲಿ ಮಧ್ಯಾಹ್ನಸ್ನಾನವನ್ನು ಮತ್ತು ಶ್ರಾದ್ಧಾಂಗಸ್ನಾನವನ್ನು ತಂತ್ರದಿಂದ ಮಾಡಿ ಬಿಳಿಯ ಬಟ್ಟೆಯನ್ನು ಮತ್ತು ಉತ್ತರೀಯವನ್ನು ಧರಿಸಿ, ಮಧ್ಯಾಹ್ನಸಂಧ್ಯೆಯನ್ನು ಅನುಷ್ಠಿಸಬೇಕು ಆನಂತರ ಶ್ರಾದ್ಧೋಪಯೋಗಿವಸ್ತುಗಳನ್ನು ಒಂದೆಡೆಗೆ ಅಣಿಗೊಳಿಸಿ, ಕುತಪಕಾಲದಲ್ಲಿ ಸೆಗಣಿಸಾರಿಸಿದ ಶ್ರಾದ್ಧಯೋಗ್ಯ ಭೂಮಿಯಲ್ಲಿ ದರ್ಭೆ, ಉಣ್ಣೆಬಟ್ಟೆ ಅಥವಾ ಕೃಷ್ಣಾಜಿನಗಳ ಪೈಕಿ ಯಾವುದಾದರೊಂದು ಆಸದಲ್ಲಿಕುಳಿತು ‘‘**ಪವಿತ್ರಂತೇ..**’’ ಎಂಬ ಮಂತ್ರವನ್ನು ಹೇಳಿ ಕೈಯ್ಯಲ್ಲಿ ಬ್ರಹ್ಮಗ್ರಂಥಿಯುಕ್ತ ಪವಿತ್ರವನ್ನು ಧರಿಸಿ ಎರಡುಸಲ ಆಚಮನಮಾಡಬೇಕು. ಆನಂತರ ‘‘**ಪೃಥ್ವಿ ತ್ವಯಾ..**’’ ಎಂದು ಭೂಮಿಯನ್ನು ಪ್ರಾರ್ಥಿಸಿ ‘‘**ಉರ್ಧ್ವಕೇಶಿ..**’’ ಎಂದು ಜಪಿಸುವುದು.

**ಧೃತಾ। ತ್ವಂ ಚ ಧಾರಯ ಮಾಂ ದೇವಿ ಪವಿತ್ರಂ ಕುರು ಚಾಸನಮ್॥ (ಊರ್ಧ್ವಕೇಶಿ ವಿರೂಪಾಕ್ಷಿ ಮಾಂಸಶೋಣಿತಭಕ್ಷಣೇ। ತಿಷ್ಠ ದೇವಿ ಶಿಖಾಬಂಧೇ ಚಾಮುಂಡೇ ಹ್ಯಪರಾಜಿತೇ)''** ಇತಿ ಭೂಮಿಂ ಸಂಪ್ರಾರ್ಥ್ಯ॥ **''ಅಪಸರ್ಪಂತು ತೇ ಭೂತಾ ಯೇ ಭೂತಾ ಭೂಮಿಸಂಸ್ಥಿತಾಃ। ಯೇ ಭೂತಾ ವಿಘ್ನಕರ್ತಾರಸ್ತೇ ಗಚ್ಛಂತು ಶಿವಾಜ್ಞಯಾ॥ ಅಪಕ್ರಾಮಂತು ಭೂತಾನಿ ಪಿಶಾಚಾಃ ಸರ್ವತೋ ದಿಶಮ್। ಸರ್ವೇಷಾಮವಿರೋಧೇನ ಶ್ರಾದ್ಧಕರ್ಮ ಸಮಾರಭೇ''** ಇತಿ ಜಪಿತ್ವಾ॥

ಆಚಾರಾತ್ ಶಿಖಾಯಾಂ ಯಜ್ಞೋಪವೀತೇ ಕಟಿದೇಶಯೋಶ್ಚ ದರ್ಭಾನ್ ಧೃತ್ವಾ, [13]ನೀವೀಬಂಧಂ ಕುರ್ಯಾತ್ತದ್ಯಥಾ;– [14]ದಕ್ಷಿಣೇ ಕುಕ್ಷೌ ತಿಲೈಃ ಸಹ ಕುಶತ್ರಯಂ ಪರಿಹಿತವಸ್ತ್ರೋತ್ತರಾಂಚಲದಶಾನಾಂ ದಕ್ಷಿಣಕಟಿಸಂಲಗ್ನವಸ್ತ್ರಬಹಿರ್ಭಾಗೇನ ಸಂವೇಷ್ಟ್ಯಾಂತಃ ಪ್ರವೇಶ್ಯೋತ್ತರೀಯವಸ್ತ್ರೇಣೋಪರಿಷ್ಟಾದ್ವೇಷ್ಟನೇನ ಗೋಪಯೇತ್॥ [15]ಆಸನೇ ದರ್ಭತ್ರಯಂ ಧೃತ್ವಾ ಪ್ರಾಣಾಯಾಮತ್ರಯಂ ಕೃತ್ವಾ॥ **''ಪಿತೃದೇವತಾಭ್ಯೋ ನಮಃ। ವಿಷ್ಣುರ್ವಿಷ್ಣುರ್ವಿಷ್ಣುಃ''** ಇತಿ ಜಪಿತ್ವಾ॥ **''ಶ್ರೀಮದ್ಭಗವತೋ ಮಹಾಪುರುಷಸ್ಯ...''** ಇತ್ಯಾದಿ ದೇಶಕಾಲಾವುಕ್ತ್ವಾ **''ಶ್ರೀಪರಮೇಶ್ವರಪ್ರೀತ್ಯರ್ಥಂ ಪುರೂರವಾರ್ದ್ರವಸಂಜ್ಞಕಾನಾಂ ವಿಶ್ವೇಷಾಂ ದೇವಾನಾಮ್''** ಪ್ರಾಚೀನಾವೀತೀ **''ಅಸ್ಮತ್ಪಿತೃಪಿತಾಮಹ-ಪ್ರಪಿತಾಮಹಾನಾಂ--[19]ಶರ್ಮಣಾಂ([20]''ಕಾಶ್ಯಪಸ'' ಇತ್ಯಾದಿ) --ಗೋತ್ರಾಣಾಂ ವಸುರುದ್ರಾದಿತ್ಯಸ್ವರೂಪಾಣಾಮ್''** (ಮಾತುಃ ಶ್ರಾದ್ಧೇ ತು ''ಮಾತೃಪಿತಾಮಹೀಪ್ರಪಿತಾಮಹೀನಾಂ --[21]ದಾನಾಂ --ಗೋತ್ರಾಣಾಂ ವಸು.....ಣಾಮ್'' ಇತ್ಯಾದ್ಯೂಹಃ) (ಸವ್ಯಮ್) **''ಏತೇಷಾಂ ಶ್ರೇಯೋರ್ಥಂ ಮೋಕ್ಷಾರ್ಥಂ ತೃಪ್ತ್ಯರ್ಥಂ ಮಮ ಪಿತೄಣಾಂ ಪ್ರತಿಸಾಂವತ್ಸರಿಕ(ಮೃತಾಹ)ಶ್ರಾದ್ಧಂ ಸದೈವಂ ಸಪಿಂಡಂ ಸಾಗ್ನೌಕರಣಂ**

---

ಆಚಾರದಂತೆ ಶಿಖೆಯಲ್ಲಿ ಯಜ್ಞೋಪವೀತದಲ್ಲಿ ಸೊಂಟದ ಎರಡೂ ಬದಿಗೆ ಮೂರು ಮೂರು ದರ್ಭೆಗಳನ್ನು ಧರಿಸಿ, ನೀವೀಬಂದವನ್ನು ಮಾಡಬೇಕು ಅದರಕ್ರಮ ಹೀಗಿದೆ;– ತಾನು ಧರಿಸಿದ ವಸ್ತ್ರದ ಸೊಂಟದ ಬಲಹೊರಭಾಗದಲ್ಲಿ ಎಳ್ಳಿನೊಂದಿಗೆ ಮೂರುದರ್ಭೆಯನ್ನಿಟ್ಟು ವಸ್ತ್ರದ ಒಳಭಾಗಕ್ಕೆ ಸೇರಿಸಿ ಉತ್ತರೀಯವಸ್ತ್ರದಿಂದ ಅದನ್ನು ಮರೆಮಾಚಬೇಕು ಇದನ್ನು ನೀವೀಬಂಧವೆನ್ನುವರು. ತದನಂತರ ಆಸನದಲ್ಲಿ 3ದರ್ಭೆಗಳನ್ನು ಧರಿಸಿ ಮೂರುಪ್ರಾಣಾಯಾಮ ಮಾಡಬೇಕು.

**''ಪಿತೃದೇವ.. ವಿಷ್ಣುಃ''** ಎಂದು ಹೇಳಿ **''ಶ್ರೀಮದ್ಭಗವತೋ..''** ಎಂಬಲ್ಲಿಂದ ದೇಶಕಾಲಗಳನ್ನು ಸ್ಮರಿಸಿ **''ಪುರೂರವಾ..ದೇವಾನಾಂ''** ಎಂದು ಹೇಳಿ ಅಪಸವ್ಯ ಮಾಡಿಕೊಂಡು **''ಅಸ್ಮತ್ಪಿತೃ..''** ಇತ್ಯಾದಿ ಹೇಳಿ ಸವ್ಯದಿಂದ **''ಏತೇಷಾಂ..''** ಕರಿಷ್ಯೇ ಎಂದು ಸಂಕಲ್ಪಿಸಿ, **''ಯವತಿಲೋ.., ಆತ್ಮಶುದ್ಧ್ಯರ್ಥಂ..ಕರಿಷ್ಯೇ''** ಎಂದು ಸಂಕಲ್ಪಿಸುವುದು. ಆಗ ಕುರುಷ್ವ ಎಂದು ಬ್ರಾಹ್ಮಣರು ಪ್ರತಿವಚನವನ್ನು ಹೇಳುವುದು.

**ಪಾರ್ವಣೇನ ವಿಧಿನಾ ಅನ್ನೇನ ಹವಿಷಾ ಸದ್ಯಃ ಕರಿಷ್ಯೇ। ತದಂಗಂ ಯವತಿಲೋದಕಾದಿ ಕರಿಷ್ಯೇ। ಆತ್ಮಶುದ್ಧ್ಯರ್ಥಂ ಭೋಕ್ತೃಗೃಹಭಾಂಡಭಾಜನಶುದ್ಧ್ಯರ್ಥಂ ಚ ಪ್ರಾಯಶ್ಚಿತ್ತಾರ್ಥ-ವೈಶ್ವದೇವಸೂಕ್ತಜಪಮಹಂ ಕರಿಷ್ಯೇ''** ಇತಿ ಸಂಕಲ್ಪಂ ಕುರ್ಯಾತ್ (''ಕುರುಷ್ವ'' ಇತಿಪ್ರ+)।

### [22]ಯವತಿಲೋದಕಸಂಪಾದನಮ್

ತತಃ ಉಪವೀತೀ ದೇವಾರ್ಚನಾರ್ಥಂ ಯವೋದಕಂ, ಪಿತ್ರ್ಯಕಾರ್ಯಾರ್ಥಂ ತಿಲೋದಕಂ ಚ ಸಂಪಾದಯೇತ್। ಯವೋದಕಾರ್ಥಮೇಕಂ ಸ್ವರ್ಣಪಾತ್ರಂ ತಾಮ್ರಪಾತ್ರಂ ವಾದಾಯ ''**ಇದಂ ತೇ ಪಾತ್ರಂ ಸನವಿತ್ತಮಿಂದ್ರ ಪಿಬಾ ಸೋಮಮೇನಾ ಶತಕ್ರತೋ। ಪೂರ್ಣ ಆಹಾವೋ ಮದಿರಸ್ಯ ಮಧ್ವೋ ಯಂ ವಿಶ್ವ ಇದಭಿಹರ್ಯಂತಿ ದೇವಾಃ**'' ಇತಿ ಚತುರಸ್ರಮಂಡಲೇ ನಿಧಾಯ, ತಸ್ಮಿನ್ ''**ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ। ಆಸಿಕ್ನ್ಯಾ ಮರುದ್ವೃಧೇ ವಿತಸ್ತಯಾಽಽರ್ಜೀಕೀಯೇ ಶೃಣುಹ್ಯಾ ಸುಷೋಮಯಾ**'' ಇತ್ಯುದಕಂ ನಿಕ್ಷಿಪ್ಯ॥ ''**ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಮ್। ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಮ್**'' ಇತಿ ಗಂಧಂ ಪ್ರಕ್ಷಿಪ್ಯ॥ ''**ಶರಾಸಃ ಕುಶರಾಸೋ ದರ್ಭಾಸಃ ಸೈರ್ಯಾ ಉತ। ಮೌಂಜಾ ಅದೃಷ್ಟಾ ವೈರಿಣಾಃ ಸರ್ವೇ ಸಾಕಂ ನ್ಯಲಿಪ್ಸತ**'' ಇತಿ ದರ್ಭಮಯಕೂರ್ಚಂ ನಿಧಾಯ। ''**ಯವೋಸಿ ಧಾನ್ಯರಾಜೋ ವಾ ವಾರುಣೋ ಮಧುಸಂಯುತಃ। ನಿರ್ಣೋದಃ ಸರ್ವಪಾಪಾನಾಂ ಪವಿತ್ರಮೃಷಿಭಿಃ ಸ್ಮೃತಮ್**'' ಇತಿ ಯವಾನ್ ಪ್ರಕ್ಷಿಪ್ಯ। ''**ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾ ಯಾಶ್ಚ ಪುಷ್ಪಿಣೀಃ। ಬೃಹಸ್ಪತಿಪ್ರಸೂತಾಸ್ತಾ ನೋ ಮುಂಚನ್ತ್ವಂಹಸಃ**'' ಇತಿ ಪೂಗೀಫಲಂ ಕ್ಷಿಪ್ತ್ವಾ॥ ''**ಹಿರಣ್ಯರೂಪಃ ಸ ಹಿರಣ್ಯಸಂದೃಗಪಾಂನಪಾತ್ಸೇದು ಹಿರಣ್ಯವರ್ಣಃ। ಹಿರಣ್ಯಯಾತ್ಪರಿ ಯೋನೇರ್ನಿಷದ್ಯಾ ಹಿರಣ್ಯದಾ ದದತ್ಯನ್ನಮಸ್ಮೈ**'' ಇತಿ ಹಿರಣ್ಯಮ್। ''**ಯುವಾ ಸುವಾಸಾಃ ಪರಿವೀತ ಆಗಾತ್ಸ ಉ**

---

**ಯವೋದಕತಿಲೋದಕಾದಿ;** ದೇವಾರ್ಚನೆಗಾಗೀ ಯವೋದಕನ್ನು ಮತ್ತು ಪಿತ್ರರ್ಚನೆಗಾಗಿ ತಿಲೋದಕವನ್ನೂ ಸಿದ್ಧಗೊಳಿಸಬೇಕು. (ಒಂದೇ ತಾಮ್ರಪಾತ್ರೆಯಲ್ಲಿ ಯವೋದಕವನ್ನು ಮತ್ತು ತಿಲೋದಕವನ್ನು ತಯಾರಿಸುವ ಸಂಪ್ರದಾಯವಿದೆ ಅದುಯುಕ್ತವಲ್ಲ). ಯವೋದಕಕ್ಕಾಗಿ ಚತುರಸ್ರಮಂಡಲದಲ್ಲಿ ''**ಇದಂ ತೇ ಪಾತ್ರ..**'' ಎಂಬ ಮಂತ್ರದಿಂದ ಸ್ವರ್ಣ ಅಥವಾ ತಾಮ್ರದಪಾತ್ರೆಯನ್ನಿಡಬೇಕು. ಅದರಲ್ಲಿ ''**ಇಮಂ ಮೇ**'' ಎಂಬ ಮಂತ್ರದಿಂದ ಶುದ್ಧೋದಕವನ್ನು ತುಂಬಿಸಬೇಕು. ಹಾಗೆಯೇ ''**ಗಂಧದ್ವಾರಾಂ**'' ಎಂಬ ಮಂತ್ರದಿಂದ ಗಂಧವನ್ನು, ''**ಶರಾಸಃ**'' ಎಂಬ ಮಂತ್ರದಿಂದ ಕೂರ್ಚವನ್ನು, ''**ಯವೋಸಿ**'' ಎಂಬ ಮಂತ್ರದಿಂದ ಯವೆ ಅಥವಾ ಅಕ್ಕಿಕಾಳನ್ನು, ''**ಯಾಃ ಫಲಿನೀ**'' ಎಂದು ಅಡಿಕೆಯನ್ನು, ''**ಹಿರಣ್ಯರೂಪಃ**'' ಎಂಬ ಮಂತ್ರದಿಂದ ಚಿನ್ನವನ್ನು ಮತ್ತು ''**ಯುವಾ**

**ಶ್ರೇಯಾನ್ಭವತಿ ಜಾಯಮಾನಃ। ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ3 ಮನಸಾ ದೇವಯಂತಃ॥ ಯವೋದಕೇ ಇದಂ ಗಂಧಂ, ಇದಂ ಪುಷ್ಪಂ, ಇದಂ ತುಲಸೀಪತ್ರಂ (ನಮಃ)। ಸರ್ವೇ ಉಪಚಾರಾಃ ಯವೈಃ ಸಂಪೂರ್ಣಾಃ ಸಂತು''** ಇತಿ ಯವೈಃ ಸಂಪೂಜಯೇತ್।

ತತಃ ಪ್ರಾಚೀನಾವೀತೀ ತಿಲೋದಕಸಂಪಾದನಂ ಕುರ್ಯಾತ್ತದ್ಯಥಾ; ರಜತಪಾತ್ರಂ ತಾಮ್ರಪಾತ್ರಂ ವಾದಾಯ ''**ಇದಂ ತೇ+ಭಿಹರ್ಯಂತಿ ದೇವಾಃ**'' ಇತಿ ವರ್ತುಲಮಂಡಲೇ ನಿಧಾಯ, ತಸ್ಮಿನ್ ''**ಇಮಂ ಮೇ ಗಂಗೇ+ಶೃಣುಹ್ಯಾ ಸುಷೋಮಯಾ**'' ಇತ್ಯುದಕಮ್॥ ''**ಗಂಧದ್ವಾರಾಂ+ಹ್ವಯೇ ಶ್ರಿಯಮ್**'' ಇತಿ ಗಂಧಮ್॥ ''**ಶರಾಸಃ ಕುಶರಾ+ನ್ಯಲಿಪ್ಸತ**'' ಇತಿ ಕೂರ್ಚಮ್। ''**ತಿಲೋಸಿ ಸೋಮದೇವತ್ಯೋ ಗೋಸವೇ ದೇವನಿರ್ಮಿತಃ। ಪ್ರತ್ನವದ್ಭಿಃ ಪ್ರತ್ತ ಸ್ವಧಯಾ ಪಿತೄನಿಮಾನ್ಲೋಕಾನ್ ಪ್ರೀಣಯಾಹಿ ನಃ ಸ್ವಧಾ ನಮಃ**'' ಇತಿ ತಿಲಾನ್। ''**ಮಾ ಕಾಕಂಬೀರಮುದ್ವೃಹೋ ವನಸ್ಪತಿಮಶಸ್ತೀರ್ವಿ ಹಿ ನೀನಶಃ। ಮೋತ ಸೂರೋ ಅಹ ಏವಾ ಚನ ಗ್ರೀವಾ ಆದಧತೇ ವೇಃ**'' ಇತಿ ಭೃಂಗರಾಜಪತ್ರಮ್। ''**ಯಾಃಫಲಿನೀರ್ಯಾ+ ಮುಂಚನ್ತ್ವಂಹಸಃ**'' ಇತಿ ಫೂಗೀಫಲಮ್। ''**ಹಿರಣ್ಯರೂಪಃ+ದದತ್ಯನ್ನಮಸ್ಮೈ**'' ಇತಿ ಹಿರಣ್ಯಮ್। ''**ಯುವಾ ಸುವಾಸಾಃ+ದೇವಯಂತಃ॥ ತಿಲೋದಕೇ ಇದಂ ಗಂಧ, ಇದಂ ಪುಷ್ಪಂ, ಇದಂ ಭೃಂಗರಾಜಪತ್ರಮ್ (ನಮಃ)। ಸರ್ವೇ ಉಪಚಾರಾಸ್ತಿಲೈಃ ಸಂಪೂರ್ಣಾಃ ಸಂತು**''। ಇತಿ ತಿಲಾನ್ ಕ್ಷಿಪ್ತ್ವಾ ಗಂಧಪುಷ್ಪೈಃ ಪ್ರಚ್ಛಾದಯೇತ್॥

(''ಪ್ರಥಮಾಬ್ದೇ ಪಂಚದರ್ಭೈಃ ಪ್ರತ್ಯಬ್ದೇ ಸಪ್ತಭಿಸ್ತಥಾ॥ ತೀರ್ಥೇ ಮಹಾಲಯೇ ಚೈವ ನವದರ್ಭೈಸ್ತು ಕೂರ್ಚಕಃ'') ಸರ್ವತ್ರ ದೇವಾರ್ಚನೇ ಯವೋದಕಂ ಪಿತ್ರರ್ಚನೇ

---

**ಸುವಾಸಾ.. ಯವೋದಕೇ ಇದಂ ಗಂಧಂ..**'' ಎಂದು ಹೇಳಿ ಅಕ್ಷತೆಯನ್ನು ಹಾಕಬೇಕು. ಹಾಗೆಯೇ ಅಪಸವ್ಯದಿಂದ ತಿಲೋದಕಕ್ಕಾಗಿ ವೃತ್ತಮಂಡಲದಲ್ಲಿ ಇದಂ ತೇ ಪಾತ್ರಂ.. ಎಂಬ ಮಂತ್ರದಿಂದ ಬೆಳ್ಳಿ ಅಥವಾ ತಾಮ್ರದಪಾತ್ರೆಯನ್ನಿಟ್ಟು ಅದರಲ್ಲಿ ''**ಇಮಂ ಮೇ..**'' ಎಂಬ ಮಂತ್ರದಿಂದ ಶುದ್ಧೋದಕವನ್ನು ತುಂಬಿಸಿ. ''**ಗಂಧದ್ವಾರಾಂ..**'' ಎಂಬ ಮಂತ್ರದಿಂದ ಗಂಧವನ್ನು, ''**ಶರಾಸಃ..**'' ಮಂತ್ರದಿಂದ ದರ್ಭೆಗಳಕೂರ್ಚವನ್ನು, ''**ತಿಲೋಸಿ ಸೋಮದೇವತ್ಯೋ..**'' ಎಂಬ ಮಂತ್ರದಿಂದ ಎಳ್ಳನ್ನೂ, ''**ಮಾಕಾಕಂಬೀರ..**'' ಎಂಬ ಮಂತ್ರದಿಂದ ತುಲಸೀಪತ್ರ ಮತ್ತು ಭೃಂಗರಾಜಪತ್ರವನ್ನು ''**ಯಾಃ ಫಲಿನೀ..**'' ಎಂಬ ಮಂತ್ರದಿಂದ ಅಡಿಕೆಯನ್ನು, ''**ಹಿರಣ್ಯರೂಪಃ..**'' ಎಂಬ ಮಂತ್ರದಿಂದ ಚಿನ್ನವನ್ನು ಹಾಕಿ ''**ಯುವಾ ಸುವಾಸಾ.., ತಿಲೋದಕೇ .., ಸರ್ವೇಉಪಚಾರಾ.. ಸಂತು**'' ಎಂದು ಎಳ್ಳನ್ನು ಹಾಕಿ, ತಿಲೋದಕವನ್ನು ಸಿದ್ಧಗೊಳಿಸಿ ಕಲಶಪಾತ್ರೆಯನ್ನು ಗಂಧಪುಷ್ಪಗಳಿಂದ ಮುಚ್ಚಿಡಬೇಕು. (ಮೊದಲನೆಯ ವಾರ್ಷಿಕ ಶ್ರಾದ್ಧದಲ್ಲಿ ಐದುದರ್ಭೆಗಳಿಂದಲೂ ಪ್ರತಿ ವಾರ್ಷಿಕದಲ್ಲಿ ಏಳುದರ್ಭೆಗಳಿಂದಲೂ, ತೀರ್ಥಸ್ಥಾನ

ತಿಲೋದಕಂ ಚೋಪಕಲ್ಪಯೇತ್। (ಕೇಚಿದೇಕಸ್ಮಿನ್ನೇವಪಾತ್ರೇ ಯವೋದಕಂ ತಿಲೋದಕಂಚೋಪಕಲ್ಪಯಂತಿ ತನ್ನ ಯುಕ್ತಮ್।। ) ಅಥ ಕರ್ತಾ ಬ್ರಾಹ್ಮಣೈಃ ಸಹಾತ್ಮಶುದ್ಧ್ಯರ್ಥಂ ಗೃಹಭಾಂಡಭಾಜನಾದಿಶುದ್ಧ್ಯರ್ಥಂ ವಕ್ಷ್ಯಮಾಣಾನ್ಮಂತ್ರಾನ್ ಜಪೇತ್। ಯವೋದಕಪಾತ್ರಂ ಸ್ಪೃಶನ್ನಭಿಮಂತ್ರಯೇಚ್ಚ।[23] ತತ್ರ ಮನ್ತ್ರಾಃ;–

1)‘‘ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್। ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದಶಾಂಗುಲಮ್।। ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್। ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ।। ಏತಾವಾನಸ್ಯ ಮಹಿಮಾತೋ ಜ್ಯಾಯಾಁಶ್ಚ ಪೂರುಷಃ। ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ।। ತ್ರಿಪಾದೂರ್ಧ್ವ ಉದೈತ್ಪುರುಷಃ ಪಾದೋಽಸ್ಯೇಹಾಭವತ್ಪುನಃ। ತತೋ ವಿಶ್ವಂ ವ್ಯಕ್ರಾಮತ್ಸಾಶನಾನಶನೇ ಅಭಿ।। ತಸ್ಮಾದ್ವಿರಾಳಜಾಯತ ವಿರಾಜೋ ಅಧಿ ಪೂರುಷಃ। ಸ ಜಾತೋ ಅತ್ಯರಿಚ್ಯತ ಪಶ್ಚಾದ್ಭೂಮಿಮಥೋ ಪುರಃ।। ಯತ್ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ। ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ।। ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ಪುರುಷಂ ಜಾತಮಗ್ರತಃ। ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ।। ತಸ್ಮಾದ್ಯಜ್ಞಾತ್ಸರ್ವಹುತಃ ಸಂಭೃತಂ ಪೃಷದಾಜ್ಯಮ್। ಪಶೂನ್ತಾಁಶ್ಚಕ್ರೇ ವಾಯವ್ಯಾನಾರಣ್ಯಾನ್ ಗ್ರಾಮ್ಯಾಶ್ಚ ಯೇ।। ತಸ್ಮಾದ್ಯಜ್ಞಾತ್ಸರ್ವಹುತ ಋಚಃ ಸಾಮಾನಿ ಜಜ್ಞಿರೇ। ಛಂದಾಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ।। ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ। ಗಾವೋ ಹ ಜಜ್ಞಿರೇ ತಸ್ಮಾತ್ತಸ್ಮಾಜ್ಜಾತಾ ಅಜಾವಯಃ।। ಯತ್ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್। ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ।। ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ। ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ।। ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ।

---

ಮಹಾಲಯಗಳಲ್ಲಿ ಒಂಭತ್ತು ದರ್ಭೆಗಳಿಂದಲೂ ಮಾಡಿದ ಕೂರ್ಚ ಇರಬೇಕು.) ದೇವಕಾರ್ಯಕ್ಕೆ ಯವೋದಕವನ್ನೂ, ಪಿತೃಕಾರ್ಯಕ್ಕೆ ತಿಲೋದಕವನ್ನೂ ಬಳಸುವುದು.

ಕರ್ತೃವು ಮತ್ತು ಭೋಕ್ತೃಗಳೊಡನೆ ಪುರುಷಸೂಕ್ತಮುಂತಾದ ಮಂತ್ರಗಳನ್ನು ಗೃಹಭೂಭಾಂಡಾದಿಶುಧ್ಯರ್ಥವಾಗಿ ಮತ್ತು ಪ್ರಾಯಶ್ಚಿತ್ತಾರ್ಥವಾಗಿ ಜಪಿಸಬೇಕು ಮತ್ತು ಯವೋದಕವನ್ನಭಿಮಂತ್ರಿಸಬೇಕು ಅದರಕ್ರಮವು ಹೀಗಿದೆ;– ಕರ್ತೃವು ಯವೋದಕಪಾತ್ರೆಯನ್ನು ಸ್ಪರ್ಶಿಸುತ್ತ ‘‘**ಓಂ ಸಹಸ್ರಶೀರ್ಷಾ..**’’ ಎಂಬಲ್ಲಿಂದ ತೊಡಗಿ ತೊಡಗಿ ‘‘..**ಸಿಷಾಸತಿ**’’ ಎಂಬಲ್ಲಿಯವರೆಗಿನ

ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ॥ ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ। ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ತಥಾ ಲೋಕಾಁ ಅಕಲ್ಪಯನ್॥ ಸಪ್ತಾಸ್ಯಾಸನ್ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ। ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ಪುರುಷಂ ಪಶುಮ್॥ ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್। ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ॥

2)ಮಮಾಗ್ನೇ ವರ್ಚೋ ವಿಹವೇಷ್ವಸ್ತು ವಯಂತ್ವೇಂಧಾನಾಸ್ತನ್ವಂ ಪುಷೇಮ। ಮಹ್ಯಂ ನಮಂತಾಂ ಪ್ರದಿಶಶ್ಚತಸ್ರಸ್ತ್ವಯಾಧ್ಯಕ್ಷೇಣ ಪೃತನಾ ಜಯೇಮ॥ ಮಮ ದೇವಾ ವಿಹವೇ ಸಂತು ಸರ್ವ ಇಂದ್ರವಂತೋ ಮರುತೋ ವಿಷ್ಣುರಗ್ನಿಃ। ಮಮಾಂತರಿಕ್ಷಮುರುಲೋಕಮಸ್ತು ಮಹ್ಯಂ ವಾತಃ ಪವತಾಂ ಕಾಮೇ ಅಸ್ಮಿನ್॥ ಮಯಿ ದೇವಾ ದ್ರವಿಣಮಾ ಯಜಂತಾಂ ಮಯ್ಯಾಶೀರಸ್ತು ಮಯಿ ದೇವಹೂತಿಃ। ದೈವ್ಯಾ ಹೋತಾರೋ ವನುಷಂತ ಪೂರ್ವೇಽರಿಷ್ಟಾಃ ಸ್ಯಾಮ ತನ್ವಾ ಸುವೀರಾಃ॥ ಮಹ್ಯಂ ಯಜಂತು ಮಮ ಯಾನಿ ಹವ್ಯಾಕೂತಿಃ ಸತ್ಯಾ ಮನಸೋ ಮೇ ಅಸ್ತು। ಏನೋ ಮಾ ನಿ ಗಾಂಕತಮಚ್ಚನಾಹಂ ವಿಶ್ವೇ ದೇವಾಸೋ ಅಧಿ ವೋಚತಾ ನಃ॥ ದೇವೀಃ ಷಳುರ್ವೀರುರು ನಃ ಕೃಣೋತ ವಿಶ್ವೇ ದೇವಾಸ ಇಹ ವೀರಯಧ್ವಮ್। ಮಾ ಹಾಸ್ಮಹಿ ಪ್ರಜಯಾ ಮಾ ತನೂಭಿರ್ಮಾ ರಧಾಮ ದ್ವಿಷತೇ ಸೋಮ ರಾಜನ್॥ ಅಗ್ನೇ ಮನ್ಯುಂ ಪ್ರತಿನುದನ್ಪರೇ ಷಾಮದಬ್ಧೋ ಗೋಪಾಃ ಪರಿ ಪಾಹಿ ನಸ್ತ್ವಮ್। ಪ್ರತ್ಯಂಚೋ ಯಂತು ನಿಗುತಃ ಪುನಸ್ತೇ3ಽಮೈಷಾಂ ಚಿತ್ತಂ ಪ್ರಬುಧಾಂ ವಿ ನೇಶತ್॥ ಧಾತಾ ಧಾತೃಣಾಂ ಭುವನಸ್ಯ ಯಸ್ಪತಿರ್ದೇವಂ ತ್ರಾತಾರಮಭಿಮಾತಿಷಾಹಮ್। ಇಮಂ ಯಜ್ಞಮಶ್ವಿನೋಭಾ ಬೃಹಸ್ಪತಿರ್ದೇವಾಃ ಪಾಂತು ಯಜಮಾನಂ ನ್ಯರ್ಥಾತ್॥ ಉರುವ್ಯಚಾ ನೋ ಮಹಿಷಃ ಶರ್ಮ ಯಂಸದಸ್ಮಿನ್ಹವೇ ಪುರುಹೂತಃ ಪುರುಕ್ಷುಃ। ಸ ನಃ ಪ್ರಜಾಯೈ ಹರ್ಯಶ್ವಮೃಳಯೇಂದ್ರ ಮಾ ನೋ ರೀರಿಷೋ ಮಾ ಪರಾ ದಾಃ॥ ಯೇ ನಃ ಸಪತ್ನಾ ಅಪ ತೇ ಭವನ್ತ್ವಿಂದ್ರಾಗ್ನಿಭ್ಯಾಮವ ಬಾಧಾಮಹೇ ತಾನ್। ವಸವೋ ರುದ್ರಾ ಆದಿತ್ಯಾ ಉಪರಿಸ್ಪೃಶಂ ಮೋಗ್ರಂ ಚೇತ್ತಾರಮಧಿರಾಜಮಕ್ರನ್॥ ಅರ್ವಾಂಚಮಿಂದ್ರಮಮುತೋ ಹವಾಮಹೇ ಯೋ ಗೋಜಿದ್ಧನಜಿದಶ್ವಜಿದ್ಯಃ। ಇಮಂನೋ ಯಜ್ಞಂ ವಿಹವೇ ಜುಷಸ್ವಾಸ್ಯ ಕುರ್ಮೋ ಹರಿವೋ ಮೇದಿನಂ ತ್ವಾ॥

3)ತರತ್ಸಮಂದೀ ಧಾವತಿ ಧಾರಾ ಸುತಸ್ಯಾಂಧಸಃ। ತರತ್ಸಮಂದೀ ಧಾವತಿ॥ ಉಸ್ರಾ ವೇದ ವಸೂನಾಂ ಮರ್ತಸ್ಯ ದೇವ್ಯವಸಃ। ತರತ್ಸಮಂದೀ ಧಾವತಿ॥ ಧ್ವಸ್ರಯೋಃ ಪುರುಷನ್ತ್ಯೋರಾ ಸಹಸ್ರಾಣಿ ದದ್ಮಹೇ। ತರತ್ಸಮಂದೀ ಧಾವತಿ॥ ಆ ಯಯೋಸ್ತ್ರಿಂಶತಂತನಾ ಸಹಸ್ರಾಣಿ ಚ ದದ್ಮಹೇ। ತರತ್ಸಮಂದೀ ಧಾವತಿ॥

4)ನ ತಮಂಹೋ ನ ದುರಿತಂ ದೇವಾಸೋ ಅಷ್ಟ ಮರ್ತ್ಯಮ್। ಸಜೋಷಸೋ ಯಮರ್ಯಮಾ ಮಿತ್ರೋ ನಯಂತಿ ವರುಣೋ ಅತಿ ದ್ವಿಷಃ॥ ತದ್ಧಿ ವಯಂ ವೃಣೀಮಹೇ ವರುಣ ಮಿತ್ರಾರ್ಯಮನ್। ಯೇನಾ ನಿರಂಹಸೋ ಯೂಯಂ ಪಾಥ ನೇಥಾ ಚ ಮರ್ತ್ಯಮತಿ ದ್ವಿಷಃ॥ ತೇ ನೂನಂ ನೋಽಯಮೂತಯೇವರುಣೋ ಮಿತ್ರೋ ಅರ್ಯಮಾ। ನಯಿಷ್ಠಾ ಉ ನೋ ನೇಷಣಿ ಪರ್ಷಿಷ್ಠಾ ಉ ನಃ ಪರ್ಷಣ್ಯತಿ ದ್ವಿಷಃ॥ ಯೂಯಂ ವಿಶ್ವಂ ಪರಿ ಪಾಥ ವರುಣೋ ಮಿತ್ರೋ ಅರ್ಯಮಾ। ಯುಷ್ಮಾಕಂ ಶರ್ಮಣಿ ಪ್ರಿಯೇ ಸ್ಯಾಮ ಸುಪ್ರಣೀತಯೋಽತಿ ದ್ವಿಷಃ॥ ಆದಿತ್ಯಾಸೋ ಅತಿ ಸ್ರಿಧೋ ವರುಣೋ ಮಿತ್ರೋ ಅರ್ಯಮಾ। ಉಗ್ರಂ ಮರುದ್ಭೀ ರುದ್ರಂ ಹುವೇಮೇಂದ್ರಮಗ್ನಿಂ ಸ್ವಸ್ತಯೇಽತಿ ದ್ವಿಷಃ॥ ನೇತಾರ ಊ ಷುಣಸ್ತಿರೋ ವರುಣೋ ಮಿತ್ರೋ ಅರ್ಯಮಾ। ಅತಿ ವಿಶ್ವಾನಿ ದುರಿತಾ ರಾಜಾನಶ್ಚರ್ಷಣೀನಾಮತಿ ದ್ವಿಷಃ॥ ಶುನಮಸ್ಮಭ್ಯಮೂತಯೇ ವರುಣೋ ಮಿತ್ರೋ ಅರ್ಯಮಾ। ಶರ್ಮ ಯಚ್ಛಂತು ಸಪ್ರಥ ಆದಿತ್ಯಾಸೋ ಯದೀಮಹೇ ಅತಿ ದ್ವಿಷಃ॥ ಯಥಾ ಹ ತ್ಯದ್ವಸವೋ ಗೌರ್ಯಂ ಚಿತ್ಪದಿ ಷಿತಾಮಮುಂಚತಾ ಯಜತ್ರಾಃ। ಏವೋ ಷ್ವ1ಸ್ಮನ್ಮುಂಚತಾ ವ್ಯಂಹಃ ಪ್ರ ತಾರ್ಯಗ್ನೇ ಪ್ರತರಂ ನ ಆಯುಃ॥

5)ಹಂಸಃ ಶುಚಿಷದ್ವಸುರಂತರಿಕ್ಷಸದ್ಧೋತಾ ವೇದಿಷದತಿಥಿರ್ದುರೋಣಸತ್। ನೃಷದ್ವರಸದೃತಸದ್ವ್ಯೋಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಮ್॥ 6)ಯತ್ಕಿಂ ಚೇದಂ ವರುಣ ದೈವ್ಯೇಜನೇಽಭಿದ್ರೋಹಂ ಮನುಷ್ಯಾ3ಶ್ಚರಾಮಸಿ। ಅಚಿತ್ತೀ ಯತ್ತವ ಧರ್ಮಾ ಯುಯೋಪಿಮ ಮಾ ನಸ್ತಸ್ಮಾದೇನಸೋ ದೇವ ರೀರಿಷಃ॥ 7)ಓಮ್ ಭೂರ್ಭುವಃ ಸ್ವಃ। ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್॥ 8)ಶುಚೀ ವೋ ಹವ್ಯಾ ಮರುತಃ ಶುಚೀನಾಂ ಶುಚಿಂ ಹಿನೋಮ್ಯಧ್ವರಂ ಶುಚಿಭ್ಯಃ। ಋತೇನ ಸತ್ಯಮೃತಸಾಪ ಆಯಞ್ಛುಚಿಜನ್ಮಾನಃ ಶುಚಯಃ ಪಾವಕಾಃ॥ 9)ಅಗ್ನಿಃ ಶುಚಿವ್ರತತಮಃ ಶುಚಿರ್ವಿಪ್ರಃ ಶುಚಿಃ ಕವಿಃ। ಶುಚೀ ರೋಚತ ಆಹುತಃ॥ 10)ಉದಗ್ನೇ ಶುಚಯಸ್ತವ ಶುಕ್ರಾ ಭ್ರಾಜಂತ ಈರತೇ। ತವ ಜ್ಯೋತೀಂಷ್ಯರ್ಚಯಃ॥

11)ಏತೋ ನ್ವಿಂದ್ರಂ ಸ್ತವಾಮ ಶುದ್ಧಂ ಶುದ್ಧೇನ ಸಾಮ್ನಾ। ಶುದ್ಧೈರುಕ್ಥೈರ್ವಾವೃಧ್ವಾಂಸಂ ಶುದ್ಧ ಆಶೀರ್ವಾನ್ಮಮತ್ತು॥ ಇಂದ್ರ ಶುದ್ಧೋ ನ ಆ ಗಹಿ ಶುದ್ಧಃ ಶುದ್ಧಾಭಿರೂತಿಭಿಃ। ಶುದ್ಧೋ ರಯಿಂ ನಿ ಧಾರಯ ಶುದ್ಧೋ ಮಮದ್ಧಿ ಸೋಮ್ಯಃ॥ ಇಂದ್ರ ಶುದ್ಧೋ ಹಿ ನೋ ರಯಿಂ ಶುದ್ಧೋ ರತ್ನಾನಿ ದಾಶುಷೇ। ಶುದ್ಧೋ ವೃತ್ರಾಣಿ ಜಿಘ್ನಸೇ ಶುದ್ಧೋ ವಾಜಂ ಸಿಷಾಸಸಿ'। ಇತಿ

ಮನ್ತ್ರಾಞ್ಜಪನ್ಯವೋದಕಮಭಿಮಂತ್ರ್ಯ, ಪಾತ್ರಾಂತರೇ ಯವೋದಕಮಾದಾಯ **''ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂಗತೋಽಪಿ ವಾ। ಯಃ ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ''** ಇತ್ಯಾತ್ಮಾನಂ ಬ್ರಾಹ್ಮಣಾನ್ ಶ್ರಾದ್ಧೋಪಯೋಗಿವಸ್ತೂನಿ ಚ ಸಂಪ್ರೋಕ್ಷ್ಯ **''ಸರ್ವಂ ಸ್ಥಲಭಾಂಡಾದಿ ಶುಚಿ ಭವತು''** ಇತಿ ವದೇತ್ {''ಅಸ್ತು ಸರ್ವಂ ಶುಚಿ''ಪ್ರ+}॥

## ಬ್ರಹ್ಮದಂಡಮನುಜ್ಞಾ ಚ

ತತಃ ಕರ್ತಾ ಬ್ರಾಹ್ಮಣಾನ್ [25]**''ದೇವಾಃ ಸ್ವಾಗತಮ್, ಪಿತರಃ ಸ್ವಾಗತಮ್''** ಇತಿ ಸ್ವಾಗತೋಕ್ತ್ಯಾಹೂಯ। ಪ್ರಾಙ್ಮುಖಾ ದೇವಾಃ ಉದಙ್ಮುಖಾಃ ಪಿತರಃ ಇತಿ ಯಥಾಕ್ರಮಂ ವಿಪ್ರಾನುಪವೇಶ್ಯ। **''ಅಧಿಕಾರಸಿದ್ಧ್ಯರ್ಥಂ ಬ್ರಹ್ಮದಂಡಂ ಕರಿಷ್ಯೇ''** ಇತಿ ಸಂಕಲ್ಪ್ಯ [26]ಬ್ರಹ್ಮದಂಡಾರ್ಥಂ ಕುಶತಿಲಹಿರಣ್ಯಾನ್ಯುದಪಾತ್ರಂ ಚ ಗೃಹೀತ್ವಾ ಕನಿಷ್ಠಪೂರ್ವಂ ಬ್ರಾಹ್ಮಣಾನ್ ತ್ರಿಃ ಪ್ರದಕ್ಷಿಣೀ ಕುರ್ಯಾತ್॥ **''ಭೂರ್ಭುವಃ ಸ್ವಃ॥ [27]ಸಮಸ್ತಸಂಪತ್ಸಮವಾಪ್ತಿಹೇತವಃ ಸಮುತ್ಥಿತಾಪತ್ಕುಲಧೂಮಕೇತವಃ। ಅಪಾರಸಂಸಾರಸಮುದ್ರಸೇತವಃ ಪುನಂತು ಮಾಂ ಬ್ರಾಹ್ಮಣಪಾದಪಾಂಸವಃ॥ ಆಪದ್ಘನಧ್ವಾಂತಸಹಸ್ರಭಾನವಃ ಸಮೀಹಿತಾರ್ಥಾರ್ಪಣಕಾಮಧೇನವಃ। ಸಮಸ್ತತೀರ್ಥಾಂಬುಪವಿತ್ರಮೂರ್ತಯೋ ರಕ್ಷಂತು ಮಾಂ ಬ್ರಾಹ್ಮಣಪಾದಪಾಂಸವಃ॥ ವಿಪ್ರೌಘದರ್ಶನಾತ್ ಕ್ಷಿಪ್ರಂ ಕ್ಷೀಯಂತೇ ಪಾಪರಾಶಯಃ। ವಂದನಾನ್ಮಂಗಲಾವಾಪ್ತಿರರ್ಚನಾದಚ್ಯುತಂ ಪದಮ್॥ ಆಧಿವ್ಯಾಧಿಹರಂ ನೃಣಾಂ ಮೃತ್ಯುದಾರಿದ್ರ್ಯನಾಶನಮ್॥ ಶ್ರೀಪುಷ್ಟಿಕೀರ್ತಿದಂ ವಂದೇ ವಿಪ್ರಶ್ರೀಪಾದಪಂಕಜಮ್॥ ಯಾವತೀರ್ವೈ ದೇವತಾಸ್ತಾಃ ಸರ್ವಾ ವೇದವಿದಿ ಬ್ರಾಹ್ಮಣೇ ವಸಂತಿ ತಸ್ಮಾದ್ಬ್ರಾಹ್ಮಣೇಭ್ಯೋ**

---

ಮಂತ್ರಗಳನ್ನು ಜಪಿಸಿ ಅಭಿಮಂತ್ರಿಸುವುದು. ಜಪಾನಂತರ ಕಲಶದಿಂದ ಒಂದು ಪಾತ್ರೆಯಲ್ಲಿ ಸ್ವಲ್ಪ ಯವೋದಕವನ್ನುತೆಗೆದುಕೊಂಡು '**ಅಪವಿತ್ರಃ..**' ಎಂದು ವಿಷ್ಣುಸ್ಮರಣೆಯನ್ನುಮಾಡುತ್ತಾ ತನ್ನಮೇಲೂ ಬ್ರಾಹ್ಮಣರಮೇಲೂ ಪ್ರೋಕ್ಷಿಸಿ ಇತರ ಶ್ರಾದ್ಧೋಪಯೋಗಿ ವಸ್ತುಗಳ ಮೇಲೆಯೂ ಪ್ರೋಕ್ಷಿಸಿ. '**ಸರ್ವಂ ಸ್ಥಳಭಾಂ..**' ಎಂದುಪ್ರಾರ್ಥಿಸುವುದು ಬ್ರಾಹ್ಮಣರು 'ಅಸ್ತು ಸರ್ವಂ..' ಎಂಬ ಪ್ರತಿವಚನವಿಯ್ಯುವುದು.

**ಬ್ರಹ್ಮದಂಡ ಮತ್ತು ಅನುಜ್ಞೇ;** ಆನಂತರ ಬ್ರಾಹ್ಮಣರನ್ನು '**ದೇವಾಃ ಸ್ವಾಗತಮ್, ಪಿತರಃ ಸ್ವಾಗತಮ್**' ಎಂಬ ಸ್ವಾಗತೋಕ್ತಿಯಿಂದ ಆಮಂತ್ರಿಸುವುದು ದೇವಬ್ರಾಹ್ಮಣರನ್ನು ಪೂರ್ವಾಭಿಮುಖವಾಗಿಯೂ ಪಿತೃಬ್ರಾಹ್ಮಣರನ್ನು ಉತ್ತರಾಭಿಮುಖವಾಗಿಯೂ ಕುಳ್ಳಿರಿಸಿ '**ಅಧಿಕಾರಸಿದ್ಧ್ಯರ್ಥಂ ಬ್ರಹ್ಮದಂಡಂ ಕರಿಷ್ಯೇ**' ಎಂದು ಸಂಕಲ್ಪಿಸಿ ಬ್ರಹ್ಮದಂಡಕ್ಕಾಗಿ ಸ್ವಲ್ಪ ಚಿನ್ನ ಅಥವಾ ದಕ್ಷಿಣೆ ಎಳ್ಳು ನೀರಿನ ಪಾತ್ರೇ ಮತ್ತು ದರ್ಭೆಗಳನ್ನು ಹಿಡಿದುಕೊಂಡು ಕುಳಿತಿರುವ ಬ್ರಾಹ್ಮಣರಿಗೆ '**ಸಮಸ್ತಸಂಪತ್ಸಮ.... ದೇವತಾಃ ಪ್ರೀಣಾತಿ**' ಎಂದು ಹೇಳಿ ಕನಿಷ್ಠಪೂರ್ವಕ್ರಮದಲ್ಲಿ ಮೂರು ಪ್ರದಕ್ಷಿಣೆಗಳನ್ನು ಮಾಡಬೇಕು. ಆನಂತರ ಕೈಯ್ಯಲ್ಲಿದ್ದ

**ವೇದವಿದ್ಭ್ಯೋ ದಿವೇದಿವೇ ನಮಸ್ಕುರ್ಯಾನ್ನಾಶ್ಲೀಲಂ ಕೀರ್ತಯೇದೇತಾ ಏವ ದೇವತಾಃ ಪ್ರೀಣಾತಿ**'' ಇತಿ॥ ತತೋ ಬ್ರಹ್ಮದಂಡಂ ಬ್ರಾಹ್ಮಣಾನಾಂ ಪುರತಃ ಭೂಮೌ ನಿಕ್ಷಿಪ್ಯ ಬ್ರಾಹ್ಮಣೇಭ್ಯೋ ದತ್ವಾ, ''**ನಮೋ ದೇವೇಭ್ಯಃ**'' ಇತಿ ದೇವೇಭ್ಯಃ, ''**ಸ್ವಧಾ ಪಿತೃಭ್ಯಃ**'' ಇತಿ ಪಿತೃಭ್ಯಃ। ಏವಂ ದ್ವೌ ನಮಸ್ಕಾರೌ ಕೃತ್ವಾ॥ ಅಪಸವ್ಯಮ್ ''**ಅದ್ಯ ತಿಥೌ ಪಿತ್ರ್ಯಾಣಾಂ ಪ್ರತಿಸಾಂವತ್ಸರಿಕಶ್ರಾದ್ಧಂ ಕರ್ತುಂ ಮಮಾಧಿಕಾರಸಂಪದಸ್ತ್ವಿತಿ ಭವಂತೋ ಬ್ರುವಂತು**'' ಇತಿ ಪ್ರಾರ್ಥಯೇತ್ {''**ಶ್ರಾದ್ಧಾಧಿಕಾರಸಂಪದಸ್ತು**'' ಇತಿ ವಿಪ್ರಾಃ}॥ ಸವ್ಯಂ ''**ಕಾಲೋಯಂ ಮುಖ್ಯಕಾಲೋಽಸ್ತ್ವಿತಿ ಭವಂತೋ ಬ್ರವಂತು**'' ಇತಿ ಕರ್ತಾ ವದೇತ್ {''**ಕಾಲೋಽಯಂ ಮುಖ್ಯಕಾಲೋಽಸ್ತು**'' ಇತಿ ವಿಪ್ರಾಃ}॥ ''**ಪಾಕಾದೀನಾಂ ಹವಿಯೋರ್ಗ್ಯತಾಸ್ತ್ವಿತಿ ಭವಂತೋ ಬ್ರುವಂತು**'' ಇತಿ ಕರ್ತಾ {''ಪಾಕಾದೀನಾಂ ಹವಿಯೋರ್ಗ್ಯತಾಸ್ತು'' ಇತಿ ವಿಪ್ರಾಃ}॥

## ದ್ವಿತೀಯಂ ವರಣಮ್

ಅಥ ಕರ್ತಾ ''**ಕ್ಷಣಾದಿ ಕರಿಷ್ಯೇ**'' ಇತಿ ವದೇತ್ {''ಕುರುಷ್ವ''ಇತಿ ವಿಪ್ರಾಃ}॥ ಕರ್ತಾ ದೇವಾರ್ಥವಿಪ್ರಸ್ಯ ಪುರತ [28]ಉದಙ್ಮುಖಃ ಸ್ಥಿತ್ವಾ ವಿಪ್ರಸ್ಯ ದಕ್ಷಿಣಂ [29]ಜಾನು ಸ್ಪೃಷ್ಟ್ವಾ ''**ಪಿತೃಣಾಂ ಪ್ರತಿಸಾಂವತ್ಸರಿಕಶ್ರಾದ್ಧೇ ಪುರೂರವಾದ್ರ್ರವಸಂಜ್ಞಕವಿಶ್ವೇದೇವಾರ್ಥಂ ತ್ವಯಾ ಕ್ಷಣಃ ಕರ್ತವ್ಯಃ, ಪ್ರಾಪ್ನೋತು ಭವಾನ್**'' ಇತಿ ವದೇತ್॥ {''ಓಂ ತಥಾ। ಪ್ರಾಪ್ನವಾನಿ'' ಇತಿ ದೇವಬ್ರಾಹ್ಮಣಃ} [ಬ್ರಾಹ್ಮಣದ್ವಯಪಕ್ಷೇ ಪ್ರತ್ಯೇಕಂ ವರಣಮ್]॥

---

ಬ್ರಹ್ಮದಂಡವನ್ನು ಬ್ರಾಹ್ಮಣರ ಮುಂದಿರಿಸಿ ವಿಭಾಗಿಸಿ ಬ್ರಾಹ್ಮಣರಿಗಿತ್ತು ಅವರಿಗೆ '**ನಮೋ ದೇವೇಭ್ಯಃ, ಸ್ವಧಾ ಪಿತೃಭ್ಯಃ**' ಎಂದು ಎರಡು ನಮಸ್ಕಾರಗಳನ್ನು ಮಾಡಿ ಅಪಸವ್ಯ ಮಾಡಿಕೊಂಡು '**ಅದ್ಯ ತಿಥೌ.... ಬ್ರುವಂತು**' ಎಂದು ಶ್ರಾದ್ಧಕರ್ತೃವು ಹೇಳಬೇಕು. (ಆಗ ಬ್ರಾಹ್ಮಣರು ಶ್ರಾದ್ಧಾಧಿಕಾರ ಸಂಪದಸ್ತು ಎಂದು ಪ್ರತಿವಚನವೀಯಬೇಕು.) ಆನಂತರ ಸವ್ಯದಲ್ಲಿ '**ಕಾಲೋಯಂ ... ಬ್ರುವಂತು**' ಹೇಳುವುದು. ಬ್ರಾಹ್ಮಣರು '**ಕಾಲೋಯಂ..**' ಎಂದು ಹೇಳುವುದು. ಕರ್ತೃವು '**ಪಾಕಾದೀನಾಂ..**' ಹೇಳುವುದು ಬ್ರಾಹ್ಮಣರು ಪಾಕಾದೀನಾಂ...ಯೋಗ್ಯತಾಸ್ತು ಎಂದು ಹೇಳುವುದು, ಹೀಗೆ ಅನುಜ್ಞೆಯನ್ನು ಪಡೆದು,

**ದ್ವಿತೀಯವರಣ**; '**ಕ್ಷಣಾದಿ ಕರಿಷ್ಯೇ**' ಎಂದು ಬ್ರಾಹ್ಮಣರನ್ನು ಪ್ರಾರ್ಥಿಸಿ 'ಕುರುಷ್ವ' ಎಂದು ಬ್ರಾಹ್ಮಣರು ಪ್ರತಿವಚನವನ್ನಿತ್ತಬಳಿಕ ಕ್ಷಣಾದಿಗಳನ್ನು ಮಾಡುವುದು. ಕರ್ತೃವು ದೇವಬ್ರಾಹ್ಮಣರ ಮುಂದೆ ಉದಙ್ಮುಖನಾಗಿ ನಿಂತು ವಿಶ್ವದೇವಸ್ಥಾನದಲ್ಲಿ ಕುಳಿತ ಬ್ರಾಹ್ಮಣನ ಬಲ ಮೊಣಕಾಲನ್ನು ಮುಟ್ಟಿ '**ಪಿತೃಣಾಂ..ದೇವಾರ್ಥೇ..ಕರ್ತವ್ಯಃ**' ಎಂದು ಹೇಳಬೇಕು, ಅದಕ್ಕೆ ಬ್ರಾಹ್ಮಣರು ಕ್ರಮವಾಗಿ 'ಓಂ ತಥಾ, ಪ್ರಾಪ್ನವಾನಿ' ಪ್ರತ್ಯುತ್ತರಿಸಬೇಕು. ದೇವಸ್ಥಾನದಲ್ಲಿ ಇಬ್ಬರು ಕುಳಿತಿದ್ದರೆ ವರಣಾದಿಗಳನ್ನು ಪ್ರತ್ಯೇಕವಾಗಿ ಮಾಡಬೇಕು,

ಅಪಸವ್ಯಮ್। ಪಿತ್ರರ್ಥವಿಪ್ರಸ್ಯ ಪುರತಃ ಪ್ರಾಗ್ದಕ್ಷಿಣಾಮುಖಃ ಸ್ಥಿತ್ವಾ ವಿಪ್ರಸ್ಯ [30]ದಕ್ಷಿಣಂ ಜಾನು ಸ್ಪೃಷ್ಟ್ವಾ **''ಪಿತೃಣಾಂ ಪ್ರತಿಸಾಂವತ್ಸರಿಕಶ್ರಾದ್ಧೇ ಅಸ್ಮತ್ಪಿತೃಪಿತಾಮಹ ಪ್ರಪಿತಾಮಹಾರ್ಥಂ ತ್ವಯಾ ಕ್ಷಣಃ ಕರ್ತವ್ಯಃ, ಪ್ರಾಪ್ನೋತು ಭವಾನ್''**। {''ಓಂ ತಥಾ, ಪ್ರಾಪ್ನವಾನಿ'' ಇತಿ ಪಿತ್ರ್ಯವಿಪ್ರಃ} [ಬಹುಬ್ರಾಹ್ಮಣಪಕ್ಷೇ ಅಸ್ಮತ್ಪಿತ್ರರ್ಥೇ ತ್ವಯಾ ಕ್ಷಣಃ..ಇತ್ಯಾದಿವ್ಯೂಹಃ]। ತತೋ ಬ್ರಾಹ್ಮಣಾನ್ಪ್ರಾರ್ಥಯೇತ್ **''ಅಕ್ರೋಧನೈಃ ಶೌಚಪರೈಃ ಸತತಂ ಬ್ರಹ್ಮಚಾರಿಭಿಃ। ಭವಿತವ್ಯಂ ಭವದ್ಭಿಶ್ಚ ಮಯಾ ಚ ಶ್ರಾದ್ಧಕಾರಿಣಾ''** ಇತಿ {''ಓಂ ತಥಾ'' ಇತಿಪ್ರ+}॥

## ಮಂಡಲಾರ್ಚನಂ ಪಾದಪ್ರಕ್ಷಾಲನಮ್

ಸವ್ಯಮ್। ಪಾದ್ಯಮಂಡಲಂ ಕುರ್ಯಾತ್ತದ್ಯಥಾ। [32]ಗೃಹದ್ವಾರೇಽಂಗಣೇ ಗೋಮಯೋದಕಾಭ್ಯಾಂ ಭಸ್ಮನಾ ವಾ ಉತ್ತರಭಾಗೇ ಈಶಾನೀಮಾರಭ್ಯ ಪ್ರದಕ್ಷಿಣಂ ಪ್ರಾದೇಶಮಾತ್ರಂ ಚತುರಶ್ರಂ ದೇವಾನಾಂ ಮಂಡಲಂ ಕುರ್ಯಾತ್। ತದ್ದಕ್ಷಿಣತಃ ಷಡಂಗುಲಂ ಪ್ರಾದೇಶಮಾತ್ರಂ ವಾ ಸ್ಥಲಂ ತ್ಯಕ್ತ್ವಾ ಆಗ್ನೇಯೀಮಾರಭ್ಯಾಪ್ರದಕ್ಷಿಣಂ ಪ್ರಾದೇಶಮಾತ್ರವಿಷ್ಕಂಭಂ ವರ್ತುಲಂ ಮಂಡಲಂ ಪಿತ್ರ್ಯಾಣಾಂ ಕುರ್ಯಾತ್॥ ಏತಯೋರ್ಮಂಡಲಯೋರ್ಮಧ್ಯೇ ಪಾದ್ಯೋದಕಾಸಂಸರ್ಗಾಯ ಮೃದಾದಿಭಿರಂತರಂ ಕಾರ್ಯಮ್॥

ತತಃ **''ದೇವಪಾದ್ಯಸ್ಥಾನೇ ಇದಮಾಸನಮ್''** ಇತಿ ದೇವಪಾದ್ಯಮಂಡಲೇ ಪ್ರಾಗಗ್ರಾನ್ ದರ್ಭಾನಾಸ್ತೀರ್ಯ। **''ಇಮೇ ಗಂಧಾಃ। ಇಮಾನಿ ಪುಷ್ಪಾಣಿ''** ಇತಿ ಮಂಡಲಂ

---

ನಂತರ ಅಪಸವ್ಯದಿಂದ ಪಿತೃಸ್ಥಾನದಲ್ಲಿ ಕುಳಿತ ಬ್ರಾಹ್ಮಣನ ಬಲಮೊಣಗಾಲನ್ನು ಮುಟ್ಟಿ **'ಪಿತ್ರ್ಯಾಣಾಂ..ಆಸ್ಮತ್ಪಿತೃ..ಕರ್ತವ್ಯಃ'** ಎಂದು ಹೇಳಬೇಕು. ಬ್ರಾಹ್ಮಣರು ಯಥೋಕ್ತ ಪ್ರತಿವಚನವೀಯಬೇಕು. ಪಿತೃಸ್ಥಾನಕ್ಕೆ ಅನೇಕಬ್ರಾಹ್ಮಣರಿದ್ದರೆ ವ್ಯೂಹಿಸಿ ಕ್ಷಣವನ್ನೀಯಬೇಕು ಹೀಗೆ ಕ್ಷಣವನ್ನಿತ್ತು ಬ್ರಾಹ್ಮಣರನ್ನು ಪ್ರಾರ್ಥಿಸುವುದು **'ಅಕ್ರೋಧನೈಃ....ಶ್ರಾದ್ಧಕಾರಿಣಾ'** ಎಂದು. ಓಂ ತಥಾ.... ಎಂದು ಪ್ರತಿವಚನ.

**ಮಂಡಲಾರ್ಚನೆಮತ್ತುವಿಪ್ರಪಾದಕ್ಷಾಲನೆ;** ಆನಂತರ ಮನೆಯ ಹೊರಾಂಗಳದಲ್ಲಿ ದೇವ ಹಾಗೂ ಪಿತೃಗಳ ಪಾದಪ್ರಕ್ಷಾಳನೆಗಾಗಿ ಗೋಮಯಮತ್ತುನೀರಿನಮಿಶ್ರಣ ಅಥವಾ ಭಸ್ಮದಿಂದ ಪಾದ್ಯಮಂಡಲಗಳನ್ನು ಮಾಡಬೇಕು, ಪೂರ್ವಾಭಿಮುಖನಾಗಿ ನಿಂತು ಉತ್ತರಭಾಗದಲ್ಲಿ ದೇವಪಾದ್ಯಕ್ಕೆ ಈಶಾನದಿಂದಾರಂಭಿಸಿ ಪ್ರದಕ್ಷಿಣವಾದ ಪ್ರಾದೇಶ ಮಾತ್ರದ ಚೌಕಾಕಾರದ ಮಂಡಲವನ್ನೂ, ಅದರ ದಕ್ಷಿಣದಲ್ಲಿ ಪ್ರಾದೇಶಮಾತ್ರ ಜಾಗವನ್ನು ಬಿಟ್ಟು ಪಿತೃಗಳ ಪಾದ್ಯಕ್ಕಾಗಿ ಪ್ರಾದೇಶಮಾತ್ರ ವೃತ್ತಾಕಾರ ಮಂಡಲವನ್ನೂ ಮಾಡಬೇಕು. ಮತ್ತು ಪಾದ್ಯಗಳ ನೀರು ಸೇರದಂತೆ ಮಂಡಲಗಳೆರಡರ ನಡುವೆ ಮಣ್ಣನ್ನು ಹರಡಬೇಕು.

[33]ಗಂಧಪುಷ್ಪೈರಭ್ಯರ್ಚ್ಯ। ''**ಸರ್ವೇ ಉಪಚಾರಾಃ ಯವೈಃ ಸಂಪೂರ್ಣಾಃ ಸಂತು**'' ಇತಿ ಯವಾನ್ ಕ್ಷಿಪೇತ್॥ ಅಪಸವ್ಯಮ್। ''**ಪಿತೃಪಾದ್ಯಸ್ಥಾನೇ ಇದಮಾಸನಮ್**'' ಇತಿ ಪಿತೃಪಾದ್ಯಮಂಡಲೇ ದಕ್ಷಿಣಾಗ್ರಾನ್ ದರ್ಭಾನಾಸ್ತೀರ್ಯ। ''**ಇಮೇ ಗಂಧಾಃ। ಇಮಾನಿ ಪುಷ್ಪಾಣಿ**'' ಇತಿ ಮಂಡಲಂ ಗಂಧಪುಷ್ಪೈರಭ್ಯರ್ಚ್ಯ। ''**ಸರ್ವೇ ಉಪಚಾರಾಸ್ತಿಲೈಃ ಸಂಪೂರ್ಣಾಃ ಸಂತು**'' ಇತಿ ತಿಲಾನ್ ಕ್ಷಿಪೇತ್॥ ತತಃ ಕರ್ತಾ ವಿಪ್ರಾಣಾಂ ಪಾದಪ್ರಕ್ಷಾಲನಂ ಕುರ್ಯಾತ್ತದ್ಯಥಾ;–

ಸವ್ಯಮ್। ಕರ್ತಾ ''**ಪುರೂರವಾರ್ದ್ರವಸಂಜ್ಞಕವಿಶ್ವೇದೇವಾಃ ಸ್ವಾಗತಮ್**'' {''ಸುಸ್ವಾಗತಮ್''ಪ್ರ+}'' ಇತಿ ದೇವಬ್ರಾಹ್ಮಣಮಾಹೂಯ ಚತುರಶ್ರಮಂಡಲತಃ ಪಶ್ಚಿಮದೇಶೇ ದರ್ಭಾದ್ಯಾಸನೇ ಪ್ರಾಙ್ಮುಖಮುಪವೇಶ್ಯ ತತ್ಪಾದೌ ಮಂಡಲೇ ನಿಧಾಯ, ಸ್ವಯಂ ತತ್ಪುರತಃ [35]ಪ್ರತ್ಯಙ್ಮುಖ ಉಪವಿಶ್ಯ ''**ಪುರೂರವಾರ್ದ್ರವಸಂಜ್ಞಕವಿಶ್ವೇದೇವಾಃ ಬ್ರಹ್ಮಣೇ ಭೂರ್ಭುವಃ ಸ್ವಃ ಇದಂ ತೇ ಪಾದ್ಯಮ್**'' {''ಸುಪಾದ್ಯಮ್''ಪ್ರ+}'' ಇತಿ ಗಂಧಪುಷ್ಪಯವೋಪೇತಂ ಪಾದ್ಯಂ ನಿವೇದ್ಯ॥ [36]ಪವಿತ್ರಂ ನಿಷ್ಕಾಸ್ಯ ಪ್ರಜ್ಞಾತಂ ನಿಧಾಯ (ಗ್ರಂಥಿರಹಿತಪವಿತ್ರಂ ಧೃತ್ವಾ) ಪಾದತಲಂ [37]ಘೃತಗೋಮಯಾಕ್ತಂ ಕೃತ್ವಾ ''**ಶಂ ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ। ಶಂ ಯೋರಭಿ ಸ್ರವಂತು ನಃ॥ ಆಧಿವ್ಯಾಧಿಹರಂ ನೃಣಾಂ ಮೃತ್ಯುದಾರಿದ್ರ್ಯನಾಶನಮ್॥ ಶ್ರೀಪುಷ್ಟಿಕೀರ್ತಿದಂ ವಂದೇ ವಿಪ್ರಶ್ರೀಪಾದಪಂಕಜಮ್**'' ಇತ್ಯಾದ್ಯುಚ್ಚರನ್ ದಕ್ಷಿಣಭಾಗಸ್ಥಿತಭಾರ್ಯಾಸ್ರಾವಿತೇನ

---

ಬಳಿಕ ಸವ್ಯಮಾಡಿ ದೇವಮಂಡಲದ ಮೇಲೆ ಪ್ರಾಗಗ್ರವಾಗಿ ಎರಡು ದರ್ಭೆಗಳನ್ನೂ ಗಂಧ, ಪುಷ್ಪ ಮತ್ತು ಅಕ್ಷತೆಗಳನ್ನು ಹಾಕಿ ಅಪಸವ್ಯ ಮಾಡಿ ಪಿತೃಪಾದ್ಯಮಂಡಲದ ಮೇಲೆ ದಕ್ಷಿಣಾಗ್ರವಾಗಿ ಮೂರು ದರ್ಭೆ ಮತ್ತು ಗಂಧ ಮತ್ತು ಎಳ್ಳುಗಳನ್ನು ಹಾಕಬೇಕು. ಆನಂತರ ದೇವಬ್ರಾಹ್ಮಣನಿಗೆ ವಂದಿಸಿ '**ದೇವಾಃ ಸ್ವಾಗತಮ್**' ಸುಸ್ವಾಗತಮ್ ಎಂದು ಪ್ರತಿವಚನ ಎಂದು ಹೇಳಿ ಚೌಕಾಕಾರದ ಮಂಡಲದ ಪಶ್ಚಿಮ ಭಾಗದಲ್ಲಿ ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಅವನೆದುರಿಗೆ ಪ್ರತ್ಯಙ್ಮುಖನಾಗಿ ಕುಳಿತು ಬ್ರಾಹ್ಮಣನಪಾದವನ್ನು ಮಂಡಲದಲ್ಲಿರಿಸಿ '**ಪುರೂರವಾ.. ಇದಂ ತೇ ಪಾದ್ಯಂ**' ಎಂದು ಗಂಧಪುಷ್ಪಯವಯುತವಾದ ಪಾದ್ಯವನ್ನು ನಿವೇದಿಸಿ. ಧರಿಸಿದ ಪವಿತ್ರವನ್ನು ಬಿಚ್ಚಿ ಶುದ್ಧವಾದ ಸ್ಥಳದಲ್ಲಿರಿಸಬೇಕು. ಆನಂತರ ಕೈಯಲ್ಲಿ ದರ್ಭೆಯನ್ನು ಸಿಕ್ಕಿಸಿಕೊಂಡು ವಿಪ್ರನಕಾಲಿನ ಅಡಿಭಾಗಕ್ಕೆ ತುಪ್ಪಮತ್ತುಗೋಮಯವನ್ನು ಲೇಪಿಸಿ '**ಶಂ ನೋ ದೇವೀ..**' ಇತ್ಯಾದಿ ಮಂತ್ರಗಳನ್ನು ಪಠಿಸುತ್ತ ಬ್ರಾಹ್ಮಣನ ಕಾಲುಗಳನ್ನು ತೊಳೆಯಬೇಕು. ಆಗ ಪತ್ನಿಯು ಬಲದಬದಿಯಲ್ಲಿನಿಂತು ನೀರನ್ನು ಹೊಯ್ಯುಬೇಕು. ಪಾದಪ್ರಕ್ಷಾಲನೆಯ ಸಮಯದಲ್ಲಿ ಬ್ರಾಹ್ಮಣನ ಕಾಲಿನ ಅಡಿಭಾಗ ತೊಳೆಯಬಾರದು(ದೇವಸ್ಥಾನದಲ್ಲಿ ಮತ್ತೊಬ್ಬ ಬ್ರಾಹ್ಮಣನಿದ್ದರೆ ಹೀಗೆಯೇ ಪಾದಪ್ರಕ್ಷಾಳನೆಯನ್ನು ಮಾಡುವುದು).

ಶುದ್ಧೋದಕೇನ ಗುಲ್ಫಾದಧಃ ಪಾದಪ್ರಕ್ಷಾಲನಂ ಕುರ್ಯಾತ್। [38]ನಾತ್ರ ವಿಪ್ರಪಾದಾಧಃ ಕ್ಷಾಲನಮ್॥ [ಬ್ರಾಹ್ಮಣದ್ವಿತ್ವೇ ತಸ್ಯಾಪ್ಯೇವಂ ಪಾದಕ್ಷಾಲನಮ್। ]

ಅಪಸವ್ಯಮ್॥ **''ಪಿತರಃ ಸ್ವಾಗತಮ್''** ಇತ್ಯುಕ್ತ್ವಾ ಪಿತೃಬ್ರಾಹ್ಮಣಮಾಹೂಯ ವೃತ್ತಾಕಾರಮಂಡಲತಃ ದಕ್ಷಿಣದೇಶೇ ದರ್ಭಾದ್ಯಾಸನೇ ಉದಙ್ಮುಖಮುಪವೇಶ್ಯ {''ಸುಸ್ವಾಗತಮ್''ಪ್ರ+} ಸ್ವಯಂ ಪ್ರತ್ಯಙ್ಮುಖ ಉಪವಿಶ್ಯ **''ಪಿತೃಪಿತಾಮಹಪ್ರಪಿತಾಮಹಾಃ --ಶರ್ಮಾಣಃ --ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ ಬ್ರಹ್ಮಣೇ ಭೂರ್ಭುವಃ ಸ್ವಃ ಇದಂ ವಃ ಪಾದ್ಯಮ್''** {ಸುಪಾದ್ಯಂ ಪ್ರ+} ಇತಿ ಗಂಧಪುಷ್ಪತಿಲೋಪೇತಂ ಪಾದ್ಯಂ ನಿವೇದ್ಯ। ಪಾದತಲಂ ಘೃತಗೋಮಯಾಕ್ತಂ ಕೃತ್ವಾ। **''ಶಂನೋ ದೇವೀ+ಸ್ರವಂತು ನಃ॥ ಆಧಿವ್ಯಾಧಿಹರಂ+ ವಿಪ್ರಶ್ರೀ ಪಾದಪಂಕಜಮ್''** ಇತ್ಯಾದ್ಯುಚ್ಚರನ್ [39]ದಕ್ಷಿಣ([40]ವಾಮ)ಭಾಗಸ್ಥಿತಭಾರ್ಯಾಸ್ರಾವಿತೇನ ಶುದ್ಧೋದಕೇನ ಗುಲ್ಫಾದಧಃ ಪಾದಪ್ರಕ್ಷಾಲನಂ ಕುರ್ಯಾತ್॥ (ಪಿತೃಸ್ಥಾನೇ ಬಹುಬ್ರಾಹ್ಮಣಪಕ್ಷೇ 'ಪಿತಃ ..ಶರ್ಮನ್..ಗೋತ್ರ ವಸುಸ್ವರೂಪ ಬ್ರಹ್ಮಣೇ ಭೂರ್ಭುವಃ ಸ್ವಃ ಇದಂ ತೇ ಪಾದ್ಯಮ್' ಇತ್ಯಾದ್ಯೂಹನೀಯಃ)

ಕರ್ತಾ ಉಪವೀತೀ [43]ದೈವಿಕಮಂಡಲಾದೈಶಾನ್ಯಾಂ ಪವಿತ್ರಂ ವಿಸೃಜ್ಯ ಹಸ್ತೌ ಪಾದೌ ಪ್ರಕ್ಷಾಲ್ಯ ದ್ವಿರಾಚಮ್ಯಾನ್ಯಂ ಪವಿತ್ರಂ ಧಾರಯೇತ್। ದೈವಬ್ರಾಹ್ಮಣಃ ಪ್ರಾಚ್ಯಾಂ, ಪಿತೃಬ್ರಾಹ್ಮಣ ಉದೀಚ್ಯಾಂ ಇತಿ ಕ್ರಮೇಣ [44]ದ್ವಿರಾಚಾಮೇತಾಮ್ [[45]ಆಚಮನೋದಕೇನ ಪಾದಪ್ರಕ್ಷಾಲನೋದಕಸಂಸರ್ಗೋ ಯಥಾ ನ ಭವೇತ್ತಥಾಚಾಮೇಯುಃ]

---

ನಂತರ ಅಪಸವ್ಯದಿಂದ ಪಿತೃಬ್ರಾಹ್ಮಣನಿಗೆ ವಂದಿಸಿ **'ಪಿತರಃ ಸ್ವಾಗತಮ್'** ಎಂದು ಹೇಳಿ ವೃತ್ತಾಕಾರದ ಮಂಡದ ದಕ್ಷಿಣಭಾಗದಲ್ಲಿ ಉತ್ತರಾಭಿಮುಖನಾಗಿ ಕುಳ್ಳಿರಿಸಿ ಕರ್ತನು ಅವನೆದುರಿಗೆ ಪ್ರತ್ಯಙ್ಮುಖನಾಗಿ ಕುಳಿತು ಪಿತೃವಿಪ್ರನ ಪಾದಗಳನ್ನು ಮಂಡಲದಲ್ಲಿರಿಸಿ ಗಂಧಪುಷ್ಪತಿಲಯುತಪಾದ್ಯವನ್ನು ನಿವೇದಿಸಿ, ಕಾಲುಗಳಿಗೆ ತುಪ್ಪ ಮತ್ತು ಗೋಮಯವನ್ನು ಲೇಪಿಸಿ **'ಶಂ ನೋ ದೇವೀ..'** ಇತ್ಯಾದಿ ಮಂತ್ರಗಳನ್ನು ಪಠಿಸುತ್ತ ಪಾದ್ಯವನ್ನಿತ್ತು, ಪಾದಪ್ರಕ್ಷಾಳನೆಮಾಡುವುದು ಆಗ ಪತ್ನಿಯು ಬಲದ ಅಥವಾ ಎಡದ ಬದಿಯಲ್ಲಿನಿಂತು ನೀರನ್ನು ಹೊಯ್ಯುಬೇಕು. (ಪಿತೃಸ್ಥಾನದಲ್ಲಿ ಮೂವರು ಬ್ರಾಹ್ಮಣರಿದ್ದರೆ ಪಿತಃ ..ಶರ್ಮನ್ ಇತ್ಯಾದಿ ಊಹಿಸುವುದು.) ಆನಂತರ ಕರ್ತೃವು ಉಪವೀತಿಯಾಗಿ ದೇವಮಂಡಲದ ಐಶಾನ್ಯದಲ್ಲಿ ಪವಿತ್ರವನ್ನು ಬಿಚ್ಚಿ ಕೈಕಾಲನ್ನು ತೊಳೆದುಕೊಂಡು ಎರಡು ಬಾರಿ ಆಚಮನವನ್ನು ಮಾಡುವುದು. ಹಾಗೆಯೇ ದೇವಬ್ರಾಹ್ಮಣನು ದೇವಮಂಡಲದ ಪೂರ್ವದಲ್ಲೂ, ಪಿತೃಬ್ರಾಹ್ಮಣನು ಉತ್ತರದಲ್ಲೂ ಎರಡು ಆಚಮನವನ್ನು ಮಾಡುವುದು. ಆಚಮನೋದಕವೂ ಕಾಲ್ತೊಳೆದ ನೀರೂ ಸೇರದಂತೆ ಜಾಗ್ರತೆವಹಿಸುವುದು

## [46]ಬ್ರಾಹ್ಮಣೋಪವೇಶನಮ್

ತತಃ ಕರ್ತಾ ಬ್ರಾಹ್ಮಣೈಃ ಸಹ ಶ್ರಾದ್ಧಭೂಮಿಮಾಗತ್ಯ ದೈವೇ ಪ್ರಾಗಗ್ರಕುಶದ್ವಯಯುತಂ, ಪಿತ್ರ್ಯೇ ದಕ್ಷಿಣಾಗ್ರದರ್ಭತ್ರಯಯುತಂ ಕಂಬಲಾದ್ಯಾಸನಮುಪಕಲ್ಪಯೇತ್॥

**''ಸರ್ವೇಷಾಂ ಸ್ವಾಗತಮ್''** ಇತಿ ವಿಪ್ರಾನಾಹೂಯ {'ಸುಸ್ವಾಗತಂ'ಪ್ರ+}। ವಾಮೇನ ಹಸ್ತೇನಾಸನಂ ಧೃತ್ವಾ ದಕ್ಷಿಣೇನ ದೇವಬ್ರಾಹ್ಮಣದಕ್ಷಿಣಹಸ್ತಂ ನಿರಂಗುಷ್ಠಂ ಗೃಹೀತ್ವಾ **''ಭೂರ್ಭುವಃ ಸ್ವಃ ಸಮಾಧ್ವಮ್''** ಇತ್ಯಾಸನೇ ಪ್ರಾಙ್ಮುಖಮುಪವೇಶಯೇತ್ {'ಸುಸಮಾಸ್ಮಹೇ'ಪ್ರ+}॥

ಅಪಸವ್ಯಮ್।ವಾಮೇನಹಸ್ತೇನಾಸನಂಧೃತ್ವಾದಕ್ಷಿಣೇನಪಿತ್ರ್ಯಬ್ರಾಹ್ಮಣದಕ್ಷಿಣಹಸ್ತಂನಿರಂಗುಷ್ಠಂ ಗೃಹೀತ್ವಾ **''ಭೂರ್ಭುವಃ ಸ್ವಃ ಸಮಾಧ್ವಮ್''** ಇತ್ಯಾಸನೇ ಉದಙ್ಮುಖಮುಪವೇಶಯೇತ್ {'ಸುಸಮಾಸ್ಮಹೇ'ಪ್ರ+}॥ ತತಃ [47]ಪ್ರತಿವಿಪ್ರಂ ಶ್ವೇತಸೂತ್ರವರ್ತಿಯುಕ್ತಮವಿಚ್ಛಿನ್ನಂ ತೈಲದೀಪಂ ಸ್ಥಾಪಯೇತ್॥

## [48]ಶ್ರಾದ್ಧಾರ್ಥಃಸಂಕಲ್ಪಃಸ್ಥಲಶುದ್ಧಿಃ

ಸವ್ಯಮ್। ಆಚಮ್ಯ। ಪ್ರಾಣಾಯಾಮತ್ರಯಂ ಕೃತ್ವಾ। **''ಅದ್ಯಪೂರ್ವೋಚ್ಚರಿ+ತಿಥೌ''**। ಅಪಸವ್ಯಮ್। **''ಉಪಕ್ರಾಂತಂ ಪಿತ್ರೂಣಾಂ ಪ್ರತಿಸಾಂವತ್ಸರಿಕಶ್ರಾದ್ಧಂ ಕರಿಷ್ಯೇ''** ಇತಿ ಸಂಕಲ್ಪಂ ಕೃತ್ವಾ{''ಕುರುಷ್ವ''ಪ್ರ+}।

---

**ಬ್ರಾಹ್ಮಣರಿಗೆ ಆಸನಕಲ್ಪನೆ;** ಆನಂತರ ಕರ್ತನು ವಿಪ್ರರೊಡನೆ ಶ್ರಾದ್ಧಮಾಡುವ ಸ್ಥಲಕ್ಕೆ ಬಂದು ದೇವಬ್ರಾಹ್ಮಣನಿಗಾಗಿ ಪ್ರಾಗಗ್ರವಾದ ಎರಡು ದರ್ಭೆಗಳನ್ನುಳ್ಳ ಕಂಬಳಿ ಮೊದಲಾದ ಆಸನವನ್ನೂ, ಪಿತೃ ಬ್ರಾಹ್ಮಣನಿಗಾಗಿ ದಕ್ಷಿಣಾಗ್ರವಾದ ಮೂರುದರ್ಭಯುಕ್ತ ಆಸನವನ್ನು ಸಿದ್ದಗೊಳಿಸಬೇಕು. ನಂತರ ಸವ್ಯದಿಂದ ದೇವಬ್ರಾಹ್ಮಣನನ್ನು ಸ್ವಾಗತ ವೆಂದು ಆಮಂತ್ರಿಸಿ ವಾಮಹಸ್ತದಿಂದ ಆಸನವನ್ನೂ ದಕ್ಷಿಣಹಸ್ತದಿಂದ ದೇವಬ್ರಾಹ್ಮಣನ ಹೆಬ್ಬೆರಳನ್ನು ಬಿಟ್ಟು ದಕ್ಷಿಣಹಸ್ತವನ್ನೂ ಹಿಡಿದು **'ಭೂರ್ಭುವಸ್ಸ್ವಃ, ಸಮಾಧ್ವಂ'** ಎಂದು ಕುಳ್ಳಿರುಸುವುದು. ಆನಂತರ ಅಪಸವ್ಯದಿಂದ ಮೊದಲಿನಂತೆ ಪಿತ್ರ್ಯಾಸನಸ್ಪರ್ಶ ನಿರಂಗುಷ್ಠಹಸ್ತಗ್ರಹಣಾದಿಗಳನ್ನು ಮಾಡಿ **'ಭೂರ್ಭುವಸ್ಸ್ವಃ, ಸಮಾಧ್ವಂ'** ಇತ್ಯಾದಿ ಹೇಳುವುದು. 'ಸುಸಮಾಸ್ಮಹೇ' ಎಂಬ ಪ್ರತಿವಚನ. ಆನಂತರ ಪ್ರತಿವಿಪ್ರನ ಬಳಿಯಲ್ಲಿ ಎಳ್ಳೆಣ್ಣೆಯ ದೀಪವೊಂದನ್ನು ಉರಿಸಿಡುವುದು.

**ಸಂಕಲ್ಪಮತ್ತುಸ್ಥಲಶುದ್ಧ್ಯಾದಿಕರ್ಮ;** ಆನಂತರ ಸವ್ಯದಿಂದ ಆಚಮನವನ್ನು ಮಾಡಿ **'ಅದ್ಯಪೂರ್ವೋ.. ದಿಂದ ..ತಿಥೌ'** ವರೆಗೆ ಹೇಳಿ ಅಪಸವ್ಯವಾಗಿ **'ಉಪಕ್ರಾಂತಂ....ಕರಿಷ್ಯೇ'** ಎಂದು ಸಂಕಲ್ಪಮಾಡಬೇಕು.

ಅಪಸವ್ಯಮ್॥ [50]ತಿಲಾನಾದಾಯ ವಾಯುಂ ನಿರುದ್ಧ್ಯ ನೈರ್ಋತಿಕೋಣಮಾರಭ್ಯಾಪ್ರದಕ್ಷಿಣಂ ಶ್ರಾದ್ಧಭೂಮೌ ಸರ್ವತಃ ತಿಲಾನ್ವಿಕೀರೇತ್ ''**ಅಪಹತಾ ಅಸುರಾ ರಕ್ಷಾಂಸಿ ಪಿಶಾಚಾ ಯೇ ಕ್ಷಯಂತಿ ಪೃಥಿವೀಮನು॥ ಅನ್ಯತ್ರೇತೋ ಗಚ್ಛಂತು ಯತ್ರೈತೇಷಾಂ ಗತಂ ಮನಃ**'' ಇತಿ॥ [51]ತತಸ್ತಿಲೋದಕಮಾದಾಯ ''**ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮ್ಯಾಸಃ। ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತು ಪಿತರೋ ಹವೇಷು**'' ಇತಿ ಪಿತ್ರ್ಯಾಣಾಂ ಪುರತಃ ಪ್ರೋಕ್ಷ್ಯ। ಸವ್ಯಮ್। ಯವೋದಕಮಾದಾಯ ''**ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್**'' ಇತಿ ದೇವಾನಾಂ ಪುರತಃ ಪ್ರೋಕ್ಷಯೇತ್॥

''**ರಕ್ಷೋಹಣಂ ವಾಜಿನಮಾ ಜಿಘರ್ಮಿ ಮಿತ್ರಂ ಪ್ರಥಿಷ್ಠಮುಪ ಯಾಮಿ ಶರ್ಮ। ಶಿಶಾನೋ ಅಗ್ನಿಃ ಕ್ರತುಭಿಃ ಸಮಿದ್ಧಃ ಸ ನೋ ದಿವಾ ಸ ರಿಷಃ ಪಾತು ನಕ್ತಮ್। ಅಷ್ಟೌ ವಸವ ಏಕಾದಶರುದ್ರಾ ದ್ವಾದಶಾದಿತ್ಯಾಃ। ಶ್ರಾದ್ಧದ್ವಾರೇ ವೈಷ್ಣವೀ ರಕ್ಷಾಗಯೇಯಂಭೂಮಿಃ**''{''ಸುಭೂಮಿಃ''ಪ್ರ+} ಇತಿ ಜಪಿತ್ವಾ। ಅಪಸವ್ಯಮ್। [52]''**ತಿಲಾರಕ್ಷನ್ತ್ವಸುರಾನ್ ದರ್ಭಾ ರಕ್ಷಂತು ರಾಕ್ಷಸಾನ್। ಪಂಕ್ತಿಂ ವೈ ಶ್ರೋತ್ರಿಯೋ ರಕ್ಷೇದತಿಥಿಃ ಸರ್ವರಕ್ಷಕಃ**'' ಇತಿ ಗೃಹದ್ವಾರೇ ಕುಶತಿಲಾನ್ ಕ್ಷಿಪೇತ್॥

ಸವ್ಯಮ್। ಪಾತ್ರಾಂತರೇ ಕಿಂಚಿದ್ಯವೋದಕಂ ಗೃಹೀತ್ವಾ ''[53]**ತರತ್ಸಮಂದೀ ಧಾವತಿ ಧಾರಾ ಸುತಸ್ಯಾಂಧಸಃ। ತರತ್ಸಮಂದೀ ಧಾವತಿ॥ ಉಸ್ರಾ ವೇದ ವಸೂನಾಂ ಮರ್ತಸ್ಯ ದೇವ್ಯವಸಃ। ತರತ್ಸಮಂದೀ ಧಾವತಿ॥ ಧ್ವಸ್ರಯೋಃ ಪುರುಷನ್ತ್ಯೋರಾ ಸಹಸ್ರಾಣಿ ದದ್ಮಹೇ। ತರತ್ಸಮಂದೀ ಧಾವತಿ॥ ಆ ಯಯೋಸ್ತ್ರಿಂಶತಂ ತನಾ ಸಹಸ್ರಾಣಿ ಚ ದದ್ಮಹೇ। ತರತ್ಸಮಂದೀ ಧಾವತಿ॥ ತ್ರಿಭಿಷ್ಟ್ವಂ ದೇವ ಸವಿತರ್ವರ್ಷಿಷ್ಠೈಃ ಸೋಮ ಧಾಮಭಿಃ। ಅಗ್ನೇ ದಕ್ಷೈಃ ಪುನೀಹಿ ನಃ॥ ಪುನಂತು ಮಾಂ ದೇವಜನಾಃ ಪುನಂತು ವಸವೋ ಧಿಯಾ। ವಿಶ್ವೇ ದೇವಾಃ ಪುನೀತ ಮಾ ಜಾತವೇದಃ ಪುನೀಹಿ ಮಾ॥ ಪ್ರ ಪ್ಯಾಯಸ್ವ ಪ್ರ ಸ್ಯಂದಸ್ವ ಸೋಮ ವಿಶ್ವೇಭಿರಂಶುಭಿಃ। ದೇವೇಭ್ಯ ಉತ್ತಮಂ ಹವಿಃ॥**

---

ಆನಂತರ ಎಳ್ಳನ್ನು ತೆಕ್ಕೊಂಡು ಅಪಸವ್ಯದಿಂದ ಪ್ರಾಣವಾಯುವನ್ನು ಕಿಂಚಿತ್ಕಾಲ ನಿರೋಧಿಸಿ '**ಅಪಹತಾಃ..**' ಎಂದು ಶ್ರಾದ್ಧಸ್ಥಲದ ನಿರ್ಋತಿದಿಕ್ಕಿನಿಂದಾರಂಭಿಸಿ ಅಪ್ರದಕ್ಷಿಣವಾಗಿ ಚೆಲ್ಲುವುದು ಪಿತ್ರ್ಯಬ್ರಾಹ್ಮಣನ ಮುಂದೆ '**ಉದೀರತಾಂ..**' ಎಂಬ ಮಂತ್ರದಿಂದ ತಿಲೋದಕಪ್ರೋಕ್ಷಿಸಿ ಸವ್ಯದಿಂದ '**ತತ್ಸವಿರ್ವರೇಣ್ಯಂ..**' ಎಂಬ ಮಂತ್ರದಿಂದ ದೇವಬ್ರಾಹ್ಮಣ ಮುಂದೆ ಯವೋದಕವನ್ನು ಪ್ರೋಕ್ಷಿಸಿವುದು. '**ರಕ್ಷೋಹಣಂ..**' ಎಂಬಲ್ಲಿಂದ '**ರಕ್ಷಾ ಗಯೇಯಂ ಭೂಮಿಃ**' ಎಂಬಲ್ಲಿ ವರೆಗೆ ಜಪಿಸಿ ಅಪಸವ್ಯದಿಂದ '**ತಿಲಾರಕ್ಷಂತ್ವಸು..**' ಎಂಬ ಮಂತ್ರದಿಂದ ಮನೆಯ ಬಾಗಿಲಿನಲ್ಲಿ ದರ್ಭೆಮತ್ತುಎಳ್ಳನ್ನಿಡುವುದು. ಸವ್ಯಮಾಡಿಕೊಂಡು

[54]**ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ। ದಿವೀವ ಚಕ್ಷುರಾತತಮ್॥ ಭೂರ್ಭುವಸ್ಸ್ವಃ॥ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್**'' ಇತಿ ದರ್ಭೈಃ ಪಾಕಪ್ರೋಕ್ಷಣಂ ಕೃತ್ವಾ **''ಪಾಕಾದೀನಂ ಪವಿತ್ರತಾಸ್ತು''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್। {''ಸರ್ವೇ ಪಾಕಾಃ ಶುಚಯೋ ಭವಂತು'' ಇತಿಪ್ರ+}॥ **''ಪಾಕಪ್ರೋಕ್ಷಣಂ ವಿಧಿವದಸ್ತು''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್ {''ಅಸ್ತು ವಿಧಿವತ್''ಪ್ರ+}। ''[55]**ದೇವತಾಭ್ಯಃ ಪಿತೃಭ್ಯಶ್ಚ ಮಹಾಯೋಗಿಭ್ಯ ಏವ ಚ। ನಮಃ ಸ್ವಾಹಾಯೈ ಸ್ವಧಾಯೈ ನಿತ್ಯಮೇವ ನಮೋ ನಮಃ**'' ಇತಿ ತ್ರಿರ್ಜಪಿತ್ವಾ॥ ಅಪಸವ್ಯಮ್। [56]''**ಶ್ರಾದ್ಧಭೂಮೌ ಗಯಾಂ ಧ್ಯಾತ್ವಾ ಧ್ಯಾತ್ವಾ ದೇವಂ ಗದಾಧರಮ್। ವಸ್ವಾದೀಂಶ್ಚ ಪಿತೄನ್ ಧ್ಯಾತ್ವಾ ತತಃ ಶ್ರಾದ್ಧಂ ಪ್ರವರ್ತತೇ॥**'' ಇತಿ ಗಯಾಂ ಗದಾಧರಂ ಪಿತೄನ್ ಧ್ಯಾಯೇತ್॥ {''ಪ್ರವರ್ತಯ''ಪ್ರ+}॥

## ದೇವಾರ್ಚನಮ್(ತೃತೀಯವರಣಮ್)

{ದೇವಪಿತ್ರ್ಯೋಪಚಾರನಿಯಮಾಃ;– ''ನಿಪಾತ್ಯ ದಕ್ಷಿಣಂ ಜಾನು ದೇವಾನ್ಪರಿಚರೇತ್ಸದಾ। ಪಿತೄಣಾಂ ಪರಿಚರ್ಯಾ ತು ವಾಮಜಾನು ನಿಪಾತನಾತ್॥ ಪ್ರದಕ್ಷಿಣಂ ತು ದೇವಾನಾಂ ಪಿತೄಣಾಮಪ್ರದಕ್ಷಿಣಮ್। ಪಿತೄಣಾಂ ದ್ವಿಗುಣಾ ಭುಗ್ನಾ ದರ್ಭಾ ದೈವೇ ಋಜುತ್ವಗಾಃ॥ ದೈವೇ ತೂದಙ್ಮುಖಃ ಕರ್ತಾ ಪಿತ್ರ್ಯೇ ಸ್ಯಾದ್ದಕ್ಷಿಣಾಮುಖಃ' ಇತಿ॥ ಆಶ್ವಲಾಯನೀನಾಂ ಪಿತ್ರ್ಯೋಪಚಾರೇ ಪ್ರಾಗ್ದಕ್ಷಿಣಾಮುಖತ್ವಂ ಯುಕ್ತಂ ಪರಿಶಿಷ್ಟವಚನಾತ್॥ ಪ್ರತ್ಯುಪಚಾರಮಾದ್ಯಂತಯೋರುದಕದಾನಂ ವಿಹಿತಮ್॥ }

---

ಒಂದು ದೊನ್ನೆಯಲ್ಲಿ ಯವೋದಕವನ್ನು ತಕ್ಕೊಂಡು ದರ್ಭೆಗಳಿಂದ **'ತರತ್ಸಮಂದೀ ಧಾವತಿ'** ಎಂಬಲ್ಲಿಂದ **'ಪ್ರಚೋದಯಾತ್'** ಎಂಬಲ್ಲಿವರೆಗೆ ಮಂತ್ರಗಳನ್ನು ಹೇಳುತ್ತ ಪಾಕಗಳನ್ನು ಪ್ರೋಕ್ಷಿಸಿ **'ಪಾಕಾದೀನಾಂ.. ವಿಧಿವದಸ್ತು'** ಎಂದು ಹೇಳಬೇಕು, ಬ್ರಾಹ್ಮಣರು 'ಪಾಕಾದೀನಾಂ.. ವಿಧಿವದಸ್ತು' ಎಂದು ಪ್ರತ್ಯುತ್ತರ ಹೇಳಬೇಕು. **'ದೇವತಾಭ್ಯಃ..'** ಎಂದು 3ಬಾರಿ ಜಪಿಸಬೇಕು ಆನಂತರ ಅಪಸವ್ಯದಿಂದ **'ಶಾದ್ಧಭೂಮೌ...ಪ್ರವರ್ತತೇ'** ಎಂದು ಪುನಃ ಪ್ರಾರ್ಥಿಸಿದಾಗ ಬ್ರಾಹ್ಮಣರು 'ಪ್ರವರ್ತಯ' ಎಂದು ಪ್ರತಿವಚನ ಹೇಳಬೇಕು,

**ದೇವಾರ್ಚನೆ**;ದೇವಮತ್ತುಪಿತೃಉಪಚಾರನಿಯಮಗಳು।ಬಲ ಮೊಣಕಾಲನ್ನು ನೆಲಕ್ಕೆ ತಾಗಿಸಿ ದೇವಕಾರ್ಯವನ್ನೂ ಎಡ ಮೊಣಕಾಲನ್ನು ನೆಲಕ್ಕೆ ತಾಗಿಸಿ ಪಿತೃಗಳ ಕಾರ್ಯವನ್ನೂ ಮಾಡತಕ್ಕದ್ದು ಅಂತಯೇ ಪ್ರದಕ್ಷಿಣಾಕಾರವಾಗಿ ದೇವರಿಗೂ, ಆಪ್ರವಕ್ಷಿಣೆಯಾಗಿ ಪಿತೃಗಳಿಗೂ ಉಪಚಾರಗಳನ್ನರ್ಪಿಸಬೇಕು. ದೇವಕಾರ್ಯಕ್ಕೆ ತುಂಡಾಗದ ನೆಟ್ಟಗಿರುವ ದರ್ಭೆಗಳನ್ನೂ ಪಿತೃಕಾರ್ಯಕ್ಕೆ ಅದರ ಎರಡರಷ್ಟು ತುಂಡಾದ ದರ್ಭೆಗಳನ್ನೂ ಉಪಯೋಗಿಸಬೇಕು.) ಉತ್ತರಕ್ಕೆ

ಸವ್ಯಮ್। ತತಃ ಕರ್ತಾ ಉದಙ್ಮುಖೋ ಭೂತ್ವಾ ದಕ್ಷಿಣಂ ಜಾನು ನಿಪಾತ್ಯ। ದೇವವಿಪ್ರಹಸ್ತೇಽಪೋ ದತ್ವಾ॥ ವಾಮಕರಾಲಬ್ಧೇನೋತ್ತಾನೇನ ದಕ್ಷಿಣಕರೇಣ ಸಯವಂ ದರ್ಭದ್ವಯಂ ಪ್ರಾಗಗ್ರಮಾದಾಯ [57]ಆಸನದಕ್ಷಿಣಭಾಗೇ **''ಪುರೂರವಾರ್ದ್ರವಸಂಜ್ಞಾನಾಂ ವಿಶ್ವೇಷಾಂ ದೇವಾನಾಂ ಬ್ರಹ್ಮಣೇ ಭೂರ್ಭುವಃ ಸ್ವರಿದಮಾಸನಮ್** {''ಸ್ವಾಸನಮ್''ಪ್ರ+}'' ಇತಿ ದತ್ವಾಸನಂ ಸಂಸ್ಪೃಶ್ಯ, **ಅತ್ರಾಸ್ಯತಾಮ್''** ಇತಿ ವದೇತ್ {''ಧರ್ಮೋಽಸಿ (ವಿಶಿರಾಜಾ ಪ್ರತಿಷ್ಠಿತಾಃ)'' ಇತಿಪ್ರ+}॥ [58]ತತಃ ಹಸ್ತಾಭ್ಯಾಂ ದರ್ಭಾನಾದಾಯ ವಿಪ್ರಸ್ಯ ನಿರಂಗುಷ್ಠಂ ದಕ್ಷಿಣಂ ಕರಂ ಧೃತ್ವಾ **''ಪ್ರತಿಸಾಂವತ್ಸರಿಕಶ್ರಾದ್ಧೇ ದೈವೇ ಕ್ಷಣಃ ಕ್ರಿಯತಾಮ್''** {''ಓಂ ತಥಾ''ಪ್ರ+}, **''ಪ್ರಾಪ್ನೋತು ಭವಾನ್''** {''ಪ್ರಾಪ್ನವಾನಿ''ಪ್ರ+} ಇತಿ ವದೇತ್॥

## ದೇವಾರ್ಘ್ಯಗ್ರಹಣಮ್

ದೇವವಿಪ್ರಾಗ್ರೇ ಭುವಂ ಪ್ರೋಕ್ಷ್ಯ। ಪ್ರಾಗಗ್ರೌ ದ್ವೌ ದ್ವೌ ದರ್ಭಾವಾಸ್ತೀರ್ಯ। ತತ್ರ ಪಾತ್ರದ್ವಯಮೀಶಾನಸಂಸ್ಥಂ ನ್ಯುಬ್ಜಂ ನಿಧಾಯ। **''ಭೂರ್ಭುವಃ+ಪ್ರಚೋದಯಾತ್''** ಇತಿ [59]ಗಾಯತ್ರ್ಯಾ ಪ್ರೋಕ್ಷ್ಯ ಉದ್ಧೃತ್ಯ ಪುನಃ ಪ್ರೋಕ್ಷ್ಯ॥ ತದುಪರಿ ದರ್ಭದ್ವಯಾತ್ಮಕಕೂರ್ಚಂ ಪ್ರಾಗಗ್ರಂ ಪ್ರತ್ಯೇಕಂ ನಿಧಾಯ। ಅಪ ಆಸಿಚ್ಯ। **''ಶಂನೋ ದೇವೀರಭಿಷ್ಟಯ ಆಪೋ**

---

ಮುಖಮಾಡಿ ದೇವಕಾರ್ಯವನ್ನೂ ದಕ್ಷಿಣಕ್ಕೆ ಮುಖ ಮಾಡಿ ಪಿತೃಕಾರ್ಯವನ್ನೂ ಮಾಡಬೇಕು. ಆಶ್ವಲಾಯನಿಗಳಿಗೆ ಪಿತ್ರ್ಯುಪಚಾರದಲ್ಲಿ ಕರ್ತೃವು ಆಗ್ನೇಯಾಭಿಮುಖನಾಗಿರಬೇಕೆಂಬುದು ವಿಶೇಷ ನಿಯಮವು. ಪ್ರತ್ಯುಪಚಾರಮಾದ್ಯಂತಯೋರುದಕದಾನಂ ವಿಹಿತಂ ಎಂಬಂತೆ ಬ್ರಾಹ್ಮಣರಿಗೆ ಮಾಡುವ ಪ್ರತಿಯೊಂದು ಉಪಚಾರದ ಆರಂಭ ಮತ್ತು ಕೊನೆಯಲ್ಲಿ ಉದಕದಾನ ಮಾಡಬೇಕು.

ಕರ್ತೃವು ಸವ್ಯಮಾಡಿಕೊಂಡು ಬಲದ ಮೊಣಕಾಲನ್ನು ನೆಲಕ್ಕೆ ತಾಗಿಸಿ ಕುಳಿತು ದೇವ ಬ್ರಾಹ್ಮಣರ ಕೈಗೆ ಕೂರ್ಚದಿಂದ ನೀರು ಕೊಡಬೇಕು. ಎಡಗೈಯಿಂದ ಮುಟ್ಟಿಕೊಂಡ ಬಲಗೈಯಿಂದ ಅಕ್ಕಿಕಾಳು ಮತ್ತು ಎರಡು ದರ್ಭೆಗಳನ್ನು '**ಪುರೂರವಾದ್ರವ..... ಮಾಸನಂ**' ಎಂದು ಹೇಳಿ ಬ್ರಾಹ್ಮಣರು ಕುಳಿತ ಆಸನದ ಬಲಭಾಗದಲ್ಲಿ ಇಡಬೇಕು. ಆನಂತರ ಆಸನವನ್ನು ಮುಟ್ಟಿ '**ಅತ್ರಾಸ್ಯತಾಂ**' ಎಂದು ಹೇಳಿದಾಗ ಬ್ರಾಹ್ಮಣರು '**ಧರ್ಮೋಽಸಿ..**' ಎಂದು ಉತ್ತರವನ್ನೀಯಬೇಕು. ಆನಂತರ ಕೈಗಳೆರಡರಲ್ಲೂ ದರ್ಭೆಯನ್ನಿಟ್ಟುಕೊಂಡು ವಿಪ್ರರ ಉಂಗುಷ್ಠವನ್ನು ಬಿಟ್ಟು ಕೈಹಿಡಿದು, '**ಪ್ರತಿಸಾಂವತ್ಸರಿಕ.... ಕ್ರಿಯತಾಂ, ಪ್ರಾಪ್ನೋತು ಭವಾನ್**' ಎಂದು ಕ್ರಮವಾಗಿ ಹೇಳಬೇಕು. ಬ್ರಾಹ್ಮಣನು 'ಓಂ ತಥಾ, ಪ್ರಾಪ್ನವಾನಿ' ಎಂದು ಪ್ರತ್ಯುತ್ತರಿಸಬೇಕು.

**ದೇವಾರ್ಘ್ಯಗ್ರಹಣ**;ದೇವಬ್ರಾಹ್ಮಣರ ಮುಂಭಾಗದಲ್ಲಿ ಕೂರ್ಚದಿಂದ ಎರಡು ಕಡೆಯಲ್ಲಿ ಭೂಮಿಯನ್ನು ಪ್ರೋಕ್ಷಿಸಿ, ಅಲ್ಲಿ ಪೂರ್ವಕ್ಕೆ ತುದಿಗಳಿರುವಂತೆ ಎರಡೆರಡು ದರ್ಭೆಗಳನ್ನಿಟ್ಟು ಅವುಗಳ ಮೇಲೆ ಎರಡು ಪಾತ್ರೆ ಅಥವಾ ದೊನ್ನೆಗಳನ್ನುಕವಚಿ ಇಟ್ಟು ಗಾಯತ್ರೀ ಮಂತ್ರದಿಂದ ಪ್ರೋಕ್ಷಿಸಿ, ಸರಿಯಾಗಿ ಇಟ್ಟು ಪುನಃ

**ಭವಂತು ಪೀತಯೇ। ಶಂ ಯೋರಭಿ ಸ್ರವಂತು ನಃ''** ಇತಿ ಪಾತ್ರದ್ವಯಂ ಸಕೃದಭಿಮಂತ್ರ್ಯ। **''ಯವೋಸಿ ಧಾನ್ಯರಾಜೋ ವಾ ವಾರುಣೋ ಮಧುಸಂಯುತಃ। ನಿರ್ಣೋದಃ ಸರ್ವಪಾಪಾನಾಂ ಪವಿತ್ರಮೃಷಿಭಿಃ ಸ್ಮೃತಮ್''** ಇತಿ ಪ್ರತಿಪಾತ್ರಂ ಮಂತ್ರಾವೃತ್ತ್ಯಾ ಯವಾನ್ಪ್ರಕ್ಷಿಪ್ಯ॥ **''ದೇವಾರ್ಘ್ಯಪಾತ್ರಯೋಃ ಗಂಧಂ ಪುಷ್ಪಂ ತುಲಸೀಪತ್ರಂ** (ನಮಃ)'' ಇತಿ ಗಂಧಪುಷ್ಪತುಲಸೀದಲಾನಿ ಪ್ರಕ್ಷಿಪ್ಯ। **''ಸರ್ವೇ ಉಪಚಾರಾಃ ಯವೈಃ ಸಂಪೂರ್ಣಾಃ ಸಂತು''** ಇತಿ ಯವಾನ್ಪ್ರಕ್ಷಿಪ್ಯ [63]**''ದೇವಪಾತ್ರಂ ಸಂಪನ್ನಮ್** (''ದೇವಾರ್ಘ್ಯಪಾತ್ರೇ ಸಂಪನ್ನೇ'' ಇತಿ ವಾ)'' ಇತ್ಯಭಿಮೃಶೇತ್ {''ಸುಸಂಪನ್ನಂ(ಸುಸಂಪನ್ನೇ)'' ಇತಿಪ್ರ+}॥

## ವಿಶ್ವೇದೇವಾವಾಹನಮ್

ತತಃ ಕರ್ತಾ [64]ಉದಙ್ಮುಖಃ (ಕುಶಯವಯುತಂ) ವಾಮಕರಂ [65]ವಿಪ್ರದಕ್ಷಿಣಜಾನುನಿ ನ್ಯಸ್ಯ **''ಪುರೂರವಾದ್ರವಸಂಜ್ಞಕಾನ್ವಿಶ್ವಾನ್ ದೇವಾನ್ ಭವತ್ಸ್ವಾವಾಹಯಿಷ್ಯೇ''** ಇತಿ ಪೃಚ್ಛೇತ್ {''ಆವಾಹಯ''ಪ್ರ+}॥ ಹಸ್ತೇ ಯವಾನ್ ಗೃಹೀತ್ವಾ **''ವಿಶ್ವೇ ದೇವಾಸ ಆ ಗತ ಶೃಣುತಾ ಮ ಇಮಂ ಹವಮ್। ಏದಂ ಬರ್ಹಿರ್ನಿ ಷೀದತ। ಪುರೂರವಾದ್ರವಸಂಜ್ಞಕಾನ್ವಿಶ್ವಾನ್ ದೇವಾನ್ ಭವತ್ಸ್ವಾವಾಹಯಾಮಿ''** ಇತಿ [66]ವಿಪ್ರದಕ್ಷಿಣಾಂಗಾದಿಷು ಯುಗ್ಮಕ್ರಮೇಣ ಪಾದಯೋರ್ಜಾನ್ವೋರಂಸಯೋಃಶಿರಸಿಚ ಯವಾನ್ವಿಕೀರ್ಯಾವಾಹ್ಯಾವಶೀಷ್ಟಾನ್ಯವಕುಶಾನ್ [67]ದ್ವಿಜಪುರತೋ ಭುವಿ ಪ್ರದಕ್ಷಿಣಂ ವಿಕಿರೇತ್। ತತಃ [68]**''ವಿಶ್ವೇ ದೇವಾಃ ಶೃಣುತೇಮಂ ಹವಂ ಮೇ ಯೇ ಅಂತರಿಕ್ಷೇ ಯ ಉಪ ದ್ಯವಿ ಷ್ಠ। ಯೇ ಅಗ್ನಿಜಿಹ್ವಾ ಉತ ವಾ ಯಜತ್ರಾ ಆಸದ್ಯಾಸ್ಮಿನ್ಬರ್ಹಿಷಿ ಮಾದಯಧ್ವಮ್॥** [69]**ಆಗಚ್ಛಂತು ಮಹಾಭಾಗಾ ವಿಶ್ವೇದೇವಾ ಮಹಾಬಲಾಃ।**

---

ಪ್ರೋಕ್ಷಿಸಿ ಅವುಗಳ ಮೇಲೆ ಪೂರ್ವಕ್ಕೆ ತುದಿ ಇರುವಂತ ಎರಡುದರ್ಭೆಗಳ ಪ್ರತ್ಯೇಕ ಕೂರ್ಚಗಳನ್ನಿಟ್ಟು ನೀರು ತುಂಬಿಸಿ, '**ಶಂ ನೋ ದೇವಿ..**' ಮಂತ್ರ ಹೇಳಿ ಅಭಿಮಂತ್ರಿಸಿ '**ಯವೋಸಿ..**' ಎಂದು ಹೇಳಿ ಯವಾಕ್ಷತೆಗಳನ್ನು ಹಾಕಿ, '**ದೇವಾರ್ಘ್ಯ ಪಾತ್ರಯೋಃ..**' ಎನ್ನುತ್ತ ಗಂಧಾದಿಗಳನ್ನು ಹಾಕಿ ಯಜಮಾನನು ದೇವಾರ್ಘ್ಯಪಾತ್ರಂ... ಎಂದಾಗ, ಬ್ರಾಹ್ಮಣರು ಸುಸಂಪನ್ನಂ ಎಂದು ಪ್ರತಿವಚನವನ್ನೀಯಬೇಕು.

**ವಿಶ್ವೇದೇವಾವಾಹನೆ;**ನಂತರ ಯಜಮಾನನು ದರ್ಭೆ ಮತ್ತು ಅಕ್ಕಿಕಾಳುಗಳನ್ನು ಹಿಡಿದ ಎಡಗೈಯನ್ನು ಬ್ರಾಹ್ಮಣನ ಬಲದ ಮೊಣಕಾಲಿನ ಮೇಲೆ ಇಟ್ಟು '**ಪುರೂರ....ಯಿಷ್ಯೇ**' ಎಂದು ಹೇಳಬೇಕು ಆಗ ದೇವಬ್ರಾಹ್ಮಣನು ಆವಾಹಯ ಎಂದು ಪ್ರತಿವಚನಹೇಳಬೇಕು. ಆಗ ಕರ್ತೃವು ಕೈಯ್ಯಲ್ಲಿ ಅಕ್ಷತೆಯನ್ನು ತೆಗೆದುಕೊಂಡು ಕೊಂಡು '**ವಿಶ್ವೇ ದೇವಾಸ..**' ಎಂಬ ಮಂತ್ರವನ್ನು ಹೇಳಿ ಅಕ್ಷತೆ ಕಾಳುಗಳನ್ನು ಬ್ರಾಹ್ಮಣರ ಪಾದಮೊಣಗಾಲುಭುಜಶಿರಗಳಲ್ಲಿ ದಕ್ಷಿಣಾದಿ ಯುಗ್ಮಕ್ರಮದಿಂದ ಹಾಕಿ ಆವಾಹಿಸಿ ಉಳಿದವುಗಳನ್ನು ಅವರ ಕಾಲಬುಡದಲ್ಲಿ ಪ್ರದಕ್ಷಿಣವಾಗಿ ಹಾಕಬೇಕು. ಆನಂತರ ನಿಂತು '**ವಿಶ್ವೇದೇವಾಃ ಶ್ರುಣುತ..**,

**ಯೇ ಅತ್ರ ವಿಹಿತಾಃ ಶ್ರಾದ್ಧೇ ಸಾವಧಾನಾ ಭವಂತು ತೇ''** ಇತ್ಯಂಜಲಿಂ ಕೃತ್ವಾಸಕೃದುಪಸ್ಥಾಯ॥ [70]ಅಧಸ್ತದರ್ಭಸಹಿತಮೇಕೈಕಂ ಪಾತ್ರಮುದ್ಧೃತ್ಯ ''**ಸ್ವಾಹಾರ್ಘ್ಯಾಃ**'' ಇತ್ಯರ್ಘ್ಯಂ ಸಕೃನ್ನಿವೇದ್ಯ ದೇವಬ್ರಾಹ್ಮಣಸ್ಯ ಪುರತೋ ನಿಧಾಯಾರ್ಘ್ಯದಾನಂ ಕುರ್ಯಾತ್ {''ಸಂತ್ವರ್ಘ್ಯಾಃ''ಪ್ರ+}॥ (ಬ್ರಾಹ್ಮಣದ್ವಿತ್ವೇ ಪ್ರತ್ಯೇಕಂ ಪಾತ್ರಂ ಏಕೈಕಸ್ಯ ಪ್ರಾಜ್ಞಿದದ್ಯಾತ್)

## ವಿಶ್ವೇದೇವಾರ್ಘ್ಯದಾನಮ್

ತತೋ ದೇವವಿಪ್ರಹಸ್ತೇಽಪೋ ದತ್ವಾ। ಪ್ರಥಮಾರ್ಘ್ಯಪಾತ್ರೋಪರಿತನಂ ಕೂರ್ಚಂ ಹಸ್ತೇ ಪ್ರಾಗಗ್ರಂ ದತ್ವಾ। ಪ್ರಥಮಾರ್ಘ್ಯಪಾತ್ರೋದಕಂ ಸಶೇಷಂ ಪಾತ್ರಾಂತರೇ ಗೃಹೀತ್ವಾ ''**ಪುರೂರವಾದ್ರ್ರವಸಂಜ್ಞಕಾ ವಿಶ್ವೇದೇವಾಃ ಇದಂ ವೋಽರ್ಘ್ಯಂ ಸ್ವಾಹಾ ನಮಃ**[73]'' {''ಅಸ್ತ್ವರ್ಘ್ಯಮ್''ಪ್ರ+} ಇತಿ ದಕ್ಷಿಣಕರೇ[74] ಸ್ರಾವಯನ್ ದೇವತೀರ್ಥೇನ ದೇವಬ್ರಾಹ್ಮಣ ಹಸ್ತೇ ನಿನೀಯ [75]ಸ್ರವಂತೀರನುಮಂತ್ರಯೇತ್ ''**ಯಾ ದಿವ್ಯಾ ಆಪಃ ಪೃಥಿವೀ ಸಂಬಭೂವುರ್ಯಾ ಅಂತರಿಕ್ಷ್ಯಾ ಉತ ಪಾರ್ಥಿವೀರ್ಯಾಃ। ಹಿರಣ್ಯವರ್ಣಾ ಯಾಜ್ಞಿಯಾಸ್ತಾ ನ ಆಪಃ ಶಂ ಸ್ಯೋನಾ ಭವಂತು**'' ಇತಿ॥ ''**ಇದಮರ್ಘ್ಯಂ ದತ್ತಂ ನ ಮಮ**'' {''ಅಸ್ತು ದತ್ತಮ್''ಪ್ರ+} ಇತ್ಯುಕ್ತ್ವಾ ಕೂರ್ಚಂ ಪೂರ್ವಸ್ಥಾನೇ ನಿಧಾಯ। ಪುನಃ ಶುದ್ಧೋದಕಂ ದತ್ವಾ। ದ್ವಿತೀಯಾರ್ಘ್ಯಪಾತ್ರೋಪರಿತನಂ ಕೂರ್ಚಂ ಪೂರ್ವವದ್ದತ್ವಾ। ''**ಪುರೂರವಾದ್ರ್ರವಸಂಜ್ಞಕಾ+ ನಮಃ**'' ಇತಿ॥ ದ್ವಿತೀಯಾರ್ಘ್ಯಂ ಸಶೇಷಂ ಪಾತ್ರಾಂತರೇ ಗೃಹೀತ್ವಾ ಪೂರ್ವವದ್ದತ್ವಾ ಸ್ರವಂತೀರನುಮಂತ್ರಯೇತ್ ''**ಯಾ ದಿವ್ಯಾ**

---

**ಆಗಚ್ಛಂತು..**' ಎಂಬೆರಡು ಮಂತ್ರಗಳಿಂದ ಉಪಸ್ಥಾನವನ್ನು ಮಾಡಬೇಕು. ಆನಂತರ ಪೂರ್ವದಲ್ಲಿ ಸಿದ್ಧಗೊಳಿಸಿಟ್ಟ ಅರ್ಘ್ಯಪಾತ್ರೆಗಳನ್ನು ಅದರ ಅಡಿಯದರ್ಭೆಗಳೊಡನೆ ಸೇರಿಸಿ ತೆಗೆದು ಬ್ರಾಹ್ಮಣರಿಗೆ '**ಸ್ವಾಹಾರ್ಘ್ಯಾಃ**' ಎಂದು ನಿವೇದಿಸಿ ಅವರ ಮುಂದಿಡುವುದು ಸಂತ್ವರ್ಘ್ಯಾಃ ಎಂದು ಪ್ರತಿವಚನ (ದೇವಸ್ಥಾನಕ್ಕೆ ಪ್ರತ್ಯೇಕ ಬ್ರಾಹ್ಮಣರಿದ್ದ ಪಕ್ಷದಲ್ಲಿ ಆಆಬ್ರಾಹ್ಮಣರ ಎದುರಿಗಿಡುವುದು)

**ಅರ್ಘ್ಯದಾನವಿಧಿ**;ಕೂರ್ಚದಿಂದ ದೇವಬ್ರಾಹ್ಮಣನ ಕೈಗೆ ಯವೋದಕವನ್ನು ಕೊಟ್ಟು ಮೊದಲ ಅರ್ಘ್ಯಪಾತ್ರೆ ಮೇಲಿರುವ ಕೂರ್ಚವನ್ನು ಬ್ರಾಹ್ಮಣನ ಕೈಯ್ಯಲ್ಲಿಟ್ಟು ಪ್ರಥಮಾರ್ಘ್ಯಪಾತ್ರೆಯ ನೀರನ್ನು ಪಾತ್ರಾಂತರದಲ್ಲಿ ತೆಗೆದುಕೊಂಡು ತನ್ನ ಬಲದಕೈಗೆ ಸ್ರವಿಸಿ '**ಪುರೂರವಾ.. ಅರ್ಘ್ಯಂ**' ಎಂದು ಬ್ರಾಹ್ಮಣರ ಕೈಯ ಮೇಲೆ ಸುರಿಯಬೇಕು. ಆಗ ಅಸ್ತ್ವರ್ಘ್ಯಂ ಎಂದು ಬ್ರಾಹ್ಮಣರು ಹೇಳಬೇಕು. ಆನಂತರ ಯಜಮಾನನು ವಿಪ್ರನಕೈಯ್ಯಿಂದ ಸ್ರವಿಸುತ್ತಿರುವ ಜಲವನ್ನು '**ಯಾ ದಿವ್ಯಾ..**' ಎಂದು ಅಭಿಮಂತ್ರಿಸಿ, '**ಇದಮರ್ಘ್ಯಂ..ಮಮ**' ಎಂದು ಹೇಳಬೇಕು ಆಗ ವಿಪ್ರನು 'ಅಸ್ತು ದತ್ತಂ' ಎಂದು ಪ್ರತಿವಚನವಿಯಬೇಕು. ಕೂರ್ಚವನ್ನು ಪೂರ್ವಸ್ಥಾನದಲ್ಲಿಯೇ ಇರಿಸಿ. ಶುದ್ಧೋದಕದಾನಪುರಃಸರ ಎರಡನೇ ಪಾತ್ರೆಯ

**+ಸ್ಯೋನಾ ಭವಂತು''** ಇತಿ **''ಇದಮರ್ಘ್ಯಂ ದತ್ತಂ ನ ಮಮ''** {''ಅಸ್ತು ದತ್ತಮ್''ಪ್ರ+} ಇತಿ॥ ತತಃ ಕೂರ್ಚಂ ಪೂರ್ವವತ್ಪಾತ್ರೇನಿಧಾಯ। [76]ದೇವಬ್ರಾಹ್ಮಣದಕ್ಷಿಣಭಾಗೇ ಭುವಂ ಪ್ರೋಕ್ಷ್ಯ ಪಾತ್ರದ್ವಯಮಧಸ್ಥದರ್ಭಸಹಿತಂ **''ದೇವೇಭ್ಯಃ ಸ್ಥಾನಮಸಿ''** ಇತಿ ನ್ಯುಬ್ಜಮುತ್ತಾನಂ ವಾ ನಿಧಾಯ ಗಂಧಪುಷ್ಪಯವೈರಭ್ಯರ್ಚಯೇತ್॥

## ಗಂಧಾದ್ಯುಪಚಾರಃ

ತತಃ ಕರ್ತಾ ದೇವಾನ್ ಗಂಧಾದಿಭಿರರ್ಚಯೇತ್। ಪ್ರತ್ಯುಪಚಾರಂ ಆದಾವಂತೇ ಚ ಉದಕಂ ದದ್ಯಾತ್। ಗಂಧದಾನಾವಸರೇ [77]ಪವಿತ್ರರಹಿತಹಸ್ತಃ ದದ್ಯಾದಿತಿ ವಿಶೇಷಃ॥ **''ಪುರೂರವಾದ್ರ್ರವ ಸಂಜ್ಞಕವಿಶ್ವೇದೇವಾಃ ಯಥಾಭಾಗಶಃ ಅಮೀ ವೋ ಗಂಧಾಃ ಸ್ವಾಹಾ ನಮಃ''** ಇತಿ ಗಂಧಂ ದದ್ಯಾತ್ {''ಸುಗಂಧಾಃ''ಪ್ರ}। **''ಪುರೂರವಾ... ಇಮಾನಿ ವಃ ಪುಷ್ಪಾಣಿ ತುಲಸೀಪತ್ರಾಣಿ ಸ್ವಾಹಾ ನಮಃ''** ಇತಿ ಪತ್ರಪುಷ್ಪಾಣಿ {ಸುಪುಷ್ಪಾಣಿ ಸುಪತ್ರಾಣಿ''ಪ್ರ+}। **''ಪುರೂರವಾ.. ಪೂಜಾರ್ಥೇ ಏಷ ವೋ ಧೂಪಃ ಸ್ವಾಹಾ ನಮಃ''** ಇತಿ ಧೂಪಮಾಘ್ರಾಪಯೇತ್ {''ಸುಧೂಪಃ''ಪ್ರ+}॥ **''ಪುರೂರವಾ... ಏಷ ವೋ ದೀಪಃ ಸ್ವಾಹಾ ನಮಃ''** ಇತಿ ದೀಪಂ ದರ್ಶಯೇತ್ {''ಸುದೀಪಃ''ಪ್ರ+}॥ **''ಪುರೂರವಾ... ಆಚ್ಛಾದನಾರ್ಥೇ ಇದಂ ವಸ್ತ್ರಯುಗಲಂ ಸ್ವಾಹಾ ನಮಃ''** ಇತಿ ಸೋತ್ತರೀಯಂ ವಸ್ತ್ರಂ [ವಸ್ತ್ರಾಭಾವೇ **''ವಾಸೋನಿಷ್ಕ್ರಯಂಯಥಾಶಕ್ತಿ ದ್ರವ್ಯಂ ಸ್ವಾಹಾ ನಮಃ''** ಇತಿ ವಾ] {''ಸ್ವಾಚ್ಛಾದನಮ್''ಪ್ರ+}। [**''ಅನುಲೇಪನಾರ್ಥೇ ಗೋಪೀಚಂದನಂ। ಧಾರಣಾರ್ಥೇ ಯಜ್ಞೋಪವೀತಮ್''**] **''ಪವಿತ್ರಾರ್ಥಾವಿಮೌ ಕುಶೌ''** {''ಸುಪವಿತ್ರಮ್''ಪ್ರ+}॥ **''ಯುವಾ ಸುವಾಸಾಃ ಪರಿವೀತ ಆಗಾತ್ಸಉ ಶ್ರೇಯಾನ್ಭವತಿ**

---

ಕೂರ್ಚವನ್ನು ಬ್ರಾಹ್ಮಣನಕೈಯ್ಯಲ್ಲಿತ್ತು ಪೂರ್ವದಂತೆ ಅರ್ಘ್ಯವನ್ನಿತ್ತು ಅಭಿಮಂತ್ರಿಸುವುದು. (ಬ್ರಾಹ್ಮಣರಿಬ್ಬರಿದ್ದರೆ ಒಂದೊಂದು ಪಾತ್ರೆಯಜಲವನ್ನು ಒಬ್ಬೊಬ್ಬಬ್ರಾಹ್ಮಣನಿಗೆ ಅರ್ಘ್ಯದಾನವನ್ನು ಮಾಡುವುದು) ಆನಂತರ ದೇವಬ್ರಾಹ್ಮಣರದಕ್ಷಿಣಭಾಗದಲ್ಲಿ ಭೂಮಿಯನ್ನು ಪ್ರೋಕ್ಷಿಸಿ ಪಾತ್ರಗಳೆರಡನ್ನು ದರ್ಭಾಸನಗಳೊಡನೆ ಎತ್ತಿ ದೇವೇಭ್ಯಃ ಸ್ಥಾನಮಸಿ ಎಂದು ಮೇಲ್ಮುಖವಾಗಿಯೋ ಕೆಳಮುಖವಾಗಿಯೋ ಇಟ್ಟು ಗಂಧಪುಷ್ಪಾದಿಗಳಿಂದ ಅರ್ಚಿಸುವುದು.

**ಗಂಧಾದ್ಯುಪಚಾರವು;** ಆನಂತರ ದೇವಬ್ರಾಹ್ಮಣರಿಗೆ ಗಂಧಾದ್ಯುಪಚಾರಗಳನ್ನು ಮಾಡುವುದು. ಪ್ರತ್ಯುಪಚಾರದ ಮೊದಲೂ ಅಂತ್ಯದಲ್ಲೂ ಹಸ್ತೋದಕವನ್ನೀಯಬೇಕು ಮತ್ತು ಗಂಧವನ್ನು ಅರ್ಪಿಸುವಾಗ ಪವಿತ್ರವನ್ನು ತೆಗೆದಿಡಬೇಕು. ಪುರೂರವಾ... ಗಂಧಾಃ ಸ್ವಾಹಾ ನಮಃ ಎಂದು ಮುಂತಾಗಿ ಒಂದೊಂದೇ ಉಪಚಾರವನ್ನು ಬ್ರಾಹ್ಮಣರಿಗೆ ಅರ್ಪಿಸಬೇಕು. ಬ್ರಾಹ್ಮಣರು ಒಂದೊಂದು ಉಪಚಾರವನ್ನು

**ಜಾಯಮಾನಃ। ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ3ಮನಸಾ ದೇವಯಂತಃ''॥ ''ದೇವೇಭ್ಯ ಏತೇ ಗಂಧಪುಷ್ಪಧೂಪ-ದೀಪಾರ್ಚನಾಚ್ಛಾದನಾಂತಾಃ ಉಪಚಾರಾಃ ಸರ್ವೇ ಪರಿಪೂರ್ಣಾ ಭವಂತು''** {''ಅಸ್ತು''ಪ್ರ+}। ''[78]**ಅರ್ಚನವಿಧೇಃ ಸ್ವರ್ಚಿತಮಸ್ತು। ನ್ಯೂನಾತಿರಿಕ್ತಂ ವಿಧಿವದಸ್ತು''** ಇತಿ ದೇವಬ್ರಾಹ್ಮಣಂ ಪ್ರಾರ್ಥಯೇತ್{''ಅಸ್ತು ವಿಧಿವತ್''ಪ್ರ+}। **''ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋ ಯಜ್ಞಕ್ರಿಯಾದಿಷು। ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್''** ಇತಿ ಜಪಿತ್ವಾ। **''ಯುಷ್ಮದನುಜ್ಞಯಾ ಪಿತ್ರಾದ್ಯರ್ಚನಂ ಕರಿಷ್ಯೇ''** ಇತಿ ದೇವಬ್ರಾಹ್ಮಣಂ ಪ್ರಾರ್ಥಯೇತ್ {''ಕುರುಷ್ವ''ಪ್ರ+}।

## ಪಿತ್ರಾದ್ಯುಪಚಾರಃ

ಅಪಸವ್ಯಮ್॥ [79]ಪ್ರಾಗ್ದಕ್ಷಿಣಾಮುಖೋ ಭೂತ್ವಾ ವಾಮಂ ಜಾನು ನಿಪಾತ್ಯ। ಪಿತ್ರ್ಯಬ್ರಾಹ್ಮಣಹಸ್ತೇಽಪೋ ದತ್ವಾ। ವಾಮಕರಾಲಬ್ಧೇನೋತ್ತಾನೇನ ದಕ್ಷಿಣಕರೇಣ [80]ಸತಿಲದ್ವಿಗುಣಭುಗ್ನದರ್ಭಾನು-ದಗಗ್ರಾನಾಸನವಾಮಭಾಗೇ **''ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನಾಂ --ಶರ್ಮಣಾಂ --ಗೋತ್ರಾಣಾಂ ವಸುರುದ್ರಾದಿತ್ಯಸ್ವರೂಪಾಣಾಂ ಬ್ರಹ್ಮಣೇ ಭೂರ್ಭುವಃಸ್ವರಿದಮಾಸನಮ್''** {''ಸ್ವಾಸನಮ್''ಪ್ರ+} ಇತಿ ದತ್ವಾ ಆಸನಂ ಸಂಸ್ಪೃಶ್ಯ **''ಅತ್ರಾಸ್ಯತಾಮ್''** ಇತಿ ವದೇತ್ {**''ಧರ್ಮೋಽಸಿ** (ವಿಶಿರಾಜಾ ಪ್ರತಿಷ್ಠಿತಾಃ)'' ಇತಿಪ್ರ+}॥ ತತಃ ಹಸ್ತಾಭ್ಯಾಂ ದರ್ಭಾನಾದಾಯ ವಿಪ್ರಸ್ಯ ನಿರಂಗುಷ್ಠಂ ದಕ್ಷಿಣಂ ಕರಂ ಧೃತ್ವಾ **''ಪ್ರತಿಸಾಂವತ್ಸರಿಕಶ್ರಾದ್ಧೇ ಪಿತ್ರ್ಯೇ ಕ್ಷಣಃ ಕ್ರಿಯತಾಮ್''** {''ಓಂ ತಥಾ''ಪ್ರ+}, **''ಪ್ರಾಪ್ನೋತು ಭವಾನ್''** {''ಪ್ರಾಪ್ನವಾನಿ''ಪ್ರ+} ಇತಿ ವದೇತ್। (ಬ್ರಾಹ್ಮಣಬಹುತ್ವೇ ''ಅಸ್ಮತ್ಪಿತುಃ --ಶರ್ಮಣಃ --ಗೋತ್ರಸ್ಯ ವಸುಸ್ವರೂಪಸ್ಯ ಬ್ರಹ್ಮಣೇ ಭೂರ್ಭುವಃಸ್ವರಿದಮಾಸನಮ್'' ಇತ್ಯಾದ್ಯೂಹನೀಯಃ)

---

ಅರ್ಪಿಸುವಾಗಲೂ ಸುಗಂಧಾಃ, ಸುಪುಷ್ಪಾಣಿ.. ಸುಪತ್ರಾ.. ಇತ್ಯಾದಿ ಯಥೋಕ್ತ ಪ್ರತ್ಯುತ್ತರವನ್ನು ಹೇಳಬೇಕು. ಕೊನೆಗೆ '**ಯುವಾ ಸುವಾಸಾ.. ದೇವೇಭ್ಯ ಏತೇ.. ಸ್ವರ್ಚಿತಮಸ್ತು**' ಎಂಬಲ್ಲಿ ವರೆಗೆ ಹೇಳಿ '**ಅರ್ಚನವಿಧೇಃ.. ವಿಧಿವದಸ್ತು**' ಪ್ರಾರ್ಥಿಸಿದಾಗ 'ಅಸ್ತು ವಿಧಿವತ್' ಎಂದು ಬ್ರಾಹ್ಮಣರು ಹೇಳಬೇಕು. '**ಯಸ್ಯಸ್ಮೃತ್ಯಾ.... ತಮಚ್ಯುತಂ**' ಎಂದು ಹೇಳಿ ವಿಷ್ಣುವನ್ನು ಸ್ಮರಿಸಿ '**ಯುಷ್ಮದನುಜ್ಞಯಾ.... ಕರಿಷ್ಯೇ**' ಎಂದು ಕೇಳಿಕೊಂಡಾಗ ಬ್ರಾಹ್ಮಣರು 'ಕುರುಷ್ವ' ಎಂದು ಪ್ರತ್ಯುತ್ತರ ಹೇಳಬೇಕು.

**ಪಿತ್ರಾದ್ಯುಪಚಾರವು;**ಕರ್ತೃವು ಅಪಸವ್ಯಮಾಡಿಕೊಂಡು ಎಡಮೊಣಕಾಲನ್ನು ನೆಲಕ್ಕೆ ತಾಗಿಸಿ ಕುಳಿತು, ಪಿತ್ರ್ಯಬ್ರಾಹ್ಮಣರಿಗೆ ಹಸ್ತೋದಕವನ್ನಿತ್ತು '**ಅಸ್ಮತ್ ಪಿತೃಪಿತಾಮಹ..ಮಾಸನಂ**' ಎಂದು ಹೇಳಿ ಎಳ್ಳು ಮತ್ತು ದರ್ಭೆಗಳನ್ನು ಆಸನಕ್ಕಾಗಿ ಕೊಡಬೇಕು. ಬ್ರಾಹ್ಮಣರು ಸ್ವಾಸನಂ ಹೇಳಬೇಕು. ಆನಂತರ ಕರ್ತೃವು

## ಪಿತ್ರ್ಯರ್ಘ್ಯಗ್ರಹಣಮ್

ಪಿತ್ರ್ಯ ಬ್ರಾಹ್ಮಣಾನಾಂ ಪುರತಃ ಪ್ರೋಕ್ಷಿತಾಯಾಂ ಭುವಿ ದಕ್ಷಿಣಾಗ್ರಾನ್ ತ್ರೀನ್ ತ್ರೀನ್ ದರ್ಭಾನಾಸ್ತೀರ್ಯ ತತ್ರಾಗ್ನೇಯೀ ಸಂಸ್ಥಂ ಪಾತ್ರತ್ರಯಂ ನ್ಯುಬ್ಜಂ ನಿಧಾಯ॥ ''**ಭೂರ್ಭುವಃ+ಪ್ರಚೋದಯಾತ್**'' ಇತಿ ಗಾಯತ್ರ್ಯಾ ಪ್ರೋಕ್ಷ್ಯ। ಉದ್ಧೃತ್ಯ। ಪುನಃ ಪ್ರೋಕ್ಷ್ಯ॥ ತಸ್ಮಿನ್ ಪ್ರತ್ಯೇಕಂ ದಕ್ಷಿಣಾಗ್ರಾನ್[83]ತ್ರಿದರ್ಭಕೃತಾನ್ ದ್ವಿಗುಣಭುಗ್ನಾನ್ನಿಧಾಯ। ಜಲಮಾಪೂರ್ಯ। ''**ಶಂನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ। ಶಂ ಯೋರಭಿ ಸ್ರವಂತು ನಃ**'' ಇತಿ ಇತಿ ಸಕೃದನುಮಂತ್ರ್ಯ। ''**ತಿಲೋಸಿ ಸೋಮದೇವತ್ಯೋ ಗೋಸವೇ ದೇವನಿರ್ಮಿತಃ। ಪ್ರತ್ನವದ್ಭಿಃ ಪ್ರತ್ತ ಸ್ವಧಯಾ ಪಿತೄನಿಮಾನ್ಲೋಕಾನ್ಪ್ರೀಣಯಾಹಿ ನಃ ಸ್ವಧಾ ನಮಃ**'' ಇತಿ ಮನ್ತ್ರಾವೃತ್ತ್ಯಾ ತಿಲಾನ್ಪೃಥಕ್ಪಾತ್ರೇಷು ಪ್ರಕ್ಷಿಪ್ಯ॥ ''**ಪಿತ್ರಾದ್ಯರ್ಘ್ಯಪಾತ್ರೇಷುಗಂಧಂ ಪುಷ್ಪಂ ಭೃಂಗರಾಜಪತ್ರಂ ಚ (ನಮಃ)**'' ಇತಿ ಗಂಧಪುಷ್ಪಭೃಂಗರಾಜಪತ್ರಾಣಿ ಪ್ರಕ್ಷಿಪ್ಯ। ''**ಸರ್ವೇ ಉಪಚಾರಾಸ್ತಿಲೈಃ ಸಂಪೂರ್ಣಾಃ ಸಂತು**'' ಇತಿ ಪಾತ್ರೇಷು ಸಕೃತ್ತಿಲಾನ್ಪ್ರ ಕ್ಷಿಪ್ಯ॥ ''**ಪಿತ್ರರ್ಘ್ಯಪಾತ್ರಂ ಸಂಪನ್ನಮ್**(ಪಿತ್ರರ್ಘ್ಯಪಾತ್ರಾಣಿ ಸಂಪನ್ನಾನಿ)'' ಇತ್ಯಭಿಮೃಶೇತ್

---

ಆಸನವನ್ನು ಮುಟ್ಟಿಕೊಂಡು '**ಆತ್ರಾಸ್ಯತಾಂ**' ಎಂದು ಹೇಳಬೇಕು ಆಗ ಬ್ರಾಹ್ಮಣರು '**ಧರ್ಮೋಸಿ..**' ಎಂಬ ಪ್ರತಿವಚನವನ್ನೀಯಬೇಕು. ಆಗ ಕರ್ತೃವು ಕೈಗಳೆರಡರಲ್ಲೂ ದರ್ಭೆಯನ್ನಿಟ್ಟುಕೊಂಡು ಅಂಗುಷ್ಠವನ್ನು ಬಿಟ್ಟು ಬ್ರಾಹ್ಮಣನ ಕೈ ಹಿಡಿದು '**ಪ್ರತಿಸಾಂವತ್ಸರಿಕ ... ಕ್ರಿಯತಾಂ, ಪ್ರಾಪ್ನೋತು ಭವಾನ್**' ಎಂದು ಕ್ರಮವಾಗಿ ಹೇಳಿದಾದ, ಬ್ರಾಹ್ಮಣರು 'ಓಂ ತಥಾ, ಪ್ರಾಪ್ನವಾನಿ' ಎಂದು ಉತ್ತರಿಸಬೇಕು.

**ಪಿತ್ರ್ಯರ್ಘ್ಯಗ್ರಹಣ;** ಪಿತೃಬ್ರಾಹ್ಮಣನ ಮುಂಭಾಗದಲ್ಲಿ ಮೂರು ಕಡೆಗೆ ಆಗ್ನೇಯಾಂತವಾಗಿ ಕೂರ್ಚದಿಂದ ನೀರು ಪ್ರೋಕ್ಷಿಸಿ, ಅಲ್ಲಿ ದಕ್ಷಿಣಕ್ಕೆ ತುದಿಗಳಿರುವಂತೆ ಮೂರು ಮೂರು ದರ್ಭೆಗಳನ್ನು ಹಾಸಬೇಕು. ಅವುಗಳ ಮೇಲೆ ಮೂರು ಪಾತ್ರೆ ಅಥವಾ ದೊನ್ನೆಗಳನ್ನು ಕವಚಿಟ್ಟು ಗಾಯತ್ರೀ ಮಂತ್ರದಿಂದ ಪ್ರೋಕ್ಷಿಸಿ, ಸರಿಯಾಗಿಟ್ಟು ಮತ್ತೊಮ್ಮೆ ಪ್ರೋಕ್ಷಿಸಿ, ದಕ್ಷಿಣಕ್ಕೆ ತುದಿ ಇರುವಂತೆ ದೊನ್ನೆಗಳ ಮೇಲೆ ಮೂರು ದರ್ಭೆಗಳ ಪ್ರತ್ಯೇಕ ಕೂರ್ಚಗಳನ್ನಿಟ್ಟು ಅವುಗಳಲ್ಲಿ ನೀರು ತುಂಬಿಸಬೇಕು. ಆನಂತರ '**ಶಂ ನೋ..**' ಎಂಬ ಮಂತ್ರದಿಂದ ಮೂರುಪಾತ್ರೆಗಳ ನೀರನ್ನು ಒಮ್ಮೆಗೇ ಅಭಿಮಂತ್ರಿಸಿ, '**ತಿಲೋಸಿ..**' ಎಂಬ ಮಂತ್ರವನ್ನು ಪ್ರತ್ಯೇಕವಾಗಿ ಉಚ್ಚರಿಸಿ ಪಾತ್ರೆಗಳಲ್ಲಿ ಎಳ್ಳುಗಳನ್ನು ಹಾಕಬೇಕು. ಬಳಿಕ '**ಪಿತ್ರ್ಯರ್ಘ್ಯ ಪಾತ್ರೇಷು..**' ಎನ್ನುತ್ತ ಗಂಧಾದಿಗಳನ್ನು ಹಾಕಿ '**ಸರ್ವೇ ಉಪಚಾರಾಃ..**' ಎಂದು ಎಳ್ಳುಗಳನ್ನು ಹಾಕಬೇಕು. ಆನಂತರ ಯಜಮಾನನು ಅರ್ಘ್ಯಪಾತ್ರೆಗಳನ್ನು ಮುಟ್ಟಿ '**ಪಿತ್ರ್ಯರ್ಘ್ಯಪಾತ್ರಾಣಿ..**' ಎಂದಾಗ, ಬ್ರಾಹ್ಮಣರು 'ಸುಸಂಪನ್ನಾನಿ' ಎಂದು ಪ್ರತಿವಚನವನ್ನೀಯಬೇಕು (ಪಿತ್ರಾದಿಸ್ಥಾನಕ್ಕೆ ಬೇರೆ ಬೇರೆ ಬ್ರಾಹ್ಮಣರಿದ್ದರೆ ಪಿತೃಪಾತ್ರಂ..,ಪಿತಾಮಹಪಾತ್ರಂ.. ಇತ್ಯಾದಿ ಊಹ ಅವಶ್ಯ)

{''ಸುಸಂಪನ್ನಮ್(ಸುಸಂಪನ್ನಾನಿ)'' ಇತಿಪ್ರ+} (ಬ್ರಾಹ್ಮಣ ಬಹುತ್ವೇ 'ಪಿತೃಪಾತ್ರಂ ಸಂಪನ್ನಮ್' ಇತ್ಯಾದ್ಯೂಹನೀಯಮ್)

## ಪಿತ್ರಾದ್ಯಾವಾಹನಮ್

ಸವ್ಯಕರಂ ಕುಶತಿಲಯುತಂ ವಿಪ್ರವಾಮಜಾನುನಿ ನ್ಯಸ್ಯ ''**ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನ್ --ಶರ್ಮಣಃ --ಗೋತ್ರಾನ್ವಸುರುದ್ರಾದಿತ್ಯಸ್ವರೂಪಾನ್ ಭವತ್ಸ್ವಾವಾಹಯಿಷ್ಯೇ**'' ಇತಿ ಪೃಚ್ಛೇತ್ {''ಆವಾಹಯ''ಪ್ರ+}॥ ಹಸ್ತೇ ತಿಲಾನ್ ಗೃಹೀತ್ವಾ ''**ಉಶಂತಸ್ತ್ವಾ ನಿ ಧೀಮಹ್ಯುಶಂತಃ ಸಮಿಧೀಮಹಿ। ಉಶನ್ನುಶತಆವಹ ಪಿತ್ರೂನ್ಹವಿಷೇಅತ್ತವೇ॥ ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನ್ --ಶರ್ಮಣಃ --ಗೋತ್ರಾನ್ ವಸುರುದ್ರಾದಿತ್ಯಸ್ವರೂಪಾನ್ ಭವತ್ಸ್ವಾವಾಹಯಾಮಿ**'' [85]ವಿಪ್ರವಾಮಾಂಗಾದಿಯುಗ್ಮಕ್ರಮೇಣ ಶಿರಸ್ಯಂಸಯೋರ್ಜಾನ್ವೋಃ ಪಾದಯೋಶ್ಚ ತಿಲಾನ್ವಿಕೀರ್ಯಾವಾಹ್ಯ, ಅವಶಿಷ್ಟಾಂಸ್ತಿಲಕುಶಾನ್ ದ್ವಿಜಪುರತೋ ಭುವ್ಯಪ್ರದಕ್ಷಿಣಂ ವಿಕಿರೇತ್। (ಬ್ರಾಹ್ಮಣ ಬಹುತ್ವೇ ಪ್ರತ್ಯೇಕಂ ಮನ್ತ್ರಾಂತೇ 'ಪಿತರಂ ಶರ್ಮಾಣ'ಮಿತ್ಯಾದ್ಯುಕ್ತ್ವಾವಾಹಯೇತ್) ತತಃ ''[85]**ಆಯಂತು ನಃ ಪಿತರಃ ಸೋಮ್ಯಾಸೋಽಗ್ನಿಷ್ವಾತ್ತಾಃ ಪಥಿಭಿರ್ದೇವಯಾನೈಃ। ಅಸ್ಮಿನ್ಯಜ್ಞೇ ಸ್ವಧಯಾ ಮದಂತೋಽಧಿಬ್ರುವಂತು ತೇಽವನ್ತ್ವಸ್ಮಾನ್**'' ಇತಿ ಸಕೃದುಪತಿಷ್ಠೇತ್॥ [86]ಸವ್ಯಮ್। ತತ ಅಧಸ್ತದರ್ಭೈಃ ಸಹಾರ್ಘ್ಯಪಾತ್ರಮೇಕೈಕಮುದ್ಧೃತ್ಯ ವಿಪ್ರಾಗ್ರೇ ''**ಸ್ವಧಾರ್ಘ್ಯಾಃ**'' ಇತಿ

---

**ಪಿತ್ರಾದ್ಯಾವಾಹನೆ;** ಆನಂತರ ಕರ್ತೃವು ತಿಲದರ್ಭೆಗಳುಳ್ಳ ಎಡಗೈಯನ್ನು ಬ್ರಾಹ್ಮಣನ ಎಡ ಮೊಣಕಾಲಿನ ಮೇಲೆ ಇಟ್ಟು '**ಅಸ್ಮತ್ ಪಿತೃಪಿತಾಮಹ.. ಆವಾಹಯಿಷ್ಯೇ**' ಎಂದು ಹೇಳಬೇಕು. ಬ್ರಾಹ್ಮಣರು ಆವಾಹಯ ಎಂದಾಗ ಕೈಯ್ಯಲ್ಲಿ ಎಳ್ಳನ್ನು ತೆಗೆದುಕೊಂಡು '**ಉಶಂತಸ್ತ್ವಾ..**' ಎಂಬ ಮಂತ್ರ ಹೇಳಿ ಅಸ್ಮತ್ಪಿತೃ...ಆವಾಹಯಾಮಿ ಎಂದು ಶಿರಭುಜತೊಡೆಪಾದಗಳಲ್ಲಿ ವಾಮಾದಿಯುಗ್ಮ ಕ್ರಮದಲ್ಲಿ ಎಳ್ಳುಗಳನ್ನು ಹಾಕಿ ಆವಾಹಿಸಿ ಕೈಯಲ್ಲಿ ಉಳಿವ ತಿಲಗಳನ್ನು ಬ್ರಾಹ್ಮಣರ ಕಾಲಬುಡದಲ್ಲಿ ಹಾಕಬೇಕು (ಬಹುಬ್ರಾಹ್ಮಣಪಕ್ಷದಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕಮಂತ್ರಾಂತದಲ್ಲಿ ಪ್ರತ್ಯೇಕವಾಗಿ ಪಿತರಂ ಗೋತ್ರಂ ಇತ್ಯಾದಿ ಉಚ್ಚರಿಸಿ ಆವಾಹಿಸುವುದು. ಉಪಸ್ಥಾನವು ಒಂದೇಬಾರಿ). ಬಳಿಕ ನಿಂತು ಕೈಜೋಡಿಸಿ, '**ಆಯಂತು ನಃ..**' ಎಂಬ ಮಂತ್ರವನ್ನು ಹೇಳಿ ಒಮ್ಮೆಗೆ ಉಪಸ್ಥಾನ ಮಾಡಬೇಕು.ನಂತರ ಪೂರ್ವದಲ್ಲಿಸಿದ್ಧಗೊಳಿಸಿಟ್ಟ ಅರ್ಘ್ಯಪಾತ್ರೆಗಳನ್ನು ಅದರ ಅಡಿಯದರ್ಭೆಗಳೊಡನೆ ಸೇರಿಸಿ ತೆಗೆದು ಬ್ರಾಹ್ಮಣರಿಗೆ '**ಸ್ವಧಾರ್ಘ್ಯಾಃ**' ಎಂದು ನಿವೇದಿಸಿ ಅವರ ಮುಂದಿಡುವುದು 'ಸಂತ್ವರ್ಘ್ಯಾಃ' ಎಂದು ಪ್ರತಿವಚನ (ಪಿತ್ರ್ಯಸ್ಥಾನಕ್ಕೆ ಪ್ರತ್ಯೇಕ ಬ್ರಾಹ್ಮಣರಿದ್ದ ಪಕ್ಷದಲ್ಲಿ ಆಆಬ್ರಾಹ್ಮಣರ ಎದುರಿಗಿಡುವುದು)

ಮನ್ತ್ರಾವೃತ್ತ್ಯಾ ಸ್ಥಾಪಯೇತ್ {''ಸಂತ್ವರ್ಘ್ಯಾಃ''ಪ್ರ+}। [ವಿಪ್ರಬಹುತ್ವೇ ಪಿತ್ರಾದ್ಯರ್ಘ್ಯಪಾತ್ರಾಣಿ ತತ್ತದ್ಬ್ರಾಹ್ಮಣಾನಾಂ ಪುರತಃ ''ಸ್ವಧಾರ್ಘ್ಯಾಃ'' ಇತಿ ಮನ್ತ್ರಾವೃತ್ತ್ಯಾ ಸ್ಥಾಪಯೇತ್]।

## ಪಿತ್ರರ್ಘ್ಯದಾನಮ್

ಅಪಸವ್ಯಮ್। ಪಿತ್ರ್ಯ ಬ್ರಾಹ್ಮಣಹಸ್ತೇ ಅಪೋ ದತ್ವಾ। ಪ್ರಥಮಪಾತ್ರೋಪರಿತನಂ ಭುಗ್ನಂ ವಿಪ್ರಹಸ್ತೇ ದತ್ವಾ। ಸವ್ಯಮ್। ಪ್ರಥಮಪಿತ್ರ್ಯರ್ಘ್ಯಂ ಸಶೇಷಂ [87]ಪಾತ್ರಾಂತರೇ ಗೃಹೀತ್ವಾ ದಕ್ಷಿಣಹಸ್ತೇ ಸಂಸ್ರಾವ್ಯ ಸವ್ಯೋಪಗೃಹೀತಪಾಣಿನಾ ಪಿತೃತೀರ್ಥೇನ ವಿಪ್ರಹಸ್ತೇ ನಿನಯೇತ್ ''**ಅಸ್ಮತ್ಪಿತರಿದಂ ತೇಽರ್ಘ್ಯಮ್**'' ಇತಿ {''ಅಸ್ತ್ವರ್ಘ್ಯಮ್''ಪ್ರ+}॥ (ಅಪಸವ್ಯಮ್) ''**ಯಾ ದಿವ್ಯಾ ಆಪಃ ಪೃಥಿವೀ ಸಂಬಭೂವುರ್ಯಾ ಅಂತರಿಕ್ಷ್ಯಾ ಉತ ಪಾರ್ಥಿವೀರ್ಯಾಃ। ಹಿರಣ್ಯವರ್ಣಾ ಯಾಜ್ಞಿಯಾಸ್ತಾ ನ ಆಪಃ ಶಂ ಸ್ಯೋನಾ ಭವಂತು**'' ಇತಿ ಸ್ರವಂತೀರನುಮಂತ್ರ್ಯ ''**ಪಿತ್ರೇ ಇದಮರ್ಘ್ಯಂ ದತ್ತಂ ನ ಮಮ**'' ಇತಿ ವದೇತ್ {''ಅಸ್ತು ದತ್ತಮ್''ಪ್ರ+} ಭುಗ್ನಂ ಸ್ವಸ್ಥಾನೇ ನಿಧಾಯ।

ಸವ್ಯಮ್। ಅಪೋ ದತ್ವಾ। ದ್ವಿತೀಯಪಾತ್ರೋಪರಿತನಭುಗ್ನಂ ವಿಪ್ರಹಸ್ತೇ ದತ್ವಾ। ಪೂರ್ವವತ್ಪಾತ್ರಾನ್ತರೇ ದ್ವಿತೀಯಾರ್ಘ್ಯಪಾತ್ರಾದರ್ಘ್ಯಜಲಮಾದಾಯ ''**ಅಸ್ಮತ್ಪಿತಾಮಹೇದಂ ತೇಽರ್ಘ್ಯಮ್**'' ಇತಿ ದತ್ವಾ {''ಅಸ್ತ್ವರ್ಘ್ಯಮ್''ಪ್ರ+}॥ (ಅಪಸವ್ಯಮ್)॥ ''**ಯಾ ದಿವ್ಯಾ...ಭವಂತು**'' ಇತಿ ಸ್ರವಂತೀರನುಮಂತ್ರ್ಯ। ''**ಪಿತಾಮಹಾಯೇದಮರ್ಘ್ಯಂ ದತ್ತಂ ನ ಮಮ**'' ಇತಿ ವದೇತ್ {''ಅಸ್ತು ದತ್ತಮ್''ಪ್ರ+}। ಭುಗ್ನಂ ಸ್ವಸ್ಥಾನೇ ನಿಧಾಯ॥

ಸವ್ಯಮ್। ಅಪೋ ದತ್ವಾ। ತೃತೀಯಪಾತ್ರೋಪರಿತನಂ ಭುಗ್ನಂ ವಿಪ್ರಹಸ್ತೇ ದತ್ವಾ। ಪೂರ್ವವತ್ಪಾತ್ರಾನ್ತರೇ ತೃತೀಯಾರ್ಘ್ಯಪಾತ್ರಾದರ್ಘ್ಯಜಲಮಾದಾಯ ''**ಅಸ್ಮತ್ಪ್ರಪಿತಾಮಹೇದಂ ತೇಽರ್ಘ್ಯಮ್**'' ಇತಿ ದತ್ವಾ {''ಅಸ್ತ್ವರ್ಘ್ಯಮ್''ಪ್ರ+}॥ (ಅಪಸವ್ಯಮ್)॥ ''**ಯಾ ದಿವ್ಯಾ...ಭವಂತು**'' ಇತಿ ಸ್ರವಂತೀರನುಮಂತ್ರ್ಯ। ''**ಪ್ರಪಿತಾಮಹಾಯೇದಮರ್ಘ್ಯಂದತ್ತಂ ನ ಮಮ**'' ಇತಿ ವದೇತ್ {''ಅಸ್ತು ದತ್ತಮ್''ಪ್ರ+}।

---

**ಪಿತ್ರ್ಯರ್ಘ್ಯದಾನ;**ನಂತರ ಸವ್ಯಮಾಡಿಕೊಂಡು ಕೂರ್ಚದಿಂದ ಬ್ರಾಹ್ಮಣರ ಕೈಗೆ ನೀರು ಕೊಟ್ಟು ಪ್ರಥಮಾರ್ಘ್ಯಪಾತ್ರೆಯ ಮೇಲಿರುವ ಕೂರ್ಚವನ್ನು ವಿಪ್ರನ ಕೈಯ್ಯಲ್ಲಿರಿಸಿ ಪ್ರಥಮಾರ್ಘ್ಯಪಾತ್ರೆಯ ಜಲದಿಂದ ಸ್ವಲ್ಪವನ್ನು ಪಾತ್ರಾಂತರದಲ್ಲಿ ತೆಗೆದುಕೊಂಡು ತನ್ನ ಬಲದಕೈಗೆ ಸುರಿದು ವಾಮಹಸ್ತಸ್ಪರ್ಷ ದಕ್ಷಿಣಹಸ್ತದ ಪಿತೃತೀರ್ಥದಿಂದ '**ಅಸ್ಮತ್ಪಿತರಿದಂ ತೇ ಅರ್ಘ್ಯಂ**' ಎಂದು ವಿಪ್ರನ ಕೈಯ್ಯಲ್ಲಿಸುರಿದು, '**ಯಾ ದಿವ್ಯಾ..**' ಎಂದು ಸ್ರವಿಸುತ್ತಿರುವ ನೀರನ್ನು ಅಭಿಮಂತ್ರಿಸುವುದು '**ಪಿತ್ರೇ...ನ ಮಮ**' ಎಂದು ಹೇಳಿ ಕೂರ್ಚದಿಂದ ಬ್ರಾಹ್ಮಣನ ಕೈಗೆ ನೀರು ಕೊಡಬೇಕು. 'ಅಸ್ತು ದತ್ತಂ' ಎಂದು ಬ್ರಾಹ್ಮಣರು ಉತ್ತರಿಸಬೇಕು ಕೂರ್ಚವನ್ನು ಪೂರ್ವಸ್ಥಾನದಲ್ಲಿಡುವುದು. ಇದೇ ಕ್ರಮದಿಂದ ಪಿತಾಮಹ ಮತ್ತು ಪ್ರಪಿತಾಮಹ

ತತಃ ಕರ್ತಾ ಪ್ರಥಮಪಿತ್ರರ್ಘ್ಯಪಾತ್ರೇ ಸಂಸ್ರಾವಾನ್ಸಮವನಯೇತ್ತದ್ಯಥಾ;- ಭುಗ್ನತ್ರಯಮಪಿ ಪಿತೃಪಾತ್ರೇ ನಿಧಾಯ [89]ಪ್ರಪಿತಾಮಹಾರ್ಘ್ಯಶೇಷಂ ಪಿತಾಮಹಪಾತ್ರೇ ನಿಕ್ಷಿಪ್ಯ ತತ್ಪಿತೃಪಾತ್ರೇ ಸಮವನಯೇತ್। ಏವಂ ಸಮವನೀಯ [93]ತಾಭಿರದ್ಭಿಃ ಪುತ್ರಕಾಮೋ ಮುಖಮನಕ್ತಿ, {''**ಪುತ್ರವಾನ್ಭವ**''ಪ್ರ+}(ಆಯುಷ್ಕಾಮಶ್ಚೇತ್ ತಜ್ಜಲೇನ [94]ಲೋಚನಮನಕ್ತಿ{''ಆಯುಷ್ಮಾನ್ ಭವ''ಪ್ರ+})॥ ಏವಂ ಕೃತ್ವಾಪಸ್ಸೃಷ್ಟ್ವಾ।

ಅಪಸವ್ಯಮ್। [95]ಪಿತ್ರ್ಯವಿಪ್ರವಾಮಭಾಗೇ (ದೇವಪಾತ್ರಾದುತ್ತರತಃ) ಭುವಂ ಪ್ರೋಕ್ಷ್ಯ ಅರ್ಘ್ಯಪಾತ್ರಾಧಃ ಸ್ಥಿತಾನ್ದರ್ಭಾನಾಸ್ತೀರ್ಯ ತೇಷು ''**ಪಿತೃಭ್ಯಃ ಸ್ಥಾನಮಸಿ**'' ಇತಿ ಪ್ರಥಮಮರ್ಘ್ಯಪಾತ್ರಂ [96]ನುಬ್ಜಮುತ್ತಾನಂ ವಾ ಸಂಸ್ಥಾಪ್ಯ ತತ್ಪಾತ್ರಂ ಪಿತಾಮಹಪಾತ್ರೇಣ ಪಿಧಾಯ [97]ಪ್ರಪಿತಾಮಹಪಾತ್ರೇಣಾಪಿದಧ್ಯಾತ್ ''**(ಪ್ರಣೀತಾಯ್ಯೆ ನಮಃ) ಇದಂ ಗಂಧಂ, (ಇದಂ) ಪುಷ್ಪಂ, (ಇದಂ) ತುಲಸೀಪತ್ರಂ (ಇದಂ) ಭಂಗರಾಜಪತ್ರಮ್**'' ಇತಿ ಗಂಧಾದೀನ್ಪ್ರಕ್ಷಿ-ಪ್ಯ। ''**ಸರ್ವೇ ಉಪಚಾರಾಸ್ತಿಲೈಃ ಸಂಪೂರ್ಣಾಃ ಸಂತು**'' ಇತಿ ತಿಲಾನ್ ಕ್ಷಿಪೇತ್। [98]ತತ್ಪಾತ್ರಂ ಅಕ್ಷಯ್ಯವಾಚನಾಂತಂ ನ ಚಾಲಯೇತ್॥

## ಪಿತ್ರಾದಿಭ್ಯೋ ಗಂಧಾದ್ಯುಪಚಾರಃ

ಪ್ರತ್ಯುಪಚಾರಂ ಆದಾವಂತೇ ಚ ಉದಕಂ ದದ್ಯಾತ್॥ ''**ಅಸ್ಮತ್ಪಿತೃಪಿತಾಮಹಪ್ರಪಿತಾಮಹಾಃ --ಶರ್ಮಾಣಃ --ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ ಯಥಾಭಾಗಶಃ ಅಮೀ ವೋ ಗಂಧಾಃ**

---

ಅರ್ಘ್ಯವನ್ನು ಕೊಟ್ಟು '**ಯಾದಿವ್ಯಾ..**' ಎಂದು ಅಭಿಮಂತ್ರಿಸುವುದು. ಆನಂತರ ಅಪಸವ್ಯದಿಂದ ಅರ್ಘ್ಯಜಲವನ್ನು(ಸಂಸ್ರವವನ್ನು) ಒಟ್ಟು ಗೂಡಿಸಬೇಕು ಮೊದಲನೆಯ ಅರ್ಘ್ಯಪಾತ್ರೆಯಲ್ಲಿ ಕೂರ್ಚಗಳನ್ನಿಟ್ಟು ಪ್ರಪಿತಾಮಹ ಪಾತ್ರೆಯಜಲವನ್ನು ಪಿತಾಮಹಪಾತ್ರೆಯಲ್ಲಿ ಹಾಕಿ ಆನಂತರ ಪಿತಾಮಹ ಪಾತ್ರೆಯ ಜಲವನ್ನು ಪಿತೃಪಾತ್ರೆಯಲ್ಲಿ ಹಾಕುವುದು ಆನಂತರ ಸವ್ಯದಿಂದ ಅದರಲ್ಲಿನ ಸ್ವಲ್ಪನೀರನ್ನು ತೆಗೆದುಕೊಂಡು ಮುಖಕ್ಕೆ ಲೇಪಿಸಿಕೊಳ್ಳುವುದು. ಆಗ ಬ್ರಾಹ್ಮಣರು 'ಪುತ್ರವಾನ್ ಭವ' ಎಂದು ಹೇಳಬೇಕು (ಆಯುಷ್ಕಾಮನು ಕಣ್ಣಿಗೆ ಲೇಪಿಸುವುದು ಆಗ ಆಯುಷ್ಮಾನ್ ಭವ ಎಂದು ಪ್ರತಿವಚನ). ಬಳಿಕ ಕೈತೊಳೆದು ಅಪಸವ್ಯದಿಂದ ಪಿತ್ರ್ಯಬ್ರಾಹ್ಮಣನ ಎಡಬದಿಯಲ್ಲಿ (ದೇವಪಾತ್ರೆಯ ಉತ್ತರದಲ್ಲಿ) ಭೂಮಿಯನ್ನು ಪ್ರೋಕ್ಷಿಸಿ ಅರ್ಘ್ಯಪಾತ್ರೆಗಳಡಿಗಿನದರ್ಭೆಯನ್ನಲ್ಲಿ ಹರಡಿ ಅದರಮೇಲೆ ಪ್ರಥಮ ಪಾತ್ರೆಯನ್ನಿಟ್ಟು ಕ್ರಮವಾಗಿ ಪಿತಾಮಹ ಪ್ರಪಿತಾಮಹಪಾತ್ರೆಗಳಿಂದ ಅದನ್ನು ಮುಚ್ಚಿ ಇಟ್ಟು '**ಪ್ರಣೀತಾಯ್ಯೆ ನಮಃ**' ಎಂದು ಗಂಧ ಪುಷ್ಪಗಳಿಂದ ಪ್ರಥಮಾರ್ಘ್ಯಪಾತ್ರೆಯನ್ನುಪೂಜಿಸಬೇಕು ಅದನ್ನು ಅಕ್ಷಯ್ಯವಾಚನೆಪರ್ಯಂತ ಜರುಗಿಸಬಾರದು.

**ಸ್ವಧಾ ನಮಃ''** ಇತಿ ಗಂಧಂ ದದ್ಯಾತ್ {''ಸುಗಂಧಾಃ''ಪ್ರ}। **''ಅಸ್ಮತ್ಪಿತೃ...ಸ್ವರೂಪಾಃ ಮಾಲ್ಯಾರ್ಥೇ ಇಮಾನಿ ವಃ ಪುಷ್ಪಾಣಿ ತುಲಸೀಪತ್ರಭೃಂಗರಾಜಪತ್ರಸಹಿತಾನಿ ಸ್ವಧಾ ನಮಃ''** ಇತಿ ಪತ್ರಪುಷ್ಪಾಣಿ {ಸುಪುಷ್ಪಾಣಿ, ಸುಪತ್ರಾಣಿ''ಪ್ರ+}॥ **''ಅಸ್ಮತ್ಪಿತೃ...ಸ್ವರೂಪಾಃ ಏಷ ವೋ ಧೂಪಃ ಸ್ವಧಾ ನಮಃ''** ಇತಿ ಧೂಪಮಾಘ್ರಾಪಯೇತ್ ''ಸುಧೂಪಃ''ಪ್ರ+}॥ **''ಅಸ್ಮತ್ಪಿತೃ...ಸ್ವರೂಪಾಃ ಏಷ ವೋ ದೀಪಃ ಸ್ವಧಾ ನಮಃ''** ಇತಿ ದೀಪಂ ದರ್ಶಯೇತ್ {''ಸುದೀಪಃ''ಪ್ರ+}॥ **''ಅಸ್ಮತ್ಪಿತೃ...ಸ್ವರೂಪಾಃ ಆಚ್ಛಾದನಾರ್ಥೇ ಇದಂ ವಸ್ತ್ರಯುಗಲಂ ಸ್ವಧಾ ನಮಃ''** ಇತಿ ಸೋತ್ತರೀಯಂ ವಸ್ತ್ರಂ [''ವಾಸೋಽನಿಷ್ಕ್ರಯಂಯಥಾಶಕ್ತಿದ್ರವ್ಯಂಸ್ವಧಾ ನಮಃ'' ಇತಿ ವಾ] {''ಸ್ವಾಚ್ಛಾದನಮ್''ಪ್ರ+}। [**''ಅನುಲೇಪನಾರ್ಥೇ ಗೋಪೀಚಂದನಮ್। ಧಾರಣಾರ್ಥೇ ಯಜ್ಞೋಪವೀತಮ್। ಫಲಾರ್ಥೇ ಪೂಗೀ ಫಲಮ್''**] **''ಪವಿತ್ರಾರ್ಥೇ ಇಮೇ ಕುಶಾಃ''** {''ಸುಪವಿತ್ರಮ್''ಪ್ರ+}॥ **''ಇದಂ ಪಿತೃಭ್ಯೋ ನಮೋ ಅಸ್ತ್ವದ್ಯ ಯೇ ಪೂರ್ವಾಸೋ ಯ ಉಪರಾಸ ಈಯುಃ। ಯೇ ಪಾರ್ಥಿವೇ ರಜಸ್ಯಾ ನಿಷತ್ತಾ ಯೇ ವಾ ನೂನಂ ಸುವೃಜನಾಸು ವಿಕ್ಷು॥ ಪಿತೃಭ್ಯಃ ಏತೇ ಗಂಧಪುಷ್ಪಧೂಪದೀ-ಪಾರ್ಚನಾಚ್ಛಾದನಾಂತಾಃ ಉಪಚಾರಾಃ ಸರ್ವೇ ಪರಿಪೂರ್ಣಾ ಭವಂತು''**{''ಅಸ್ತು''ಪ್ರ+}। **''ಅರ್ಚನವಿಧೇಃ ಸ್ವರ್ಚಿತಮಸ್ತು। ನ್ಯೂನಾತಿರಿಕ್ತಂ ವಿಧಿವದಸ್ತು''** {''ಅಸ್ತು ವಿಧಿವತ್''ಪ್ರ+}। **''ಯಸ್ಯ ಸ್ಮೃತ್ಯಾ+ತಮಚ್ಯುತಮ್''** ಇತಿ ಜಪಿತ್ವಾ॥

ಸವ್ಯಮ್। [99]ಆಚಮ್ಯ ವಿಪ್ರಾಣಾಂ ಪುರತೋಽರ್ಚನಕಾಲೇ ಪತಿತಗಂಧಪುಷ್ಪಾದ್ಯಪನೀಯ [100]ಭೂಮಿಂ ಸಮ್ಮೃಜ್ಯ। **''ಯುಷ್ಮದನುಜ್ಞಯಾ ಮಂಡಲಾದಿಪಾತ್ರಾಸಾದನಂ ಕರಿಷ್ಯೇ''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್ {''ಕುರುಷ್ವ''ಪ್ರ+}।

---

**ಗಂಧಾದ್ಯುಪಚಾರವು;-** ಆನಂತರ ದೇವಾರ್ಚನೆಯಂತೆಯೇ ಪಿತ್ರರ್ಚನೆಯನ್ನು. ಅಪಸವ್ಯದಿಂದ ಮಾಡುವುದು ಉಪಚಾರಾದ್ಯಂತಗಳಲ್ಲಿ ಕೈಗೆ ನೀರನ್ನು ಕೊಡಬೇಕು. ಯವಸ್ಥಾನದಲ್ಲಿ ತಿಲವನ್ನು ಬಳಸಬೇಕು. ಆನಂತರ ಅರ್ಚನವಿಧೇಃ..ಎಂದು ಪ್ರಾರ್ಥಿಸಿ ಇದಂ ಪಿತೃಭ್ಯೋ.. ಎಂದು ಜಪಿಸಿ ಯಸ್ಯ ಸ್ಮೃತ್ಯಾ.... ಎಂದು ವಿಷ್ಣುವನ್ನು ಸ್ಮರಿಸುವುದು. ಆನಂತರ ಕರ್ತೃವು ಸವ್ಯದಿಂದ ಆಚಮನವನ್ನು ಮಾಡಿ. ಉಪಚಾರಕಾಲದಲ್ಲಿ ಬ್ರಾಹ್ಮಣರ ಮುಂದೆ ಬಿದ್ದಿರುವ ಗಂಧಾಕ್ಷತೆದರ್ಭೆ ಮುಂತಾದವುಗಳನ್ನು ತೆಗೆದು ಸಾರಿಸಿ ಶುದ್ಧಿಗೊಳಿಸಿ ಯಷ್ಮದನುಜ್ಞಯಾ ...ಪಾತ್ರಾ..ಕರಿಷ್ಯೇ ಎಂದು ಬ್ರಾಹ್ಮಣರನ್ನು ಕೇಳಿಕೊಂಡಾಗ ಅವರು ಕುರುಷ್ವ ಎಂದು ಉತ್ತರ ಕೊಡಬೇಕು.

**ಭೋಜನಪಾತ್ರಾಸಾದನಾದಿಕರ್ಮವು;**ದೇವಪಾತ್ರಗಳನ್ನು ಇಡುವಲ್ಲಿ ನೈಋತ್ಯದಿಂದ ಈಶಾನ್ಯದವರೆಗೆ ಪ್ರದಕ್ಷಿಣವಾಗಿ ಚೌಕಾಕಾರದ ಮಂಡಲವನ್ನು ಮತ್ತು ಪಿತೃಪಾತ್ರಸ್ಥಾನದಲ್ಲಿ ಈಶಾನ್ಯದಿಂದ ನೈಋತ್ಯದ ವರೆಗೆ ಅಪ್ರದಕ್ಷಿಣೆಯಾಗಿ ಉರುಟಾದ ಮಂಡಲವನ್ನು ಮಾಡಬೇಕು. ಅಲ್ಲಿ ದೇವಪಾತ್ರಸ್ಥಾನದಲ್ಲಿ

## ಭೋಜನಪಾತ್ರಾಸಾದನಾದಿಕರ್ಮ

[103]ಗೋಮಯೋದಕಾಭ್ಯಾಂ ಭಸ್ಮನಾ ವಾ ದೇವಪಾತ್ರಸ್ಥಾನೇ [104]ಚತುರಸ್ರಂ ನೈರ್ಋತಿಮಾರಭ್ಯ ಈಶಾನ್ಯಪರ್ಯನ್ತಂ ಪಾತ್ರಪ್ರಮಾಣಂ ಪ್ರದಕ್ಷಿಣಂ ಮಂಡಲಂ ಕೃತ್ವಾ॥ ಪಿತೃಪಾತ್ರಸ್ಥಾನೇ ವರ್ತುಲಂ ಈಶಾನೀತೋ ನೈರ್ಋತ್ಯನ್ತಂ ಪಾತ್ರಪ್ರಮಾಣಮಪ್ರದಕ್ಷಿಣಂ ಮಂಡಲಂ ಕೃತ್ವಾ। [105]ದೈವೇ ಸಯವಾನ್ ಪಿತ್ರ್ಯೇ ಸತಿಲಾನ್ ದರ್ಭಾನ್ ಪ್ರಾಸ್ಯ। ತತಸ್ತೇಷು ಭೋಜನಪಾತ್ರಾಣಿ ಸ್ಥಾಪಯೇತ್। ಅಪಸವ್ಯಮ್। [106]ಭಸ್ಮ ಗೃಹೀತ್ವಾ ಪಿತೃಪಾತ್ರಾಣಾಂ ಪರಿತಃ ''**ಪಿಶಂಗಭೃಷ್ಟಿಮಂಭೃಣಂ ಪಿಶಾಚಿಮಿಂದ್ರ ಸಂ ಮೃಣ। ಸರ್ವಂ ರಕ್ಷೋ ನಿ ಬರ್ಹಯ**'' ಇತಿ ಪ್ರಕೀರ್ಯ॥

ಸವ್ಯಮ್। ಭಸ್ಮ ಗೃಹೀತ್ವಾ ದೇವಪಾತ್ರಪರಿತಃ ''**ರಕ್ಷಾ ಣೋ ಅಗ್ನೇ ತವ ರಕ್ಷಣೇಭೀ ರಾರಕ್ಷಾಣಃ ಸುಮಖ ಪ್ರೀಣಾನಃ। ಪ್ರತಿ ಷ್ಫುರ ವಿ ರುಜ ವೀಡ್ವಂಹೋ ಜಹಿ ರಕ್ಷೋ ಮಹಿ ಚಿದ್ವಾವೃಧಾನಮ್॥ ಬ್ರಹ್ಮ ಚ ತೇ ಜಾತವೇದೋ ನಮಶ್ಚೇಯಂಚ ಗೀಃ ಸದಮಿದ್ವರ್ಧನೀ ಭೂತ್। ರಕ್ಷಾ ಣೋ ಅಗ್ನೇ ತನಯಾನಿ ತೋಕಾ ರಕ್ಷೋತ ನಸ್ತನ್ವೋ೩ ಅಪ್ರಯುಚ್ಛನ್**'' ಇತಿ ಪ್ರಕೀರ್ಯ। ''**ಯಥಾ ಚಕ್ರಧರೋ ವಿಷ್ಣುಃ ತ್ರೈಲೋಕ್ಯಂ ಪರಿರಕ್ಷತಿ। ಏವಂ ಮಂಡಲಭಸ್ಮಾಂಕಃ ಸರ್ವಭೂತಾನಿ ರಕ್ಷತು॥ ಸರ್ವೇಷಾಂ ಪಾಪದೃಷ್ಟೀನಾಂ ಚಕ್ಷುರ್ಬಧ್ನಾತಿ ಕೇಶವಃ। ಭಸ್ಮನಾ ಮಂಡಲಂ ಕುರ್ಯಾತ್ ಪಂಕ್ತಿದೋಷೋ ನ ವಿದ್ಯತೇ**'' ಇತಿ ಜಪಿತ್ವಾ॥

[107]ಪಿತೃಪೂರ್ವಕಂ ಕರಶುದ್ಧಿಃ। [108]ಭೋಜನಪಾತ್ರಾಣಿ ಪ್ರಕ್ಷಾಲ್ಯ, ಹಸ್ತಪ್ರಕ್ಷಾಲನಜಲಂ ಪಾತ್ರಪ್ರಕ್ಷಾಲನಜಲಂ ಚ ಶುಚೌ ದೇಶೇ (ತತ್ತತ್ಪಾದ್ಯಮಂಡಲೇ ವಾ) ಕ್ಷಿಪೇತ್।

---

ಯವದರ್ಭೆಗಳನ್ನು ಮತ್ತು ಪಿತ್ರ್ಯಪಾತ್ರಸ್ಥಾನದಲ್ಲಿ ತಿಲದರ್ಭೆಗಳನ್ನು ಇಟ್ಟು ಈ ಮಂಡಲಗಳ ಮೇಲೆ ಭೋಜನ ಪಾತ್ರಗಳನ್ನು ಇಡುವುದು ಆನಂತರ ಕೈಯಲ್ಲಿ ಭಸ್ಮವನ್ನು ತೆಕ್ಕೊಂಡು ಅಪಸವ್ಯ ಮಾಡಿ ಪಿತೃಪಾತ್ರಗಳ ಸುತ್ತಲು '**ಪಿಶಂಗ..**' ಎಂಬ ಮಂತ್ರವನ್ನು ಹೇಳಿ ಗೆರೆ ಎಳೆಯಬೇಕು. ಹಾಗೆಯೇ ಸವ್ಯದಲ್ಲಿ '**ರಕ್ಷಾಣೋ..**' ಎಂಬ ಮಂತ್ರವನ್ನು ಹೇಳುತ್ತ ದೇವಪಾತ್ರಗಳ ಸುತ್ತಲು ಗೆರೆ ಎಳೆದು. '**ಯಥಾ ಚಕ್ರಧರೋ..**' ಎಂದು ಜಪಿಸುವುದು.

ನಂತರ ಪಿತೃಪೂರ್ವವಾಗಿ ಪಿತೃಗಳಿಗೂ ದೇವವಿಪ್ರರಿಗೂ ಕೈತೊಳೆಯಲು ನೀರು ಕೊಟ್ಟು ಭೋಜನಪಾತ್ರೆಯನ್ನು ತೊಳೆಯಬೇಕು ಮತ್ತು ಕೈತೊಳೆದ ನೀರನ್ನು ಮತ್ತು ಪಾತ್ರೆಯನ್ನು ತೊಳೆದ ನೀರನ್ನು ಶುದ್ಧಸ್ಥಳದಲ್ಲಿ ಚೆಲ್ಲಬೇಕು.

## ಪಾಣಿಹೋಮಃ

ಅಪಸವ್ಯಮ್।[109]ಘೃತಾಕ್ತಮನ್ನಮಾದಾಯ ಪಿತ್ರ್ಯಬ್ರಾಹ್ಮಣಪುರತಃ ಸವ್ಯಂ ಜಾನ್ವಾಚ್ಯೋಪವಿಶ್ಯ॥ ಬ್ರಾಹ್ಮಣಪಾಣೌ [110,111]ಪ್ರಾಗ್ದಕ್ಷಿಣಾಗ್ರಾನ್ ದರ್ಭಾನಾಸ್ತೀರ್ಯ। ([113]ಮೇಕ್ಷಣೇನ ಕರೇಣ ವಾದಾಯ ಅವದಾನಧರ್ಮೇಣ ಜುಹುಯಾತ್।) ಸದರ್ಭೇಣ ವಾಮಹಸ್ತೇನ ಸ್ವದಕ್ಷಿಣಹಸ್ತಮುಪಸ್ತೀರ್ಯ। ಸವ್ಯೇನ ಪಾಣಿನಾ ಮಧ್ಯಾತ್ಪೂರ್ವಾರ್ಧಾಚ್ಚ ಹವಿರವದಾಯ ದಕ್ಷಿಣಪಾಣೌ ನಿಧಾಯ (ಪಂಚಾವತ್ತೀ ತು ತೃತೀಯಂ ಪಶ್ಚಾರ್ಧಾದವದಾಯ)॥ ಪಾತ್ರಸ್ಥಮವತ್ತಂ ಚಾಭಿಘಾರ್ಯ। ''**ಸೋಮಾಯ ಪಿತೃಮತೇ ಸ್ವಧಾ ನಮಃ**'' ಇತಿ ಪಿತೃತೀರ್ಥೇನ ವಿಪ್ರದಕ್ಷಿಣಪಾಣೌ ಹುತ್ವಾ। ''**ಸೋಮಾಯ ಪಿತೃಮತ ಇದಂ ನ ಮಮ**'' ಇತಿ ತ್ಯಜೇತ್॥ ಪುನಃ ಪೂರ್ವವದವದಾಯ। ಪಾತ್ರಸ್ಥಮವತ್ತಂ ಚಾಭಿಘಾರ್ಯ। ''**ಅಗ್ನಯೇ ಕವ್ಯವಾಹನಾಯ ಸ್ವಧಾ ನಮಃ**'' ಇತಿ ದ್ವಿತೀಯಾಮಾಹುತಿಂ ಹುತ್ವಾ। ''**ಅಗ್ನಯೇ ಕವ್ಯವಾಹನಾಯೇದಂ ನ ಮಮ**'' ಇತಿ ತ್ಯಜೇತ್॥ ಸವ್ಯೇನೋದಕೋಪಸ್ಪರ್ಶನಮ್॥ ತತ ಉತ್ಥಾಯ ''**ಓಂ ಚ ಮೇ ಸ್ವರಶ್ಚ ಮೇ ಯಜ್ಞೋಪಚತೇ ನಮಶ್ಚ॥ ಯತ್ತೇ ನ್ಯೂನಂ ತಸ್ಮೈ ತ ಉಪಯತ್ತೇಽತಿರಿಕ್ತಂ ತಸ್ಮೈ ತೇ ನಮಃ॥ ಅಗ್ನಯೇ ನಮಃ॥ ಸ್ವಸ್ತಿ॥ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಮ್।**

---

**ಅಗ್ನೌಕರಣ(ಪಾಣಿಹೋಮ)**;ಆನಂತರ ಅಪಸವ್ಯದಿಂದ ಒಂದು ಎಲೆ ಅಥವಾ ಪಾತ್ರೆಯಲ್ಲಿ ಅನ್ನವನ್ನು ತೆಕ್ಕೊಂಡು ಪಿತ್ರ್ಯಬ್ರಾಹ್ಮಣನ ಮುಂದೆ ಎಡದಕಾಲನ್ನು ಮಡಿಸಿ ಕುಳಿತು ಬ್ರಾಹ್ಮಣನ ಕೈಯಲ್ಲಿ ಆಗ್ನೇಯಾಗ್ರದರ್ಭೆಗಳನ್ನಿಟ್ಟು, (ಮೇಕ್ಷಣದಿಂದಲೋ ಕೈಯ್ಯಿಂದಲೋ ಅವದಾನಧರ್ಮದಿಂದ ಹೋಮವನ್ನು ಮಾಡಬೇಕು.) ಬಳಿಕ ತನ್ನ ಬಲಕೈಯನ್ನು ದರ್ಭೆಯುಳ್ಳ ಎಡದಕೈಯ್ಯಿಂದ ಉಪಸ್ತರಣ ಮಾಡಿಕೊಂಡು. ಪಾತ್ರೆಯ ಅನ್ನದ ಮಧ್ಯ ಮತ್ತು ಪೂರ್ವದಿಂದ ಒಂದೊಂದು ಬಾರಿ (ಪಂಚಾವತ್ತಿಗಳು ಪಶ್ಚಿಮದಿಂದ ಮತ್ತೊಂದು ಬಾರಿ) ಅನ್ನವನ್ನು ಎಡಕೈಯ್ಯಿಂದ ತೆಗೆದುಕೊಂಡು, ಬಲದಕೈಯ್ಯಲ್ಲಿರಿಸಿಕೊಂಡು. ಪಾತ್ರದಲ್ಲಿದ್ದ ಅನ್ನಕ್ಕೂ ಕೈಯ್ಯಲ್ಲಿದ್ದ ಅನ್ನಕ್ಕೂ ಅಭಿಘಾರಮಾಡಿ **'ಸೋಮಾಯ.. ನಮಃ'** ಎಂದು ಪಿತೃತೀರ್ಥದಿಂದ ಬ್ರಾಹ್ಮಣನ ಬಲದಕೈಯಲ್ಲಿ ಹೋಮಿಸಿ **'ಸೋಮಾಯ... ನ ಮಮ'** ಎಂದು ತ್ಯಾಗವನ್ನು ಹೇಳಬೇಕು. ಮೊದಲಿನಂತೆ ಅವಧಾನಧರ್ಮದಿಂದ ತೆಗೆದುಕೊಂಡು **'ಅಗ್ನಯೇ ಕವ್ಯ...ನಮಃ'** ಎಂದು ಹೋಮಿಸಿ, **'ಅಗ್ನಯೇ...ನ ಮಮ'** ಎಂದು ತ್ಯಾಗವನ್ನು ಹೇಳಿ, ಸವ್ಯಮಾಡಿಕೊಂದು ಕೈತೊಳೆದು ನಿಂತು **'ಓಂ ಚ ಮೆ..'** ಎಂದು ಉಪಸ್ಥಾನವನ್ನುಮಾಡಿ, ಪಿತ್ರ್ಯ ಬ್ರಾಹ್ಮಣನನ್ನು **'ಪಾಣೌ ಹುತಮ್'** ಎಂದುಕೇಳುವುದು. ಆಗ ಅವರು

**ಆಯುಷ್ಯಂ ತೇಜ ಆರೋಗ್ಯಂ ದೇಹಿ ಮೇ ಕವ್ಯವಾಹನ''** ಇತ್ಯುಪಸ್ಥಾಯ। ಪಿತ್ರ್ಯಬ್ರಾಹ್ಮಣಂ ಪೃಚ್ಛೇತ್ **''ಪಾಣೌ ಹುತಮ್''** {''ಸುಹುತಮ್''ಪ್ರ+} (ಮೇಕ್ಷಣಪಕ್ಷೇ ಅಗ್ನ್ಯಭಾವಾತ್ ನಾತ್ರ ಮೇಕ್ಷಣಾನುಪ್ರಹರಣಮ್। ಪಿತ್ರ್ಯ[114]ವಿಪ್ರಬಹುತ್ವೇ ಸರ್ವೇಷಾಂ ಪಾಣಿಷು ಹೋಮಃ। ಕರ್ತಾ [115]ವಿಧುರಶ್ಚೇತ್ ಪಿತ್ರ್ಯವಿಪ್ರಾನುಜ್ಞಾತಃ ಪ್ರಥಮದ್ದೈವವಿಪ್ರಪಾಣೌ ದೈವಿಕಧರ್ಮೇಣ ಸ್ವಾಹಾಕಾರೇಣ 'ಅಗ್ನಯೇ ಕವ್ಯವಾಹನಾಯ ಸ್ವಾಹಾ, ಸೋಮಾಯ ಪಿತೃಮತೇ ಸ್ವಾಹಾ' ಇತ್ಯಾಹುತೀ ಜುಹುಯಾತ್। ಶೇಷಂ ತು ಪಿತ್ರ್ಯೇ ದದ್ಯಾತ್)॥

ತತಃ ಕರ್ತಾ ಘೃತೇನ [116]ತೂಷ್ಣೀಂ ಪಿತ್ರ್ಯಪಾತ್ರೇಽಭಿಘಾರಂ ಕುರ್ಯಾತ್॥ ತತ್ರ ಪಿತ್ರ್ಯವಿಪ್ರಃ ಸ್ವಪಾಣಿಸ್ಥಮನ್ನಂ ನಿಧಾಯ [117]ಬಹಿರ್ಗತ್ವಾಽಽಚಮ್ಯ ಯಥಾಸ್ಥಾನಮುಪವಿಶೇತ್॥ ತತಃ ಕರ್ತಾ ಯಜ್ಞೋಪವೀತೀ ದೈವಪೂರ್ವಂ ಪಾತ್ರಾಣ್ಯಾಜ್ಯೇನಾಭಿಘಾರಯೇತ್ ''[118]**ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆ ಜಾತಮಗ್ನಿಮ್। ಕವಿಂ ಸಮ್ರಾಜಮತಿಥಿಂ ಜನಾನಾಮಾಸನ್ನಾ ಪಾತ್ರಂ ಜನಯಂತ ದೇವಾಃ॥ ಆಮಾಸು ಪಕ್ವಮೈರಯ ಆ ಸೂರ್ಯಂ ರೋಹಯೋ ದಿವಿ। ಘರ್ಮಂ ನ ಸಾಮನ್ತಪತಾ ಸುವೃಕ್ತಿಭಿರ್ಜುಷ್ಟಂ ಗಿರ್ವಣಸೇ ಬೃಹತ್''** ಇತಿ। ತತಃ [119]ಕರ್ತಾನ್ನಾದಿಸೂಪಾನ್ತಂ ಪರಿವೇಷಯೇತ್॥ ಅತ್ರ ತ್ರಿಸುಪರ್ಣಾನ್ನಸೂಕ್ತಾದೀನಾಂ ಜಪಃ ಕಾರ್ಯಃ।

ತತಃ **''ದೇವತಾಭ್ಯಃ+ನಿತ್ಯಮೇವ ನಮೋ ನಮಃ॥ ಕುರುಕ್ಷೇತ್ರಂ ಗಯಾಂ ಗಂಗಾಂ ಪ್ರಭಾಸಂ ಪುಷ್ಕರಂ ತಥಾ। ಏತಾನಿ ಪುಣ್ಯತೀರ್ಥಾನಿ ಶ್ರಾದ್ಧಕಾಲೇ ಸದಾ ಪಠೇತ್। ಸಪ್ತವ್ಯಾಧಾ ದಶಾರ್ಣೇಷು ಮೃಗಾಃ ಕಾಲಾಂಜರೇ ಗಿರೌ। ಚಕ್ರವಾಕಾಃ ಶರದ್ವೀಪೇ ಹಂಸಾಃ ಸರಸಿ ಮಾನಸೇ॥**

---

'ಸುಹುತಂ' ಎಂದು ಪ್ರತಿವಚನವನ್ನೀಯಬೇಕು (ಪಿತೃಸ್ಥಾನಕ್ಕೆ ಬಹುಬ್ರಾಹ್ಮಣರಿದ್ದರೆ ಪ್ರತಿವಿಪ್ರನ ಕೈಯಲ್ಲೂ ಹೋಮಿಸಬೇಕು, ಕರ್ತೃವು ವಿಧುರನಾಗಿದ್ದರೆ ದೈವಿಕನಿಯಮದಿಂದ ಪ್ರಥಮದೇವವಿಪ್ರನ ಕೈಯ್ಯಲ್ಲಿ ಹೋಮಿಸಿ, ಪಿತೃಗಳಿಗೆ ಶೇಷನಿವೇದನವನ್ನು ಮಾಡುವುದು)

ನಂತರ ಪಿತ್ರ್ಯಬ್ರಾಹ್ಮಣನ ಭೋಜನಪಾತ್ರೆಗೆ ಅಭಿಘಾರಮಾಡುವುದು ಆಗ ಪಿತ್ರ್ಯಬ್ರಾಹ್ಮಣನು ತನ್ನಕೈಯ್ಯಲ್ಲಿರುವ ಅನ್ನವನ್ನು ಭೋಜನಪಾತ್ರೆಯಲ್ಲಿಟ್ಟು ಸ್ವಲ್ಪದೂರ ಸರಿದು ಆಚಮನವನ್ನು ಮಾಡಿ ಭೋಜನಸ್ಥಾನದಲ್ಲಿಕುಳಿತುಕೊಳ್ಳಬೇಕು. ಬಳಿಕ ಕರ್ತೃವು ಸವ್ಯದಿಂದ **'ಮೂರ್ಧಾನಂ..'** ಎಂದು ಜಪಿಸಿ ದೇವಪೂರ್ವ ಭೋಜನಪಾತ್ರೆಗೆ ಅಭಿಘಾರಮಾಡಬೇಕು. ಅನ್ನದಿಂದ ಮೊದಲ್ಗೊಂಡು ತೊವ್ವೆಯವರೆಗೆ ಬಡಿಸಬೇಕು ಬಡಿಸುವಾಗ ತ್ರಿಸುಪರ್ಣ,ಅನ್ನಸೂಕ್ತ ಮುಂತಾದ ಸೂಕ್ತಗಳನ್ನು

**ತೇಽಪಿಜಾತಾಃ ಕುರುಕ್ಷೇತ್ರೇ ಬ್ರಾಹ್ಮಣಾಃ ವೇದಪಾರಗಾಃ। ಪ್ರಸ್ಥಿತಾ ದೂರಮಧ್ವಾನಂ ಯೂಯಂ ಕಿಮವಸೀದಥ॥ ಅಮೂರ್ತಾನಾಂ ಚ ಮೂರ್ತಾನಾಂ ಪಿತೄಣಾಂ ದೀಪ್ತತೇಜಸಾಮ್। ನಮಸ್ಯಾಮಿ ಸದಾ ತೇಷಾಂ ಧ್ಯಾಯಿನಾಂ ಯೋಗಚಕ್ಷುಷಾಮ್। ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ। ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು॥ ಈಶಾನಃ ಪಿತೃರೂಪೇಣ ಮಹಾದೇವಲೋ ಮಹೇಶ್ವರಃ। ಪ್ರೀಯತಾಂ ಭಗವಾನೀಶಃ ಪರಮಾತ್ಮಾ ಸದಾಶಿವಃ''** ಇತಿ ಜಪಿತ್ವಾ। ಅಪಸವ್ಯಮ್। ಪಾಣಿಹುತಶೇಷಮನ್ನಂ [120]ಸರ್ವಂ ಪಿತೃಪಾತ್ರೇಷುತೂಷ್ಣೀಂ ದದ್ಯಾತ್।

## ದೇವೇಭ್ಯೋಽನ್ನನಿವೇದನಮ್

ಸವ್ಯಮ್॥ ದೇವಪಾತ್ರಸಮೀಪಂ ಗತ್ವಾ ದಕ್ಷಿಣಜಾನು ಪಾತಯಿತ್ವಾ। ದೇವಪಾತ್ರಂ ವಾಮೇನಸ್ಪೃಶನ್ ದಕ್ಷಿಣೇನ ಪಾಣಿನಾ ಪಾತ್ರಸ್ಥಮನ್ನಂ **''ತತ್ಸವಿತು+ಯಾತ್''** ಇತಿ ಗಾಯತ್ರ್ಯಾಭ್ಯುಕ್ಷ್ಯ [123]ತೂಷ್ಣೀಂ ಪ್ರದಕ್ಷಿಣಂ ಪರಿಷಿಚ್ಯ। ಉಪರಿಸ್ಥಿತೇನ ದಕ್ಷಿಣೇನ ನ್ಯುಬ್ಜಮುಖೇನ ಪಾಣಿನಾಧಃಸ್ಥಿತೇನೋತ್ತಾನೇನ ವಾಮೇನ ಪಾಣಿನಾ ಏವಂ ಸ್ವಸ್ತಿಕಾಕೃತಿನಾ, ಪಾಣಿಭ್ಯಾಂ ಪಾತ್ರಮಾಲಭ್ಯ **''ಪೃಥಿವೀ ತೇ ಪಾತ್ರಂ ದ್ಯೌರಪಿಧಾನಂ ಬ್ರಹ್ಮಣಸ್ತ್ವಾ ಮುಖೇಽಮೃತಂ ಜುಹೋಮಿ। ಬ್ರಾಹ್ಮಣಾನಾಂ ತ್ವಾ ವಿದ್ಯಾವತಾಂ ಪ್ರಾಣಪಾನಯೋರ್ಜುಹೋಮ್ಯಕ್ಷಿತಮಸಿ ಮಾಮೇಕ್ಷೇಷ್ಠಾ ಅಮುತ್ರಾಮುಷ್ಮಿನ್‌ಲೋಕೇ''** ಇತ್ಯಭಿಮಂತ್ರ್ಯ। [124]**''ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್। ಸಮೂಢಮಸ್ಯ ಪಾಂಸುರೇ॥ ವಿಷ್ಣೋ ಹವ್ಯಂ ರಕ್ಷಸ್ವ''** ಇತಿ ನ್ಯುಬ್ಜೇನ ಕರೇಣ ನ್ಯುಬ್ಜಂ [224]ದ್ವಿಜಪಾಣ್ಯಂಗುಷ್ಠಾಗ್ರಮನಖಮನ್ನೇ ನಿವೇಶ್ಯ ಪ್ರದಕ್ಷಿಣಂ ಭ್ರಾಮಯೇತ್। ತತೋ ದಕ್ಷಿಣೇನ ಪಾಣಿನಾ ಯವೋದಕಮಾದಾಯ **''ಪುರೂರವಾರ್ದ್ರವಸಂಜ್ಞಕ-**

---

ಹೇಳಬೇಕು. ಆನಂತರ ಕೈಜೋಡಿಸಿ **'ದೇವತಾಭ್ಯಃ...ಪರಮಾತ್ಮಾ ಸದಾಶಿವಃ'** ಎಂಬಲ್ಲಿವರೆಗೆ ಹೇಳಬೇಕು. ಪಾಣಿಹೋಮಶೇಷಾನ್ನವನ್ನು ಪೂರ್ತಿಯಾಗಿ ಅಪಸವ್ಯದಿಂದ ಪಿತ್ರ್ಯಬ್ರಾಹ್ಮಣನ ಎಲೆಯಲ್ಲಿ ಬಡಿಸುವುದು.

**ವಿಶ್ವೇದೇವರಿಗೆ ಅನ್ನನಿವೇದನ;**ನಂತರ ಸವ್ಯಮಾಡಿಕೊಂಡು ದೇವಬ್ರಾಹ್ಮಣನ ಎದುರಿಗೆ ಕುಳಿತು ಎಲೆಯನ್ನು ಮುಟ್ಟಿಕೊಂಡು **ಗಾಯತ್ರೀ** ಮಂತ್ರದಿಂದ ದೇವಪಾತ್ರದ ಅನ್ನವನ್ನು ಅಭ್ಯುಕ್ಷಿಸಿ, ಕೂರ್ಚದಿಂದ ಮಂತ್ರವಿಲ್ಲದೆ ಪರಿಷೇಚನೆ ಮಾಡಬೇಕು. ಬಲಗೈ ಮೇಲ್ಭಾಗದಲ್ಲೂ ಎಡಗೈ ಕೆಳಭಾಗದಲ್ಲಿಯೂ ಇರುವಂತೆ ಸ್ವಸ್ತಿಕಾಕಾರದಿಂದ ಪಾತ್ರೆಯನ್ನು ಹಿಡಿದು **'ಪೃಥಿವೀ ತೇ..ಲೋಕೇ'** ಎಂಬಲ್ಲಿ ವರೆಗೆ ಹೇಳಿ ಅಭಿಮಂತ್ರಿಸಿ. **'ಇದಂ ವಿಷ್ಣು.. ಹವ್ಯಂ ರಕ್ಷಸ್ವ'** ಎಂದು ಜಪಿಸಿ ತನ್ನ ಕೈಯಿಂದ

**ವಿಶ್ವೇದೇವಾ ದೇವತಾ ಇದಮನ್ನಂ ಹವಿರಯಂ ಬ್ರಾಹ್ಮಣಾಹವನೀಯಾರ್ಥೇ, ಇಯಂ ಭೂಮಿರ್ಗಯಾಯಂಭೋಕ್ತಾ ಗದಾಧರ ಇದಮನ್ನಂ ಬ್ರಹ್ಮಣೇ ದತ್ತಂ ಸೌವರ್ಣಂ ಪಾತ್ರಸ್ಥಮಕ್ಷಯ್ಯವಟಚ್ಛಾಯೇಯಮ್। ಪುರೂರವಾರ್ದ್ರವಸಂಜ್ಞಕವಿಶ್ವೇಭ್ಯೋ ದೇವೇಭ್ಯಃ ಇದಮನ್ನಮಮೃತರೂಪಂ ಪರಿವಿಷ್ಟಂ ಪರಿವೇಕ್ಷ್ಯಮಾಣಂ ಚಾಽಽತೃಪ್ತೇಃ ಸ್ವಾಹಾ॥ (ಹವ್ಯಂನಮೋ ನ ಮಮ। ಓಂ ತತ್ಸದ್ಗಯಾಯಾಂ ವಿಷ್ಣುಪದಾದಿ ಚತುರ್ದಶಪದೇಷು ದತ್ತಮನ್ನಮಕ್ಷಯ್ಯಮಸ್ತು)''** ಇತ್ಯುಕ್ತ್ವಾ ಯವೋದಕಂ ದೇವತೀರ್ಥೇನ ಪಾತ್ರವಾಮಭಾಗೇ ಭೂಮೌ ಕ್ಷಿಪೇತ್। **''ಗಯಾ ಗಧಾಧರಃ ಪ್ರೀಯತಾಮ್''** {ಪ್ರ+''ಪ್ರೀತೋ ಭವತು''} ಇತ್ಯುಕ್ತ್ವೋತ್ಥಾಯ। [225]**''ಯೇ ದೇವಾಸೋ ದಿವ್ಯೇಕಾದಶ ಸ್ಥ ಪೃಥಿವ್ಯಾಮಧ್ಯೇಕಾದಶ ಸ್ಥ। ಅಪ್ಸುಕ್ಷಿತೋ ಮಹಿನೈಕಾದಶ ಸ್ಥ ತೇ ದೇವಾಸೋ ಯಜ್ಞಮಿಮಂ ಜುಷಧ್ವಮ್''** ಇತಿ ದೇವಾನ್ಸಕೃದುಪಸ್ಥಾಯ॥ **''ದೇವಾನುಜ್ಞಯಾ ಪಿತ್ರಾದ್ಯನ್ನ ನಿವೇದನಂ ಕರಿಷ್ಯೇ''** ಇತಿ ದೇವಬ್ರಾಹ್ಮಣಂ ಪೃಚ್ಛೇತ್॥ {''ಕುರುಷ್ವ''ಪ್ರ+}।

## ಪಿತೃಭ್ಯೋಽನ್ನನಿವೇದನಮ್

ಅಪಸವ್ಯಮ್। ಪಿತ್ರ್ಯಪಾತ್ರಸಮೀಪ ಉಪವಿಶ್ಯ ವಾಮಂ ಜಾನು ಪಾತಯಿತ್ವಾ। ಪಿತ್ರ್ಯಪಾತ್ರಸ್ಥಮನ್ನಂ **''ತತ್ಸವಿತು+ಯಾತ್''** ಇತಿ ಗಾಯತ್ರ್ಯಾಭ್ಯುಕ್ಷ್ಯ। ತೂಷ್ಣೀಮಪ್ರದಕ್ಷಿಣಂ ಪರಿಷಿಚ್ಯ। ಉಪರಿಸ್ಥಿತೇನ ವಾಮೇನ ನ್ಯಬ್ಜುಖೇನ ಪಾಣಿನಾಽಧಃಸ್ಥಿತೇನೋತ್ತಾನೇನ ದಕ್ಷಿಣೇನ ಪಾಣಿನಾ ಏವಂ ಸ್ವಸ್ತಿಕಾಕೃತಿನಾ, (ಪಾಣಿಭ್ಯಾಂ) ಪಾತ್ರಮಾಲಭ್ಯ **''ಪೃಥಿವೀ ತೇ**

---

ಬ್ರಾಹ್ಮಣನ ಕೈಯನ್ನು ಇಬ್ಬರ ಕೈಯ್ಯೂ ಅಧೋಮುಖವಾಗುವಂತೆ ಹಿಡಿದು ವಿಪ್ರಾಂಗುಷ್ಠವು ಅನ್ನದ ಮಧ್ಯದಲ್ಲಿ ಊರಿ ನಿಲ್ಲುವಂತ ಹಿಡಿದು ಆನಂತರ ಎಡದ ಕೈಯ್ಯಿಂದ ಎಲೆಯನ್ನು ಮುಟ್ಟುತ್ತ ಬಲದಕೈಯ್ಯಲ್ಲಿ ದರ್ಭೆಯವತುಲಸೀದಳನೀರನ್ನು ಹಿಡಿದುಕೊಂಡು '**ಪುರೂರವಾರ್ದ..**' ಎಂಬಲ್ಲಿಂದ '**ನಮೋ ನ ಮಮ**' ಎಂಬಲ್ಲಿ ವರೆಗೆ ಹೇಳಿ '**ಓಂ ತತ್ಸದ್ಗಯಾಯಾಂ...ಮಸ್ತು**' ಎಂಬಲ್ಲಿಯವರೆಗೆ ಹೇಳಿ ಭೋಜನಪಾತ್ರದ ಎಡಭಾಗದಲ್ಲಿ ಬಿಟ್ಟು '**ಗಯಾಗದಾಧರಃ ಪ್ರೀಯತಾಂ**' ಎಂದಾಗ ಬ್ರಾಹ್ಮಣನು 'ಪ್ರೀತೋ ಭವತು' ಎಂದು ಪ್ರತಿವಚನವನ್ನೀಯಬೇಕು ಆನಂತರ ಎದ್ದು ನಿಂತು '**ಯೇ ದೇವಾಸಃ..**' ಎಂದು ಉಪಸ್ಥಾನವನ್ನು ಮಾಡಿ. '**ದೇವಾನುಜ್ಞಯಾ.....ಕರಿಷ್ಯೇ**' ಎಂದು ದೇವಬ್ರಾಹ್ಮಣರನ್ನು ಪ್ರಾರ್ಥಿಸಬೇಕು ಆಗ ದೇವವಿಪ್ರನು 'ಕುರುಷ್ವ' ಎಂದು ಹೇಳಬೇಕು

**ಪಿತೃಗಳಿಗೆ ಅನ್ನನಿವೇದನ;**ಅಪಸವ್ಯ ಮಾಡಿ ಪಿತ್ರ್ಯಪಾತ್ರೆಯ ಮುಂದೆ ಕುಳಿತು ಎಲೆಯನ್ನು ಮುಟ್ಟಿಕೊಂಡು **ಗಾಯತ್ರೀ** ಮಂತ್ರದಿಂದ ಪಿತ್ರ್ಯಪಾತ್ರದ ಅನ್ನವನ್ನು ಅಭ್ಯುಕ್ಷಿಸಿ, ಕೂರ್ಚದಿಂದ ಮಂತ್ರವಿಲ್ಲದೆ ಪರಿಷೇಚನೆ ಮಾಡಬೇಕು. ಆನಂತರ ಎಡಗೈ ಮೇಲೆ ಮತ್ತು ಬಲಗೈ ಕೆಳಗೆ ಇರುವಂತೆ

**ಪಾತ್ರಂ ದ್ಯೌರಪಿಧಾನಂ ಬ್ರಹ್ಮಣಸ್ತ್ವಾ ಮುಖೇಽಮೃತಂ ಜುಹೋಮಿ ಬ್ರಾಹ್ಮಣಾನಾಂ ತ್ವಾ ವಿದ್ಯಾವತಾಂ ಪ್ರಾಣಪಾನಯೋರ್ಜುಹೋಮ್ಯಕ್ಷಿತಮಸಿ ಮಾಮೇ ಕ್ಷೇಷ್ಠಾ ಅಮುತ್ರಾಮುಷ್ಮಿನ್ ಲೋಕೇ''** ಇತ್ಯಭಿಮಂತ್ರ್ಯ। **''ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ದಧೇ ಪದಮ್। ಸಮೂಢಮಸ್ಯ ಪಾಂಸುರೇ॥ ವಿಷ್ಣೋ ಕವ್ಯಂರಕ್ಷಸ್ವ''** ಇತಿ ನ್ಯುಬ್ಜೇನ ಕರೇಣ ನ್ಯುಬ್ಜಂ ದ್ವಿಜಪಾಣ್ಯಂಗುಷ್ಠಾಗ್ರಮನುಖಮನ್ನೇ ನಿವೇಶ್ಯಾಪ್ರದಕ್ಷಿಣಂ ಭ್ರಾಮಯೇತ್॥ ತತೋ ವಾಮಹಸ್ತೇನ ಪಾತ್ರಮಾಲಭ್ಯ ದಕ್ಷಿಣೇನ ಪಾಣಿನಾ ತಿಲೋದಕಮಾದಾಯ **''ಪಿತೃಪಿತಾಮಹಪ್ರಪಿತಾಮಹಾದೇವತಾಃ ಇದಮನ್ನಂ ಹವಿರಯಂಬ್ರಾಹ್ಮಣ ಆಹವನೀಯಾರ್ಥೇ ಇಯಂಭೂಮಿರ್ಗಯಾಯಂಭೋಕ್ತಾ ಗದಾಧರ ಇದಮನ್ನಂ ಬ್ರಹ್ಮಣೇ ದತ್ತಂ ರಾಜತಪಾತ್ರಮಕ್ಷಯ್ಯವಟಚ್ಛಾಯೇಯಮ್। ಅಸ್ಮತ್ಪಿತೃಪಿತಾಮಹಪ್ರಪಿತಾಮಹೇಭ್ಯಃ --ಶರ್ಮಭ್ಯಃ --ಗೋತ್ರೇಭ್ಯಃ ವಸುರುದ್ರಾದಿತ್ಯಸ್ವರೂಪೇಭ್ಯಃ ಇದಮನ್ನಮಮೃತರೂಪಂ ಪರಿವಿಷ್ಟಂ ಪರಿವೇಕ್ಷ್ಯಮಾಣಂ ಚಾಽಽತೃಪ್ತೇಃ ಸ್ವಧಾ॥ (ಕವ್ಯಂ ನಮೋ ನ ಮಮ॥ ಓಂ ತತ್ಸತ್ ಗಯಾಯಾಂ ರುದ್ರಪದಾದಿಚತುರ್ದಶಪದೇಷುದತ್ತಮನ್ನಮಕ್ಷಯ್ಯಮಸ್ತು)''** ಇತ್ಯುಕ್ತ್ವಾ ತಿಲೋದಕಂ ಪಾತ್ರದಕ್ಷಿಣಭಾಗೇ ಭೂಮೌ ಪಿತೃತೀರ್ಥೇನ ನಿನಯೇತ್। **''ಗಯಾ ಗಧಾಧರಃ ಪ್ರೀಯತಾಮ್''** {ಪ್ರ+''ಪ್ರೀತೋ ಭವತು''} ಇತ್ಯುಕ್ತ್ವೋತ್ಥಾಯ। [226]**''ಯೇ ಚೇಹ ಪಿತರೋ ಯೇ ಚ ನೇಹ ಯಾಁಶ್ಚ ವಿದ್ಮ ಯಾಁಉ ಚ ನ ಪ್ರವಿದ್ಮ। ತ್ವಂ ವೇತ್ಥ ಯತಿ ತೇ ಜಾತವೇದಃ ಸ್ವಧಾಭಿರ್ಯಜ್ಞಂ ಸುಕೃತಂ ಜುಷಸ್ವ''** ಇತಿ ಸಕೃದುಪಸ್ಥಾಯ।

## ಬ್ರಹ್ಮಾರ್ಪಣಮ್

ಸವ್ಯಮ್। **''ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್। ಬ್ರಹ್ಮೈವ ತೇನ ಗನ್ತವ್ಯಂಬ್ರಹ್ಮಕರ್ಮಸಮಾಧಿನಾ॥ ಹರಿರ್ದಾತಾ ಹರಿರ್ಭೋಕ್ತಾ ಹರಿರನ್ನಂ ಪ್ರಜಾಪತಿಃ। ಹರಿರ್ವಿಪ್ರಶರೀರಸ್ಥೋ ಭುಂಕ್ತೇ ಭೋಜಯತೇ ಹವಿಃ॥ ತ್ವಾಂ ಯೋಗಿನಶ್ಚಿನ್ತಯಂತಿ ತ್ವಾಂ**

---

ಸ್ವಸ್ತಿಕಾಕೃತಿಯಿಂದ ಪಾತ್ರೆಯನ್ನು ಹಿಡಿದು **'ಪೃಥಿವೀ ತೇ..ಲೋಕೇ'** ಎಂಬಲ್ಲಿ ವರೆಗೆ ಹೇಳಿ ಅಭಿಮಂತ್ರಿಸಿ. **'ಇದಂ ವಿಷ್ಣು.. ಕವ್ಯಂ ರಕ್ಷಸ್ವ'** ಎಂದು ಜಪಿಸಿ ತನ್ನ ಕೈಯಿಂದ ಬ್ರಾಹ್ಮಣನ ಕೈಯನ್ನು ಇಬ್ಬರ ಕೈಯ್ಯೂ ಅಧೋಮುಖವಾಗುವಂತೆ ಹಿಡಿದು ವಿಪ್ರಾಂಗುಷ್ಠವು ಅನ್ನದ ಮಧ್ಯದಲ್ಲಿ ಊರಿ ನಿಲ್ಲುವಂತ ಹಿಡಿದು ಆನಂತರ ಎಡದ ಕೈಯ್ಯಿಂದ ಎಲೆಯನ್ನು ಮುಟ್ಟುತ್ತ ಬಲದಕೈಯ್ಯಲ್ಲಿ ಬಲಕೈಯ್ಯಲ್ಲಿ ದರ್ಭೆ ಎಳ್ಳುತುಳಸಿಗಳನ್ನಿಟ್ಟುಕೊಂಡು **'ಪಿತೃಪಿತಾಮಹ... ಕವ್ಯಂ ನಮೋ ನ ಮಮ'** ಎಂದು ಹೇಳಿ **'ಓಂ ತತ್ಸದ್ಗಯಾಯಾಂ ..ಮಸ್ತು'** ಎಂದು ಬ್ರಾಹ್ಮಣನ ಬಲಭಾಗದಲ್ಲಿ ಪಿತೃತೀರ್ಥದಿಂದ ಬಿಡಬೇಕು. **'ಗಯಾಗದಾಧರಃ ಪ್ರೀಯತಾಂ'** ಎಂದು ಶ್ರಾದ್ಧಕರ್ತನು ಹೇಳಿದಾಗ ಬ್ರಾಹ್ಮಣರು 'ಪ್ರೀತೋ ಭವತು'

**ಯಜಂತಿ ಚ ಯಜ್ವನಃ। ಹವ್ಯಕವ್ಯಭುಗೇಕಸ್ತ್ವಂ ಪಿತೃದೇವಸ್ವರೂಪಧೃಕ್॥ ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ। ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು। ತತ್ಸದ್ಬ್ರಹ್ಮಾರ್ಪಣಮಸ್ತು''** ಇತಿ ಜಪಿತ್ವಾ। ಯಥಾಚಾರಂ ಶ್ರಾದ್ಧದೇಶೇ ಸಾಲಗ್ರಾಮಾದಿಕಂ ಸಂಸ್ಥಾಪ್ಯ ತತ್ರ ಮಹಾವಿಷ್ಣುಂ ಧ್ಯಾತ್ವಾ ಪರ್ಣೇ ಯಥಾಚಾರಂ ಪರಿವಿಷ್ಯ ನೈವೇದ್ಯಸಮರ್ಪಣಂ ಕುರ್ಯಾತ್॥

ಅಪಸವ್ಯಮ್। **''ಈಶಾನವಿಷ್ಣುಕಮಲಾಸನ- ಕಾರ್ತಿಕೇಯ- ವಹ್ನಿತ್ರ್ಯಯಾರ್ಕರಜನೀಶ- ಗಣೇಶ್ವರಾಣಾಮ್। ಕ್ರೌಂಚಾಮರೇಂದ್ರ- ಕಲಶೋದ್ಭವ- ಕಶ್ಯಪಾನಾಂ ಪಾದಾನ್ನಮಾಮಿ ಸತತಂ ಪಿತೃಮುಕ್ತಿಹೇತೂನ್॥ ಪಂಚಕ್ರೋಶಂ ಗಯಾಕ್ಷೇತ್ರಂ ಕ್ರೋಶಮೇಕಂ ಗಯಾಶಿರಃ। ಯತ್ರ ಯತ್ರ ಸ್ಮರಿಷ್ಯಂತಿ ಪಿತೄಣಾಂ ದತ್ತಮಕ್ಷಯಮ್॥ ಕಾಶಿವಿಶ್ವೇಶ್ವರಾಯ ನಮಃ। ಪುಂಡರೀಕಾಕ್ಷಾಯ ನಮಃ। ಗಯಾಗಧಾಧರಾಯ ನಮಃ''** ಇತಿ ಜಪಿತ್ವಾ॥ ಸವ್ಯಮ್। ಅನ್ನೇಷು ಮಧು ಸರ್ಪಿರ್ವಾಸಿಚ್ಯ। **''ಮಧುಮತೀಃ ಶ್ರಾವಯಿಷ್ಯೇ''** ಇತಿ ಬ್ರಾಹ್ಮಣಾನ್ಪೃಚ್ಛೇತ್ {''ಶ್ರಾವಯ''ಪ್ರ+}॥ **''ಓಮ್। ಭೂರ್ಭುವಸ್ವಃ।** [227]**ತತ್ಸವಿತು+ಯಾತ್''** ಇತಿ ಜಪಿತ್ವಾ॥ [228]ಅಪಸವ್ಯಮ್। **''ಮಧು ವಾತಾ ಋತಾಯ ತೇ ಮಧು ಕ್ಷರಂತಿ ಸಿಂಧವಃ। ಮಾಧ್ವೀರ್ನಃ ಸಂತ್ವೋಷಧೀಃ॥ ಮಧು ನಕ್ತಮುತೋಷಸೋ ಮಧುಮತ್ಪಾರ್ಥಿವಂ ರಜಃ। ಮಧು ದ್ಯೌರಸ್ತು ನಃ ಪಿತಾ॥ ಮಧುಮಾನ್ನೋ ವನಸ್ಪತಿರ್ಮಧುಮಾँ ಅಸ್ತು ಸೂರ್ಯಃ। ಮಾಧ್ವೀರ್ಗಾವೋ ಭವಂತು ನಃ॥ ಮಧು ಮಧು ಮಧು। ಸುಮಧು ಸರ್ವಾನ್ನಂ ಮಧು''** ಇತಿ ಮಧುಮತೀರ್ಜಪಿತ್ವಾ।

**''ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ। ತ್ರೀँಲ್ಲೋಕಾನ್ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ। ಪಿತೄಣಾಂ ಪ್ರತಿಸಾಂವತ್ಸರಿಕಶ್ರಾದ್ಧೀಯಬ್ರಾಹ್ಮಣಭೋಜನೇನ ಪಿತೃಪಿತಾಮಹಪ್ರಪಿತಾಮಹಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ ಪ್ರೀತೋ ಭವತು॥ ತತ್ಸದ್ಬ್ರಹ್ಮಾರ್ಪಣಮಸ್ತು''** ಇತಿ ಬ್ರಹ್ಮಾರ್ಪಣಂ ಕುರ್ಯಾತ್॥

---

ಎಂದು ಹೇಳಬೇಕು. ಆನಂತರ ನಿಂತುಕೊಂಡು '**ಯೇ ಚೇಹ..**' ಎಂಬಮಂತ್ರದಿಂದ ಉಪಸ್ಥಾನವನ್ನು ಮಾಡಬೇಕು

**ಬ್ರಹ್ಮಾರ್ಪಣ, ಆಪೋಶನದಾನ;**ನಂತರ ಸವ್ಯಮಾಡಿಕೊಂಡು 'ಬ್ರಹ್ಮಾರ್ಪಣಂ..ತತ್ಸದ್ಬ್ರಹ್ಮಾರ್ಪಣಮಸ್ತು' ಎಂದು ಜಪಿಸಿ, ಆಚಾರದಂತೆ ಶ್ರಾದ್ಧದೇಶದಲ್ಲಿ ಸಾಲಗ್ರಾಮವನ್ನಿಟ್ಟು ಮಹಾವಿಷ್ಣುವನ್ನು ಧ್ಯಾನಿಸಿ ಅನ್ನಾದಿದ್ರವ್ಯಗಳನ್ನು ಎಲೆಯಲ್ಲಿ ಬಡಿಸಿ ಸಮರ್ಪಣ ಮಾಡಬೇಕು. ಆನಂತರ ಅಪಸವ್ಯ ಮಾಡಿ '**ಈಶಾನವಿಷ್ಣು..ಗಯಾಗದಾಧರಾಯ ನಮಃ**' ಎಂದು ಕೈಜೋಡಿಸಿ ಪ್ರಾರ್ಥಿಸಿ ಸವ್ಯದಿಂದ ಎಲೆಯಲ್ಲಿ

ವಿಪ್ರಾಃ ನಿತ್ಯಭೋಜನವತ್ [229]ಬಲಿದಾನವರ್ಜಂ ಪರಿಷೇಚನಂ ಕುರ್ಯುಃ। ಸವ್ಯಮ್। ತತಃ ಕರ್ತಾ [230]ಪಿತೃಪೂರ್ವಕಂ ಆಪೋಶನಾರ್ಥಮುದಕಂ ದತ್ವಾ ''**ಅಮೃತೋಪಸ್ತರಣಮಸಿ**'' ಇತಿ ಬ್ರೂಯಾತ್। ವಿಪ್ರಾ ಆಪೋಶನಂ ಕೃತ್ವಾ ಪ್ರಾಣಾಹುತೀರ್ಗೃಹ್ಣೀಯುಃ। ಕರ್ತಾ ಚ ಪ್ರಾಣಾಹುತಿಮನ್ತ್ರಾನ್ಪಠೇತ್ ''1)**ಶ್ರದ್ಧಾಯಾಂ ಪ್ರಾಣೇ ನಿವಿಷ್ಟೋಽಮೃತಂ ಜುಹೋಮಿ। ಶಿವೋ ಮಾ ವಿಶಾಪ್ರದಾಹಾಯ। ಪ್ರಾಣಾಯ ಸ್ವಾಹಾ॥** 2)**ಶ್ರದ್ಧಾಯಾಮಪಾನೇ ನಿವಿಷ್ಟೋಽಮೃತಂ ಜುಹೋಮಿ। ಶಿವೋ ಮಾ ವಿಶಾಪ್ರದಾಹಾಯ। ಅಪಾನಾಯ ಸ್ವಾಹಾ॥** 3)**ಶ್ರದ್ಧಾಯಾಂ ವ್ಯಾನೇ ನಿವಿಷ್ಟೋಽಮೃತಂ ಜುಹೋಮಿ। ಶಿವೋ ಮಾ ವಿಶಾಪ್ರದಾಹಾಯ। ವ್ಯಾನಯ ಸ್ವಾಹಾ॥** 4)**ಶ್ರದ್ಧಾಯಾಮುದಾನೇ ನಿವಿಷ್ಟೋಽಮೃತಂ ಜುಹೋಮಿ। ಶಿವೋ ಮಾ ವಿಶಾಪ್ರದಾಹಾಯ। ಉದಾನಾಯ ಸ್ವಾಹಾ॥** 5)**ಶ್ರದ್ಧಾಯಾಂ ಸಮಾನೇ ನಿವಿಷ್ಟೋಽಮೃತಂ ಜುಹೋಮಿ। ಶಿವೋ ಮಾ ವಿಶಾಪ್ರದಾಹಾಯ। ಸಮಾನಾಯ ಸ್ವಾಹಾ॥ ಬ್ರಹ್ಮಣಿಮ ಆತ್ಮಾಮೃತತ್ವಾಯ। ಬ್ರಹ್ಮಣೇ ಸ್ವಾಹಾ**''। ('ಪ್ರಾಣಾಯಸ್ವಾಹಾ। ಅಪಾನಾಯ ಸ್ವಾಹಾ' ಇತ್ಯೇವಂ ವಾ)ಕರಶುದ್ಧಿಃ।

ದಶ ತ್ರಿರ್ವಾ ಗಾಯತ್ರೀಜಪಂ ಕೃತ್ವಾ। ''**ಶ್ರದ್ಧಯಾಗ್ನಿಃ ಸಮಿಧ್ಯತೇ ಶ್ರದ್ಧಯಾ ಹೂಯತೇ ಹವಿಃ। ಶ್ರದ್ಧಾಂ ಭಗಸ್ಯ ಮೂರ್ಧನಿ ವಚಸಾ ವೇದಯಾಮಸಿ॥ ಪ್ರಿಯಂ ಶ್ರದ್ಧೇ ದದತಃ ಪ್ರಿಯಂ ಶ್ರದ್ಧೇ ದಿದಾಸತಃ। ಪ್ರಿಯಂ ಭೋಜೇಷು ಯಜ್ವಸ್ವಿದಂ ಮ ಉದಿತಂ ಕೃಧಿ॥ ಯಥಾ ದೇವಾ ಅಸುರೇಷು ಶ್ರದ್ಧಾಮುಗ್ರೇಷು ಚಕ್ರಿರೇ। ಏವಂ ಭೋಜೇಷು ಯಜ್ವಸ್ವಸ್ಮಾಕಮುದಿತಂ ಕೃಧಿ॥ ಶ್ರದ್ಧಾಂ ದೇವಾ ಯಜಮಾನಾ ವಾಯುಗೋಪಾ ಉಪಾಸತೇ। ಶ್ರದ್ಧಾಂ ಹೃದಯ್ಯ1ಯಾಕೂತ್ಯಾ ಶ್ರದ್ಧಯಾ ವಿಂದತೇ ವಸು॥ ಶ್ರದ್ಧಾಂ ಪ್ರಾತರ್ಹವಾಮಹೇ ಶ್ರದ್ಧಾಂ ಮಧ್ಯಂದಿನಂ ಪರಿ। ಶ್ರದ್ಧಾಂ ಸೂರ್ಯಸ್ಯ ನಿಮ್ರುಚಿ ಶ್ರದ್ಧೇ ಶ್ರದ್ಧಾಪಯೇಹ ನಃ**'' ಇತ್ಯಾಚಾರಾಜ್ಜಪಿತ್ವಾ॥ ''**ಅಪೇಕ್ಷಿತಂ ಯಾಚಿತವ್ಯಂ ತ್ಯಾಜ್ಯಂ ಚೈವಾನಪೇಕ್ಷಿತಮ್। ಉಪವಿಶ್ಯ ಸುಖೇನೈವ ಭೋಕ್ತವ್ಯಂ ಸ್ವಸ್ಥಮಾನಸೈಃ॥ ವಿದ್ಯಮಾನಶಾಕಪಾಕಾದಿ ಪದಾರ್ಥೇಷು ಯದ್ರೋಚತೇ ತದ್ಗ್ರಾಹ್ಯಮ್। ಯನ್ನ**

---

ಜೇನು ಅಥವಾ ತುಪ್ಪವನ್ನು ಬಡಿಸಿ '**ಮಧುಮತೀಃ ಶ್ರಾವಯಿಷ್ಯೇ**' ಎಂದು ಕೇಳಿಕೊಂಡು ಅವರು ಶ್ರಾವಯ ಎಂದಾಗ. **ಗಾಯತ್ರೀ** ಮಂತ್ರವನ್ನು ಜಪಿಸಿ '**ಮಧುವಾತಾ..ಮಧು**' ಎಂಬಲ್ಲಿ ವರೆಗೆ ಜಪಿಸಬೇಕು. ಪುನಃ ಅಪಸವ್ಯದಿಂದ '**ಏಕೋ ವಿಷ್ಣು..ಬ್ರಹ್ಮಾರ್ಪಣಮಸ್ತು**' ಎಂದು ಬ್ರಹ್ಮಾರ್ಪಣ ಬಿಡಬೇಕು. ಬ್ರಾಹ್ಮಣರು ನಿತ್ಯಭೋಜನದಂತೆ ಬಲಿದಾನವಿಲ್ಲದೆ ಪರಿಷೇಚನವನ್ನು ಮಾಡಬೇಕು. ಆನಂತರ ಸವ್ಯದಿಂದ ಪಿತೃಪೂರ್ವವಾಗಿ ಬ್ರಾಹ್ಮಣರಿಗೆ ಆಪೋಶನಕ್ಕೆ ನೀರು ಕೊಟ್ಟು '**ಅಮೃತೋಪಸ್ತರಣಮಸಿ**' ಎನ್ನಬೇಕು ಆಗ ಬ್ರಾಹ್ಮಣರು ಆಪೋಶನ ತೆಗೆದುಕೊಂಡು ಕರ್ತೃವು '**ಶ್ರದ್ಧಾಯಾಂ ಪ್ರಾಣೇ..**' ಇತ್ಯಾದಿ

**ರೋಚತೇತತ್ಯಾಜ್ಯಮ್।ಸುಖೇನೈವಭೋಕ್ತವ್ಯಮ್''** {''ಜುಷಾಮಹೇ''ಇತಿಬ್ರಾಹ್ಮಣಾಃ} ಇತಿ ಬ್ರಾಹ್ಮಣಾನ್ ಸಂಪ್ರಾರ್ಥ್ಯ ಭೋಜನಾಯಾತಿಸೃಜೇತ್॥ **''ಯಥಾಶಕ್ತಿ ರಾಕ್ಷೋಘ್ನಾದಿಸೂಕ್ತಾನಿ ಶ್ರಾವಯಿಷ್ಯೇ** {''ಶ್ರಾವಯ''ಪ್ರ+}॥ ತತಃ ಸವ್ಯಾಹೃತಿಕಾಂ ಗಾಯತ್ರೀಂ ಜಪಿತ್ವಾ ಭುಂಜಾನಾನ್ ವೈಶ್ವದೇವರಾಕ್ಷೋಘ್ನಪಿತ್ರ್ಯಾದೀನಿ ಸೂಕ್ತಾನಿ ಶ್ರಾವಯೇತ್।

### [231]ತೃಪ್ತಿಪ್ರಶ್ನಂ ಶೇಷಾನ್ನನಿವೇದನಂ ಚ

ಸವ್ಯಮ್। ತತಸ್ತೇಷು ತೃಪ್ತೇಷು **''ಭೋಜನಾಂತೇ ಕಿಂಚಿದ್ದಧ್ಯೋದನಂ ಗಂಗಾಮೃತಂ ಚ''** ಇತಿ ಪೃಚ್ಛೇತ್ {''ಸರ್ವಂ ಸಂಪೂರ್ಣಮ್''ಪ್ರ+}॥ **''ಸಿದ್ಧಸ್ಯ ಹವಿಷೋ ಮಧ್ಯೇ ಯದ್ರೋಚತೇ ತದ್ಯಾಚಯಧ್ವಮ್''** ಇತಿ ಪ್ರಾರ್ಥಯೇತ್ {''ಅಲಮ್''ಪ್ರ+}॥ **''ವಿಶ್ವೇದೇವಾಃ ತೃಪ್ತಾಸ್ಥ''** {''ತೃಪ್ತಾಸ್ಮಃ''ಪ್ರ+}॥ ಅಪಸವ್ಯಮ್॥ **''ಪಿತೃಪಿತಾಮಹಪ್ರಪಿತಾಮಹಾಃ ತೃಪ್ತಾಸ್ಥ''** {''ತೃಪ್ತಾಸ್ಮಃ''ಪ್ರ+}। ಸವ್ಯಮ್। **''ಮಧುಮತೀಃ ಶ್ರಾವಯಿಷ್ಯೇ''** ಇತ್ಯುಕ್ತ್ವಾ {''ಶ್ರಾವಯ''ಪ್ರ+}॥ [232]**''ಓಮ್। ಭೂರ್ಭುವಸ್ವಃ। ತತ್ಸವಿತು+ಯಾತ್। ಮಧುವಾತಾ ಋತಾಯತೇ... ಮಾಧ್ವೀರ್ಗಾವೋ ಭವಂತು ನಃ''** ಇತಿ ಜಪಿತ್ವಾ। ಅಪಸವ್ಯಮ್। **''ಅಕ್ಷನ್ನಮೀಮದಂತ ಹ್ಯವ ಪ್ರಿಯಾ ಅಧೂಷತ। ಅಸ್ತೋಷತ ಸ್ವಭಾನವೋ ವಿಪ್ರಾ ನವಿಷ್ಠಯಾ ಮತೀ ಯೋಜಾ ನ್ವಿಂದ್ರ ತೇ ಹರೀ''** ಇತಿ ಜಪಿತ್ವಾ। **''ಶ್ರಾದ್ಧಂ ಸಂಪನ್ನಮ್''** ಇತಿ ವಿಪ್ರಾನ್ಪೃಚ್ಛೇತ್

---

ಜಪಿಸುವಾಗ ಒಂದೊಂದಾಗಿ ಪ್ರಾಣಾಹುತಿಯನ್ನು ತೆಗೆದುಕೊಳ್ಳಬೇಕು. ಪ್ರಾಣಾಹುತಿಗಳನ್ನು ತೆಗೆದ ಆನಂತರ ಎಡಗೈಗೆ ನೀರು ಕೊಟ್ಟು, ಹತ್ತು ಅಥವಾ ಮೂರು ಸಲ ಗಾಯತ್ರೀ ಮಂತ್ರವನ್ನು ಜಪಿಸಿ ಆಚಾರದಂತೆ **'ಶ್ರದ್ಧಯಾಗ್ನಿಃ'** ಎಂಬ ಮಂತ್ರಗಳನ್ನು ಜಪಿಸಿ ಬ್ರಾಹ್ಮಣರನ್ನು ಮುಂದೆ ನಿಂತು **'ಅಪೇಕ್ಷಿತಂ ಯಾಚಿತವ್ಯಂ..ಸುಖೇನೈವ ಭೋಕ್ತವ್ಯಂ'** ಎಂಬಲ್ಲಿ ವರೆಗೆ ಕೈಜೋಡಿಸಿ ನಿಂತು ಪ್ರಾರ್ಥಿಸಬೇಕು. ಆಗ ಬ್ರಾಹ್ಮಣರು 'ಜುಷಾಮಹೇ' ಎಂಬ ಪ್ರತ್ಯುತ್ತರವನ್ನೀಯಬೇಕು, ಆನಂತರ ಶ್ರಾದ್ಧಕರ್ತ **'ಯಥಾಶಕ್ತಿ ರಾಕ್ಷೋಘ್ನಾ..ಶ್ರಾವಯಿಷ್ಯೇ'** ಎಂದಾಗ ಬ್ರಾಹ್ಮಣರು 'ಶ್ರಾವಯ' ಎನ್ನಬೇಕು. ಆನಂತರ ಬ್ರಾಹ್ಮಣರು ಭೋಜನ ಮಾಡುತ್ತಿರುವಾಗ ವೈಶ್ವದೇವ ರಾಕ್ಷೋಘ್ನ ಪಿತೃಸೂಕ್ತಾದಿಗಳನ್ನು ಹೇಳಬೇಕು.

**ತೃಪ್ತಿಪ್ರಶ್ನ ಮತ್ತು ಶೇಷಾನ್ನನಿವೇದನೆ;** ಬ್ರಾಹ್ಮಣರು ಭೋಜನವನ್ನು ಮಾಡಿದ ಮೇಲೆ ಮೇಲೆ **'ಭೋಜನಾಂತೇ...ಮೃತಂಚ'** ಎಂದು ಪ್ರಾರ್ಥಿಸಿದಾಗ ಬ್ರಾಹ್ಮಣರು 'ಸರ್ವಂ ಸಂಪೂರ್ಣಂ' ಎಂದು ಪ್ರತ್ಯುತ್ತರವನ್ನೀಯಬೇಕು. ಶ್ರಾದ್ಧಕರ್ತನು **'ಸಿದ್ಧಸ್ಯ..ಯಾಚಯದ್ವಂ'** ಎಂದು ಪ್ರಾರ್ಥಿಸಿದಾಗ. ಬ್ರಾಹ್ಮಣರು **'ಅಲಂ'** ಎನ್ನಬೇಕು, ಆನಂತರ ಸವ್ಯದಿಂದ **'ವಿಶ್ವೇದೇವಾಃ ತೃಪ್ತಾಸ್ಥ'** ಅಪಸವ್ಯದಿಂದ **'ಪಿತೃ..ಮಹಾಃ ತೃಪ್ತಾಸ್ಥ'** ಎಂದೂ ಕೇಳಬೇಕು ಆಗ ಕ್ರಮವಾಗಿ ಬ್ರಾಹ್ಮಣರು 'ತೃಪ್ತಾಸ್ಮಃ' ಎನ್ನಬೇಕು. ಆನಂತರ ಶ್ರಾದ್ಧಕರ್ತನು **'ಮಧುಮತೀ..'** ಬ್ರಾಹ್ಮಣರು ಶ್ರಾವಯ, ಎನ್ನಬೇಕು. ಆಗ ಕರ್ತೃವು ಸವ್ಯದಿಂದ

{''ಸುಸಂಪನ್ನಂ''ಪ್ರ+}॥ ತತಃ ಕರ್ತಾ ಭುಕ್ತಶೇಷಾತ್ಸಾರ್ವವರ್ಣಿಕಮನ್ನಂ ಪಿಂಡಾರ್ಥಂ ಪ್ರಕಿರಣಾರ್ಥಂ ಚ ಪೃಥಕ್ ಪೃಥಗುದ್ಧೃತ್ಯ ಶೇಷಂ ಬ್ರಾಹ್ಮಣೇಭ್ಯೋ ನಿವೇದ್ಯ **''ಶೇಷಮನ್ನಂ ಕಿಂ ಕ್ರಿಯತಾಮ್''** ಇತಿ ಪೃಚ್ಛೇತ್। ವಿಪ್ರಾಸ್ತದನ್ನಂ ಸ್ವೀಕುರ್ಯುರಿಚ್ಛಾ ಚೇತ್। ನೋ ಚೇತ್ ''ಇಷ್ಟೈಃ ಸಹ ಭುಜ್ಯತಾಮ್'' ಇತಿ ವದೇಯುಃ।

## ಉತ್ತರಾಪೋಶನದಾನಮ್

ತತಃ ಕರ್ತಾ [233]**''ಉಚ್ಛಿಷ್ಟಭಾಗೇಭ್ಯೋಽನ್ನಂ ದೀಯತಾಮ್''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್। ತದಾ ಬ್ರಾಹ್ಮಣಾಃ ಭುಕ್ತಾವಶಿಷ್ಟಂ ಪಾತ್ರಸ್ಥಮನ್ನಂ **''ಯಜಮಾನಕುಲೇ ಜಾತಾ ದಾಸಾ ದಾಸ್ಯೋಽನ್ನಕಾಂಕ್ಷಿಣಃ। ತೇ ಸರ್ವೇ ತೃಪ್ತಿಮಾಯಾಂತು ಮಯಾ ದತ್ತೇನ ಭೂತಲೇ''** ಇತಿ ಮಂತ್ರೇಣ ದೈವೇ ದಕ್ಷಿಣಭಾಗೇ ಪಿತ್ರ್ಯೇ ವಾಮಭಾಗೇ ಚ ಭೂಮೌ ತ್ಯಜೇಯುಃ॥

ತತಃ ಸವ್ಯಮ್॥ ವಿಪ್ರಾಣಾಂ [234]ಪಿತೃಪೂರ್ವಕಂ ಉತ್ತರಾಪೋಶನಾರ್ಥಮುದಕಂ ದತ್ವಾ **''ಅಮೃತಾಪಿಧಾನಮಸಿ''** ಇತಿ ಬ್ರೂಯಾತ್। ವಿಪ್ರಾ ಆಪೋಶನಂ ಕೃತ್ವಾಽವಶಿಷ್ಟಂ **''ರೌರವೇ ಪೂಯನಿಲಯೇ ಪದ್ಮಾರ್ಬುದನಿವಾಸಿನಾಮ್। ಆರ್ಥಿನಾಮುದಕಂ ದತ್ತಮಕ್ಷಯ್ಯಮುಪತಿಷ್ಠತು''** ಇತಿ ಬಹಿರ್ನಿನಯೇಯುಃ। ತತೋ ವಿಪ್ರಾಃ ಧೃತಪವಿತ್ರಗ್ರಂಥೀ ವಿಸ್ರಸ್ಯೋಚ್ಛಿಷ್ಟಮಂಡಲೇ ನಿಕ್ಷಿಪೇಯುಃ। ಕರ್ತಾ ಬ್ರಾಹ್ಮಣಾನಾಂ ಪಿತೃಪೂರ್ವಕಂ ಗಂಡೂಷಕರಣಹಸ್ತಪ್ರಕ್ಷಾಲನಾಂತಂ ಕಾರಯೇತ್॥ ತತಃ ಬ್ರಾಹ್ಮಣೇಷ್ವನಾಚಾಂತೇಷು ಆಚಾಂತೇಷು ವಾ ಪಿಂಡಪ್ರದಾನಂ ಕುರ್ಯಾತ್।

---

**'ಮಧುವಾತಾ..'** ಮಂತ್ರವನ್ನು ಜಪಿಸಿ, ಅಪಸವ್ಯದಿಂದ **'ಆಕ್ಷನ್ನಮೀ..'** ಮಂತ್ರವನ್ನು ಜಪಿಸಬೇಕು. ಆನಂತರ ಸವ್ಯದಿಂದ **'ಶ್ರಾದ್ಧಂ ಸಂಪನ್ನಂ'** ಎಂದಾಗ ಬ್ರಾಹ್ಮಣರು 'ಸುಸಂಪನ್ನಂ' ಎನ್ನಬೇಕು. ಆಗ ಶ್ರಾದ್ಧಕರ್ತೃವು **'ಶೇಷಮನ್ನಂ...'** ಬ್ರಾಹ್ಮಣರು 'ಇಷ್ಟೈಃ ಸಹ..' ಎನ್ನಬೇಕು.

**ಉತ್ತರಾಪೋಶನದಾನಾದಿ;**ಬಳಿಕ ಶ್ರಾದ್ಧಕರ್ತನು **'ಉಚ್ಛಿಷ್ಟಭಾ..ದೀಯತಾಂ'** ಎಂದು ಕೇಳಿದಾಗ ವಿಶ್ವೇದೇವರು ಬಲಬದಿಯಲ್ಲೂ ಪಿತೃಗಳು ಎಡಬದಿಯಲ್ಲೂ 'ಯಜಮಾನಕುಲೇ...ಭೂತಲೇ' ಎಂದು ಉಚ್ಛಿಷ್ಟಾನ್ನವನ್ನು ತೆಗೆದಿಡಬೇಕು. ಆನಂತರ ಸವ್ಯದಿಂದ ಪಿತೃಪೂರ್ವವಾಗಿ ಬ್ರಾಹ್ಮಣರಿಗೆ ಉತ್ತರಾಪೋಶನಕ್ಕಾಗಿ ನೀರನ್ನು ಕೊಟ್ಟು **'ಅಮೃತಾಪಿಧಾನಮಸಿ'** ಎಂದು ಹೇಳಬೇಕು ಆಗ'ಬ್ರಾಹ್ಮಣರು ಉತ್ತರಾಪೋಶನ ಮಾಡಿ ಕೈಯ್ಯಲ್ಲಿ ಸ್ವಲ್ಪ ನೀರನ್ನುಳಿಸಿಕೊಂಡು **'ರೌರವೇ ಪೂಯನಿಲಯೇ..'** ಎಂಬ ಮಂತ್ರವನ್ನುಚ್ಚರಿಸಿ ಎಲೆಯಿಂದ ಹೊರಗೆ ಪಿತೃತೀರ್ಥದಿಂದ ಚೆಲ್ಲಬೇಕು. ಆನಂತರ ಬ್ರಾಹ್ಮಣರು ಕೈಯ್ಯಲ್ಲಿ ಧರಿಸಿದ ಪವಿತ್ರವನ್ನು ಬಿಚ್ಚಿ ಎಲೆಯಬಳಿಹಾಕಬೇಕು. ಆನಂತರ ಕರ್ತೃವು ಬ್ರಾಹ್ಮಣರಿಗೆ

## [235]ಪಿಂಡದಾನಮ್

{ಅನಾಚಾಂತೇಷುಪಿಂಡದಾನಮಿತಿ ಪಕ್ಷೇ ಉತ್ತರಾಪೋಶನದಾನಾಂತೇ ಗಂಡೂಷಕರಣಹಸ್ತಪ್ರಕ್ಷಾಲನಾಂತಂ ಕಾರಯಿತ್ವಾ ಪಿಂಡಾನ್ ದತ್ವಾ ವಿಪ್ರಾನಾಚಮಯ್ಯ, ಸ್ವಯಮಾಚಮ್ಯ ವಿಪ್ರೋಚ್ಛಿಷ್ಟಸಮೀಪೇ ವಿಕಿರಂ ಪ್ರಕಿರಂ ಚ ದದ್ಯಾತ್॥ ಆಚಾಂತೇಷು ಪಿಂಡದಾನಮಿತಿ ಪಕ್ಷೇ ಉತ್ತರಾಪೋಶನದಾನಾಂತೇ ಗಂಡೂಷಕರಣಹಸ್ತಪ್ರಕ್ಷಾಲನಾನ್ತಂ ಕಾರಯಿತ್ವಾ ತೇಷ್ವಾಚಾಂತೇಷು ಸ್ವಯಮಪ್ಯಾಚಮ್ಯ, ಪಿಂಡಾನ್ ದತ್ವಾ ವಿಕಿರಪ್ರಕಿರೇ ದದ್ಯಾತ್। [254]ಪಕ್ಷದ್ವಯೇಽಪಿ ಪಿಂಡದಾನಾನ್ತ ಏವ ವಿಕಿರಪ್ರಕಿರದಾನಮ್॥ } ಅತ್ರಾಸ್ಮಾಭಿಃ 'ಅನಾಚಾಂತ'ಪಕ್ಷಮಾಶ್ರಿತ್ಯ ಪ್ರಯೋಗಃ ಪ್ರದರ್ಶಿತಃ॥

ಕರ್ತಾ ಭುಕ್ತಶೇಷಾದುದ್ಧೃತಂ ಸಾವರ್ಣಿಕಮನ್ನಂ ಘೃತಮಧುತಿಲೈಃ ಸಂಮಿಶ್ರ್ಯ [236]ನಾರಿಕೇಳಪ್ರಮಾಣಾನ್ತ್ರೀನ್‌ಪಿಂಡಾನ್ ಕೃತ್ವಾ ಪಿಂಡದಾನಂ ಕುರ್ಯಾತ್ತದ್ಯಥಾ ;-

**''ಅದ್ಯ ಪೂರ್ವೋಚ್ಚರಿತ..ತಿಥೌ...ಪ್ರತಿಸಾಂವತ್ಸರಿಕಶ್ರಾದ್ಧೇ ತಿಲೋದಕಪಿಂಡಪ್ರದಾನಂ ಕರಿಷ್ಯೇ''** {''ಕುರುಷ್ವ''ಪ್ರ+}। ಅಪಸವ್ಯಮ್॥ ದ್ವಿಜೋಚ್ಛಿಷ್ಟಸಮೀಪೇ ಚತುರ್ಹಸ್ತಾಂತರೇ, ಸ್ಥಲಸಂಕೋಚಾದೌ ಹಸ್ತಮಾತ್ರಾಂತರೇ ವಾ ಹಸ್ತೇನ [237]ಸ್ಫ್ಯೇನ ದರ್ಭಮೂಲೇನ

---

ಪಿತೃಪೂರ್ವಕ ಕೈಕಾಲು ತೊಳೆಯಲು ನೀರನ್ನು ಕೊಡಬೇಕು. ತದನಂತರ ಬ್ರಾಹ್ಮಣರ ಆಚಮನದ ಮೊದಲು ಅಥವಾ ಆನಂತರ ಪಿಂಡದಾನವನ್ನು ಮಾಡಬೇಕು.

**ಪಿಂಡಪ್ರದಾನ;**ಆಚಮನಪೂರ್ವದಲ್ಲಿ ಪಿಂಡದಾನಮಾಡುವಪಕ್ಷದಲ್ಲಿ ಉತ್ತರಪೋಶದಾನಾಂತದಲ್ಲಿ ಬ್ರಾಹ್ಮಣರಿಗೆ ಕೈಕಾಲುತೊಳೆಯಲು ಮತ್ತು ಬಾಯಿ ಮುಕ್ಕಳಿಸಲು ನೀರನ್ನಿತ್ತು, ಪಿಂಡಪ್ರದಾನವನ್ನು ಮಾಡಿ, ಬ್ರಾಹ್ಮಣರು ಆಚಮನವನ್ನು ಮಾಡಿದನಂತರ ಕರ್ತೃವು ಆಚಮನವನ್ನು ಮಾಡಿ ವಿಕಿರಪ್ರಕಿರದಾನವನ್ನು ಮಾಡುವುದು. ಆಚಮನಾಂತ ಪಿಂಡಪ್ರದಾನಪಕ್ಷದಲ್ಲಿ ಉತ್ತರಾಪೋಶನದಾನಾಂತದಲ್ಲಿಬ್ರಾಹ್ಮಣರಕೈಕಾಲುತೊಳೆಯಲುನೀರನ್ನಿತ್ತುಅವರಅಚಮನಾನಂತರ ಕರ್ತೃವು ಆಚಮನವನ್ನು ಮಾಡುವುದು. ಬಳಿಕ ಪಿಂಡಪ್ರದಾನವನ್ನು ಮಾಡಿ ವಿಕಿರಪ್ರಕಿರದಾನವನ್ನು ಮಾಡುವುದು. ಪಕ್ಷದ್ವಯದಲ್ಲೂ ಪಿಂಡಪ್ರದಾನಾಂತದಲ್ಲೇ ವಿಕಿರಪ್ರಕಿರದಾನವು ಯುಕ್ತ.

ಭುಕ್ತಶೇಷಾನ್ನವನ್ನು ತೆಗೆದುಕೊಂಡು ಅದಕ್ಕೆ ತುಪ್ಪ,ಜೇನು,ಎಳ್ಳುಗಳನ್ನು ಬೆರೆಸಿ ತೆಂಗಿನಕಾಯಿ ಗಾತ್ರದ ಮೂರು ಪಿಂಡಗಳನ್ನು ಮಾಡಿಕೊಳ್ಳಬೇಕು ಆನಂತರ ಆಸನದಲ್ಲಿ ಕುಳಿತು **'ಅದ್ಯ ಪೂರ್ವೋ...ಕರಿಷ್ಯೇ'** ಎಂದುಸಂಕಲ್ಪಿಸಿಕೊಳ್ಳಬೇಕುಆಗಬ್ರಾಹ್ಮಣರು'ಕುರುಷ್ವ'ಎನ್ನಬೇಕು.ಆನಂತರಬೋಜನೋಚ್ಛಿಷ್ಟದಿಂದ ನಾಲ್ಕು ಕೈಯ್ಯಳತೆಯಷ್ಟು ದೂರದಲ್ಲಿ ಸ್ಥಳಾಭಾವವಿದ್ದರೆ ಒಂದು ಕೈಯ್ಯಳತೆಯಷ್ಟು ದೂರದಲ್ಲಿ ಪಿಂಡಪ್ರದಾನವನ್ನು ಮಾಡಬೇಕು ಅದರ ಕ್ರಮ ಹೀಗಿದೆ ಆಗ್ನೇಯಾಭಿಮುಖನಾಗಿ ಕುಳಿತು ಕೈಯಲ್ಲಿ

ವಾऽऽಗ್ನೇಯೀಸಂಸ್ಥಾಂ ರೇಖಾಮುಲ್ಲಿಖೇತ್ ''**ಅಪಹತಾ ಅಸುರಾ ರಕ್ಷಾಂಸಿ ವೇದಿಷದಃ**'' ಇತಿ ತಾಂ ರೇಖಾಮಭುಕ್ಷ್ಯ, ಸಕೃದಾಚ್ಛಿನ್ನೈಃ ಪ್ರಾಗ್ದಕ್ಷಿಣಾಗ್ರೈರ್ದರ್ಭೈರವಸ್ತೀರ್ಯ। ಸಕೃದಾಚ್ಛಿನ್ನಾಸ್ತೃತಾಯಾಂ ಲೇಖಾಯಾಮಾದಿಮಧ್ಯಾಂತೇಷು ತ್ರಿಷು ಪಿಂಡದೇಶೇಷು ಪಿತೃತೀರ್ಥೇನ ತಿಲೋದಕಂ ನಿನಯೇತ್ ''**ಶುಂಧಂತಾಂ ಪಿತರಃ। ಶುಂಧಂತಾಂ ಪಿತಾಮಹಾಃ। ಶುಂಧಂತಾಂ ಪ್ರಪಿತಾಮಹಾಃ**'' ಇತಿ॥

ತೇಷು ಪಿಂಡಾನ್(ಸವ್ಯಾನ್ವಾರಬ್ಧ)ಪರಾಚೀನಪಾಣಿನಾ ದದ್ಯಾತ್ [238]''**ಏತತ್ತೇ ಪಿತಃ --ಶರ್ಮನ್ --ಗೋತ್ರ ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ। (ಅಯಂತೇ ಪಿಂಡಃ ಸ್ವಧಾ)**'' ಇತಿ ಪ್ರಥಮಸ್ಥಾನೇ ಪಿಂಡಂದತ್ವಾ॥ ''**ಅಸ್ಮತ್ಪಿತ್ರೇ --ಶರ್ಮಣೇ --ಗೋತ್ರಾಯ ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ**'' ಇತಿ ಯಥಾಚಾರಂ ತ್ಯಜೇತ್॥ ದ್ವಿತೀಯಂ ಪಿಂಡಮಾದಯ ''**ಏತತ್ತೇ ಪಿತಾಮಹ --ಶರ್ಮನ್--ಗೋತ್ರ ರುದ್ರರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂತೇ ಪಿಂಡಃ ಸ್ವಧಾ)**'' ಇತಿ ದತ್ವಾ ತ್ಯಜೇತ್ ''**ಅಸ್ಮತ್ಪಿತಾಮಹಾಯ --ಶರ್ಮಣೇ --ಗೋತ್ರಾಯ ರುದ್ರರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ**''॥ ಏವಂ ತೃತೀಯಂಪಿಂಡಮಾದಾಯ ''**ಏತತ್ತೇ ಪ್ರಪಿತಾಮಹ --ಶರ್ಮನ್--ಗೋತ್ರ ಆದಿತ್ಯರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂತೇ ಪಿಂಡಃ ಸ್ವಧಾ)**'' ಇತಿ ದತ್ವಾ ತ್ಯಜೇತ್ ''**ಅಸ್ಮತ್ ಪ್ರಪಿತಾಮಹಾಯ --ಶರ್ಮಣೇ --ಗೋತ್ರಾಯಾದಿತ್ಯರೂಪಾಯ ಅಯಂಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ**'' ಇತಿ॥ ''**ತತ್ಸದ್ಗಯಾಯಾಂ ವಿಷ್ಣುಪದಾದಿ ಚತುರ್ದಶಪದೇಷುದತ್ತಮಕ್ಷಯ್ಯಮಸ್ತು**'' ಇತಿ ಜಪಿತ್ವಾ॥ ತತೋ [239]ಲೇಪಭಾಕ್ಪ್ರೃಪ್ತಯೇ ಹಸ್ತಲೇಪಂ ಪಿಂಡದರ್ಭಮೂಲೇಷುನಿಮೃಜೇತ್। ತತಃ ''**ಅತ್ರ ಪಿತರೋ ಮಾದಯಧ್ವಂ ಯಥಾಭಾಗಮಾವೃಷಾಯಧ್ವಮ್**'' ಇತಿ ಪಿಂಡಾನ್

---

(ಮರದಕತ್ತಿ ಅಥವಾ) ದರ್ಭೆಯನ್ನು ತೆಗೆದುಕೊಂಡೊಂಡು ಅದರ ಮೂಲಭಾಗದಿಂದ ಭೂಮಿಯಲ್ಲಿ '**ಅಪಹತಾ..ವೇದಿಷದಃ**' ಎಂದು ಆಗ್ನೇಯಾಗ್ರಗೆರೆಯನ್ನು ಎಳೆದು ಆ ಗೆರೆಯನ್ನು ಕೂರ್ಚದಿಂದ ಪ್ರೋಕ್ಷಿಸಿ ಆಗ್ನೇಯ ದಿಕ್ಕಿಗೆ ತುದಿಗಳಿರುವಂತ ಉದ್ದವಾದ ದರ್ಭೆಗಳನ್ನು ಅದರ ಮೇಲೆ ಹರಡಿ '**ಶುಂಧಂತಾಂ ಪಿತರಃ..**' ಇತ್ಯಾದಿ ಮೂರು ಮಂತ್ರಗಳಿಂದ ಮೂಲಮಧ್ಯಾಗ್ರಗಳಲ್ಲಿ 3ಕಡೆ ತಿಲೋದಕವನ್ನು ಕೊಡಬೇಕು. ಬಳಿಕ ಒಂದೊಂದು ಪಿಂಡಗಳನ್ನು ಬಲದ ಕೈಯ್ಯಲ್ಲಿ ತೆಗೆದುಕೊಂಡು ಕ್ರಮವಾಗಿ '**ಏತತ್ತೇ ಅಸ್ಮತ್ಪಿತಃ..**' ಎಂದು ದರ್ಭೆಯ ಮೇಲೆ ಪಿತೃತೀರ್ಥದಿಂದ ಇಟ್ಟು, ಆಚಾರದಂತೆ '**ಅಸ್ಮತ್ ಪಿತ್ರೇ..**' ಎಂದು ತ್ಯಾಗವನ್ನು ಹೇಳುವುದು ಹಾಗೆಯೇ ತತ್ತನ್ಮಂತ್ರದಿಂದ ಪಿತಾಮಹಪ್ರಪಿತಾಮಹರಿಗೆ ಪಿಂಡಗಳನ್ನು ಕೊಟ್ಟು '**ಅಸ್ಮತ್ಪಿತಾಮಹಾಯ..**' ಇತ್ಯಾದಿ ತ್ಯಾಗವನ್ನು ಹೇಳಬೇಕು. ಆನಂತರ ಆಚಾರದಂತೆ '**ತತ್ಸದ್ಗಯಾಯಾಂ..**'

[240]ಸಕೃದನುಮಂತ್ರ್ಯ ಸವ್ಯಪಾರ್ಶ್ವೇನೋದಙ್ಙಾವೃತ್ಯಾ ಯಥಾಶಕ್ತಿಪ್ರಾಣಾನ್ನಿಯಮ್ಯ ಅಭಿಪರ್ಯಾವೃತ್ಯ **''ಅಮೀಮದಂತ ಪಿತರೋ ಯಥಾಭಾಗಮಾವೃಷಾಯಿಷತ''** ಇತಿ ತಥೈವಾನುಮಂತ್ರ್ಯ। ಚರೋಃ ಪಾಣಭಕ್ಷಂ ಭಕ್ಷಯೇತ್। ಸವ್ಯೇನ ಪಿಂಡಾವಶಿಷ್ಟಮನ್ನಂ ಗ್ರಾಸಮಾತ್ರಮವದಾಯ ಬಹಿರ್ನಿಷ್ಕ್ರಮ್ಯ ತದವಘ್ರಾಯ ತ್ಯಜೇತ್। ಸವ್ಯೇನಾಚಮ್ಯ। ಅಪಸವ್ಯಮ್। ಪುನರ್ಯಥಾಸ್ಥಾನಮುಪವಿಶ್ಯ ಪೂರ್ವವತ್ಪಿಂಡೇಷು ತಿಲೋದಕಂ ದದ್ಯಾತ್ **''ಶುಂಧಂತಾಂ ಪಿತರಃ....''** ಇತ್ಯಾದಿ॥

ತತಃ [243]ಪೂರ್ವಬದ್ಧನೀವೀಂ ವಿಸ್ರಸ್ಯ ಪ್ರತಿಪಿಂಡಂ ಘೃತೇನ ತೈಲೇನ ವಾ ದರ್ಭೈರಭ್ಯಂಜನಂ ದದ್ಯಾತ್ತದ್ಯಥಾ;–**''ಅಸ್ಮತ್ಪಿತಃ --ಶರ್ಮನ್--ಗೋತ್ರ ವಸುರೂಪ ಅಭ್ಯಂಕ್ಷ್ವ। ಅಸ್ಮತ್ಪಿತಾಮಹ --ಶರ್ಮನ್--ಗೋತ್ರ ರುದ್ರರೂಪ ಅಭ್ಯಂಕ್ಷ್ವ। ಅಸ್ಮತ್ ಪ್ರಪಿತಾಮಹ --ಶರ್ಮನ್--ಗೋತ್ರ ಆದಿತ್ಯರೂಪ ಅಭ್ಯಂಕ್ಷ್ವ''** ಇತಿ॥ ತಥೈವ ಕಜ್ಜಲಂ ದದ್ಯಾತ್ಸರ್ವತ್ರ ತದ್ಯಥಾ;– **''ಅಸ್ಮತ್ಪಿತಃ --ಶರ್ಮನ್--ಗೋತ್ರ ವಸುರೂಪ ಅಂಕ್ಷ್ವ। ಅಸ್ಮತ್ಪಿತಾಮಹ --ಶರ್ಮನ್--ಗೋತ್ರ ರುದ್ರರೂಪ ಅಂಕ್ಷ್ವ। ಅಸ್ಮತ್ ಪ್ರಪಿತಾಮಹ --ಶರ್ಮನ್--ಗೋತ್ರ ಆದಿತ್ಯರೂಪ ಅಂಕ್ಷ್ವ''** ಇತಿ॥ ಏವಮಭ್ಯಂಜನಾಂಜನೇ ದತ್ವಾ [244]ಪಿಂಡೇಷು ವಾಸಾಂಸಿ ದದ್ಯಾದ್ದಶಾಮೂರ್ಣಾಸ್ತುಕಾಂ[245] ವಾ॥ **''ಏತದ್ವಃ ಪಿತರೋ ವಾಸೋ ಮಾನೋತೋಽನ್ಯತ್ಪಿತರೋ ಯುಂಗ್ಧ್ವಮ್''** ಇತಿ॥

---

ಎಂದು ಹೇಳಬೇಕು. ಆನಂತರ ಕೈಗೆ ಅಂಟಿದ ಅನ್ನದ ಲೇಪವನ್ನು ಲೇಪಭಾಕ್ಪಿತೃಗಳ ತೃಪ್ತಿಗಾಗಿ ದರ್ಭೆಗಳ ಬುಡದಲ್ಲಿ ಲೇಪಿಸಬೇಕು. ಬಳಿಕ **'ಅತ್ರ ಪಿತರೋ..'** ಎಂದು ಹೇಳಿ ಪಿಂಡಗಳನ್ನು ಅನುಮಂತ್ರಿಸಿ ಎಡದ ಪಾರ್ಶ್ವದಿಂದ ಉತ್ತರಾಭಿಮುಖವಾಗಿ ತಿರುಗಿ ಯಥಾಶಕ್ತಿ ಪ್ರಾಣವಾಯುವನ್ನು ನಿರೋಧ ಮಾಡಿ ಮೊದಲಿನಂತೆ ತಿರುಗಿ ಕುಳಿತುಕೊಂಡು **'ಅಮೀಮದಂತ..'** ಎಂದು ಹೇಳಿ ಪಿಂಡಗಳನ್ನು ಅನುಮಂತ್ರಿಸಿ ಸವ್ಯದಿಂದ ಪಿಂಡಶೇಷವನ್ನು ಗ್ರಾಸದಷ್ಟು ತೆಗೆದುಕೊಂಡು ಸ್ವಲ್ಪದೂರಕ್ಕೆ ಜರುಗಿ ಕುಳಿತು ಅದನ್ನು ಆಘ್ರಾಣಿಸಿ ತ್ಯಜಿಸಬೇಕು. ಪುನಃ ಯಥಾಸ್ಥಾನದಲ್ಲಿ ಕುಳಿತು **'ಶುಂಧಂತಾಂ..'** ಇತ್ಯಾದಿ ಮಂತ್ರಗಳನ್ನು ಉಚ್ಚರಿಸಿ ಮೊದಲಿನಂತೆ ಪಿಂಡಗಳ ಮೇಲೆ ತಿಲೋದಕವನ್ನು ಕೊಡಬೇಕು. ಆನಂತರ ದರಿಸಿದ್ದ ನೀವಿಯನ್ನು ವಿಸರ್ಜಿಸಿ ಪಿಂಡಗಳ ಮೇಲೆ ದರ್ಭೆಯಿಂದ ಎಳ್ಳೆಣ್ಣೆ ಅಥವಾ ತುಪ್ಪವನ್ನು ತೆಗೆದುಕೊಂಡು **'ಅಸ್ಮತ್ಪಿತಃ..ಅಭ್ಯಂಕ್ಷ್ವ..'** ಇತ್ಯಾದಿ ಮಂತ್ರಗಳನ್ನುಚ್ಚರಿಸಿ ಅಭ್ಯಂಜನವನ್ನೀಯಬೇಕು. ಹಾಗೆಯೇ ದರ್ಭೆಯಿಂದ ಕಜ್ಜಲವನ್ನು ತೆಗೆದುಕೊಂಡು **'ಅಸ್ಮತ್ಪಿತಃ..ಅಂಕ್ಷ್ವ..'** ಎಂದು ಅಂಜನವನ್ನೀಯಬೇಕು. ಹೀಗೆ ಪ್ರತಿಪಿಂಡಕ್ಕೂ ಅಂಜನಾಭ್ಯಂಜನವನ್ನರ್ಪಿಸಿ. ಪಿಂಡಗಳಿಗೆ ವಸ್ತ್ರವನ್ನು ಅಥವಾ ಧರಿಸಿದಬಟ್ಟೆಯ ಕಡೆಯ ಭಾಗವನ್ನು ತುಂಡರಿಸಿ **'ಏತದ್ವಃ ಪಿತರೋ....ಯುಂಗ್ಧ್ವಂ'** ಎಂದು ಸಮರ್ಪಿಸಬೇಕು.

ಸವ್ಯಮ್॥ ''**ಕುಲಾಭಿವೃದ್ಧ್ಯರ್ಥಂ ಪಿಂಡಪೂಜಾಂ ಕರಿಷ್ಯೇ**'' ಇತಿ ಸಂಕಲ್ಪ್ಯ। [247]''**ಪಿಂಡಸ್ಥಪಿತೃಭ್ಯಃ ಪಾದ್ಯಂಸ್ವಧಾ॥ ಅರ್ಘ್ಯಂಸ್ವಧಾ॥ ಆಚಮನೀಯಂ...॥ ಸ್ನಾನಂ...। ಗಂಧಂ...॥ ಪುಷ್ಪಂ...॥ ಭೃಂಗರಾಜಪತ್ರಂ...॥ ಧೂಪಂ...। ದೀಪಂ...॥ ಅಪೂಪಪಾಯಸ ನೈವೇದ್ಯಂ...। ತಾಂಬೂಲಂ...। ದಕ್ಷಿಣಾಂ...।**''

ಅಪಸವ್ಯಮ್। ತಿಷ್ಠನ್ನಂಜಲಿಂ ಕೃತ್ವೇನಾನುಪತಿಷ್ಠೇತ ''**ನಮೋ ವಃ ಪಿತರ ಇಷೇ ನಮೋ ವಃ ಪಿತರ ಊರ್ಜೇ ನಮೋ ವಃ ಪಿತರಃ ಶುಷ್ಮಾಯ ನಮೋ ವಃ ಪಿತರೋ ಘೋರಾಯ ನಮೋ ವಃ ಪಿತರೋ ಜೀವಾಯ ನಮೋ ವಃ ಪಿತರೋ ರಸಾಯ ಸ್ವಧಾ ವಃ ಪಿತರೋ ನಮೋ ವಃ ಪಿತರೋ ನಮ ಏತಾ ಯುಷ್ಮಾಕಂ ಪಿತರ ಇಮಾ ಅಸ್ಮಾಕಂ ಜೀವಾ ವೋ ಜೀವಂತ ಇಹ ಸಂತಃ ಸ್ಯಾಮ॥ [249]ಮನೋ ನ್ವಾ ಹುವಾಮಹೇ ನಾರಾಶಂಸೇನ ಸೋಮೇನ। ಪಿತೃಣಾಂ ಚ ಮನ್ಮಭಿಃ॥ ಆ ತ ಏತು ಮನಃ ಪುನಃ ಕ್ರತ್ವೇ ದಕ್ಷಾಯ ಜೀವಸೇ। ಜ್ಯೋಕ್ಚ ಸೂರ್ಯಂ ದೃಶೇ॥ ಪುನರ್ನಃ ಪಿತರೋ ಮನೋ ದದಾತು ದೈವ್ಯೋ ಜನಃ। ಜೀವಂ ವ್ರಾತಂ ಸಚೇಮಹಿ**'' ಇತ್ಯುಪಸ್ಥಾಯಾನಂತರಮ್॥ ಅಪಸವ್ಯಮ್। ಅಥ ''**ಪರೇತನ ಪಿತರಃ ಸೋಮ್ಯಾಸೋ ಗಂಭೀರೇಭಿಃ ಪಥಿಭಿಃ ಪೂರ್ವಿಣೇಭಿಃ। ದತ್ತಾಯಾಸ್ಮಭ್ಯಂ ದ್ರವಿಣೇಹ ಭದ್ರಂ ರಯಿಂ ಚ ನಃ ಸರ್ವವೀರಂ ನಿಯಚ್ಛತ**'' ಇತಿ ಪಿಂಡಸ್ಥಾನ್ ಪಿತೄನ್ಪ್ರವಾಹಯಾಮೀತಿ ಧ್ಯಾಯನ್ಸಕೃದುತ್ತಾನೇನ ಹಸ್ತೇನ ಪಿಂಡಾನ್ ಕಿಂಚಿಚ್ಚಾಲಯೇತ್॥

ತತಃ ''**ಗಯಾಯಾಂ ಧರ್ಮಪೃಷ್ಠೇಷು ಸದಸಿ ಬ್ರಹ್ಮಣಸ್ಪತೇಃ। ಗಯಾಶೀರ್ಷೇ ವಟೇ ಚೈವ ಪಿತೄಣಾಂ ದತ್ತಮಕ್ಷಯಮ್। ಗಯಾಯಾಂ ಪಿತೃರೂಪೇಣ ಸ್ವಯಮೇವ ಜನಾರ್ದನಃ। ತಂ ದೃಷ್ಟ್ವಾ ಪುಂಡರೀಕಾಕ್ಷಂ ಮುಚ್ಯತೇ ಚ ಋಣತ್ರಯಾತ್। ಶಮೀಪತ್ರಪ್ರಮಾಣೇನ ಪಿಂಡಂ ದದಾದ್ಗಯಾಶಿರೇ। ಉದ್ಧರೇತ್ಸಪ್ತಗೋತ್ರಾಣಿ ಕುಲಮೇಕೋತ್ತರಂ ಶತಮ್**'' ಇತ್ಯಾಚಾರಾಜ್ಜಪಃ॥

---

ಬಳಿಕ ಸವ್ಯ ಮಾಡಿಕೊಂಡು '**ಕುಲಾಭಿವೃಧ್ಯರ್ಥಂ..ಕರಿಷ್ಯೇ**' ಎಂದು ಸಂಕಲ್ಪಿಸಿ ಪಿಂಡಗಳಲ್ಲಿರುವ ಪಿತೃಗಳಿಗೆ '**ಪಿಂಡಸ್ಥ ಪಿತೃಭ್ಯಃ ಪಾದ್ಯಂ ಸ್ವಧಾ**' ಇತ್ಯಾದಿಗಳನ್ನುಚ್ಚರಿಸಿ ಪಾದ್ಯ ಮೊದಲ್ಗೊಂಡು ಪೂಜೆಯನ್ನು ಮಾಡಿ ನೈವೇದ್ಯ ತಾಂಬೂಲ ದಕ್ಷಿಣೆಗಳನ್ನರ್ಪಿಸಿ. ಎದ್ದುನಿಂತು ಕೈಜೋಡಿಸಿ '**ನಮೋ ವಃ ಪಿತರ ಇಷೇ... ಸಚೇಮಹಿ**' ಎಂದು ಉಪಸ್ಥಾನ ಮಾಡಿ, ಅಪಸವ್ಯದಿಂದ ಆನಂತರ '**ಪರೇತನ ಪಿತರಃ..**' ಎಂಬ ಮಂತ್ರವನ್ನು ಹೇಳಿ '**ಪಿಂಡಸ್ಥಾನ್ಪಿತೄನ್ ಪ್ರವಾಹಯಾಮಿ**' ಎಂದು ಮೇಲ್ಮುಖವಾದ ಕೈಗಳಿಂದ ಪಿಂಡವನ್ನು ಸ್ವಲ್ಪ ಅಲಗಾಡಿಸಬೇಕು. ಬಳಿಕ '**ಗಯಾಯಾಂ..ಕುಲಮೇಕೋತ್ತರ ಶತಂ**' ಇತ್ಯಾದ್ಯಾಚಾರದಂತೆ ಪ್ರಾರ್ಥಿಸಿ ಸಕುಟುಂಬನಾಗಿ ಯಜಮಾನನು ಪಿಂಡಗಳನ್ನು ನಮಸ್ಕರಿಸಬೇಕು.

{[250]ತತಃ ಕರ್ತಾ ಪುತ್ರಕಾಮಶ್ಚೇತ್ ''**ವೀರಂ ಮೇ ದತ್ತ ಪಿತರಃ**'' ಇತಿ ಮಂತ್ರೇಣ ಮಧ್ಯಮಂ ಪಿತಾಮಹಪಿಂಡಮಾದಾಯ ಪತ್ನ್ಯೈ ಪುತ್ರಕಾಮಾಯೈ ಪ್ರಯಚ್ಛೇತ್। ಸಾ ಚಾ ತಂ ಪಿಂಡಂ ಪ್ರಜ್ಞಾತಂ ನಿಧಾಯ [253]ಶ್ರಾದ್ಧಾಂತೇ ''**ಆಧತ್ತ ಪಿತರೋ ಗರ್ಭಂ ಕುಮಾರಂ ಪುಷ್ಕರಸ್ರಜಮ್। ಯಥಾಽಯಮರಪಾ ಅಸತ್**'' ಇತಿ ಮಂತ್ರಂ ಸ್ವಯಂ ಪಠಂತೀ ಪಿಂಡಂಪ್ರಾಶ್ನೀಯಾತ್॥ ಅನೇಕಪತ್ನೀಪಕ್ಷೇ ತಮೇವ ಪಿಂಡಂದರ್ಭೈರ್ವಿಭಜ್ಯ ಯಥಾಂಶಂ ಮಂತ್ರಪೂರ್ವಕಂ ಸರ್ವಾ ಅಪಿ ಪ್ರಾಶ್ನಿಯುಃ। ಪತ್ನ್ಯಾಮನಧಿಕಾರಿಣ್ಯಾಮಾದಾನಪ್ರಾಶನಮಂತ್ರಯೋರ್ಲೋಪಃ॥ }

## [254]**ವಿಕಿರದಾನಂ ಪ್ರಕಿರದಾನಂಚ**

ತತಃ [255]ಕರ್ತಾ ಬ್ರಾಹ್ಮಣಾನಾಚಮಯ್ಯ, ಸ್ವಯಮಪ್ಯಾಚಮ್ಯ ಸವ್ಯಮ್। [255]ದೇವದ್ವಿಜೋಚ್ಛಿಷ್ಟಸಮೀಪೇ (ಬ್ರಾಹ್ಮಣದ್ವಿತ್ವೇ ಪ್ರಥಮವಿಪ್ರೋಚ್ಛಿಷ್ಟಾಂತೇ) ಉದಗಗ್ರಾನ್ ದರ್ಭಾನಾಸ್ತೀರ್ಯ, ತತ್ರ ''**ಅಸೋಮಪಾಶ್ಚ ಯೇ ದೇವಾ ಯಜ್ಞಭಾಗವಿವರ್ಜಿತಾಃ। ತೇಷಾಮನ್ನಂ ಪ್ರದಾಸ್ಯಾಮಿ ವಿಕಿರಂ ವೈಶ್ವದೇವಿಕಮ್**'' ಇತಿ ಸಯವಮನ್ನಂ ವಿಕೀರ್ಯ॥ ''**ಅಸೋಮಪೇಭ್ಯೋ ವಿಶ್ವೇಭ್ಯೋ ದೇವೇಭ್ಯಃ ಇದಂ ವಿಕಿರಾನ್ನಂ ದತ್ತಂ ನ ಮಮ**'' ಇತಿ ತ್ಯಕ್ತ್ವಾ, ಉಪರಿ ಯವೋದಕಂ ನಿನಯೇತ್।

ಅಪಸವ್ಯಮ್॥ ಪಿತೃದ್ವಿಜೋಚ್ಛಿಷ್ಟಸಮೀಪೇ(ಬಹುಬ್ರಾಹ್ಮಣಪಕ್ಷೇ ಪ್ರಥಮವಿಪ್ರೋಚ್ಛಿಷ್ಟಾನ್ತೇ) ಪ್ರತೀಚೇನಾಗ್ರಾನ್ದರ್ಭಾನಾಸ್ತೀರ್ಯ, ತತ್ರ ''**ಅಸಂಸ್ಕೃತಪ್ರಮೀತಾ ಯೇ ತ್ಯಾಗಿನ್ಯೋ ಯಾಃಕುಲಸ್ತ್ರಿಯಃ। ದಾಸ್ಯಾಮಿ ತೇಭ್ಯಃ ಪ್ರಕಿರಮನ್ನಂ ತಾಭ್ಯಶ್ಚ ಪೈತೃಕಮ್**'' ಇತಿ ಸತಿಲಮನ್ನಂ ವಿಕೀರ್ಯ। ''**ಕುಮಾರಕುಮಾರಿಕಾಭ್ಯಃ ಗರ್ಭಾದ್ವಿನಿಃಸೃತೇಭ್ಯಃ ಇದಂ ಪ್ರಕಿರಾನ್ನಂ ದತ್ತ ನ ಮಮ**'' ಇತಿ ತ್ಯಕ್ತ್ವಾ, ಉಪರಿ ತಿಲೋದಕಂ ನಿನಯೇತ್॥

---

(ನಂತರ ಕರ್ತೃವು ಪುತ್ರಕಾಮನೆಯುಳ್ಳವನಾಗಿದ್ದರೆ ವೀರಂ ಮೇ ದತ್ತ... ಎಂದು ಮಧ್ಯಮ ಪಿಂಡವನ್ನು ಪತ್ನಿಗೆ ಕೊಡಬೇಕು. ಅವಳು ಆ ಪಿಂಡವನ್ನು ಸುರಕ್ಷಿತವಾಗಿರಿಸಿ ಶ್ರಾದ್ಧಾಂತದಲ್ಲಿ 'ಆಧತ್ತ ಪಿತರೋ...ಅಸತ್' ಎಂಬ ಮಂತ್ರವನ್ನು ಜಪಿಸಿ ಸೇವಿಸಬೇಕು. ಕರ್ತೃವಿಗೆ ಅನೇಕಪತ್ನಿಯರಿದ್ದರೆ ದರ್ಭೆಯಿಂದ ಪಿಂಡವನ್ನು ವಿಭಾಗಿಸಿ ಅವರೆಲ್ಲರಿಗೆ ಹಂಚಬೇಕು. ಪತ್ನಿಯು ಅನಧಿಕಾರಿಣಿಯಾಗಿದ್ದರೆ ಪ್ರಾಶನಲೋಪವು)

**ವಿಕಿರಪ್ರಕಿರಾದಿದಾನ**;ಬ್ರಾಹ್ಮಣರು ಮತ್ತು ಕರ್ತೃವು ಕ್ರಮವಾಗಿ ಅಚಮನವನ್ನು ಮಾಡಬೇಕು. ಬಳಿಕ ಕರ್ತೃವು ವಿಕಿರಾನ್ನ ಮತ್ತು ಉಚ್ಛಿಷ್ಟಪಿಂಡದಾನವನ್ನು ಮಾಡಬೇಕು. ದೇವೋಚ್ಛಿಷ್ಟದ ಮುಂಬಾಗದಲ್ಲಿ ಎರಡು ದರ್ಭೆಗಳನ್ನು ಹಾಕಿ '**ಅಸೋಮಪಾಶ್ಚ..**' ಎಂದು ಹೇಳಿ ಅಕ್ಕಿಕಾಳು ಮತ್ತು ನೀರಿನೊಂದಿಗೆ ವಿಕಿರಾನ್ನವನ್ನು ಕೊಟ್ಟು '**ಅಸೋಮಪೇಭ್ಯೋ..ನ ಮಮ**' ಎಂದು ತ್ಯಾಗವನ್ನು ಹೇಳಬೇಕು. ಆನಂತರ

[257]ತತ್ಸಮೀಪೇ ಭುವಂ ಪ್ರೋಕ್ಷ್ಯ ದಕ್ಷಿಣಾಗ್ರಾನ್ದರ್ಭಾನಾಸ್ತೀರ್ಯ ತೇಷುತಿಲೋದಕಂ ನಿನೀಯ, ಪಿಂಡಂಶೇಷಮನ್ನಂ ವಾದಾಯ **''ಯೇ ಅಗ್ನಿದಗ್ಧಾ ಯೇ ಅನಗ್ನಿದಗ್ಧಾ ಮಧ್ಯೇ ದಿವಃ ಸ್ವಧಯಾ ಮಾದಯಂತೇ। ತೇಭಿಃ ಸ್ವರಾಳಸುನೀತಿಮೇತಾಂ ಯಥಾವಶಂ ತನ್ವಂ ಕಲ್ಪಯಸ್ವ''** ಇತಿ ನಿಧಾಯ॥ **''ಯೇಽಅಗ್ನಿದಗ್ಧಾಃ ಕುಲೇ ಜಾತಾ ಯೇಽಪ್ಯದಗ್ಧಾಃ ಕುಲೇ ಮಮ। ಭೂಮೌ ದತ್ತೇನ ತೃಪ್ಯಂತು ತೃಪ್ತಾ ಯಾಂತು ಪರಾಂ ಗತಿಮ್''** ಇತಿ ತದುಪರಿ ತಿಲೋದಕಂ ನಿನಯೇತ್॥ **''ಅಗ್ನಿದಗ್ಧೇಭ್ಯೋಽನಗ್ನಿದಗ್ಧೇಭ್ಯೋಽಸ್ಮತ್ಕುಲಪ್ರಸೂತೇಭ್ಯೋಽಜೀವೇಭ್ಯಃ ಉಚ್ಛಿಷ್ಟಪಿಂಡೋ ಗಯಾಸ್ಥೋ ದತ್ತೋ ನ ಮಮ''** ಇತಿ ತ್ಯಕ್ತ್ವಾ॥ ವಿಕಿರಂ ಪ್ರಕಿರಂ ಚಾದಾಯ ಕಾಕೇಭ್ಯೋ ದತ್ವಾ ಹಸ್ತೌ ಪಾದೌ ಪ್ರಕ್ಷಾಲ್ಯ ಪವಿತ್ರಂ ತ್ಯಕ್ತ್ವಾ ದ್ವಿರಾಚಾಮೇತ್॥

## ಸ್ವಸ್ತ್ಯಕ್ಷಯ್ಯವಾಚನಾದಿ

**''ಪವಿತ್ರವಂತಃ ಪರಿ ವಾಚಮಾಸತೇ ಪಿತೈಷಾಂ ಪ್ರತ್ನೋ ಅಭಿ ರಕ್ಷತಿ ವ್ರತಮ್। ಮಹಃ ಸಮುದ್ರಂ ವರುಣಸ್ತಿರೋ ದಧೇ ಧೀರಾ ಇಚ್ಛೇಕುರ್ಧರುಣೇಷ್ವಾರಭಮ್''** ಇತಿ ಪವಿತ್ರಂ ಧೃತ್ವಾ॥ [258]ದೇವಹಸ್ತೇ ಅಪೋ ದರ್ಭಾಂಶ್ಚ ದದ್ಯಾತ್ **''ಶಿವಾ ಆಪಃ ಸಂತು''** ಇತಿ {''ಸಂತು ಶಿವಾ ಆಪಃ''ಪ್ರ+}। ಗಂಧಪುಷ್ಪಾಣಿ ದದ್ಯಾತ್ **''ಸೌಮನಸ್ಯಮಸ್ತು''** ಇತಿ {''ಅಸ್ತು ಸೌಮನಸ್ಯಮ್''ಪ್ರ+}>। ಯವಾನ್ ದದ್ಯಾತ್ **''ಯವಾಃ ಪಾಂತು''** ಇತಿ {''ಪಾಂತು ಯವಾಃ''ಪ್ರ+}॥ ಪುನರಪೋ ದತ್ವಾ ಪ್ರಾರ್ಥಯೇತ್ **''ದೀರ್ಘಮಾಯುಃ ಶ್ರೇಯಃ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತ್ವಿತಿ ಭವಂತೋ ಬ್ರುವಂತು''** {''ದೀರ್ಘಮಾಯುಃ ಶ್ರೇಯಃ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು''ಪ್ರ+}॥

ಅಪಸವ್ಯಮ್॥ ಪಿತೃದ್ವಿಜಕರೇ ಅಪೋ ದರ್ಭಾಂಶ್ಚ ದದ್ಯಾತ್ **''ಶಿವಾ ಆಪಃ ಸಂತು''** ಇತಿ {''ಸಂತು ಶಿವಾ ಆಪಃ''ಪ್ರ+}। ಗಂಧಪುಷ್ಪಾಣಿ ದದ್ಯಾತ್ **''ಸೌಮನಸ್ಯಮಸ್ತು''** ಇತಿ {''ಅಸ್ತು

---

ಅಪಸವ್ಯದಿಂದ ಪಿತ್ರ್ಯೋಚ್ಛಿಷ್ಟದಮುಂಭಾಗದಲ್ಲಿ ದರ್ಭೆಗಳನ್ನು ಹಾಕಿ **'ಅಸಂಸ್ಕೃತ...'** ಎಂದು ತಿಲೋದಕ ಮತ್ತು ವಿಕಿರವನ್ನರ್ಪಿಸಿ **'ಕುಮಾರ... ನ ಮಮ'** ಎಂದು ತ್ಯಾಗವನ್ನು ಹೇಳಬೇಕು.

ಬಳಿಕ ವಿಕಿರದ ಬಳಿ ದಕ್ಷಿಣಾಗ್ರದರ್ಭೆಗಳನ್ನು ಹಾಕಿ **'ಯೇ ಅಗ್ನಿದಗ್ಧಾಃ..'** ಎಂದು ಉಚ್ಛಿಷ್ಟಪಿಂಡವನ್ನು ಅಥವ ಅನ್ನವನ್ನು ಕೊಟ್ಟು ಅದರ ಮೇಲೆ ತಿಲೋದಕವನ್ನು ಕೊಟ್ಟು **'ಅಗ್ನಿದಗ್ಧೇಭ್ಯಃ.. ನ ಮಮ'** ಎಂದು ತ್ಯಾಗವನ್ನು ಮಾಡಬೇಕು. ವಿಕಿರಪ್ರಕಿರಗಳನ್ನು ಕಾಗೆಗಿಟ್ಟು ಕೈಕಾಲು ತೊಳೆದು ಪವಿತ್ರವನ್ನು ವಿಸರ್ಜಿಸಿ ಎರಡು ಆಚಮನ ಮಾಡಬೇಕು.

ಸೌಮನಸ್ಯಮ್''}॥ ತಿಲಾನ್‌ದದ್ಯಾತ್ ''**ತಿಲಾಃ ಪಾಂತು**'' ಇತಿ {''ಪಾಂತು ತಿಲಾಃ''ಪ್ರ+}॥ ಪುನರಪೋ ದತ್ವಾ ಪ್ರಾರ್ಥಯೇತ್ ''**ದೀರ್ಘಮಾಯುಃ ಶ್ರೇಯಃ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತ್ವಿತಿ ಭವಂತೋ ಬ್ರುವಂತು**'' ಇತಿ {''ದೀರ್ಘಮಾಯುಃ ಶ್ರೇಯಃ ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು''ಪ್ರ+}॥ ವಿಪ್ರಾಃ ದತ್ತಯವತಿಲಾದೀನ್‌ಶುಚೌ ದೇಶೇ ಪ್ರಕ್ಷಿಪೇಯುಃ॥

ಸವ್ಯಮ್। ಕರ್ತಾ ಬ್ರಾಹ್ಮಣಾನಭಿವಾದ್ಯ ''**ಅಸ್ಮದ್ಗೋತ್ರಂ ವರ್ಧತಾಮ್**'' ಇತಿ ಗೋತ್ರವೃದ್ಧಿಂ ಯಾಚೇತ {''ಯುಷ್ಮದ್ಗೋತ್ರಾಭಿವೃದ್ಧಿರಸ್ತು'' ಪ್ರ}॥ ''**ಪಿಂಡಾನಾಮರ್ಚನವಿಧೇಃ ಸ್ವರ್ಚಿತಮಸ್ತು**''। [261]ಸ್ವಯಂ ಶಿಷ್ಯಾದಿನಾ ವಿಪ್ರೋಚ್ಛಿಷ್ಟಪಾತ್ರಾಣಿ ಚಾಲಯೇತ್।

ತತಃ ದೇವವಿಪ್ರಹಸ್ತಯೋರ್ಹಸ್ತೇನೈವ ಯವೋದಕಂ ದತ್ವಾ ''**ಪುರೂರವಾರ್ದ್ರವಸಂಜ್ಞಕೇಭ್ಯೋ ವಿಶ್ವೇಭ್ಯೋ ದೇವೇಭ್ಯಃ ಸ್ವಸ್ತೀತಿ ಬ್ರೂತ**'' ಇತಿ ಬ್ರೂಯಾತ್ {''**ಪುರೂರವಾರ್ದ್ರವಸಂಜ್ಞಕೇಭ್ಯೋ ವಿಶ್ವೇಭ್ಯೋ ದೇವೇಭ್ಯಃ ಸ್ವಸ್ತಿ**''ಪ್ರ+}॥ ಅಪಸವ್ಯಮ್। ಪಿತ್ರ್ಯವಿಪ್ರ ಹಸ್ತಯೋರ್ಹಸ್ತೇನೈವ ತಿಲೋದಕಂ ದತ್ವಾ ''**ಪಿತೃಪಿತಾಮಹಪ್ರಪಿತಾಮಹೇಭ್ಯಃ..ಶರ್ಮಭ್ಯಃ..ಗೋತ್ರೇಭ್ಯಃವಸುರುದ್ರಾದಿತ್ಯಸ್ವರೂಪೇಭ್ಯಃ ಸ್ವಸ್ತೀತಿ ಬ್ರೂತ**'' ಇತಿ ಬ್ರೂಯಾತ್ {''ಪಿತೃಪಿತಾಮಹ...ಸ್ವರೂಪೇಭ್ಯಃ ಸ್ವಸ್ತಿ''ಪ್ರ+}

---

**ಸ್ವಸ್ತ್ಯಕ್ಷಯ್ಯವಾಚನಾದಿಕರ್ಮ**;ಎರಡು ಸಲ ಆಚಮನ ಮಾಡಿ '**ಪವಿತ್ರವಂತಃ..**' ಎಂಬ ಮಂತ್ರ ಹೇಳಿ ಪವಿತ್ರವನ್ನು ಧರಿಸಿ ದೇವ ಬ್ರಾಹ್ಮಣರ ಕೈಗೆ '**ಶಿವಾ ಆಪಃ ಸಂತು**' ಇತ್ಯಾದ್ಯುಚ್ಚರಿಸುತ್ತ ನೀರು, ಹೂ, ಅಕ್ಷತೆಗಳನ್ನು ಕೊಟ್ಟು '**ದೀರ್ಘಮಾಯುಃ..**' ಎಂದು ಕೇಳಿಕೊಳ್ಳಬೇಕು. ಆಗ ದೇವಬ್ರಾಹ್ಮಣರು 'ಸಂತು ಶಿವಾ ಆಪಃ 'ಇತ್ಯಾದಿ ಯಥೋಕ್ತ ಪ್ರತಿವಚನವನ್ನೀಯಬೇಕು. ಹಾಗೆಯೇ ಅಪಸವ್ಯದಿಂದ ಪಿತೃಬ್ರಾಹ್ಮಣರಿಗೂ ನೀರು, ಹೂ ಮತ್ತು ತಿಲಗಳನ್ನು ಕೊಟ್ಟು ಕೇಳಿಕೊಳ್ಳಬೇಕು. ಬ್ರಾಹ್ಮಣರು ಯಥೋಕ್ತ ಪ್ರತಿವಚನವನ್ನೀಯಬೇಕು. ಬಳಿಕ ಬ್ರಾಹ್ಮಣರು ಕೈಯ್ಯಲ್ಲಿರುವ ಅಕ್ಷತೆ,ತಿಲ,ದರ್ಭಾದಿಗಳನ್ನು ಕೆಳಗೆ ಹಾಕಬೇಕು.

ನಂತರ ಕರ್ತೃವು ಬ್ರಾಹ್ಮಣರನ್ನು ನಮಸ್ಕರಿಸಿ '**ಅಸ್ಮದ್ಗೋತ್ರಮಭಿವರ್ಧತಾಮ್**' ಎಂದು ಗೋತ್ರ ವೃದ್ಧಿಯನ್ನು ಯಾಚಿಸಬೇಕು ಆಗ ಬ್ರಾಹ್ಮಣರು 'ಯುಷ್ಮದ್ಗೋತ್ರ..' ಪ್ರತಿವಚನವನ್ನು ಹೇಳಬೇಕು. ಬಳಿಕ ಕರ್ತೃವು ಉಚ್ಛಿಷ್ಟಪಾತ್ರೆಗಳನ್ನು ಜರುಗಿಸಬೇಕು. ಆನಂತರ ಕೈತೊಳೆದು ತನ್ನ ಕೈಯ್ಯಲ್ಲಿ ಯವೋದಕವನ್ನುತೆಗೆದುಕೊಂಡು ದೇವಬ್ರಾಹ್ಮಣರ ಕೈಗಳೆರಡರಲ್ಲೂ ಕೊಟ್ಟು '**ಪುರೂರವಾ....ಸ್ವಸ್ತೀತಿ ಬ್ರೂತ**' ಎಂದು ಪ್ರಾರ್ಥಿಸಬೇಕು ಆಗ ದೇವಬ್ರಾಹ್ಮಣನು 'ಪುರೂರವಾ..ಸ್ವಸ್ತಿ' ಎಂದು ಹೇಳಬೇಕು. ಹಾಗೆಯೇ ಅಪಸವ್ಯದಿಂದ ಪಿತ್ರ್ಯ ಬ್ರಾಹ್ಮಣರ ಕೈಗಳಿಗೆ ತಿಲೋದಕವನ್ನಿತ್ತು '**ಪಿತೃಪಿತಾ..ಸ್ವಸ್ತೀತಿ ಬ್ರೂತ**'

ಸವ್ಯಮ್॥ ದೇವವಿಪ್ರಹಸ್ತೇ ಯವೋದಕಂ ಹಸ್ತೇನೈವ ದತ್ವಾ **''ಪುರೂರವಾರ್ದ್ರವಸಂಜ್ಞಾನಾಂ ವಿಶ್ವೇಷಾಂ ದೇವಾನಾಂ ಯದ್ದತ್ತಂ ಪ್ರತಿ ಸಾಂವತ್ಸ-ರಿಕಶ್ರಾದ್ಧೀಯಮನ್ನಮುದಕಾದಿತದಕ್ಷಯ್ಯಮಸ್ತ್ವಿತಿ ಭವಂತೋ ಬ್ರುವಂತು''** ಇತಿ ಪ್ರಾರ್ಥಯೇತ್ {''ಅಸ್ತ್ವಕ್ಷಯ್ಯಂ ಪ್ರತಿಸಾಂವತ್ಸರಿಕಶ್ರಾದ್ಧೀಯವಾನ್ನಮುದಕಾದಿ''}॥ ಅಪಸವ್ಯಮ್। ಪಿತ್ರ್ಯವಿಪ್ರಹಸ್ತೇ ತಿಲೋದಕಂ ಹಸ್ತೇನೈವ ದತ್ವಾ **''ಪಿತೃಪಿತಾಮಹಪ್ರಪಿತಾಮಹಾನಾಂ ..ಶರ್ಮಣಾಂ ..ಗೋತ್ರಾಣಾಂ..ರೂಪಾಣಾಂ ಯದ್ದತ್ತಂ ಪ್ರತಿಸಾಂವತ್ಸರಿಕಶ್ರಾದ್ಧೀಯಮನ್ನ- ಮುದಕಾದಿತದಕ್ಷಯ್ಯಮಸ್ತ್ವಿತಿ ಭವಂತೋ ಬ್ರುವಂತು''** ಇತಿ ಪ್ರಾರ್ಥಯೇತ್ {''ಅಸ್ತ್ವಕ್ಷಯ್ಯಂ ಪ್ರತಿಸಾಂವತ್ಸರಿಕಶ್ರಾದ್ಧೀಯಮನ್ನಮುದಕಾದಿ''ಪ್ರ+}॥ ತತ ಆಸಾದಿತಮರ್ಘ್ಯಪಾತ್ರಂ (ಪ್ರಣೀತಾಪಾತ್ರಂ) ಕಿಂಚಿಚ್ಚಾಲಯೇತ್। ನ್ಯುಬ್ಜೀಕೃತಂಚೇತ್ತದುತ್ತಾನಂ ಕುರ್ಯಾತ್।

## [262]ದಕ್ಷಿಣಾತಾಂಬೂಲಾದಿದಾನಂ ಸ್ವಧಾವಾಚನಮ್

ತತಃ ಬ್ರಾಹ್ಮಣೇಭ್ಯಃ ದಕ್ಷಿಣಾತಾಂಬೂಲಾದಿ ದದ್ಯಾತ್ [ದೇವಾನಾಂ ಸುವರ್ಣಮ್॥ ಪಿತೃಣಾಂ ರಜತಮ್।] [263]ಸವ್ಯಮ್। **''ಅಸ್ಮತ್ಪಿತೃಪಿತಾಮಹಪ್ರಪಿತಾಮಹಸ್ಥಾನೇ ಉಪವಿಷ್ಟಾಯ ಬ್ರಾಹ್ಮಣಾಯೇದಂ ರಜತಂ ದಕ್ಷಿಣಾತ್ವೇನ ತುಭ್ಯಮಹಂ ಸಂಪ್ರದದೇ''** ಇತಿ ದಕ್ಷಿಣಾಂ ದದ್ಯಾತ್। **''ಪುರೂರವಾರ್ದ್ರವಸಂಜ್ಞಕವಿಶ್ವದೇವಸ್ಥಾನೇ ಉಪವಿಷ್ಟಾಯ ಬ್ರಾಹ್ಮಣಾಯೇದಂ ಸುವರ್ಣಂ ದಕ್ಷಿಣಾತ್ವೇನ ತುಭ್ಯಮಹಂ ಸಂಪ್ರದದೇ''** ಇತಿ ದಕ್ಷಿಣಾಂ ದದ್ಯಾತ್। ತತಃ ಸರ್ವಾನ್ಪ್ರಾರ್ಥಯೇತ್

---

ಎಂದು ಕೇಳಿಕೊಂಡಾದ ಪಿತ್ರ್ಯಬ್ರಾಹ್ಮಣರು 'ಪಿತೃಪಿತಾ..ಸ್ವಸ್ತಿ' ಎನ್ನಬೇಕು ಹೀಗೆ ಸ್ವಸ್ತ್ಯುದಕವನ್ನಿತ್ತು ಅಕ್ಷಯ್ಯವಾಚನವನ್ನು ಮಾಡಬೇಕು ದೇವಬ್ರಾಹ್ಮಣರಿಗೆ ಕೈಯ್ಯಿಂದ ಯವೋದಕವನ್ನಿತ್ತು **'ಪುರೂರವಾ..ಅಕ್ಷಯ್ಯ..ಬ್ರುವಂತು'** ಎಂದು, ಪಿತ್ರ್ಯಬ್ರಾಹ್ಮಣನ ಕೈಗೆ ಕೈಯ್ಯಿಂದ ತಿಲೋದಕವನ್ನಿತ್ತು **'ಪಿತೃಪಿತಾಮಹ..ಅಕ್ಷಯ್ಯ..ಬ್ರುವಂತು'** ಎಂದಾಗ ಅವರು ಪ್ರತ್ಯೇಕವಾಗಿ 'ಅಕ್ಷಯ್ಯಂ..ಮುದಕಾದಿ' ಎಂದು ಉತ್ತರಿಸಬೇಕು. ಆನಂತರ ದೇವ ಮತ್ತು ಪಿತ್ರ್ಯಾರ್ಘ್ಯಪಾತ್ರೆಗಳನ್ನು ಜರುಗಿಸಬೇಕು ನ್ಯುಬ್ಜವಾಗಿದ್ದರೆ ಮೇಲ್ಮುಖವಾಗಿಸಬೇಕು.

**ದಕ್ಷಿಣಾತಾಂಬೂಲಾದಿದಾನಮತ್ತು ಸ್ವಸ್ತಿವಾಚನ;** ದೇವಬ್ರಾಹ್ಮಣರಿಗೆ ಸುವರ್ಣವನ್ನೂ ಪಿತೃಬ್ರಾಹ್ಮಣರಿಗೆ ಬೆಳ್ಳಿಯನ್ನೂ ದಕ್ಷಿಣೆಯಾಗಿ ಕೊಡಬೇಕು. ಸವ್ಯದಿಂದ **'ಅಸ್ಮತ್ಪಿತೃ..ಸ್ಥಾನೇ..ಸಂಪ್ರದದೇ'** ಎಂದು ಪಿತ್ರ್ಯಬ್ರಾಹ್ಮಣನಿಗೂ, **'ಪುರೂರ..ಸ್ಥಾನೇ..ಸಂಪ್ರದದೇ'** ಎಂದು ದೇವಬ್ರಾಹ್ಮಣನಿಗೂ ಪಿತೃಪೂರ್ವವಾಗಿ ದಕ್ಷಿಣೆಯನ್ನು ಕೊಟ್ಟು **'ಶ್ರಾದ್ಧಭೋಕ್ತೃ..ಪಾಂತು'** ಎಂದು ಪ್ರಾರ್ಥಿಸುವುದು ಆಗ ವಿಪ್ರರು 'ಪಾಂತು

''**ಶ್ರಾದ್ಧಭೋಕ್ತೃಭ್ಯೋ ಬ್ರಾಹ್ಮಣೇಭ್ಯಃ ದಕ್ಷಿಣಾಃ ಪಾಂತು**'' ಇತಿ {''ಪಾಂತು ದಕ್ಷಿಣಾಃ''ಪ್ರ+}॥ ತತಃ [264]ಸತಿ ವಿಭವೇ ನಾನಾಲಂಕಾರಾದಿ ದದ್ಯಾತ್।

ತತಃ ಕರ್ತಾ ಬ್ರಾಹ್ಮಣಾನ್ಪೃಚ್ಛೇತ್ [265]''**ಸ್ವಧಾಂ ವಾಚಯಿಷ್ಯೇ**'' ಇತಿ {''ವಾಚ್ಯತಾಮ್''ಪ್ರ+}॥ ಅಪಸವ್ಯಮ್॥ ''**ಪಿತರಃ ಸ್ವಧೋಚ್ಯತಾಮ್। ಪಿತಾಮಹಾಃ ಸ್ವಧೋಚ್ಯತಾಮ್। ಪ್ರಪಿತಾಮಹಾಃ ಸ್ವಧೋಚ್ಯತಾಮ್**'' ಇತಿ ಕರ್ತಾ ಬ್ರೂಯಾತ್ {''ಅಸ್ತು ಸ್ವಧಾಪ್ರ+''}।

## [268]ಶೇಷಾರ್ಘ್ಯವಿಸರ್ಜನಾದಿ

ತತಃ ಕರ್ತಾ **ಪಿತ್ರ್ಯರ್ಘ್ಯಪಾತ್ರಮಾದಯ ತತ್ರಸ್ಥಂ ಜಲಂ** ಪಿಂಡಾನಾಂ ಪುರತೋ ನಿನಯೇತ್। ತತ ಆಚಾರಾತ್ ಪಿಂಡೋಪರಿ ತಿಲೋದಕಂ ದತ್ವಾ ''**ಸ್ವಧಾ ಸಂಪದ್ಯತಾಮಿತಿ ಭವಂತೋ ಬ್ರುವಂತು**'' ಇತಿ ಬ್ರೂಯಾತ್ {''ಸಂಪದ್ಯನ್‌ತಾಂ ಸ್ವಧಾ''ಪ್ರ+}॥ ಸವ್ಯಮ್॥ ''**(ಅಗ್ನಿಪುರೋಗಾಃ) ವಿಶ್ವೇದೇವಾಃ ಪ್ರೀಯಂತಾಮಿತಿ ಭವಂತೋ ಬ್ರುವಂತು**'' ಇತಿ ದೇವಬ್ರಾಹ್ಮಣಾನ್ಪ್ರಾರ್ಥಯೇತ್ {''ಪ್ರೀಯಂತಾಂ ವಿಶ್ವೇದೇವಾಃ''ಪ್ರ+}॥ ಅಪಸವ್ಯಮ್। ''**(ವಸುಪುರೋಗಾಃ) ಪಿತರಃ ಪ್ರೀಯಂತಾಮಿತಿ ಭವಂತೋ ಬ್ರುವಂತು**'' ಇತಿ ಪಿತ್ರ್ಯಬ್ರಾಹ್ಮಣಾನ್ಪ್ರಾರ್ಥಯೇತ್ {''ಪ್ರೀಯಂತಾಂ ಪಿತರಃ''}॥ ಸವ್ಯಮ್। ''**ಸಂಕಲ್ಪಸಿದ್ಧಿರಸ್ತ್ವಿತಿ ಭವಂತೋ ಬ್ರುವಂತು**'' ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್ {''ಅಸ್ತು ಸಂಕಲ್ಪಸಿದ್ಧಿಃ''}। [269]''ಶಾಕಪಾಕಾಃ ಪಿತೃಪ್ರಿಯಾಃ ಉತ್ತಮೋತ್ತಮಾಃ'' ಇತಿ ಬ್ರಾಹ್ಮಣಾ ವದೇಯುಃ॥

---

ದಕ್ಷಿಣಾಃ' ಎಂದು ಪ್ರತಿವಚನವನ್ನೀಯಬೇಕು ಹಾಗೆಯೆ ಕರ್ತೃವು ತನ್ನಶಕ್ತ್ಯನುಸಾರ ಕೊಡೆ,ಪಾದುಕೆ ಇತ್ಯಾದಿ ಉಪಚಾರದ್ರವ್ಯವನ್ನೀಯಬೇಕು.

ಬಳಿಕ '**ಸ್ವಧಾಂ ವಾಚಯಿಷ್ಯೇ**' ಎಂದು ಬ್ರಾಹ್ಮಣರ ಅನುಮತಿ ಕೇಳುವುದು ಅವರು 'ವಾಚ್ಯತಾಮ್' ಎಂದು ಅನುಮತಿಯನ್ನಿತ್ತ ಬಳಿಕ ಅಪಸವ್ಯದಿಂದ '**ಪಿತರಃ ಸ್ವಧೋಚ್ಯತಾಂ..**' ಇತ್ಯಾದಿ ಹೇಳಬೇಕು, ಬ್ರಾಹ್ಮಣರು ಆಗ 'ಅಸ್ತು ಸ್ವಧಾ' ಎಂಬ ಪ್ರತಿವಚನವನ್ನೀಯಬೇಕು.

**ಶೇಷಾರ್ಘ್ಯವಿಸರ್ಜನ ಇತ್ಯಾದಿ;** ಅರ್ಘ್ಯಪಾತ್ರೆಯನ್ನು ಮೇಲ್ಮುಖವಾಗಿರಿಸಿದ ಪಕ್ಷದಲ್ಲಿ ಅದರಲ್ಲಿದ್ದ ಅರ್ಘ್ಯಶೇಷೋದಕವನ್ನು ಪಿಂಡಗಳ ಮುಂಬಾಗದಲ್ಲಿ ಚೆಲ್ಲುವುದು. ಆನಂತರ ಆಚಾರದಂತೆ ಪಿಂಡಗಳ ಮೇಲೆ ತಿಲೋದಕವನ್ನು ಕೊಟ್ಟು '**ಸ್ವಧಾ ಸಂಪದ್ಯತಾಮಿತಿ..**' ಬ್ರಾಹ್ಮಣರಲ್ಲಿ ಕೇಳಿಕೊಳ್ಳುವುದು ಬ್ರಾಹ್ಮಣರು 'ಸಂಪದ್ಯತಾಂ ಸ್ವಧಾ' ಎಂಬ ಪ್ರತಿವಚನವನ್ನೀಯುವುದು. ಆನಂತರ ಸವ್ಯದಿಂದ ದೇವಬ್ರಾಹ್ಮಣರಲ್ಲಿ '**ಅಗ್ನಿಪುರೋಗಾಃ..**' ಎಂದೂ ಅಪಸವ್ಯದಿಂದ ಪಿತೃಬ್ರಾಹ್ಮಣರ ಬಳಿ '**ವಸುಪುರೋಗಾಃ..**' ಎಂದೂ ಕೇಳಿಕೊಳ್ಳಬೇಕು ಆಗ ಬ್ರಾಹ್ಮಣರು ಕ್ರಮವಾಗಿ 'ಪ್ರೀಯಂತಾಂ

ಆತ್ಮಾಲಂಕಾರಃ। ಕರ್ತಾ ಸ್ವಮಸ್ತಕೇ ಚಂದನಾದಿನಾ ತಿರ್ಯಕ್ತಿಲಕಂ ಧೃತ್ವಾ॥ ಅಪಸವ್ಯಮ್। ಪಿಂಡಾನ್ನಮಸ್ಕೃತ್ಯ [270]**''ಗೋತ್ರಾಶಿಷಃ ಪ್ರಾರ್ಥಯತೇ''** {''ಪ್ರಾರ್ಥಯ''ಪ್ರ+}॥ **''ಅಘೋರಾಃ ಪಿತರಃ ಸಂತು''** {''ಸನ್ತ್ವಘೋರಾಃ ಪಿತರಃ''ಪ್ರ+}। ಸವ್ಯಮ್। **''ಗೋತ್ರಂ ವರ್ಧತಾಮ್''** {''ವರ್ಧತಾಂ ಗೋತ್ರಮ್''ಪ್ರ+}। [271]**''ದೇವತಾಭ್ಯಃ+ನಮೋ ನಮಃ''** ಇತಿ ತ್ರಿರ್ಜಪಿತ್ವಾ॥ ಬ್ರಾಹ್ಮಣಾನ್[272]ಪಾದಾಭ್ಯಂಗಾದಿಭಿಃ ಪ್ರಿಯೋಕ್ತಿಭಿಶ್ಚ ಪರಿತೋಷ್ಯ **''ಅದ್ಯ ಸೂರ್ಯಪರ್ವಸದೃಶೀ ತಿಥಿಃ ವ್ಯಾಸವಸಿಷ್ಠವಾಮದೇವಸದೃಶಾಃ ಬ್ರಾಹ್ಮಣಾಃ॥ ಮಯಾ ಯತ್ಕೃತಂ ಪ್ರತಿಸಾಂವತ್ಸರಿಕಶ್ರಾದ್ಧಂ ತನ್ಮಧ್ಯೇ ಆಸನಭೋಜನಮಂತ್ರತಂತ್ರದ್ರವ್ಯದಕ್ಷಿಣಾಸ ಽ ನ್ಯೂನಂ, ಬ್ರಾಹ್ಮಣವಚನಾತ್ಸರ್ವಂ ಸಂಪೂರ್ಣಮಸ್ತ್ವಿತಿ ಭವಂತೋ ಬ್ರುವಂತು''**{''ಸರ್ವಂ ಸಂಪೂರ್ಣಮಸ್ತು''ಪ್ರ+} ಇತಿ [273]ಕರ್ಮಸಂಪೂರ್ಣತಾಂ ವಾಚಯಿತ್ವಾ ಬ್ರಾಹ್ಮಣಾನ್ ಪಿತೃಪೂರ್ವಂ ವಿಸೃಜೇತ್॥

## [274]ವಿಪ್ರವಿಸರ್ಜನಾದಿಕರ್ಮ

ಕರ್ತಾ **''ವಾಜೇವಾಜೇಽವತ ವಾಜಿನೋ ನೋ ಧನೇಷು ವಿಪ್ರಾ ಅಮೃತಾ ಋತಜ್ಞಾಃ। ಅಸ್ಯ ಮಧ್ವಃ ಪಿಬತ ಮಾದಯಧ್ವಂ ತೃಪ್ತಾ ಯಾತ ಪಥಿಭಿರ್ದೇವಯಾನೈಃ''** ಇತಿ ಜಪಿತ್ವಾ। **''ಉತ್ತಿಷ್ಠತ ಪಿತರಃ ವಿಶ್ವೇದೇವೈಃ ಸಹ''** ಇತಿ ಬ್ರಾಹ್ಮಣಾನ್ ಸಂಪ್ರಾರ್ಥ್ಯ। ದರ್ಭಾಗ್ರೈಃ ಪಿತ್ರ್ಯ ಬ್ರಾಹ್ಮಣಸವ್ಯಮಂಸಂ ಸ್ಪೃಶನ್[277]**''ಓಮ್ ಸ್ವಧೋಚ್ಯತಾಮ್('ಅಸ್ತು ಸ್ವಧಾ' ಇತಿ ವಾ)''** ಇತ್ಯುಕ್ತ್ವೋತ್ಥಾಪಯೇತ್। {''ಓಮ್ ಸ್ವಧಾ''('ಅಸ್ತು ಸ್ವಧಾ' ಪ್ರ+ ಇತಿ ವಾ)}''॥ ತತಃ

---

ವಿಶ್ವೇದೇವಾಃ, ಪ್ರೀಯಂತಾಂ ಪಿತರಃ' ಎಂದು ಪ್ರತಿವಚನವನ್ನೀಯಬೇಕು ಆನಂತರ **'ಸಂಕಲ್ಪಸಿದ್ಧಿ..'** ಎಂದು ಪ್ರಾರ್ಥಿಸುವುದು. 'ಅಸ್ತು ಸಂಕಲ್ಪಸಿದ್ಧಿಃ' ಎಂಬ ಪ್ರತಿವಚನ. ಆನಂತರ ಬ್ರಾಹ್ಮಣರು 'ಶಾಕಪಾಕಾಃ..' ಎಂದು ಅನ್ನಸ್ತುತಿಯನ್ನು ಮಾಡಬೇಕು. ಬಳಿಕ ತಾನು ತಿಲಕವಿಟ್ಟು ಅಲಂಕರಿಸಿ ಪಿಂಡಗಳಿಗೆ ನಮಸ್ಕಾರಮಾಡಿ ಆಶೀಃ ಪ್ರಾರ್ಥಿಸಬೇಕು. ಕರ್ತೃವು **'ಗೋತ್ರಾಶಿಷಃ ಪ್ರಾರ್ಥಯತೇ'** ಎಂದಾಗ 'ಪ್ರಾರ್ಥಯ' ಎಂಬ ಪ್ರತಿವಚನ. ಅಘೋರಾಃ ಪಿತರಃ ಸಂತು ಎಂದಾಗ ಸಂತ್ವಘೋರಾಃ ಪಿತರಃ ಎಂಬ ಪ್ರತಿವಚನ. **'ಗೋತ್ರಂ ವರ್ಧತಾಮ್'** ಎಂದಾಗ 'ವರ್ಧತಾಂ ಗೋತ್ರಮ್' ಎಂಬ ಪ್ರತಿವಚನ. ಆನಂತರ ಕರ್ತೃವು **'ದೇವತಾಭ್ಯಃ..'** ಎಂದು ಮೂರು ಬಾರಿ ಜಪಿಸಬೇಕು. ಬಳಿಕ ಬ್ರಾಹ್ಮಣರ ಪಾದಸೇವೆಯನ್ನು ಮಾಡಿ ಪ್ರಿಯವಾಕ್ಯಗಳಿಂದ ಅವರನ್ನು ಸಂತುಷ್ಟಿಗೊಳಿಸಿ ಅದ್ಯ **'ಸೂರ್ಯಪರ್ವಸದೃಶೀ..ಬ್ರುವಂತು'** ಎಂದು ಪ್ರಾರ್ಥಿಸಬೇಕು ಆಗ ಬ್ರಾಹ್ಮಣರು **'ಸರ್ವಂ ಸಂಪೂರ್ಣಮಸ್ತು'** ಎಂದು ಪ್ರತಿವಚನವನ್ನೀಯಬೇಕು. ಆನಂತರ ಬ್ರಾಹ್ಮಣರನ್ನು ವಿಸರ್ಜಿಸಬೇಕು.

ದರ್ಭಾಗ್ರೈಃ ದೇವಬ್ರಾಹ್ಮಣದಕ್ಷಿಣಮಂಸಂ ಸ್ಪೃಶನ್ [278]**''ವಿಶ್ವೇದೇವಾಃ ಪ್ರೀಯಂತಾಮ್''** ಇತ್ಯುಕ್ತ್ವೋತ್ಥಾಪಯೇತ್। {''ಪ್ರೀಯಂತಾಂ ವಿಶ್ವೇದೇವಾಃ''ಪ್ರ+}॥

ತತಃ ಕರ್ತಾ **''ಪಿಂಡೋದ್ಧಾರಣಂ ಕರಿಷ್ಯೇ''** ಇತಿ ಬ್ರಾಹ್ಮಣಾನ್ಸಂಪ್ರಾರ್ಥ್ಯ {''ಉದ್ಧಾರಯ''ಪ್ರ+}। ಸ್ವಸ್ಥಾನೇ ಉಪವಿಶ್ಯ **''ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ। ದಿವೀವ ಚಕ್ಷುರಾತತಮ್॥ ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ। ವಿಷ್ಣೋರ್ಯತ್ಪರಮಂ ಪದಮ್॥ ಯತ್ರ ತತ್ಪರಮಂ ಪದಂ ವಿಷ್ಣೋರ್ಲೋಕೇ ಮಹೀಯತೇ। ದೇವೈಸ್ತತ್ಸುಕೃತಕರ್ಮಭಿಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿಸ್ರವ॥ ಯತ್ರ ಗಂಗಾ ಚ ಯಮುನಾ ಚ ಯತ್ರ ಪ್ರಾಚೀ ಸರಸ್ವತೀ। ಯತ್ರ ಸೋಮೇಶ್ವರೋ ದೇವಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿಸ್ರವ॥ ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ। ಪುರೀ ದ್ವಾರವತೀ ಚೈವ ಸಪ್ತೈತಾ ಮೋಕ್ಷದಾಯಕಾಃ''** ಇತಿ ಯಥಾಚಾರಂ ಜಪಿತ್ವಾ ಪಿಂಡಾನಾದಾಯ ಪಾತ್ರಾಂತರೇ ನಿಧಾಯ॥ [279]ಪಿಂಡನಿಪರಣದೇಶಂ ಗೋಮಯಾದಿನಾ ಸಮ್ಮೃಜ್ಯಾಕ್ಷತಾನ್ಪ್ರಾಸ್ಯ **''(ಪಿಂಡಸ್ಥಾನೇ) ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು''** ಇತ್ಯುದಕಧಾರಾಂ ಕುರ್ಯಾತ್। ತತಃ **'ಸ್ವಸ್ಥಾನೇ ವಾಸಃ'** ಪಿಂಡಾನ್ಸಪಾತ್ರಾನ್ಸ್ವಸ್ಥಾನೇ ಸ್ಥಾಪಯೇದಿತ್ಯಾಚಾರಃ॥ ತತಃ ಯಥಾಚಾರಂ ಯವತಿಲೋದಕಾದಿಪಾತ್ರಸ್ಥಕೂರ್ಚಂ ವಿಸೃಜೇತ್॥

---

**'ವಾಜೇವಾಜೇ..'** ಎಂಬ ಮಂತ್ರವನ್ನು ಹೇಳಿ **'ಉತ್ತಿಷ್ಠತ ಪಿತರಃ ವಿಶ್ವದೇವೈಃ ಸಹ'** ಎಂದು ಪ್ರಾರ್ಥಿಸಿ, ದರ್ಭೆಗಳತುದಿಯಿಂದ ಪಿತ್ರ್ಯಬ್ರಾಹ್ಮಣನ ಎಡಭುಜವನ್ನು ಮುಟ್ಟಿಕೊಂಡು **'ಓಮ್ ಸ್ವಧೋಚ್ಯತಾಮ್'** ಎಂದು ಹೇಳಿ ಎಬ್ಬಿಸುವುದು. ಆಗ ಆ ವಿಪ್ರನು 'ಅಸ್ತು ಸ್ವಧಾ' ಎಂದು ಪ್ರತಿವಚನವನ್ನಿತ್ತು ಎದ್ದು ನಿಲ್ಲಬೇಕು. ಬಳಿಕ ದರ್ಭಾಗ್ರದಿಂದ ದೇವಬ್ರಾಹ್ಮಣರ ಬಲಭುಜವನ್ನು ಮುಟ್ಟಿ **'ವಿಶ್ವೇದೇವಾಃ ಪ್ರೀಯಂತಾಂ'** ಎಂದು ಎಬ್ಬಿಸುವುದು. ಆಗ ದೇವಬ್ರಾಹ್ಮಣನು **'ಪ್ರೀಯಂತಾಂ ವಿಶ್ವೇದೇವಾಃ'** ಎಂದು ಪ್ರತಿವಚನವಿತ್ತು ಎದ್ದು ನಿಲ್ಲಬೇಕು. ಆನಂತರ ಬ್ರಾಹ್ಮಣರಲ್ಲಿ **'ಪಿಂಡೋದ್ಧಾರಣಂ ಕರಿಷ್ಯೇ'** ಎಂದು ಅನುಜ್ಞಾಪಿಸಿ ಉದ್ಧಾರಯ ಎಂಬ ಪ್ರತಿವಚನ ಪಡೆದು ಪಿಂಡಗಳಬಳಿಯಲ್ಲಿ ಕುಳಿತು ಆಚಾರದಂತೆ **'ತದ್ವಿಷ್ಣೋಃ ಪರಮಂ..ಮೋಕ್ಷದಾಯಕಾಃ'** ಎಂಬಲ್ಲಿವರೆಗೆ ಹೇಳಿ ಹಾಸಿದ ದರ್ಭೆಗಳಸಹಿತ ಪಿಂಡಗಳನ್ನು ಎತ್ತಿ ಬೇರೆ ಒಂದು ಪಾತ್ರೆಯಲ್ಲಿ ಇಡಬೇಕು. ಪಿಂಡಗಳಿದ್ದ ಸ್ಥಳವನ್ನು ಗೋಮಯದಿಂದ ಸಾರಿಸಿ ಅಕ್ಷತೆಯನ್ನು ಹಾಕಿ ಪಿಂಡಸ್ಥಾನೇ ಶಾಂತಿರಸ್ತು... ಎಂದು ಹೇಳುತ್ತ ಪ್ರೋಕ್ಷಿಸಿ. ಅಚಾರದಂತೆ ಸ್ವಸ್ಥಾನೇ ವಾಸಃ ಎಂದು

## ಪ್ರಾರ್ಥನಾಶೀರ್ಗ್ರಹಣಾದಿ

ತತಃ ಕರ್ತಾ [280]ಪಾದಪ್ರಕ್ಷಾಲನಮಂಡಲದೇಶೇ ವಿಪ್ರಾನುಪವೇಶ್ಯ [281]''**ಆ ಮಾ ವಾಜಸ್ಯ ಪ್ರಸವೋ ಜಗಮ್ಯಾದಾ ದ್ಯಾವಾಪೃಥಿವೀ ವಿಶ್ವಶಂಭೂ। ಆ ಮಾ ಗಂತಾಂ ಪಿತರಾ ಮಾತರಾ ಚಾಽಽಮಾ ಸೋಮೋ ಅಮೃತತ್ವಾಯ ಗಮ್ಯಾತ್**'' ಇತಿ ಪ್ರದಕ್ಷಿಣತ್ರಯಂ ಕೃತ್ವಾ, ತೇಷಾಂ ಹಸ್ತೇಷ್ವಕ್ಷತಪುಷ್ಪಾಣಿ ದತ್ವಾ ನಿಯತೋ ವಾಗ್ಯತಃ ಶುಚಿರ್ದಕ್ಷಿಣಾಮುಖಃ [282]ಪ್ರಾಂಜಲಿಸ್ತಿಷ್ಠನ್ ವರಾನ್ಯಾಚೇತ। ''**ದಾತಾರೋ ನೋಽಭಿವರ್ಧಂತಾಂ ವೇದಾಃ ಸಂತತಿರೇವ ನಃ। ಶ್ರದ್ಧಾ ಚ ನೋ ಮಾವ್ಯಗಮದ್ಬಹುದೇಯಂ ಚ ನೋ ಅಸ್ತು।** {''ದಾತಾರೋ ವೋಽಭಿವರ್ಧಂತಾಂ ವೇದಾಃ ಸಂತತಿರೇವ ವಃ। ಶ್ರದ್ಧಾ ಚ ವೋ ಮಾವ್ಯಗಮದ್ಬಹುದೇಯಂ ಚ ವೋಽಸ್ತು॥'''ಪ್ರ+॥ } **ಅನ್ನಂ ಚ ನೋ ಬಹುಭವೇದತಿಥೀಂಶ್ಚ ಲಭೇಮಹಿ। ಯಾಚಿತಾರಶ್ಚ ನಃ ಸಂತು ಮಾ ಚ ಯಾಚಿಷ್ಮ ಕಂಚನ**''॥ {'ಅನ್ನಂ ಚ ವೋ ಬಹುಭವೇದತಿಥೀಂಶ್ಚ ಲಭಧ್ವಮ್। ಯಾಚಿತಾರಶ್ಚ ವಃ ಸಂತು ಮಾ ಚ ಯಾಚಿಢ್ವಂ ಕಂಚನ''ಪ್ರ+॥ }

ತತೋ ವಿಪ್ರಾಃ [283]''ಸ್ವಾದುಷಂಸದಃ ಪಿತರೋ ವಯೋಧಾಃ ಕೃಚ್ಛ್ರೇಶ್ರಿತಃ ಶಕ್ತೀವಂತೋ ಗಭೀರಾಃ। ಚಿತ್ರಸೇನಾ ಇಷುಬಲಾ ಅಮೃಧ್ರಾಃ ಸತೋವೀರಾ ಉರವೋ ವ್ರಾತಸಾಹಾಃ॥ ಬ್ರಾಹ್ಮಣಾಸಃ ಪಿತರಃ ಸೋಮ್ಯಾಸಃ ಶಿವೇ ನೋ ದ್ಯಾವಾಪೃಥಿವೀ ಅನೇಹಸಾ। ಪೂಷಾ ನಃ ಪಾತು ದುರಿತಾದೃತಾವೃಧೋ ರಕ್ಷಾ ಮಾಕಿರ್ನೋ ಅಘಶಂಸ ಈಶತ॥ [284]ಇಹೈವ ಸ್ತಂಮಾ ವಿ ಯೌಷ್ಟಂ ವಿಶ್ವಮಾಯುರ್ವ್ಯಶ್ನುತಮ್। ಕ್ರೀಳಂತೌ ಪುತ್ರೈರ್ನಪ್ತೃಭಿರ್ಮೋದಮಾನೌ ಸ್ವೇ ಗೃಹೇ॥ ಆಯುಃ ಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿ ಚ। ಪ್ರಯಚ್ಛಂತು ತಥಾ ರಾಜ್ಯಂ ಪ್ರೀತಾ ನೃಣಾಂ ಪಿತಾಮಹಾಃ। ಏತಾಃ ಸತ್ಯಾ ಆಶಿಷಃ ಸಂತು। ಗೋತ್ರಸ್ಯಾಭಿವೃದ್ಧಿರಸ್ತು। ಪ್ರತಿಸಾಂವತ್ಸರಿಕಶ್ರಾದ್ಧಂ ಗಯಾಕೃತಶ್ರಾದ್ಧಫಲಮಸ್ತು। ಪಿತೄಣಾಮಕ್ಷಯ್ಯಾ ತೃಪ್ತಿರಸ್ತು'' ಇತ್ಯಾಶಿಷೋ ದದ್ಯುಃ॥

---

ಪಾತ್ರಸಹಿತ ಪಿಂಡವನ್ನು ಆಸ್ಥಳದಲ್ಲಿಟ್ಟು ಆಚಾರದಂತೆ ಯವೋದಕ ತಿಲೋದಕಪಾತ್ರೆಗಳಲ್ಲಿನ ಕೂರ್ಚಗಳನ್ನು ವಿಸರ್ಜಿಸುವುದು. ಬಳಿಕ ಕರ್ತೃವು ಬ್ರಾಹ್ಮಣರನ್ನು ಪಾದಪ್ರಕ್ಷಾಲನ ಮಂಡಲದಲ್ಲಿ ಕುಳ್ಳಿರಿಸಿ '**ಆಮಾ ವಾಜಸ್ಯ..**' ಎಂಬ ಮಂತ್ರವನ್ನು ಹೇಳುತ್ತಾ ಮೂರು ಪ್ರದಕ್ಷಿಣೆಯನ್ನು ಮಾಡಿ ಅವರ ಕೈಯ್ಯಲ್ಲಿ ಅಕ್ಷತಪುಷ್ಪಗಳನ್ನು ಕೊಟ್ಟು ಭಕ್ತಿಶ್ರದ್ಧೆಯಿಂದ ಕರಮುಗಿದು ದಕ್ಷಿಣಾಭಿಮುಖನಾಗಿ ನಿಂತು '**ದಾತಾರೋ ನೋಭಿವರ್ಧಂತಾಂ..**' ಇತ್ಯಾದಿ ವರಗಳನ್ನು ಯಾಚಿಸುವುದು. ಆಗ ಬ್ರಾಹ್ಮಣರು 'ದಾತಾರೋ ವೋಭಿವರ್ಧಂತಾಂ..' ಇತ್ಯಾದಿ ಪ್ರತಿವಚನವನ್ನಿತ್ತು 'ಸ್ವಾದುಷಂಸದಃ..' ಇತ್ಯಾದಿ

ಕರ್ತಾ ವಿಪ್ರಾನ್ನಮಸ್ಕೃತ್ವಾ ತೈರ್ದತ್ತಾಕ್ಷತಾದಿ ಶಿರಸಿ ಧೃತ್ವಾ ಪ್ರಾರ್ಥಯೇತ್॥ **''ಅದ್ಯ ಮೇ ಸಫಲಂ ಜನ್ಮ ಭವತ್ಪಾದಾಬ್ಜವಂದನಾತ್। ಅದ್ಯ ಮೇ ವಂಶಜಾಃ ಸರ್ವೇ ಯಾತಾ ವೋಽನುಗ್ರಹಾದ್ದಿವಮ್॥ ಯತ್ತು ಶಾಕಾದಿದಾನೇನ ಕ್ಲೇಶಿತಾ ಯೂಯಮೀದೃಶಾಃ। ತತ್ಕ್ಲೇಶಜಾತಂ ಚಿತ್ತೇ ತು ವಿಸ್ಮೃತ್ಯ ಕ್ಷಂತುಮರ್ಹಥ''** {''ವಿಸ್ಮೃತ್ಯ ಕ್ಷಮಾಮಹೇ''ಪ್ರ+} ಇತಿ ಸಂಪ್ರಾರ್ಥ್ಯ॥

ಕರ್ತಾ [285]**''ವಸಿಷ್ಠಾಸಃ ಪಿತೃವದ್ವಾಚಮಕ್ರತ ದೇವಾಁ ಈಳಾನಾ ಋಷಿವತ್ಸ್ವಸ್ತಯೇ। ಪ್ರೀತಾ ಇವ ಜ್ಞಾತಯಃ ಕಾಮಮೇತ್ಯಾಸ್ಮೇ ದೇವಾಸೋಽವ ಧೂನುತಾ ವಸು॥ ದೇವಾನ್ವಸಿಷ್ಠೋ ಅಮೃತಾನ್ವವಂದೇ ಯೇ ವಿಶ್ವಾ ಭುವನಾಭಿ ಪ್ರತಸ್ಥುಃ। ತೇ ನೋ ರಾಸಂತಾಮುರುಗಾಯಮದ್ಯ ಯೂಯಂಪಾತಸ್ವಸ್ತಿಭಿಃಸದಾನಃ॥ಇದಂಪಿತೃಭ್ಯೋನಮೋಅಸ್ತ್ವದ್ಯೇತಿನಮಸ್ಕಾರವತೀಮನ್ತತಃ ಶಂಸತಿ ತಸ್ಮಾದಂತತಃ ಪಿತೃಭ್ಯೋ ನಮಸ್ಕ್ರಿಯತೇ ತದಾಹುರ್ವ್ಯಾಹಾವಂ ಪಿತ್ರ್ಯಾಃ ಶಂಸೇತ್। ಅವ್ಯಾಹಾವಾಁ ಇತಿ ವ್ಯಾಹಾವಮೇವ ಶಂಸೇದಸಂಸ್ಥಿತಂ ವೈ ಪಿತೃಯಜ್ಞಸ್ಯ ಸಾಧ್ವಸಂಸ್ಥಿತಂ ವಾ ಏಷ ಪಿತೃಯಜ್ಞಂ ಸಂಸ್ಥಾಪಯತಿ ಯೋ ವ್ಯಾಹಾವಂ ಶಂಸತಿ ತಸ್ಮಾದ್ವ್ಯಾಹಾವಮೇವ ಶಂಸ್ತವ್ಯಮ್''** ಇತಿ ಪಠಿತ್ವಾ **''ಜಪಚ್ಛಿದ್ರಂ ತಪಚ್ಛಿದ್ರಂ ಯಚ್ಛಿದ್ರಂ ಶ್ರಾದ್ಧಕರ್ಮಣಿ। ಸರ್ವಂ ಭವತು ಮೇಽಚ್ಛಿದ್ರಂ ಬ್ರಾಹ್ಮಣಾನಾಂ ಪ್ರಸಾದತಃ॥ ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ದ್ವಿಜೋತ್ತಮಾಃ। ಶ್ರಾದ್ಧಂ ಸಂಪೂರ್ಣತಾಂ ಯಾತು ಪ್ರಸಾದಾದ್ಭವತಾಂ ಮಮ''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್ {''ಸರ್ವಮಚ್ಛಿದ್ರಮಸ್ತು,ಸಂಪೂರ್ಣಮಸ್ತು''ಇತಿಪ್ರ+}॥ತತಃಕರ್ತಾಸಪರಿವಾರಃಬ್ರಾಹ್ಮಣಾನಾ-ಸೀಮಾನ್ತಮನುವ್ರಜೇತ್ (ಅಷ್ಟೌ ಪದಾನಿ ವಾ ಸಹಾಽನುವ್ರಜೇತ್)।

---

ಮಂತ್ರಗಳಿಂದಲೂ 'ಆಯುಃ ಪ್ರಜಾಂ..' ದಿಂದಾರಂಭಿಸಿ ಅಕ್ಷಯ್ಯಾ ತೃಪ್ತಿರಸ್ತು ಎಂಬಲ್ಲಿ ವರೆಗೆ ಆಶೀಃ ಕೊಟ್ಟು ಅಕ್ಷತೆಗಳನ್ನು ಕೊಡಬೇಕು. ಕರ್ತೃವು ಬ್ರಾಹ್ಮಣರನ್ನು ನಮಸ್ಕರಿಸಿ ಅವರು ಕೊಟ್ಟ ಅಕ್ಷತೆಗಳನ್ನು ಶಿರಸ್ಸಿನಲ್ಲಿ ಧರಿಸಿ **'ಅದ್ಯ ಮೇ..'** ಎಂಬಲ್ಲಿಂದ **'..ಕ್ಷಂತು ಮರ್ಹಥ'** ಎಂಬಲ್ಲಿಯವರೆಗೆ ಪ್ರಾರ್ಥಿಸಬೇಕು ಆಗ 'ವಿಸ್ಮೃತ್ಯ..ಕ್ಷಮಾಮಹೇ' ಎಂದು ಬ್ರಾಹ್ಮಣರು ಪ್ರತಿವಚನ ಹೇಳಬೇಕು.

ಆ ಆನಂತರ ಕರ್ತೃವು **'ವಸಿಷ್ಠಾಸಃ..'** ಎಂಬ ಮಂತ್ರವನ್ನು ಜಪಿಸಿ **'ಇದಂ ಪಿತೃಭ್ಯೋ ನಮೋ ಅಸ್ತ್ವದ್ಯೇತಿ..'** ಎಂಬ ಪಿತೃಗಾಥವನ್ನು ಜಪಿಸಿ **'ಜಪಚ್ಛಿದ್ರಂ..'** ಎಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸಿದಾಗ ಅವರು 'ಸರ್ವಮಚ್ಛಿದ್ರಮಸ್ತು, ಸಂಪೂರ್ಣಮಸ್ತು' ಎಂಬ ಪ್ರತಿವಚನವನ್ನೀಯಬೇಕು. ಬಳಿಕ ಬ್ರಾಹ್ಮಣರನ್ನು ಗ್ರಾಮ ಸೀಮೆಯವರೆಗೆ ಅಥವಾ ಎಂಟು ಹೆಜ್ಜೆಗಳವರೆಗೆ ಅನುಸರಿಸಿ ಬಂದು ಬೀಳ್ಕೊಡಬೇಕು.ಪುನಃ

ಪುನರ್ಗೃಹಮಾಗತ್ಯ **''ವಷಟ್ತೇ ವಿಷ್ಣವಾಸ ಆ ಕೃಣೋಮಿ ತನ್ಮೇ ಜುಷಸ್ವ ಶಿಪಿವಿಷ್ಟ ಹವ್ಯಮ್। ವರ್ಧಂತು ತ್ವಾ ಸುಷ್ಟುತಯೋ ಗಿರೋ ಮೇ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ॥ ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋಯಜ್ಞಕ್ರಿಯಾದಿಷು। ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್। ವಿಷ್ಣವೇ ನಮೋ ವಿಷ್ಣವೇ ನಮೋ ವಿಷ್ಣವೇ ನಮಃ''** ಇತಿ ವಿಷ್ಣುಂ ಸ್ಮೃತ್ವಾ॥ ದ್ವಿರಾಚಮ್ಯ॥ ಪವಿತ್ರಗ್ರಂಥಿಂ ವಿಸ್ರಸ್ಯ ತ್ಯಕ್ತ್ವಾ॥ **''ಅನೇನ ಪಿತೄಣಾಂ ಪ್ರತಿಸಾಂವತ್ಸರಿಕಯಜ್ಞೇನ ಪಿತೃಪಿತಾಮಹಪ್ರಪಿತಾಮಹಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ ಏಷ ಪಿತೃಯಜ್ಞಃ॥ ತತ್ಸದ್ಬ್ರಹ್ಮಾರ್ಪಣಮಸ್ತು''** ಇತಿ ಬ್ರಹ್ಮಾರ್ಪಣಂ ಕುರ್ಯಾತ್॥

ತತೋ ವಿಪ್ರೋಚ್ಛಿಷ್ಟಂ ಭೂಮೌ ಶುಚೌ ದೇಶೇ ಅವಟಂ ಖಾತ್ವಾ ತತ್ರ ನಿಕ್ಷಿಪ್ಯ ಮೃದಾಚ್ಛಾದಯೇತ್ ([286]ಗೃಹಾನ್ತರಸತ್ವೇ ಸೂರ್ಯಾಸ್ತಾದನನ್ತರಮುಚ್ಛಿಷ್ಟಪ್ರತಿಪತ್ತಿಃ)॥ ತತೋಽಗಾರಂ ಗೋಮಯೇನೋಪಲಿಪ್ಯ [287]ಶ್ರಾದ್ಧಶೇಷೇಣ ವೈಶ್ವದೇವಂ ಕೃತ್ವೇಷ್ಟೈಃ ಸಹ ಭುಂಜೀತ। ಅಪರೇಽಹನಿ (ಆಚಾರಾತ್ತದೈವ ವಾ) ಶ್ರಾದ್ಧಾಂಗತರ್ಪಣಂ ಕುರ್ಯಾತ್।

**ಇತಿ ಪ್ರತಿಸಾಂವತ್ಸರಿಕಶ್ರಾದ್ಧಪ್ರಯೋಗಃ ಸಮಾಪ್ತಃ**

★★★★★★★★★★★★★★★★★★★★

---

ಮನೆಗೆ ಬಂದು ಆಸನದಲ್ಲಿ ಕುಳಿತು '**ವಷಟ್ ತೇ..ವಿಷ್ಣವೇನಮಃ**' ಎಂದು ವಿಷ್ಣುವನ್ನು ಸ್ಮರಿಸಿ, ಎರಡು ಸಲ ಆಚಮನ ಮಾಡಿ '**ಅನೇನ ಪಿತೄಣಾಂ..**' ಎಂದು ಬ್ರಹ್ಮಾರ್ಪಿತ ಮಾಡಬೇಕು.

ಶ್ರಾದ್ಧದ ಮರುದಿನ (ಅಥವಾ ಅಚಾರದಂತೆ ಅಂದೇ) ಶ್ರಾದ್ಧಾಂಗವಾದ ತರ್ಪಣವನ್ನು ಮಾಡಬೇಕು. ಬ್ರಾಹ್ಮಣರ ಎಲೆಯನ್ನು (ಸಾಧ್ಯವಿದ್ದರೆ ಸೂರ್ಯಾಸ್ತಮಾನದ ಬಳಿಕ) ಭೂಮಿಯಲ್ಲಿ ಹೊಂಡತೆಗೆದು ಮಣ್ಣಿನಿಂದ ಮುಚ್ಚಬೇಕು. ಆ ಬಳಿಕ ಶ್ರಾದ್ಧಶೇಷದಿಂದ ವೈಶ್ವದೇವವನ್ನು ಮಾಡಿ ಇಷ್ಟಬಂಧುಗಳೊಡನೆ ಊಟಮಾಡಬೇಕು.

ಇಲ್ಲಿಗೆ ಪ್ರತಿಸಾಂವತ್ಸರಿಕಶ್ರಾದ್ಧಪ್ರಯೋಗವು ಸಮಾಪ್ತವು

## ಮಾತೃಶ್ರಾದ್ಧೇ ವಿಶೇಷಃ

ಏವಮೇವ ಮಾತೃಶ್ರಾದ್ಧಂ ಕುರ್ಯಾತ್। [288]ವಿಶೇಷಸ್ತೂಚ್ಯತೇ;–

ಪಿತ್ರಾದಿಸ್ಥಾನೇ ''**ಮಾತೃಪಿತಾಮಹೀಪ್ರಪಿತಾಮಹ್ಯಃ**''। ಸಂಕಲ್ಪಾಸನದಾನಾಕ್ಷಯ್ಯವಾಚನೇಷು; ''**ಮಾತೃಪಿತಾಮಹೀಪ್ರಪಿತಾಮಹೀನಾಂ ..ದಾನಾಂ ..ಗೋತ್ರಾಣಾಂವಸುರುದ್ರಾದಿತ್ಯಸ್ವರೂಪಾಣಾಂ**''।ವರಣೇ;''**ಮಾತೃಪಿತಾಮಹೀಪ್ರಪಿತಾಮಹ್ಯರ್ಥಂ**''।ಪಾದಕ್ಷಾಲನೋಪಚಾರಯೋಃ; ''**ಮಾತೃಪಿತಾಮಹೀಪ್ರಪಿತಾಮಹ್ಯಃ..ದಾಃ..ಗೋತ್ರಾಃವಸುರುದ್ರಾದಿತ್ಯಸ್ವರೂಪಾಃ**''ಆವಾಹನೇ; ''**ಮಾತೃಪಿತಾಮಹೀಪ್ರಪಿತಾಮಹೀಃ ..ದಾಃ ..ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ**''। ಅರ್ಘ್ಯಾದಿದಾನೇ ''**ಅಸ್ಮನ್ಮಾತಃ, ಅಸ್ಮತ್ಪಿತಾಮಹಿ, ಅಸ್ಮತ್ಪ್ರಪಿತಾಮಹಿ**''। ಅನ್ನನಿವೇದನೇ; ''**ಮಾತೃಪಿತಾಮಹೀಪ್ರಪಿತಾಮಹೀದೇವತಾಃ।ಮಾತೃಪಿತಾಮಹೀಪ್ರಪಿತಾಮಹೀಭ್ಯಃ..ದಾಭ್ಯಃ..ಗೋತ್ರಾಭ್ಯಃ ವಸುರುದ್ರಾದಿತ್ಯಸ್ವರೂಪಾಭ್ಯಃ**''। ಇತ್ಯಾದಿ ತತ್ರ ತತ್ರ ದ್ರಷ್ಟವ್ಯಮ್। ಪಿಂಡಮಾರ್ಜನೇ; ''**ಶುಂಧಂತಾಂ ಮಾತರಃ, ಪಿತಾಮಹ್ಯಃ, ಪ್ರಪಿತಾಮಹ್ಯಃ**''। ಪಿಂಡದಾನೇ; ''**ಏತತ್ತೇ ಮಾತಃ/ಪಿತಾಮಹಿ/ಪ್ರಪಿತಾಮಹಿ ..ನಾಮ್ನಿ ..ಗೋತ್ರೇ ..ರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ ''ಶುಂಧಂತಾಂ ಮಾತರಃ,ಪಿತಾಮಹ್ಯಃ,ಪ್ರಪಿತಾಮಹ್ಯಃ**'। **ಮಾತ್ರೇ/ಪಿತಾಮಹ್ಯೈ/ ಪ್ರಪಿತಾಮಹ್ಯೈ' ..ದಾಯ್ಯೈ ..ಗೋತ್ರಾಯ್ಯೈ ..ರೂಪಾಯ್ಯೈ ಅಯಂ ಪಿಂಡೋ...**''॥

---

### ಮಾತೃಶ್ರಾದ್ಧದಲ್ಲಿ ವಿಶೇಷ

ತಂದೆಯ ಶ್ರಾದ್ಧದಂತೆಯೇ ತಾಯಿಯಶ್ರಾದ್ಧವನ್ನು ಆಚರಿಸಬೇಕು ಅಲ್ಲಿರುವ ವ್ಯತ್ಯಾಸಗಳನು ಮೇಲೆ ಕೊಡಲ್ಪಟ್ಟಿರುತ್ತದೆ.

ಪಿತ್ರಾದಿಗಳಸ್ಥಾನಗಳಲ್ಲಿ ಮಾತೃಪಿತಾಮಹಿಪ್ರಪಿತಾಮಹಿಯರ ವರಣವು ಮೇಲೆ ಸಂಕಲ್ಪಾದಿಗಳಲ್ಲಿ ಮಾಡಬೇಕಾದ ವ್ಯತ್ಯಾಸಗಳನ್ನು ಸೂಚಿಸಿದ್ದು ಆಕ್ರಮವನ್ನು ಅನುಸರಿಸುವುದು ಅರ್ಘ್ಯಪಾತ್ರೆಯಲ್ಲಿ ತಿಲಾವಾಪಕ್ಕೆ ಹೇಳುವ ತಿಲೋಸಿ ಮಂತ್ರದಲ್ಲಿ ಹಾಗೆ ಅತ್ರ ಪಿತರೋ ಮಾದಯಧ್ವಂ,ಅಮೀಮದನ್ತ ಪಿತರಃ, ಎತದ್ವಃ ಪಿತರೋ ವಾಸಃ, ನಮೋ ವಃ ಪಿತರಃ, ಮನೋ ನ್ವಾಹುವಾಮಹೇ,ಪರೇತನ ಪಿತರಃ, ವೀರಂ ಮೇ ದತ್ತ, ಆಧತ್ತ ಪಿತರಃ ಈ ಮಂತ್ರಗಳಲ್ಲಿನ ಪಿತೃಶಬ್ದದ ಊಹವಿಲ್ಲ, ಹಾಗೆಯೇ ಪಿಂಡಪ್ರದಾನದ ಯೇ ಚ ತ್ವಾಮತ್ರಾನು ತೇಭ್ಯಶ್ಚ ಮಂತ್ರಗಳಲ್ಲಿನ ಪುಲ್ಲಿಂಗ ಶಬ್ದದ ಊಹವಿಲ್ಲದೆ ಯಥಾವತ್ ಪಠಿಸುವುದು. ಎಲ್ಲಿ ಊಹವಿದೆಯೋ ಅದನ್ನು ವಿವರಿಸುವೆವು ಪಾತ್ರಸಂಪನ್ನತಾವಾಚನದಲ್ಲಿ ಪಿತ್ರಾದಿಶಬ್ದದಲ್ಲಿ ಮಾತ್ರಾದಿಶಬ್ದವು ಊಹನೀಯ ವಿಸರ್ಜನೆಯಲ್ಲಿ, ಬ್ರಹ್ಮಾರ್ಪಣದಲ್ಲಿ ಪಿತೃಶಬ್ದದ ಊಹವಿದೆ. ಪಾದ್ಯಾರ್ಘ್ಯಾವಾಹನಾದಿಗಳಲ್ಲಿ ಊಹದ ಅವಶ್ಯವಿದ್ದು ಅದನ್ನು ಪೂರ್ವದಲ್ಲಿ ವಿವರಿಸಿರುತ್ತೇವೆ. ಮಾತೃಶ್ರಾದ್ಧದಲ್ಲೂ ಯಜ್ಞೋಪವೀತದಾನವಿದೆ. ಉಳಿದದ್ದೆಲ್ಲಾ ಪಿತೃಶ್ರಾದ್ಧದಂತೆ.

ಆಂಜನಾಭ್ಯಂಜನದಾನೇ; ''**ಮಾತಃ/ಪಿತಾಮಹಿ/ಪ್ರಪಿತಾಮಹಿ ..ನಾಮ್ನಿ ..ಗೋತ್ರೇ ..ರೂಪೇ ಅಭ್ಯಂಕ್ಷ್ವ ಅಂಕ್ಷ್ವ**''।ಸ್ವಸ್ತಿವಾಚನೇ;''**ಮಾತೃಪಿತಾಮಹೀಪ್ರಪಿತಾಮಹೀಭ್ಯಃ..ದಾಭ್ಯಃ..ಗೋತ್ರಾಭ್ಯಃ ವಸುರುದ್ರಾದಿತ್ಯಸ್ವರೂಪಾಭ್ಯಃ**''। ದಕ್ಷಿಣಾದಾನೇ; ''**ಮಾತೃಪಿತಾಮಹೀ ಪ್ರಪಿತಾಮಹೀಸ್ಥಾನೇ ಉಪವಿಷ್ಟಾಯ...**''ಇತ್ಯಾದಿ। ಮಾತ್ರಾದ್ಯರ್ಘ್ಯಪಾತ್ರೇಷುತಿಲಾವಾಪೇ '**ತಿಲೋಽಸೀ**'ತಿ ಮಂತ್ರೇ '**ಪಿತೄನಿ**'ತ್ಯಸ್ಯ ಪದಸ್ಯ ನೋಹಃ। [289]ಏವಮುತ್ತರೇಷ್ವಪಿ ಮಂತ್ರೇಷು ಸಾಧಾರಣಪಿತೃಶಬ್ದಸ್ಯ ನೋಹಃ ಯಥಾ; '**ಅತ್ರ ಪಿತರೋ ಮಾದಯಧ್ವಂ..., ಅಮೀಮದಂತ ಪಿತರಃ..., ಏತದ್ವಃ ಪಿತರೋ..., ನಮೋ ವಃ ಪಿತರ ಇಷೇ..., ಮನೋ ನ್ವಾಹುವಾಮಹೇ..., ಪರೇತನ ಪಿತರಃ..., ವೀರಂ ಮೇ ದತ್ತ ಪಿತರಃ..., ಆಧತ್ತ ಪಿತರಃ...**' ಏಷುಮಂತ್ರೇಷು ನೋಹಃ ಯಥಾಶ್ರುತಮೇವ ಪಾಠಃ। ತಥೈವ ಪಿಂಡಪ್ರದಾನೇ '**ಯೇ ಚ ತ್ವಾಮತ್ರಾನು ತೇಭ್ಯಶ್ಚ**' ಇತ್ಯತ್ರಾಪಿ ನೋಹಃ ಇತಿ ವೃತ್ತಿಕೃತ್॥ ಯತ್ರೋಹಸ್ತತ್ರದರ್ಶ್ಯತೇ; ಪಾತ್ರಾಭಿಮರ್ಶನೇ '**ಮಾತೃ/ಪಿತಾಮಹೀ/ ಪ್ರಪಿತಾಮಹೀ/ ಪಾತ್ರಂ ಸಂಪನ್ನಮ್**' ಇತ್ಯೂಹಃ। '**ಉತ್ತಿಷ್ಠತ ಮಾತರಃ ವಿಶ್ವದೇವೈಃ ಸಹ। ಅನೇನ ಮಾತುಃ ಪ್ರತ್ಯಾಬ್ದಿಕಶ್ರಾದ್ಧೇನೇ**'ತ್ಯಾದಿ। ಮಾತೃಶ್ರಾದ್ಧೇಽಪಿ ಯಜ್ಞೋಪವೀತಾನಿ ದದ್ಯಾತ್, ಅನ್ಯತ್ಸರ್ವಂ ಪಿತೃಶ್ರಾದ್ಧವತ್। ತರ್ಪಣೇಽಸ್ಮನ್ಮಾತರಮಿತ್ಯಾದ್ಯೂಹಃ। ಸಧವಾಯಾ ಮಾತುರ್ಮೃತಾಯಾಃಶ್ರಾದ್ಧಂಜೀವತ್ಪಿತೃಕೇಣಾಪಿಸಪಿಂಡಕಂಕಾರ್ಯಮ್।ಸಾಪತ್ನಮಾತುರಪಿ ತಥೈವ। ತರ್ಪಣಂ ತು ತಿಲರಹಿತಂ ಕೇವಲಜಲೇನ ಕಾರ್ಯಮ್। ಶುಕ್ಲತಿಲೈರಿತಿ ಕೇಚಿತ್। ಸಾಪತ್ನಮಾತೃಶ್ರಾದ್ಧೇ ಮಾತೃಸ್ಥಾನೇ ಸಾಪತ್ನಮಾತುರುಲ್ಲೇಖಃ '**ಅಸ್ಮತ್ಸಾಪತ್ನಮಾತೃಪಿತಾಮಹೀ ಪ್ರಪಿತಾಮಹೀನಾ**'ಮಿತ್ಯಾದಿ॥ ಪತ್ನ್ಯಾಃ ಶ್ರಾದ್ಧೇ ತು '**ಅಸ್ಮತ್ಪತ್ನೀಮಾತೃಪಿತಾಮಹೀನಾ**' ಮಿತ್ಯಾದ್ಯೂಹಃ।

---

ತರ್ಪಣದಲ್ಲಿ ಮಾತ್ರಾದಿತ್ರಯರಿಗೆ ತರ್ಪಣ. ಜೀವತ್ಪಿತೃಕನಾಗಿದ್ದರೂ ತಾಯಿ,ಮಲತಾಯಿ ಇವರ ಶ್ರಾದ್ಧವನ್ನು ಪಿಂಡಾದಿಸಹಿತ ಸಂಪೂರ್ಣವಾಗಿ ಅನುಷ್ಠಿಸಬೇಕು. ತರ್ಪಣವನ್ನು ಎಳ್ಳಿಲ್ಲದೆ ಕೇವಲ ನೀರಿಂದ ಮಾಡಬೇಕು. ಕೆಲವರು ಬಿಳಿಯ ಎಳ್ಳಿಂದ ಮಾಡಬೇಕೆನ್ನುವರು. ಮಲತಾಯಿಯಶ್ರಾದ್ಧದಲ್ಲಿ ಮಾತೃ ಶಬ್ದದಸ್ಥಾನದಲ್ಲಿ ಸಾಪತ್ನಮಾತೃ ಶಬ್ದವನ್ನು ಹೇಳಬೇಕು. ಪತ್ನಿಯಶ್ರಾದ್ಧದಲ್ಲಿ ಪತ್ನೀಮಾತೃಪಿತಾಮಹೀಯರ ಉಲ್ಲೇಖ. ತಾಯಿ,ಮಲತಾಯಿ, ಪತ್ನೀ ಇತ್ಯಾದಿಗಳು ಸುವಾಸಿನಿಯಾಗಿ ಮೃತರಾಗಿದ್ದರೆ ಅವರ ಶ್ರಾದ್ಧದಲ್ಲಿ ವಿಪ್ರರೊಂದಿಗೆ ಸುವಾಸಿನಿಯನ್ನು ಕುಳ್ಳಿರಿಸಿ ಉಪಚಾರವನ್ನಿತ್ತು ಊಟ ಮಾಡಿಸಬೇಕೆಂದು ಚಂದ್ರಿಕಾಕಾರರ ಮತ. ಹಾಗೆ ಮಾಡುವುದಿದ್ದರೆ ಮೇಲ್ಕಂಡಂತೆ ನಾಮಾದ್ಯುಚ್ಚಾರಣೆ ಪೂರ್ವಕ ಗಂಧಾದಿ ಉಪಚಾರಗಳನ್ನು ಕೊಟ್ಟು ಅರಸಿನಸಿಂಧೂರಾದಿ ಮಂಗಳದ್ರವ್ಯವನ್ನು

ಮೃತಾ ಮಾತಾ ಸಾಪತ್ನಮಾತಾ ಪತ್ನೀ ವಾ [290]ಸುವಾಸಿನೀ ಚೇದ್ಬ್ರಾಹ್ಮಣೈಃ ಸಹ ಸುವಾಸಿನೀಮಪಿ ಭೋಜಯೇದಿತಿ ಚಂದ್ರಿಕಾಕಾರಃ। ತತ್ಪ್ರಸಕ್ತೌ ಗಂಧಾದ್ಯುಪಚಾರಾವಸರೇ **'ಮಾತಃ... ನಾಮ್ನಿ ...ಗೋತ್ರೇ ವಸುರೂಪೇ ಏಷ ತೇ ಗಂಧಃ'** ಇತ್ಯಾದ್ಯೂಹೇನ ಗಂಧಂ ದತ್ವಾ [291]ಹರಿದ್ರಾಸಿಂಧೂರಾದಿ ದತ್ವಾ ಪುಷ್ಪದೂಪ-ದೀಪಾನ್ಸಮರ್ಪ್ಯಾಽಽಚ್ಛಾದನಾರ್ಥೇ ಸ್ತ್ರೀಪರಿಧಾನಯೋಗ್ಯಂ ನವಂ ಶ್ವೇತಂ ವಸ್ತ್ರಂ ಕಂಚುಕೀಸಹಿತಂ ದದ್ಯಾತ್॥ ಅನ್ನಾದಿನಿವೇದನೇ ತೂಷ್ಣೀಂ ಪರಿಷಿಚ್ಯ ನಾಮಾದ್ಯುಕ್ತ್ವಾ ನಿವೇದಯೇದಿತ್ಯಾಚಾರಃ। **'ಅನೇನ ಮಮ ಮಾತ್ರಾದೀನಾಂ ಪ್ರತ್ಯಾಬ್ದಿಕಶ್ರಾದ್ಧೇ ಬ್ರಾಹ್ಮಣ ಸುವಾಸಿನೀ ಭೋಜನೇನ...'**। ವಿಪ್ರೇಭ್ಯಃ ದಕ್ಷಿಣಾದಾನಾಂತೇ ಸುವಾಸಿನ್ಯೈ ದಕ್ಷಿಣಾಂ ದತ್ವಾ ಸತಿ ಸಂಭವೇ ಕಂಠಸೂತ್ರಾದಿನಾನಾಲಂಕಾರಾನ್ ದದ್ಯಾತ್।

**ಇತಿ ಮಾತ್ರಾದಿಶ್ರಾದ್ಧೇ ವಿಶೇಷಃ**

★★★★★★★★★★★★★★★★

## [292]ಶ್ರಾದ್ಧಾಂಗತರ್ಪಣವಿಧಿಃ

ಪರೇದ್ಯುಃ ಉದಯಾತ್ಪೂರ್ವಂ ಸ್ನಾತ್ವಾ ಪ್ರಾತಃ ಸಂಧ್ಯಾಮುಪಾಸ್ಯ ಶ್ರಾದ್ಧೇಜ್ಯವರ್ಗಸ್ಯ ತಿಲತರ್ಪಣಂ ಕುರ್ಯಾತ್॥ ನದ್ಯಾದೌ ಸ್ನಾತ್ವಾ ವಾಸಃ ಪರೀಧಾಯ ಪವಿತ್ರಂ ಧೃತ್ವಾ ದೇಶಕಾಲೌ ಸ್ಮೃತ್ವಾ **'ಪೂರ್ವೇದ್ಯುಃಕೃತಮಮಪಿತೄಣಾಂಪ್ರತಿಸಾಂವತ್ಸರಿಕಶ್ರಾದ್ಧಾಂಗತ್ವೇನಪಿತೃತರ್ಪಣಂ ಕರಿಷ್ಯೇ'** ಇತಿ ಸಂಕಲ್ಪ್ಯ। ಆಗ್ನೇಯ್ಯಾಭಿಮುಖಃ ಸವ್ಯಂ ಜಾನ್ವಾಚ್ಯ ದಕ್ಷಿಣಹಸ್ತೇ ದರ್ಭಾನ್ನಿಧಾಯ

---

ಸೀರೆ, ರವಕೆ ಇತ್ಯಾದಿಗಳನ್ನೀಯಬೇಕು. ಅನ್ನ ನಿವೇದನೆಯ ಸಮಯದಲ್ಲಿ ಏಕವಚನದಿಂದ ಮಾತೃನಾಮಾದ್ಯುಚ್ಚಾರಣೆಯನ್ನು ಸುವಾಸಿನಿಗೂ ಮಾಡಬೇಕು ವಿಪ್ರರಿಗೆ ದಕ್ಷಿಣಯನ್ನಿತ್ತ ಮೇಲೆ ಸುವಾಸಿನಿಗೆ ದಕ್ಷಿಣೆಯನ್ನು ಕೊಟ್ಟು ಸಾಧ್ಯವಿದ್ದರೆ ತಾಳಿ,ಕಾಲುಂಗುರ,ಬಳೆ ಇತ್ಯಾದಿ ಸಾಮಗ್ರಿಗಳನ್ನು ಕೊಡಬೇಕು.

**ಶ್ರಾದ್ದಾಂಗತರ್ಪಣವಿಧಿಯು**

ಶ್ರಾದ್ಧದ ಮರುದಿನ ಪ್ರಾತಃಸ್ನಾನವನ್ನು ಮಾಡಿ ಸಂಧ್ಯೆಯನ್ನನುಷ್ಠಿಸಿ ಶ್ರಾದ್ಧಮಾಡಿದ ವರ್ಗದಪಿತೃಗಳನ್ನುದ್ದೇಶಿಸಿ ತಿಲತರ್ಪಣವನ್ನು ಮಾಡಬೇಕು. ಪವಿತ್ರವನ್ನು ದರಿಸಿ ದೇಶಕಾಲಗಳನ್ನು ಸ್ಮರಿಸಿ ಪೂರ್ವೇದ್ಯುಃ..ಕರಿಷ್ಯೇ ಎಂದು ಸಂಕಲ್ಪಿಸಿ, ಆಗ್ನೇಯಾಬಿಮುಖನಾಗಿ ಕುಳಿತು ದರ್ಭೆಯನ್ನು ದರಿಸಿ ಶುದ್ಧಸ್ಥಳದಲ್ಲೋ ತಾಮ್ರಾದಿಪಾತ್ರೆಯಲ್ಲೋ ದರ್ಭೆಯನ್ನು ಹರಡಿ ಅದರಮೇಲೆ ತಿಲೋದಕದಿಂದ ನಾಮಾದ್ಯುಚ್ಚರಣೆ ಪೂರ್ವಕ ಮೂರು ಮೂರು ಬಾರಿ ತರ್ಪಣವನ್ನು ಪಿತೃತೀರ್ಥದಲ್ಲಿ ಕೊಟ್ಟು ಕರ್ಮಬ್ರಹ್ಮಾರ್ಪಣವನ್ನು ಮಾಡಿ ಪುನಃ ಸ್ನಾನವನ್ನು ಮಾಡಿ ಶೇಷಾಹ್ನಿಕವನ್ನು ಮಾಡಬೇಕು ಕೆಲವರು ಪರೇಹನಿ ತರ್ಪಣವನ್ನು ಅಪಕರ್ಷಿಸಿ ಶ್ರಾದ್ಧದಂದೇ ಮಾಡುತ್ತಾರೆ.

ಶುದ್ಧಸ್ಥಲೇ ತಾಮ್ರಾದಿ ಭಾಜನೇ ವಾ ಆಗ್ನೇಯಾಗ್ರಾನ್ ದರ್ಭಾನ್ನಿಧಾಯ ತೇಷು ತಿಲಮಿಶ್ರಜಲೇನ ಮನ್ತ್ರಾವೃತ್ತ್ಯಾ ತ್ರಿಸ್ತ್ರಿಸ್ತರ್ಪಯೇತ್ 1.'**ಅಸ್ಮತ್ಪಿತರಂ ...ಶರ್ಮಾಣಂ ...ಗೋತ್ರಂ ವಸುರೂಪಂ ಸ್ವಧಾ ನಮಸ್ತರ್ಪಯಾಮಿ।** 2.'**ಅಸ್ಮತ್ಪಿತಾಮಹಂ ...ಶರ್ಮಾಣಂ ...ಗೋತ್ರಂ ರುದ್ರರೂಪಂ ಸ್ವಧಾ ನಮಸ್ತರ್ಪಯಾಮಿ।** 3.'**ಅಸ್ಮತ್ಪ್ರಪಿತಾಮಹಂ ...ಶರ್ಮಾಣಂ ...ಗೋತ್ರಂ ಆದಿತ್ಯರೂಪಂ ಸ್ವಧಾ ನಮಸ್ತರ್ಪಯಾಮಿ**' ಏವಂ ತರ್ಪಣಂ ವಿಧಾಯ। '**ಅನೇನ ಪಿತೃತರ್ಪಣೇನ ಕರ್ಮಣಾ ಭಗವಾನ್ ಪಿತೃರೂಪೀ ಪರಮೇಶ್ವರಃ ಪ್ರೀಯತಾಮಿತಿ**' ಕರ್ಮೇಶ್ವರಾರ್ಪಣಂ ಕೃತ್ವಾ ಪವಿತ್ರಂ ವಿಸೃಜ್ಯ ಪುನಃ ಸರ್ವಕರ್ಮಾರ್ಥಂ ಸ್ನಾತ್ವಾ ಶೇಷಮಾಹ್ನಿಕಂ ಕುರ್ಯಾತ್॥ ಕೇಚನ ಪರೇಽಹನಿಕ್ರಿಯಮಾಣಮಿದಮಪಕೃಷ್ಯ ಶ್ರಾದ್ಧದಿನ ಏವ ಕುರ್ವಂತಿ॥ ಅತ್ರ [293]ಶ್ರಾದ್ಧೇ ತೃತೀಯವರಣಾತ್ಪರಮಾಶೌಚೇ ಸೂತಕೇ ವಾಽಽಪಾತಿತೇ ಕರ್ತುಸ್ತಾತ್ಕಾಲಿಕೀ ಶುದ್ಧಿರ್ಭವತೀತಿ ಸ್ಮೃತಿವಚನಾತ್। ಉಪಕ್ರಾನ್ತಂ ಶ್ರಾದ್ಧಂ ಪರಿಸಮಾಪ್ಯ ಪರೇಽಹನಿ ಶ್ರಾದ್ಧಾಂಗತರ್ಪಣಂ ಚ ಯಥೋಕ್ತಂ ಕಾರ್ಯಮ್॥

★★★★★★★★★★★★★★★★★★

---

ಶ್ರಾದ್ಧದಂದು ತೃತೀಯವರಣಾನಂತರದಲ್ಲಿ ಕರ್ತೃ ಭೋಕ್ತೃಗಳಿಗೆ ಸೂತಕವೋ ಆಶೌಚವೋ ಏರ್ಪಟ್ಟರೆ ಅವರಿಗೆ ತಾತ್ಕಾಲೀನಶುದ್ಧಿಯು ಇದ್ದು ಯಥೋಕ್ತಶ್ರಾದ್ಧವನ್ನಾಚರಿಸಬಹುದು ಮತ್ತು ಕರ್ತೃವಿಗೆ ಮರುದಿನ ತರ್ಪಣಕ್ಕೂ ಕರ್ಮಾಂಗವಾಗಿ ತಾತ್ಕಾಲಿಕ ಶುದ್ಧಿ ಇರುತ್ತದೆ

★★★★★★★★★★★★★★★★★★

## [294] ಪಿತೃವ್ಯಾದೀನಾಂ ಶ್ರಾದ್ಧೇ ಪಾರ್ವಣೈಕೋದ್ದಿಷ್ಟಯೋರ್ವಿಕಲ್ಪವಿಚಾರಃ

'ಪಿತ್ರಾದಿಪ್ರತ್ಯಾಬ್ದಿಕಶ್ರಾದ್ಧೇ ಪಾರ್ವಣೈಕೋದ್ದಿಷ್ಟಯೋಃ ಸಮಬಲತ್ವಾದ್ವ್ರೀಹಿಯವವದ್ವಿಕಲ್ಪಃ। ಸ ಚಾಽಽಚಾರಾದ್ವ್ಯವಸ್ಥಿತ ಇತಿ ಸರ್ವನಿಬಂಧನಕಾರಸಮ್ಮತಿಃ। ಅತ ಏವ ದಾಕ್ಷಿಣಾತ್ಯಾಃಪಾರ್ವಣಂ ಕುರ್ವತೇ ಮೈಥಿಲಾದಯ ಏಕೋದ್ದಿಷ್ಟ'ಮಿತಿಚಂದ್ರಿಕಾಕಾರಃ॥ 'ಪಿತೃವ್ಯಮಾತುಲಸಾಪತ್ನಮಾತೄಣಾಂ ಜ್ಯೇಷ್ಠಾನಾಂ ಕನಿಷ್ಠಾನಾಂ ವಾ (ವಯಸಾ ಕನಿಷ್ಠತ್ವೇಽಪಿ ಸ್ಥಾನತೋ ಜ್ಯೇಷ್ಠಾಃ), ಜ್ಯೇಷ್ಠಭ್ರಾತೄಣಾಂ ಚ' ಶ್ರಾದ್ಧೇ ಪಾರ್ವಣಪ್ರಯೋಗ ಇತಿ ಬಹವಃ। 'ಕನಿಷ್ಠಭ್ರಾತೄಣಾಮವಿವಾಹಿತಾನಾಮೇಕೋದ್ದಿಷ್ಟಂ ವಿವಾಹಿತಾನಾಂ ಪಾರ್ವಣಮಿತಿ ಕೇಚಿತ್। ಕೇಚಿದಪುತ್ರಾಣಾಂ ಸಾಪತ್ನಮಾತೃಪಿತೃವ್ಯಮಾತುಲಜ್ಯೇಷ್ಠಭ್ರಾತೄಣಾಂ ತತ್ತನ್ಮೃತಾಹೇ ತಂ ತಮೇವೋದ್ದಿಶ್ಯೈಕೋದ್ದಿಷ್ಟವಿಧಿನಾ ಶ್ರಾದ್ಧಂ ಕುರ್ಯಾದಿತ್ಯಾಹುಃ। ಜೀವತ್ಪಿತೃಕಸ್ಯ ಜ್ಯೇಷ್ಠಸ್ಯಾಪಿ ಭ್ರಾತುರೇಕೋದ್ದಿಷ್ಟಮೇವ। ಕೇಚಿತ್ಪಾರ್ವಣಮಿತಿ ವದಂತಿ। ಸರ್ವತ್ರಪಾರ್ವಣಮಿತ್ಯನ್ಯೇ। ಅಸ್ಮಿನ್ವಿಷಯೇ ಸ್ಮೃತಿಷುವಿಕಲ್ಪೋ ದೃಶ್ಯತೇ [295]ತಸ್ಮಾತ್ಕುಲಾಚಾರಾದ್ವ್ಯವಸ್ಥಾ ಜ್ಞಾತವ್ಯಾ।

---

### ಪಿತೃವ್ಯಾದಿಗಳ ಶ್ರಾದ್ಧದಲ್ಲಿ ಪಾರ್ವಣ ಏಕೋದ್ದಿಷ್ಟಗಳ ವಿಕಲ್ಪವಿಚಾರ

ತಂದೇತಾಯಿ ಇತ್ಯಾದಿಗಳ ಪ್ರತ್ಯಾಬ್ದಿಕಶ್ರಾದ್ಧದಲ್ಲಿ ಪಾರ್ವಣ ಮತ್ತು ಏಕೋದ್ದಿಷ್ಟಗಳ ಸಮಬಲದಿಂದ ಬತ್ತ ಮತ್ತು ಯವಗಳಂತೆ ವಿಕಲ್ಪವು. ಇಲ್ಲಿ ಕುಲಾಚಾರವು ವ್ಯವಸ್ಥಾಪಕವು. ಆದ್ದರಿಂದಲೇ ದಾಕ್ಷಿಣಾತ್ಯರು ಪಾರ್ವಣವಿಧಿಯಲ್ಲೂ ಮೈಥಿಲಾದಯರು ಏಕೋದ್ದಿಷ್ಟವಿಧಿಯಲ್ಲೂ ಆಚರಿಸುತ್ತಾರೆ ಎಂಬುದು ಚಂದ್ರಿಕಾರರ ವಚನ। ತಂದೆಯಸಹೋದರರ ಮಲತಾಯಿಯ (ಇವರು ಕರ್ತೃಗಿಂತ ಚಿಕ್ಕವಯಸ್ಕರಾಗಿದ್ದರೂ ಸ್ಥಾನದಿಂದ ಜ್ಯೇಷ್ಠರು), ಜ್ಯೇಷ್ಠಹೋದರರ ಶ್ರಾದ್ಧದಲ್ಲಿ ಪಾರ್ವಣಪ್ರಯೋಗವೆಂಬುದು ಬಹುಸಮ್ಮತ ಅಬಿಪ್ರಾಯವು. ಅವಿವಾಹಿತತಮ್ಮನಶ್ರಾದ್ಧದಲ್ಲಿ ಏಕೋದ್ದಿಷ್ಟವೂ, ಅವರು ವಿವಾಹಿತರಾಗಿದ್ದರೆ ಪಾರ್ವಣಪ್ರಯೋಗವೆಂದು ಕೆಲವರ ಅಭಿಪ್ರಾಯವು. ಕೆಲವರು ಅಪುತ್ರರಾದ ಮಲತಾಯಿ, ತಂದೆಯ ಸಹೋದರ, ಸೋದರಮಾವ ಮತ್ತು ಸಹೋದರರ ಮೃತಾಹಶ್ರಾದ್ಧವನ್ನು ಅವರನ್ನು ಮಾತ್ರ ಉದ್ದೇಶಿಸಿ ಏಕೋದ್ದಿಷ್ಟವಿಧಾನದಿಂದ ಶ್ರಾದ್ಧವನ್ನಾಚರಿಸಬೇಕೆನ್ನುವರು. ಜೀವತ್ಪಿತೃಕನು ಮಾಡುವ ಅಣ್ಣನಶ್ರಾದ್ಧವು ಏಕೋದ್ದಿಷ್ಟ ಪಾರ್ವಣಗಳ ವಿಕಲ್ಪವು. ಕೆಲವರು ಎಲ್ಲಾಶ್ರಾದ್ಧಗಳನ್ನೂ ಪಾರ್ವಣವಾಗಿಯೇ ಅನುಷ್ಟಿಸಬೇಕೆನ್ನುವರು. ಈ ವಿಷಯದಲ್ಲಿ ಸ್ಮೃತಿಗಳು ಭಿನ್ನಭಿನ್ನ ಅಭಿಪ್ರಾಯವು ಹೇಳಿರುವುದರಿಂದ ಕುಲಾಚಾರದಂತೆಅನುಷ್ಠಿಸುವುದು ಯುಕ್ತ.

ಪಾರ್ವಣರೂಪದಲ್ಲಿ ಅನುಷ್ಠಿಸುವುದಿದ್ದರೆ ಪಿತೃಶ್ರಾದ್ಧದಲ್ಲಿ ಪಿತೃಪಿತಾಮಹಪ್ರಪಿತಾಮಹರು, ಮಾತೃಶ್ರಾದ್ಧದಲ್ಲಿ ಮಾತೃಪಿತಾಮಹೀಪ್ರಪಿತಾಮಹಿಗಳು, ಮಾತಾಮಹಶ್ರಾದ್ಧದಲ್ಲಿ ಆವರ್ಗದವರು, ಮಾತಾಮಹಿಶ್ರಾದ್ಧದಲ್ಲಿ ಆವರ್ಗದವರು, ಪಿತೃವ್ಯಶ್ರಾದ್ಧದಲ್ಲಿ ಪಿತೃವ್ಯಪಿತಾಮಹಪ್ರಪಿತಾಮಹರು,

ಪಾರ್ವಣಶ್ರಾದ್ಧೇಉದ್ದೇಶ್ಯಾಃಯಥಾ;ಪಿತೃಪಾರ್ವಣಶ್ರಾದ್ಧೇ'ಪಿತೃಪಿತಾಮಹ-ಪ್ರಪಿತಾಮಹಾಃ'। ಮಾತೃಶ್ರಾದ್ಧೇಪಾರ್ವಣೇ 'ಮಾತೃಪಿತಾಮಹೀ-ಪ್ರಪಿತಾಮಹ್ಯಃ'। ಏವಂ ಮಾತಾಮಹಶ್ರಾದ್ಧೇ ತದ್ವರ್ಗಮಾತ್ರಸ್ಯ। ಏವಂ ಮಾತಾಮಹೀಶ್ರಾದ್ಧೇ ತದ್ವರ್ಗಮಾತ್ರಸ್ಯ। ಪಿತೃವ್ಯಪಾರ್ವಣಶ್ರಾದ್ಧೇ 'ಪಿತೃವ್ಯಪಿತಾಮಹ-ಪ್ರಪಿತಾಮಹಾಃ'। ಅಜೀವತ್ಪಿತೃಕಭ್ರಾತೃಶ್ರಾದ್ಧೇ 'ಭ್ರಾತೃಪಿತೃಪಿತಾಮಹಾಃ'। ಸಾಪತ್ನಮಾತೃಶ್ರಾದ್ಧೇ 'ಸಾಪತ್ನಮಾತೃ-ಪಿತಾಮಹೀ-ಪ್ರಪಿತಾಮಹ್ಯಃ'॥ ಮಾತುಲಶ್ರಾದ್ಧೇ 'ಮಾತುಲ ಮಾತಾಮಹ ಮಾತುಃಪಿತಾಮಹಾಃ'। ವಿಧಿಸ್ತು ಪಿತೃಶ್ರಾದ್ಧವತ್॥ 'ಜ್ಯೇಷ್ಠಭ್ರಾತೃಪಿ-ತೃಜ್ಯೇಷ್ಠಸಪತ್ನೀಮಾತರಸ್ತಥಾ। ಏತೇಷಾಂ ಚ ಮೃತಾಹೇ ತು ಪರೇಽಹನಿ ತಿಲೋದಕ'ಮಿತಿ ವಚನಾತ್ ಪರೇಽಹನಿ ತರ್ಪಣಂ ಕಾರ್ಯಮ್।

ಪಿತೃವ್ಯಾದೀನಾಂ ಶ್ರಾದ್ಧೇ ಪಾರ್ವಣೈಕೋದ್ದಿಷ್ಟಯೋರ್ವಿಕಲ್ಪವಿಚಾರಃ

★★★★★★★★★★★★★★

---

ಅಜೀವತ್ಪಿತೃಕನ ಭ್ರಾತೃಶ್ರಾದ್ಧದಲ್ಲಿ ಭ್ರಾತೃಪಿತೃಪಿತಾಮಹಾಃ, ಮಲತಾಯಿಯಶ್ರಾದ್ಧದಲ್ಲಿ ಸಾಪತ್ನಮಾತೃಪಿತಾಮಹೀಪ್ರಪಿತಾಮಹ್ಯಃ, ಸೋದರಮಾವನಶ್ರಾದ್ಧದಲ್ಲಿ ಮಾತುಲಮಾತಾಮಹಮಾತುಃಪಿತಾಮಹಾಃ ಇವರನ್ನು ಉದ್ದೇಷಿಸಿ ಶ್ರಾದ್ಧವನ್ನಾಚರಿಸಬೇಕು. ಪಿತೃಶ್ರಾದ್ಧದಂತೆ ವಿಧಿಯು. ಮತ್ತು ಶ್ರಾದ್ಧದ ಪರದಿನದಂದು ತಿಲತರ್ಪಣವು.

★★★★★★★★★★★★★★★★★★

## [297]ಅಥ ಸಾಂಕಲ್ಪಿಕಶ್ರಾದ್ಧವಿಧಿಃ

ಶ್ರೀಃ॥ ಕರ್ತಾ ಪೂರ್ವೇದ್ಯುಃ ಸದ್ಯೋ ವಾ ಬ್ರಾಹ್ಮಣಾನ್ನಿಮಂತ್ರ್ಯ ಶ್ರಾದ್ಧದಿನೇ ಕೃತನಿತ್ಯಕ್ರಿಯ ಅಪರಾಹ್ಣೇ ಶ್ರಾದ್ಧಮಾರಭೇತ। ಗೋಮಯೋಪಲಿಪ್ತೇ ದೇಶೇ ಕುಶೋರ್ಣಾಜಿನಾಸನೇಷ್ವೇಷಾಮನ್ಯತಮಾಸನೇವೋಪವಿಷ್ಯ **''ಪವಿತ್ರಂ ತೇ ವಿತತಂ ....ತ್ಸಮಾಶತ''** ಇತಿ ಬ್ರಹ್ಮಗ್ರಂಥಿಸಮನ್ವಿತಂ ಪವಿತ್ರಂ ಧೃತ್ವಾ ದ್ವಿರಾಚಮ್ಯ॥

**''ಪೃಥ್ವಿ ತ್ವಯಾ ಧೃತಾ..ಚಾಮುಂಡೇ ಹ್ಯಪರಾಜಿತೇ''** ಇತಿ ಭೂಮಿಂ ಸಂಪ್ರಾರ್ಥ್ಯ॥ **''ಅಪಸರ್ಪಂತು ತೇ ಭೂತಾ..ಶ್ರಾದ್ಧಕರ್ಮ ಸಮಾರಭೇ''** ಇತಿ ಜಪಿತ್ವಾ॥ ಆಚಾರಾತ್ ಶಿಖಾಕಟಿ–ಯಜ್ಞೋಪವೀತಾಸನೇಷು ದರ್ಭಧಾರಣಂ ಕೃತ್ವಾ ನೀವೀಂ ಬಧ್ವಾ ಪ್ರಾಣಾಯಾಮತ್ರಯಂ ಕುರ್ಯಾತ್॥ **''ಪಿತೃದೇವತಾಭ್ಯೋ ನಮಃ। ವಿಷ್ಣುರ್ವಿಷ್ಣುರ್ವಿಷ್ಣುಃ। ಶ್ರೀಮದ್ಭಗವತೋ ಮಹಾಪುರುಷಸ್ಯ..''** ಇತ್ಯಾದಿ ದೇಶಕಾಲಾವುಕ್ತ್ವಾ **''ಶ್ರೀಪರಮೇಶ್ವರಪ್ರೀತ್ಯರ್ಥಂ ಪುರೂರವಾರ್ದ್ರವಸಂಜ್ಞಕಾನಾಂ ವಿಶ್ವೇಷಾಂ ದೇವಾನಾಮ್''** ಪ್ರಾಚೀನಾವೀತೀ **''ಅಸ್ಮತ್ಪಿತೃಪಿ- ತಾಮಹಪ್ರಪಿತಾಮಹಾನಾಂ --ಶರ್ಮಣಾಂ --ಗೋತ್ರಾಣಾಂ ವಸುರುದ್ರಾದಿತ್ಯಸ್ವರೂಪಾಣಾಮೇತೇಷಾಂ ಶ್ರೇಯೋರ್ಥಂ ಮೋಕ್ಷಾರ್ಥಂ ತೃಪ್ತ್ಯರ್ಥಂ ಮಮ ಪಿತೄಣಾಂ ಪ್ರತಿಸಾಂವತ್ಸರಿಕ (ಮೃತಾಹ) ಶ್ರಾದ್ಧಂ ಸದೈವಂ ಸಾಂಕಲ್ಪಿಕವಿಧಿನಾಽನ್ನೇನ ಹವಿಷಾ ಸದ್ಯಃ ಕರಿಷ್ಯೇ। ತದಂಗಂ ಯವತಿಲೋದಕಾದಿ ಕರಿಷ್ಯೇ। ಆತ್ಮಶುದ್ಧ್ಯರ್ಥಂ ಭೋಕ್ತೃಗೃಹಭಾಂಡ ಭಾಜನಶುದ್ಧ್ಯರ್ಥಂಚ ಪ್ರಾಯಶ್ಚಿತ್ತಾರ್ಥ ವೈಶ್ವದೇವಸೂಕ್ತಜಪಮಹಂ**

---

### ಸಾಂಕಲ್ಪಿಕಪ್ರತಿಸಾಂವತ್ಸರಿಕಶ್ರಾದ್ಧಪ್ರಯೋಗವು

ಶ್ರಾದ್ಧಕರ್ತೃವು ಶ್ರಾದ್ಧದಪೂರ್ವದಿನದಂದು ಅಥವಾ ಅಂದೇ ಬ್ರಾಹ್ಮಣವರಣವನ್ನು ಮಾಡಿ ನಿತ್ಯಕರ್ಮಗಳನ್ನನುಷ್ಠಿಸಿ ಅಪರಾಹ್ಣ ಕಾಲದಲ್ಲಿ ಸೆಗಣಿಸಾರಿಸಿದ ಶ್ರಾದ್ಧಯೋಗ್ಯ ಭೂಮಿಯಲ್ಲಿ ದರ್ಭಾದ್ಯಾಸನದಲ್ಲಿ ಕುಳಿತು ಶ್ರಾದ್ಧವನ್ನಾರಂಭಿಸಬೇಕು. '**ಪವಿತ್ರಂ ತೇ..**' ಎಂಬ ಮಂತ್ರವನ್ನು ಹೇಳಿ ಕೈಯ್ಯಲ್ಲಿ ಬ್ರಹ್ಮಗ್ರಂಥಿಯುಕ್ತ ಪವಿತ್ರವನ್ನು ಧರಿಸಿ ಎರಡುಸಲ ಆಚಮನಮಾಡಬೇಕು. ಆನಂತರ ಪೃಥ್ವಿ ತ್ವಯಾ.. ಎಂದು ಭೂಮಿಯನ್ನು ಪ್ರಾರ್ಥಿಸಿ '**ಊರ್ಧ್ವಕೇಶಿ..**' ಎಂದು ಜಪಿಸುವುದು.

ಆಚಾರದಂತೆ ಶಿಖೇ, ಯಜ್ಞೋಪವೀತ, ಸೊಂಟಗಳಲ್ಲಿ ದರ್ಭೆಗಳನ್ನು ಧರಿಸಿ, ನೀವೀಬಂಧವನ್ನು ಮಾಡಬೇಕು. ತದನಂತರ ಆಸನದಲ್ಲಿ 3ದರ್ಭೆಗಳನ್ನು ಧರಿಸಿ ಮೂರುಪ್ರಾಣಾಯಾಮ ಮಾಡಬೇಕು. '**ಪಿತೃದೇವ..ವಿಷ್ಣುಃ**' ಎಂದು ಹೇಳಿ '**ಶ್ರೀಮದ್ಭಗವತೋ..**' ಎಂಬಲ್ಲಿಂದ ದೇಶಕಾಲಗಳನ್ನು ಸ್ಮರಿಸಿ '**ಪುರೂರವ..ದೇವಾನಾಂ**' ಎಂದು ಹೇಳಿ ಅಪಸವ್ಯ ಮಾಡಿಕೊಂಡು '**ಅಸ್ಮತ್ ಪಿತೃಪಿತಾ..**' ಇತ್ಯಾದಿ

**ಕರಿಷ್ಯೇ**'' ಇತಿ ಸಂಕಲ್ಪ್ಯ, ಸವ್ಯೇನ ದೇವಾರ್ಚನಾರ್ಥಂ ಯವೋದಕಂ, ಪ್ರಾಚೀನಾವೀತಿನಾ ಪಿತ್ರ್ಯಕಾರ್ಯಾರ್ಥಂ ತಿಲೋದಕಂ ಚ ಸಂಪಾದ್ಯ, ಬ್ರಾಹ್ಮಣೈಃ ಸಹಾತ್ಮಶುದ್ಧ್ಯರ್ಥಂ ಗೃಹಭಾಂಡಭಾಜನಾದಿಶುದ್ಧ್ಯರ್ಥಂ '**ಸಹಸ್ರಶೀರ್ಷಾ ಪುರುಷಃ...**' ಇತ್ಯಾದಿ '**..ಶುದ್ಧೋ ವಾಜಂ ಸಿಷಾಸಸಿ**' ಇತ್ಯಂತಾನ್ಮನ್ತ್ರಾನ್‌ಜಪೇತ್। ಯವೋದಕಪಾತ್ರಂ ಸ್ಪೃಶನ್ನಭಿಮಂತ್ರಯೇಚ್ಚ।

ತತಃ ಪಾತ್ರಾಂತರೇ ಯವೋದಕಮಾದಾಯ ''**ಅಪವಿತ್ರಃ ಪವಿತ್ರೋ..ಭ್ಯಂತರಃ ಶುಚಿಃ**'' ಇತ್ಯಾತ್ಮಾನಂ ಬ್ರಾಹ್ಮಣಾನ್‌ಶ್ರಾದ್ಧೋಪಯೋಗಿವಸ್ತೂನಿ ಚ ಸಂಪ್ರೋಕ್ಷ್ಯ ''**ಸರ್ವಂ ಸ್ಥಲಭಾಂಡಾದಿ ಶುಚಿ ಭವತು**'' ಇತಿ ವದೇತ್ {''ಅಸ್ತು ಸರ್ವಂ ಶುಚಿ''ಪ್ರ+೯॥

## ಬ್ರಹ್ಮದಂಡಮನುಜ್ಞಾ ಚ

ತತಃ ಕರ್ತಾ ಬ್ರಾಹ್ಮಣಾನ್ ''**ದೇವಾಃ ಸ್ವಾಗತಮ್, ಪಿತರಃ ಸ್ವಾಗತಮ್**'' ಇತಿ ಸ್ವಾಗತೋಕ್ತ್ಯಾಹೂಯ। ಪ್ರಾಙ್ಮುಖಾ ದೇವಾಃ ಉದಙ್ಮುಖಾಃ ಪಿತರಃ ಇತಿ ಯಥಾಕ್ರಮಂ ವಿಪ್ರಾನುಪವೇಶ್ಯ। ''**ಅಧಿಕಾರಸಿದ್ಧ್ಯರ್ಥಂ ಬ್ರಹ್ಮದಂಡಂಕರಿಷ್ಯೇ**'' ಇತಿ ಸಂಕಲ್ಪ್ಯ ಬ್ರಹ್ಮದಂಡಾರ್ಥಂ ಕುಶತಿಲಹಿರಣ್ಯಾನ್ಯುದಪಾತ್ರಂ ಚ ಗೃಹೀತ್ವಾ ಕನಿಷ್ಠಪೂರ್ವಂ ಬ್ರಾಹ್ಮಣಾನ್ ತ್ರಿಃ ಪ್ರದಕ್ಷಿಣೀ ಕುರ್ಯಾತ್॥ ''**ಓಂ ಭೂರ್ಭುವಃ ಸ್ವಃ॥ ಸಮಸ್ತಸಂಪತ್ಸವಾಪ್ರತಿ...ಪಾಂಸವಃ॥ ಆಪದ್ಘನ...ಪಾದಪಾಂಸವಃ॥ ವಿಪ್ರೌಘ...ದಚ್ಯುತಂ ಪದಮ್॥ ಆಧಿವ್ಯಾಧಿಹರಂ ...ಶ್ರೀಪಾದಪಂಕಜಮ್॥ ಯಾವತೀರ್ವೈ ದೇವತಾ...ದೇವತಾಃ ಪ್ರೀಣಾತಿ**''

---

ಹೇಳಿ ಸವ್ಯದಿಂದ '**ಏತೇಷಾಂ..ಕರಿಷ್ಯೇ**' ಎಂದು ಸಂಕಲ್ಪಿಸಿ, ತದಂಗಂ '**ಯವತಿಲೋ..ಕರಿಷ್ಯೇ। ಆತ್ಮಶುದ್ಧ್ಯರ್ಥಂ..ಕರಿಷ್ಯೇ**' ಎಂದು ಸಂಕಲ್ಪಿಸಿ, ದೇವಾರ್ಚನೆಗಾಗೀ ಯವೋದಕವನ್ನೂ ಪಿತ್ರರ್ಚನೆಗಾಗಿ ತಿಲೋದಕವನ್ನೂ ಸಿದ್ದಗೊಳಿಸಿ.ಭೋಕ್ತೃಗಳೊಡನೆ ಪುರುಷಸೂಕ್ತ ಮುಂತಾದ ಮಂತ್ರಗಳನ್ನು ಮತ್ತು ಯವೋದಕವನ್ನಭಿಮಂತ್ರಿಸಬೇಕು ಆನಂತರ ಕಲಶದಿಂದ ಒಂದು ಪಾತ್ರೆಯಲ್ಲಿಸ್ವಲ್ಪ ಯವೋದಕವನ್ನು ತೆಗೆದುಕೊಂಡು '**ಅಪವಿತ್ರಃ..**' ಎಂದು ವಿಷ್ಣುಸ್ಮರಣೆಯನ್ನು ಮಾಡುತ್ತಾ ತನ್ನ ಮೇಲೂ ಬ್ರಾಹ್ಮಣರಮೇಲೂ ಪ್ರೋಕ್ಷಿಸಿ ಇತರ ಶ್ರಾದ್ಧೋಪಯೋಗಿ ವಸ್ತುಗಳ ಮೇಲೆಯೂ ಪ್ರೋಕ್ಷಿಸಬೇಕು.

**ಬ್ರಹ್ಮದಂಡಮನುಜ್ಞಾ ಚ**;ನಂತರ ಬ್ರಾಹ್ಮಣರನ್ನು '**ದೇವಾಃ ಸ್ವಾಗತಮ್, ಪಿತರಃ ಸ್ವಾಗತಮ್**' ಎಂಬ ಸ್ವಾಗತೋಕ್ತಿಯಿಂದ ಆಮಂತ್ರಿಸಿ ದೇವಬ್ರಾಹ್ಮಣರನ್ನು ಪೂರ್ವಾಭಿಮುಖವಾಗಿಯೂ ಪಿತೃಬ್ರಾಹ್ಮಣರನ್ನು ಉತ್ತರಾಭಿಮುಖವಾಗಿಯೂ ಕುಳ್ಳಿರಿಸಿ '**ಅಧಿಕಾರಸಿದ್ಧ್ಯರ್ಥಂ ಬ್ರಹ್ಮದಂಡಂ ಕರಿಷ್ಯೇ**' ಎಂದು ಸಂಕಲ್ಪಿಸಿ ಬ್ರಹ್ಮದಂಡಕ್ಕಾಗಿ ಸ್ವಲ್ಪ ಚಿನ್ನ ಅಥವಾ ದಕ್ಷಿಣೆ ಇತ್ಯಾದಿಗಳನ್ನು ತೆಗೆದುಕೊಂಡು ಬ್ರಾಹ್ಮಣರಿಗೆ

ಇತಿ|| ತತಃ ಬ್ರಹ್ಮದಂಡಂಬ್ರಾಹ್ಮಣಾನಾಂ ಪುರತಃ ಭೂಮೌ ನಿಕ್ಷಿಪ್ಯ ಬ್ರಾಹ್ಮಣೇಭ್ಯೋ ದತ್ವಾ, **''ನಮೋ ದೇವೇಭ್ಯಃ''** ಇತಿ ದೇವೇಭ್ಯಃ, **''ಸ್ವಧಾ ಪಿತೃಭ್ಯಃ''** ಇತಿ ಪಿತೃಭ್ಯಃ| ಏವಂ ದ್ವೌ ನಮಸ್ಕಾರೌ ಕೃತ್ವಾ|| ಅಪಸವ್ಯಮ್ **''ಅದ್ಯ ತಿಥೌ ಪಿತ್ರ್ಯಾಣಾಂ ಪ್ರತಿಸಾಂವತ್ಸರಿಕಶ್ರಾದ್ಧಂ ಕರ್ತುಂ ಮಮಾಧಿಕಾರಸಂಪದಸ್ತ್ವಿತಿ ಭವಂತೋ ಬ್ರುವಂತು''** ಇತಿ ಪ್ರಾರ್ಥಯೇತ್ {''ಶ್ರಾದ್ಧಾಧಿಕಾರಸಂಪದಸ್ತು'' ಇತಿ ವಿಪ್ರಾಃ|| ಸವ್ಯಂ **''ಕಾಲೋಽಯಂಮುಖ್ಯಕಾಲೋಽಸ್ತ್ವಿತಿ ಭವಂತೋ ಬ್ರವಂತು''** ಇತಿ ಕರ್ತಾ ವದೇತ್ {''ಕಾಲೋಽಯಂಮುಖ್ಯಕಾಲೋಽಸ್ತು'' ಇತಿ ವಿಪ್ರಾಃ|| **''ಪಾಕಾದೀನಾಂ ಹವಿರ್ಯೋಗ್ಯತಾಸ್ತ್ವಿತಿ ಭವಂತೋ ಬ್ರುವಂತು''** ಇತಿ ಕರ್ತಾ {''ಪಾಕಾದೀನಾಂ ಹವಿರ್ಯೋಗ್ಯತಾಸ್ತು'' ಇತಿ ವಿಪ್ರಾಃ||

## ದ್ವಿತೀಯಂ ವರಣಮ್

ಅಥ ಕರ್ತಾ **''ಕ್ಷಣಾದಿ ಕರಿಷ್ಯೇ''** ಇತ್ಯುಕ್ತ್ವಾ {''ಕುರುಷ್ವ''ಇತಿ ವಿಪ್ರಾಃ, ದೇವಾರ್ಥವಿಪ್ರಸ್ಯ ಪುರತ ಉದಙ್ಮುಖಃ ಸ್ಥಿತ್ವಾ ವಿಪ್ರಸ್ಯ ದಕ್ಷಿಣಂ ಜಾನು ಸ್ಪೃಷ್ಟ್ವಾ **''ಪಿತೃಣಾಂ ...ಶ್ರಾದ್ಧೇ ಪುರೂರವಾ..ರ್ಥಂ ತ್ವಯಾ ಕ್ಷಣಃ ಕರ್ತವ್ಯಃ, ಪ್ರಾಪ್ನೋತು ಭವಾನ್''** ಇತಿ ವದೇತ್|| {''ಓಂ ತಥಾ| ಪ್ರಾಪ್ನವಾನಿ'' ಇತಿ ದೇವಬ್ರಾಹ್ಮಣಃ

ಅಪಸವ್ಯಮ್| ಪಿತ್ರರ್ಥವಿಪ್ರಸ್ಯ ಪುರತಃ ಪ್ರಾಗ್ದಕ್ಷಿಣಾಮುಖಃ ಸ್ಥಿತ್ವಾ ವಿಪ್ರಸ್ಯ ದಕ್ಷಿಣಂ ಜಾನುಸ್ಪೃಷ್ಟ್ವಾ **''ಪಿತೃಣಾಂ ...ಶ್ರಾದ್ಧೇ ಅಸ್ಮತ್ಪಿತೃಪಿತಾಮ..ಕ್ಷಣಃ ಕರ್ತವ್ಯಃ, ಪ್ರಾಪ್ನೋತು ಭವಾನ್''**| {''ಓಂ ತಥಾ, ಪ್ರಾಪ್ನವಾನಿ'' ಇತಿ ಪಿತ್ರ್ಯವಿಪ್ರಃ} ತತೋ ಬ್ರಾಹ್ಮಣಾನ್ಪ್ರಾರ್ಥಯೇತ್ **''ಅಕ್ರೋಧನೈಃ ...ಶ್ರಾದ್ಧಕಾರಿಣಾ''** ಇತಿ {''ಓಮ್ ತಥಾ'' ಇತಿಪ್ರ+}||

---

**'ಸಮಸ್ತಸಂಪತ್ಸಮ..ಪ್ರೀಣಾತಿ'** ಎಂದು ಹೇಳಿ ಮೂರು ಪ್ರದಕ್ಷಿಣೆಗಳನ್ನು ಮಾಡಿ, ಬ್ರಹ್ಮದಂಡವನ್ನು ಬ್ರಾಹ್ಮಣರಿಗಿತ್ತು ಅವರಿಗೆ **'ನಮೋ ದೇವೇಭ್ಯಃ, ಸ್ವಧಾ ಪಿತೃಭ್ಯಃ'** ಎಂದು ನಮಸ್ಕರಿಸಿ, ಅಪಸವ್ಯದಿಂದ **'ಅದ್ಯ ತಿಥೌ..ಬ್ರುವಂತು'** ಎಂದು ಸವ್ಯದಲ್ಲಿ **'ಕಾಲೋಽಯಂ ... ಬ್ರುವಂತು, ಪಾಕಾದೀನಾಂ..'** ಇತ್ಯಾದಿ ಹೇಳಿ ಯಥೋಕ್ತ ಪ್ರತಿವಚನದ ಆನಂತರ **'ಕ್ಷಣಾದಿ ಕರಿಷ್ಯೇ'** ಎಂದು ಬ್ರಾಹ್ಮಣರ ಅನುಜ್ಞೆಯನ್ನು ಪಡೆದು ದೇವಬ್ರಾಹ್ಮಣರ ಮುಂದೆ ಉದಙ್ಮುಖನಾಗಿ ನಿಂತು ವಿಶ್ವದೇವಸ್ಥಾನದಲ್ಲಿ ಕುಳಿತ ಬ್ರಾಹ್ಮಣನ ಬಲ ಮೊಣಕಾಲನ್ನು ಮುಟ್ಟಿ **'ಪಿತೃಣಾಂ ಶ್ರಾದ್ಧೇ..ದೇವಾರ್ಥೇ..ಕರ್ತವ್ಯಃ'** ಎಂದು ಹೇಳಬೇಕು. ಆನಂತರ ಅಪಸವ್ಯದಿಂದ ಪಿತೃಬ್ರಾಹ್ಮಣನ ಬಲಮೊಣಕಾಲನ್ನು ಮುಟ್ಟಿ **'ಪಿತ್ರ್ಯಾಣಾಂ..ಅಸ್ಮತ್ಪಿತೃ..ಕರ್ತವ್ಯಃ'** ಎಂದು ಹೇಳಬೇಕು. ಬ್ರಾಹ್ಮಣರು ಯಥೋಕ್ತ ಪ್ರತಿವಚನವೀಯಬೇಕು. ಹೀಗೆ ಕ್ಷಣವನ್ನಿತ್ತು ಬ್ರಾಹ್ಮಣರನ್ನು ಪ್ರಾರ್ಥಿಸುವುದು **'ಅಕ್ರೋಧನೈಃ..ಶ್ರಾದ್ಧಕಾರಿಣಾ'** ಎಂದು.

## ಮಂಡಲಾರ್ಚನಂ ಪಾದಪ್ರಕ್ಷಾಲನಮ್

ಅಥ ಪಾದ್ಯಮಂಡಲಾನಿ ಕುರ್ಯಾತ್ತದ್ಯಥಾ। ಗೃಹದ್ವಾರೇಽಂಗಣೇ ಪ್ರಾದೇಶಮಾತ್ರಂ ಚತುರಶ್ರಂ ದೇವಾನಾಂ, ಪ್ರಾದೇಶಮಾತ್ರಂ ವಿಷ್ಕಂಭಂ ವರ್ತುಲಂ ಮಂಡಲಂ ಪಿತ್ರ್ಯಾಣಾಂ ಇತಿ ಮಂಡಲೇ ಕುರ್ಯಾತ್॥

ತತಃ **''ದೇವಪಾದ್ಯಸ್ಥಾನೇ ಇದಮಾಸನಮ್''** ಇತಿ ದೈವಿಕಮಂಡಲೇ ಪ್ರಾಗಗ್ರಾನ್ ದರ್ಭಾನಾಸ್ತೀರ್ಯ। **''ಇಮೇ ಗಂಧಾಃ। ಇಮಾನಿ ಪುಷ್ಪಾಣಿ''** ಇತಿ ಮಂಡಲಂ ಗಂಧಪುಷ್ಪೈರಭ್ಯರ್ಚ್ಯ। **''ಸರ್ವೇ ಉಪಚಾರಾಃ ಯವೈಃ ಸಂಪೂರ್ಣಾಃ ಸಂತು''** ಇತಿ ಯವಾನ್ ಕ್ಷಿಪೇತ್॥ ಅಪಸವ್ಯಮ್। **''ಪಿತೃಪಾದ್ಯಸ್ಥಾನೇ ಇದಮಾಸನಮ್''** ಇತಿ ಪಿತೃಮಂಡಲೇ ದಕ್ಷಿಣಾಗ್ರಾನ್‌ದರ್ಭಾನಾಸ್ತೀರ್ಯ। **''ಇಮೇ ಗಂಧಾಃ। ಇಮಾನಿ ಪುಷ್ಪಾಣಿ''** ಇತಿ ಮಂಡಲಂ ಗಂಧಪುಷ್ಪೈರಭ್ಯರ್ಚ್ಯ। **''ಸರ್ವೇ ಉಪಚಾರಾಸ್ತಿಲೈಃ ಸಂಪೂರ್ಣಾಃ ಸಂತು''** ಇತಿ ತಿಲಾನ್ ಕ್ಷಿಪೇತ್॥

ಸವ್ಯಮ್। ಕರ್ತಾ **''ಪುರೂರವಾದ್ರ್ರವ...ಸ್ವಾಗತಮ್''** {''ಸುಸ್ವಾಗತಮ್''ಪ್ರ+೯'' ಇತಿ ದೇವಬ್ರಾಹ್ಮಣಂ ಚತುರಶ್ರಮಂಡಲತಃ ಪಶ್ಚಿಮದೇಶೇ ಪ್ರಾಙ್ಮುಖಮುಪವೇಶ್ಯ ತತ್ಪಾದೌ ಮಂಡಲೇ ನಿಧಾಯ, **''ಪುರೂರವಾದ್ರ್ರವ..ಸ್ವ ಇದಂತೇ ಪಾದ್ಯಮ್''** {''ಸುಪಾದ್ಯಮ್''ಪ್ರ+೯'' ಇತಿ ಪಾದ್ಯಂನಿವೇದ್ಯ॥ ಪಾದತಲಂ ಘೃತಗೋಮಯಾಕ್ತಂ ಕೃತ್ವಾ **''ಶಂನೋ ದೇವೀ..ಸ್ರವಂತು ನಃ॥ ಆಧಿವ್ಯಾಧಿ..ಪಂಕಜಮ್''** ಇತ್ಯಾದ್ಯುಚ್ಚರನ್ ಪಾದಪ್ರಕ್ಷಾಲನಂ ಕುರ್ಯಾತ್।

---

**ಮಂಡಲಾರ್ಚನೆ,ಪ್ರಪಾದಕ್ಷಾಲನೆ;**-ನಂತರ ಹೊರಾಂಗಳದಲ್ಲಿ ದೇವ ಹಾಗೂ ಪಿತೃಬ್ರಾಹ್ಮಣರ ಪಾದಪ್ರಕ್ಷಾಳನೆಗಾಗಿ ಚೌಕಾಕಾರದ ಮತ್ತು ವೃತ್ತಾಕಾರ ಪಾದ್ಯಮಂಡಲಗಳನ್ನು ಮಾಡಬೇಕು. ಬಳಿಕ ಸವ್ಯದಿಂದ ದೇವಮಂಡಲದಲ್ಲಿ ದರ್ಭೆ,ಗಂಧ,ಪುಷ್ಪಾಕ್ಷತೆಗಳನ್ನು ಹಾಕಿ, ಅಪಸವ್ಯದಿಂದ ಪಿತೃಪಾದ್ಯಮಂಡಲದ ದರ್ಭೆ,ಗಂಧ,ಎಳ್ಳುಗಳನ್ನು ಹಾಕಬೇಕು. ಆನಂತರ ದೇವಬ್ರಾಹ್ಮಣನಿಗೆ ವಂದಿಸಿ **'ದೇವಾಃ ಸ್ವಾಗತಮ್'** ಎಂದು ಹೇಳಿ ಚೌಕಾಕಾರದ ಮಂಡಲದಪಶ್ಚಿಮಭಾಗದಲ್ಲಿ ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಕರ್ತನು ಅವನೆದುರಿಗೆ ಪ್ರತ್ಯಙ್ಮುಖನಾಗಿ ಕುಳಿತು ಬ್ರಾಹ್ಮಣನಪಾದವನ್ನು ಮಂಡಲದಲ್ಲಿರಿಸಿ **'ಭೂರ್ಭುವಃಸ್ವ..ಪಾದ್ಯಂ'** ಎಂದು ಗಂಧಪುಷ್ಪಯವಯುತವಾದಪಾದ್ಯವನ್ನು ನಿವೇದಿಸಿ. ವಿಪ್ರನಕಾಲಿಗೆ ತುಪ್ಪಮತ್ತುಗೋಮಯವನ್ನು ಲೇಪಿಸಿ **'ಶಂ ನೋ ದೇವೀ..'** ಇತ್ಯಾದಿ ಮಂತ್ರಗಳನ್ನು ಪಠಿಸುತ್ತ ತೊಳೆಯಬೇಕು.

ಅಪಸವ್ಯಮ್।। **''ಪಿತರಃ ಸ್ವಾಗತಮ್''** ಇತ್ಯುಕ್ತ್ವಾ ಪಿತ್ರ್ಯಬ್ರಾಹ್ಮಣಂ ಉದಙ್ಮುಖಮುಪವೇಶ್ಯ {''ಸುಸ್ವಾಗತಮ್''ಪ್ರ+೯ **''ಪಿತೃಪಿತಾಮಹಪ್ರಪಿತಾಮಹಾಃ... ಭೂರ್ಭುವಃಸ್ವ ಇದಂ ವಃ ಪಾದ್ಯಮ್''** {ಸುಪಾದ್ಯಂಪ್ರ+೯ ಇತಿ ಪಾದ್ಯಂನಿವೇದ್ಯ। ಪಾದತಲಂ ಘೃತಗೋಮಯಾಕ್ತಂ ಕೃತ್ವಾ। **''ಶಂ ನೋ ದೇವೀ+ಸ್ರವಂತು ನಃ।। ಆಧಿವ್ಯಾಧಿಹರಂ ...ಶ್ರೀಪಾದಪಂಕಜಮ್''** ಇತ್ಯಾದ್ಯುಚ್ಚರನ್ ಪಾದಪ್ರಕ್ಷಾಲನಂ ಕುರ್ಯಾತ್।।

ತತಃ ಕರ್ತಾ ಉಪವೀತೀಪವಿತ್ರಂ ವಿಸೃಜ್ಯ ಹಸ್ತೌ ಪಾದೌ ಪ್ರಕ್ಷಾಲ್ಯ ದ್ವಿರಾಚಮ್ಯಾನ್ಯಂ ಪವಿತ್ರಂ ಧಾರಯೇತ್। ದೈವಬ್ರಾಹ್ಮಣಃ ಪ್ರಾಚ್ಯಾಂ, ಪಿತೃಬ್ರಾಹ್ಮಣ ಉದೀಚ್ಯಾಂ ಇತಿ ಕ್ರಮೇಣ ದ್ವಿರಾಚಾಮೇತಾಮ್।।

## ಬ್ರಾಹ್ಮಣೋಪವೇಶನಮ್

ತತಃ ಕರ್ತಾ ಶ್ರಾದ್ಧಭೂಮಿಮಾಗತ್ಯ ದೈವೇ ಪ್ರಾಗಗ್ರಕುಶದ್ವಯಸಹಿತಮಾಸನಮುಪಕಲ್ಪ್ಯ ಪಿತ್ರ್ಯೇ ದಕ್ಷಿಣಾಗ್ರದರ್ಭತ್ರಯಸಹಿತಮಾಸನಮುಪಕಲ್ಪಯೇತ್।।

**''ಸರ್ವೇಷಾಂ ಸ್ವಾಗತಮ್''** ಇತಿ ವಿಪ್ರಾನಾಹೂಯ {'ಸುಸ್ವಾಗತಂ'ಪ್ರ+೯। ವಾಮೇನ ಹಸ್ತೇನಾಸನಂ ಧೃತ್ವಾ ದಕ್ಷಿಣೇನ ದೇವಬ್ರಾಹ್ಮಣದಕ್ಷಿಣಹಸ್ತಂ ನಿರಂಗುಷ್ಠಂ ಗೃಹೀತ್ವಾ

---

ನಂತರಅಪಸವ್ಯದಿಂದಪಿತೃಬ್ರಾಹ್ಮಣನಿಗೆವಂದಿಸಿ **'ಪಿತರಃಸ್ವಾಗತಮ್'** ಎಂದುಹೇಳಿವೃತ್ತಾಕಾರದಮಂಡದ ದಕ್ಷಿಣಭಾಗದಲ್ಲಿ ಉತ್ತರಾಭಿಮುಖನಾಗಿ ಕುಳ್ಳಿರಿಸಿ ಕರ್ತನು ಅವನೆದುರಿಗೆ ಪ್ರತ್ಯಙ್ಮುಖನಾಗಿ ಕುಳಿತು ಪಿತ್ರ್ಯವಿಪ್ರನ ಪಾದಗಳನ್ನು ಮಂಡಲದಲ್ಲಿರಿಸಿ ಗಂಧಪುಷ್ಪತಿಲಯುತಪಾದ್ಯವನ್ನು ನಿವೇದಿಸಿ, ಕಾಲುಗಳಿಗೆ ತುಪ್ಪಮತ್ತುಗೋಮಯವನ್ನು ಲೇಪಿಸಿ **'ಶಂ ನೋ ದೇವೀ..'** ಇತ್ಯಾದಿ ಮಂತ್ರಗಳನ್ನು ಪಠಿಸುತ್ತ ಪಾದ್ಯವನ್ನಿತ್ತು, ಪಾದಪ್ರಕ್ಷಾಳನೆಮಾಡುವುದು. ಆನಂತರ ಕರ್ತೃವು ದೇವಮಂಡಲದ ಐಶಾನ್ಯದಲ್ಲಿ ಪವಿತ್ರವನ್ನು ಬಿಚ್ಚಿ ಕೈಕಾಲನ್ನು ತೊಳೆದುಕೊಂಡು ಎರಡು ಬಾರಿ ಆಚಮನವನ್ನು ಮಾಡುವುದು. ಹಾಗೆಯೇ ದೇವಬ್ರಾಹ್ಮಣನು ದೇವಮಂಡಲದ ಪೂರ್ವದಲ್ಲೂ, ಪಿತ್ರ್ಯಬ್ರಾಹ್ಮಣನು ಉತ್ತರದಲ್ಲೂ ಎರಡು ಆಚಮನವನ್ನು ಮಾಡುವುದು.

**ಬ್ರಾಹ್ಮಣರಿಗೆ ಆಸನಕಲ್ಪನೆ;**ಆನಂತರ ಕರ್ತನು ವಿಪ್ರರೊಡನೆ ಶ್ರಾದ್ಧಮಾಡುವ ಸ್ಥಳಕ್ಕೆ ಬಂದು ದೇವಬ್ರಾಹ್ಮಣನಿಗಾಗಿ ಪ್ರಾಗಗ್ರವಾದದರ್ಭೆಯುಕ್ತ ಕಂಬಳಿ ಮೊದಲಾದ ಆಸನವನ್ನೂ, ಪಿತೃ ಬ್ರಾಹ್ಮಣನಿಗಾಗಿ ದಕ್ಷಿಣಾಗ್ರವಾದದರ್ಭೆಯುಕ್ತ ಆಸನವನ್ನು ಸಿದ್ಧಗೊಳಿಸಿ ಸವ್ಯದಿಂದ ದೇವಬ್ರಾಹ್ಮಣನನ್ನು ಸ್ವಾಗತವೆಂದು ಆಮಂತ್ರಿಸಿ ವಾಮಹಸ್ತದಿಂದ ಆಸನವನ್ನೂ ದಕ್ಷಿಣಹಸ್ತದಿಂದ ದೇವಬ್ರಾಹ್ಮಣನ

**''ಭೂರ್ಭುವಃ ಸ್ವಃ ಸಮಾಧ್ವಮ್''** ಇತ್ಯಾಸನೇ ಪ್ರಾಙ್ಮುಖಮುಪವೇಶಯೇತ್ {'ಸುಸಮಾಸ್ಮಹೇ'ಪ್ರ+೯॥ ಅಪಸವ್ಯಮ್। ವಾಮೇನ ಹಸ್ತೇನಾಸನಂ ಧೃತ್ವಾ ದಕ್ಷಿಣೇನ ಪಿತ್ರ್ಯಬ್ರಾಹ್ಮಣದಕ್ಷಿಣಹಸ್ತಂನಿರಂಗುಷ್ಠಂಗೃಹೀತ್ವಾ **''ಭೂರ್ಭುವಃಸ್ವಃಸಮಾಧ್ವಮ್''**ಇತ್ಯಾಸನೇ ಉದಙ್ಮುಖಮುಪವೇಶಯೇತ್ {'ಸುಸಮಾಸ್ಮಹೇ'ಪ್ರ+೯॥ ತತಃ ಪ್ರತಿವಿಪ್ರಮವಿಚ್ಛಿನ್ನಂ ತೈಲದೀಪಂ ಸ್ಥಾಪಯೇತ್॥

## ಸಂಕಲ್ಪಃಸ್ಥಲಶುದ್ಧಿಃ

ಸವ್ಯಮ್। ಆಚಮ್ಯ। ಪ್ರಾಣಾಯಾಮತ್ರಯಂ ಕೃತ್ವಾ। **''ಅದ್ಯಪೂರ್ವೋಚ್ಚರಿ+ತಿಥೌ''**। ಅಪಸವ್ಯಮ್। **''ಉಪಕ್ರಾನ್ತಂ ಪಿತ್ರ್ಯಾಣಾಂ ಪ್ರತಿಸಾಂವತ್ಸರಿಕಶ್ರಾದ್ಧಂ ಕರಿಷ್ಯೇ''** ಇತಿ ಸಂಕಲ್ಪಂ ಕೃತ್ವಾ{''ಕುರುಷ್ವ''ಪ್ರ+೯।

ಅಪಸವ್ಯಮ್॥ ತಿಲಾನಾದಾಯ ವಾಯುಂ ನಿರುದ್ಧ್ಯ ನೈರ್ಋತಿಕೋಣಮಾರಭ್ಯಾಪ್ರದಕ್ಷಿಣಂ ಶ್ರಾದ್ಧಭೂಮೌ ಸರ್ವತಃ ತಿಲಾನ್ವಿಕೀರೇತ್ **''ಅಪಹತಾ ಅಸುರಾ...ಗತಂ ಮನಃ''** ಇತಿ॥ ತತಸ್ತಿಲೋದಕಮಾದಾಯ **''ಉದೀರತಾಮವರ ...ಪಿತರೋ ಹವೇಷು''** ಇತಿ ಪಿತ್ರ್ಯಾಣಾಂ ಪುರತಃ ಪ್ರೋಕ್ಷ್ಯ। ಸವ್ಯಮ್। ಯವೋದಕಮಾದಾಯ **''ತತ್ಸವಿತು...ಪ್ರಚೋದಯಾತ್''** ಇತಿ ದೇವಾನಾಂ ಪುರತಃ ಪ್ರೋಕ್ಷಯೇತ್॥ **''ರಕ್ಷೋಹಣಂ..ಪಾತು ನಕ್ತಮ್। ಅಷ್ಟೌವಸವ ..ಗಯೇಯಂಭೂಮಿಃ''**{''ಸುಭೂಮಿಃ''ಪ್ರ+೯ ಇತಿ ಜಪಿತ್ವಾ। **''ತಿಲಾರಕ್ಷನ್ತ್ವ..ಸರ್ವರಕ್ಷಕಃ''** ಇತಿ ಗೃಹದ್ವಾರೇ ಕುಶತಿಲಾನ್ಕ್ಷಿಪೇತ್॥

---

ಹೆಬ್ಬೆರಳನ್ನು ಬಿಟ್ಟು ದಕ್ಷಿಣಹಸ್ತವನ್ನೂ ಹಿಡಿದು '**ಭೂರ್ಭುವಸ್ಸ್ವಃ, ಸಮಾಧ್ವಂ**' ಎಂದು ಕುಳ್ಳಿರುಸುವುದು. ಆನಂತರ ಅಪಸವ್ಯದಿಂದ ಮೊದಲಿನಂತೆ ಪಿತ್ರ್ಯಾಸನಸ್ಪರ್ಶ ನಿರಂಗುಷ್ಠಹಸ್ತಗ್ರಹಣಾದಿಗಳನ್ನು ಮಾಡಿ '**ಭೂರ್ಭುವಸ್ಸ್ವಃ, ಸಮಾಧ್ವಂ**' ಇತ್ಯಾದಿ ಹೇಳುವುದು. ಪ್ರತಿ ವಿಪ್ರನಬಳಿಯಲ್ಲಿ ಎಳ್ಳೆಣ್ಣೆಯ ದೀಪವೊಂದನ್ನು ಉರಿಸಿಡುವುದು.

**ಸಂಕಲ್ಪ ಮತ್ತು ಸ್ಥಲಶುದ್ಧ್ಯಾದಿಕರ್ಮ;** ಆಚಮನವನ್ನು ಮಾಡಿ '**ಅದ್ಯ ಪೂರ್ವೋ..ದಿಂದ..ತಿಥೌ**' ವರೆಗೆ ಹೇಳಿ ಅಪಸವ್ಯವಾಗಿ '**ಉಪಕ್ರಾಂತಂ..ಕರಿಷ್ಯೇ**' ಎಂದು ಸಂಕಲ್ಪಮಾಡಬೇಕು. ಆನಂತರ ಅಪಸವ್ಯದಿಂದ ಎಳ್ಳನ್ನು ತೆಕ್ಕೊಂಡು ಪ್ರಾಣವಾಯುವನ್ನು ಕಿಂಚಿತ್ಕಾಲ ನಿರೋಧಿಸಿ '**ಅಪಹತಾಃ..**' ಎಂದು ಶ್ರಾದ್ಧಸ್ಥಲಲ್ಲಿ ಅಪ್ರದಕ್ಷಿಣವಾಗಿ ಚೆಲ್ಲುವುದು. ಪಿತ್ರ್ಯ ಬ್ರಾಹ್ಮಣನ ಮುಂದೆ '**ಉದೀರತಾ..**' ಮಂತ್ರದಿಂದ ತಿಲೋದಕಪ್ರೋಕ್ಷಿಸಿ ಸವ್ಯದಿಂದ '**ತತಸವಿರ್ವರೇಣ್ಯಂ..**' ಮಂತ್ರದಿಂದ ದೇವಬ್ರಾಹ್ಮಣ ಮುಂದೆ ಯವೋದಕವನ್ನು ಪ್ರೋಕ್ಷಿಸಿವುದು. '**ರಕ್ಷೋಹಣಂ..**' ಎಂಬಲ್ಲಿಂದ '**ಗಯೇಯಂ ಭೂಮಿಃ**'

ಸವ್ಯಮ್। ಪಾತ್ರಾನ್ತರೇ ಕಿಂಚಿದ್ಯವೋದಕಂ ಗೃಹೀತ್ವಾ ''**ತರತ್ಸಮಂದೀ...(3)ತರತ್ಸಮನ್ದೀ ಧಾವತಿ॥ ತ್ರಿಭಿಷ್ಟ್ವಂ ದೇವ ...ಉತ್ತಮಂ ಹವಿಃ॥ ತದ್ವಿಷ್ಣೋಃ ...ರಾತತಮ್॥ ಭೂರ್ಭುವಸ್ಸ್ವಃ॥ ತತ್ಸವಿತು...ಪ್ರಚೋದಯಾತ್**'' ಇತಿ ದರ್ಭೈಃ ಪಾಕಪ್ರೋಕ್ಷಣಂ ಕೃತ್ವಾ ''**ಪಾಕಾದೀನಂ ಪವಿತ್ರತಾಸ್ತು**'' ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್। {''**ಸರ್ವೇ ಪಾಕಾಃ ಶುಚಯೋ ಭವಂತು**'' ಇತಿಪ್ರ+ಉ॥ ''**ಪಾಕಪ್ರೋಕ್ಷಣಂ ವಿಧಿವದಸ್ತು**'' ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್ {''ಅಸ್ತು ವಿಧಿವತ್''ಪ್ರ+ಉ। ''**ದೇವತಾಭ್ಯಃ ಪಿತೃಭ್ಯಶ್ಚ ..ನಮೋ ನಮಃ**'' ಇತಿ ತ್ರಿರ್ಜಪಿತ್ವಾ॥ ಅಪಸವ್ಯಮ್। ''**ಶ್ರಾದ್ಧಭೂಮೌ ಗಯಾಂ...ಶ್ರಾದ್ಧಂ ಪ್ರವರ್ತತೇ॥** '' ಇತಿ ಗಯಾಂ ಗದಾಧರಂ ಪಿತೄನ್ಧ್ಯಾಯೇತ್॥ {''ಪ್ರವರ್ತಯ''ಪ್ರ+ಉ॥

## ದೇವಾರ್ಚನಮ್

ಸವ್ಯಮ್। ತತಃ ಕರ್ತಾ ಉದಙ್ಮುಖಃ ದಕ್ಷಿಣಂ ಜಾನು ನಿಪಾತ್ಯ। ದೇವವಿಪ್ರಹಸ್ತೇಽಪೋ ದತ್ವಾ॥ ವಾಮಕರಾಲಬ್ಧೇನೋತ್ತಾನೇನ ದಕ್ಷಿಣಕರೇಣ ಸಯವಂ ದರ್ಭದ್ವಯಂಪ್ರಾಗಗ್ರಮಾದಾಯ ಆಸನದಕ್ಷಿಣಭಾಗೇ ''**ಪುರೂರವಾರ್ದವಸಂಜ್ಞಾನಾಂ ವಿಶ್ವೇಷಾಂ ದೇವಾನಾಂ ಬ್ರಹ್ಮಣೇ ಭೂರ್ಭುವಃ ಸ್ವರಿದಮಾಸನಮ್**'' {''ಸ್ವಾಸನಮ್''ಪ್ರ+ಉ ಇತಿ ದತ್ವಾಸನಂ ಸಂಸ್ಪೃಶ್ಯ, ''**ಅತ್ರಾಸ್ಯತಾಮ್**'' ಇತಿ ವದೇತ್ {''ಧರ್ಮೋಽಸಿ (ವಿಶಿರಾಜಾ ಪ್ರತಿಷ್ಠಿತಾಃ)'' ಇತಿಪ್ರ+ಉ॥ ತತಃ ಹಸ್ತಾಭ್ಯಾಂ ದರ್ಭಾನಾದಾಯ ವಿಪ್ರಸ್ಯ ನಿರಂಗುಷ್ಠಂ ದಕ್ಷಿಣಂ ಕರಂ ಧೃತ್ವಾ

---

ಎಂಬಲ್ಲಿ ವರೆಗೆ ಜಪಿಸಿ ಅಪಸವ್ಯದಿಂದ '**ತಿಲಾರಕ್ಷಂತ್ವಸು**' ಎಂಬಮಂತ್ರದಿಂದ ಮನೆಯಬಾಗಿಲಿನಲ್ಲಿ ದರ್ಭೆಮತ್ತುಎಳ್ಳನ್ನಿಡುವುದು. ಆಮೇಲೆ ಸವ್ಯದಿಂದ ಯವೋದಕ ತಕ್ಕೊಂಡು '**ತರತ್ಸಮಂದೀ**' ಎಂಬಲ್ಲಿಂದ '**ಪ್ರಚೋದಯಾತ್**' ಎಂಬಲ್ಲಿವರೆಗೆ ಮಂತ್ರಗಳನ್ನು ಹೇಳುತ್ತ ಪಾಕಗಳನ್ನು ಪ್ರೋಕ್ಷಿಸಿ '**ಪಾಕಾದೀನಾಂ...ವಿಧಿವದಸ್ತು**' ಎಂದು ಪ್ರಾರ್ಥಿಸಬೇಕು. '**ದೇವತಾಭ್ಯಃ**' ಎಂದು 3ಬಾರಿ ಜಪಿಸಬೇಕು ಆನಂತರ ಅಪಸವ್ಯದಿಂದ '**ಶಾದ್ಧಭೂಮೌ..ಪ್ರವರ್ತತೇ**' ಎಂದು ಪುನಃ ಪ್ರಾರ್ಥಿಸಬೇಕು,

**ದೇವಾರ್ಚನೆ;** ಸವ್ಯ ಮಾಡಿಕೊಂಡು ದೇವ ಬ್ರಾಹ್ಮಣರಕೈಗೆ ಕೂರ್ಚದಿಂದ ನೀರು ಕೂಡಬೇಕು. ಎಡಗೈಯಿಂದ ಮುಟ್ಟಿಕೊಂಡ ಬಲಗೈಯಿಂದ ಅಕ್ಕಿಕಾಳು ಮತ್ತು ಎರಡು ದರ್ಭೆಗಳನ್ನು '**ಪುರೂರವಾ..ಮಾಸನಂ**' ಎಂದು ಹೇಳಿ ಬ್ರಾಹ್ಮಣರು ಕುಳಿತ ಆಸನದ ಬಲಭಾಗದಲ್ಲಿ ಇಡಬೇಕು. ಆನಂತರ ಆಸನವನ್ನು ಮುಟ್ಟಿ '**ಆತ್ರಾಸ್ಯತಾಂ**' ಎಂದು ಹೇಳಿದಾಗ ಬ್ರಾಹ್ಮಣರು '**ಧರ್ಮೋಽಸಿ..**' ಎಂದು ಉತ್ತರವನ್ನೀಯಬೇಕು. ಆನಂತರ ಕೈಗಳೆರಡರಲ್ಲೂ ದರ್ಭೆಯನ್ನಿಟ್ಟುಕೊಂಡು ವಿಪ್ರರ ಉಂಗುಷ್ಠವನ್ನು ಬಿಟ್ಟು ಕೈಹಿಡಿದು, '**ಪ್ರತಿಸಾಂವತ್ಸರಿಕ.. ಕ್ರಿಯತಾಂ, ಪ್ರಾಪ್ನೋತು ಭವಾನ್**' ಎಂದು ಕ್ರಮವಾಗಿ ಹೇಳಬೇಕು. ಬ್ರಾಹ್ಮಣನು '**ಓಂ ತಥಾ, ಪ್ರಾಪ್ನವಾನಿ**' ಎಂದು ಪ್ರತ್ಯುತ್ತರಿಸಬೇಕು.

**''ಪ್ರತಿಸಾಂವತ್ಸರಿಕಶ್ರಾದ್ಧೇ ದೈವೇ ಕ್ಷಣಃ ಕ್ರಿಯತಾಮ್''** {''ಓಂ ತಥಾ''ಪ್ರ+೯, **''ಪ್ರಾಪ್ನೋತು ಭವಾನ್''** {''ಪ್ರಾಪ್ನವಾನಿ''ಪ್ರ+೯ ಇತಿ ವದೇತ್॥

{ಸಾಂಕಲ್ಪಿಕೇಶ್ರಾದ್ಧೇಽತ್ರ ಆವಾಹನಂ ಕೃತಾಕೃತಂ ಆವಾಹನಪಕ್ಷೇ ಮಂತ್ರಂ ವಿನಾವಾಹನಂ ತತ್ಪ್ರಕಾರಃ;- **''ಪುರೂರವಾರ್ದ್ರವಸಂಜ್ಞಕಾನ್ವಿಶ್ವಾನ್ ದೇವಾನ್ಭವತ್ಸ್ವಾವಾಹಯಿಷ್ಯೇ''** ಇತಿ ಪೃಷ್ಟ್ವಾ, ಹಸ್ತೇ ಯವಾನ್ಗೃಹೀತ್ವಾ **''ಪುರೂರವಾರ್ದ್ರವಸಂಜ್ಞಕಾನ್ವಿಶ್ವಾನ್ ದೇವಾನ್ ಭವತ್ಸ್ವಾವಾಹಯಾಮಿ''** ಇತಿ ವಿಪ್ರದಕ್ಷಿಣಾಂಗಾದಿಷು ಯುಗ್ಮಕ್ರಮೇಣ ವಿಕಿರ್ಯಾವಾಹಯೇತ್॥ ೯

## ಗಂಧಾದ್ಯುಪಚಾರಃ

ತತಃ ಕರ್ತಾ ದೇವಾನ್ ಗಂಧಾದಿಭಿರರ್ಚಯೇತ್॥ **''ಪುರೂರವಾರ್ದ್ರವಸಂಜ್ಞಕವಿಶ್ವೇದೇವಾಃ ಯಥಾಭಾಗಶಃ ಅಮೀ ವೋ ಗಂಧಾಃ ಸ್ವಾಹಾ ನಮಃ''** ಇತಿ ಗಂಧಂ ದದ್ಯಾತ್। **''ಪುರೂರವಾ... ಇಮಾನಿ ವಃ ಪುಷ್ಪಾಣಿ ತುಲಸೀಪತ್ರಾಣಿ ಸ್ವಾಹಾ ನಮಃ''** ಇತಿ ಪತ್ರಪುಷ್ಪಾಣಿ। **''ಪುರೂರವಾ... ಪೂಜಾರ್ಥೇ ಏಷ ವೋ ಧೂಪಃ ಸ್ವಾಹಾ ನಮಃ''** ಇತಿಧೂಪಮಾಘ್ರಾಪಯೇತ್॥ **''ಪುರೂರವಾ... ಏಷವೋದೀಪಃಸ್ವಾಹಾನಮಃ''** ಇತಿದೀಪಂದರ್ಶಯೇತ್॥ **''ಪುರೂರವಾ... ಆಚ್ಛಾದನಾರ್ಥೇಇದಂವಸ್ತ್ರಯುಗಲಂಸ್ವಾಹಾನಮಃ''** ಇತಿಸೋತ್ತರೀಯಂವಸ್ತ್ರಂ[ವಸ್ತ್ರಾಭಾವೇ **''ವಾಸೋನಿಷ್ಕ್ರಯಂಯಥಾಶಕ್ತಿ ದ್ರವ್ಯಂಸ್ವಾಹಾ ನಮಃ''** ಇತಿ ವಾ]। ['ಅನುಲೇಪನಾರ್ಥೇ ಗೋಪೀಚಂದನಂ। ಧಾರಣಾರ್ಥೇ ಯಜ್ಞೋಪವೀತಮ್''] **''ಪವಿತ್ರಾರ್ಥಾವಿಮೌ ಕುಶೌ''** {''ಸುಪವಿತ್ರಮ್''ಪ್ರ+೯॥ **''ಯುವಾ ಸುವಾಸಾಃ....ದೇವಯಂತಃ''**॥ **''ದೇವೇಭ್ಯ ಏತೇ ಗಂಧಪುಷ್ಪಧೂಪದೀಪಾರ್ಚನಾಚ್ಛಾದನಾನ್ತಾಃ ಉಪಚಾರಾಃ ಸರ್ವೇ ಪರಿಪೂರ್ಣಾ**

---

ಸಾಂಕಲ್ಪಿಕಶ್ರಾದ್ಧದಲ್ಲಿ ಆವಾಹನೆಯು ಕೃತಾಕೃತವು ಆವಾಹನೆಯನ್ನು ಮಾಡುವುದಿದ್ದರೆ '**ಪುರೂರ..ಯಿಷ್ಯೇ**' ಎಂದು ಹೇಳಿ ಅನುಜ್ಞೆಪಡೆದು ಅಮಂತ್ರಕವಾಗಿ '**ಪುರೂರ..ಹಯಾಮಿ**' ಎಂದು ಪಾದಮೊಣಗಾಲುಭುಜಶಿರಗಳಲ್ಲಿ ಅಕ್ಷತೆಯನ್ನು ಹಾಕಿ ಆವಾಹಾನೆ ಮಾಡಬೇಕು

**ಗಂಧಾದ್ಯುಪಚಾರವು;** ಪ್ರತ್ಯುಪಚಾರದ ಪೂರ್ವದಲ್ಲೂ ಅಂತ್ಯದಲ್ಲೂ ಹಸ್ತೋದಕವನ್ನೀಯಬೇಕು ಮತ್ತು ಗಂಧವನ್ನು ಅರ್ಪಿಸುವಾಗ ಪವಿತ್ರವನ್ನು ತೆಗೆದಿಡಬೇಕು. '**ಪುರೂರವಾ.. ಗಂಧಾಃ ಸ್ವಾಹಾ ನಮಃ**' ಇತ್ಯಾದಿಗಳನ್ನು ಹೇಳುತ್ತ ಗಂಧ,ಪುಷ್ಪ, ಧೂಪ,ದೀಪ,ವಸ್ತ್ರಗಳನ್ನರ್ಪಿಸುವುದು 'ಸುಗಂಧಾಃ' ಇತ್ಯಾದಿ ಯಥೋಕ್ತ ಪ್ರತ್ಯುತ್ತರವನ್ನು ಹೇಳಬೇಕು ಆನಂತರ ವಿಷ್ಣುವನ್ನು ಸ್ಮರಿಸಿ ಶ್ರಾದ್ಧಕರ್ತನು ದೇವಾನುಜ್ಞೆಯೊಂದಿಗೆ ಪಿತ್ರರ್ಚನೆಯನ್ನು ಮಾಡುವುದು

**ಭವಂತು''** {''ಅಸ್ತು''ಪ್ರ+ಕ। **''ಅರ್ಚನವಿಧೇಃ ಸ್ವರ್ಚಿತಮಸ್ತು। ನ್ಯೂನಾತಿರಿಕ್ತಂ ವಿಧಿವದಸ್ತು''** ಇತಿ ದೇವಬ್ರಾಹ್ಮಣಂ ಪ್ರಾರ್ಥಯೇತ್{''ಅಸ್ತು ವಿಧಿವತ್''ಪ್ರ+ಕ। **''ಯಸ್ಯ ಸ್ಮೃತ್ಯಾ ಚ ... ವಂದೇ ತಮಚ್ಯುತಮ್''** ಇತಿ ಜಪಿತ್ವಾ। **''ಯುಷ್ಮದನುಜ್ಞಯಾ ಪಿತ್ರಾದ್ಯರ್ಚನಂ ಕರಿಷ್ಯೇ''** ಇತಿ ದೇವಬ್ರಾಹ್ಮಣಂ ಪ್ರಾರ್ಥಯೇತ್॥

## ಪಿತ್ರಾದ್ಯುಪಚಾರಃ

ಅಪಸವ್ಯಮ್॥ ಪ್ರಾಗ್ದಕ್ಷಿಣಾಮುಖೋ ಭೂತ್ವಾ ವಾಮಂ ಜಾನು ನಿಪಾತ್ಯ। ಪಿತ್ರ್ಯಬ್ರಾಹ್ಮಣಹಸ್ತೇಽಪೋ ದತ್ವಾ। ವಾಮಕರಾಲಬ್ಧೇನೋತ್ತಾನೇನ ದಕ್ಷಿಣಕರೇಣ ಸತಿಲದ್ವಿಗುಣಭುಗ್ನದರ್ಭಾನುದಗಗ್ರಾನ್ಆಸನವಾಮಭಾಗೇ **''ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನಾಂ...ಸ್ವರೂಪಾಣಾಂ ಬ್ರಹ್ಮಣೇ ಭೂರ್ಭುವಃಸ್ವರಿದಮಾಸನಮ್''** {''ಸ್ವಾಸನಮ್''ಪ್ರ+ಕ ಇತಿ ದತ್ವಾ ಆಸನಂ ಸಂಸ್ಪೃಶ್ಯ **''ಅತ್ರಾಸ್ಯತಾಮ್''** ಇತಿ ವದೇತ್ {''ಧರ್ಮೋಽಸಿ (ವಿಶಿರಾಜಾ ಪ್ರತಿಷ್ಠಿತಾಃ)'' ಇತಿಪ್ರ+ಕ॥ ತತಃ ಹಸ್ತಾಭ್ಯಾಂ ದರ್ಭಾನಾದಾಯ ವಿಪ್ರಸ್ಯ ನಿರಂಗುಷ್ಠಂ ದಕ್ಷಿಣಂ ಕರಂ ಧೃತ್ವಾ **''ಪ್ರತಿಸಾಂವತ್ಸರಿಕಶ್ರಾದ್ಧೇ ಪಿತ್ರ್ಯೇ ಕ್ಷಣಃ ಕ್ರಿಯತಾಮ್''** {''ಓಂ ತಥಾ''ಪ್ರ+ಕ, **''ಪ್ರಾಪ್ನೋತು ಭವಾನ್''** {''ಪ್ರಾಪ್ನವಾನಿ''ಪ್ರ+ಕ ಇತಿ ವದೇತ್।

{ಆವಾಹನಮತ್ರಕೃತಾಕೃತಮ್। ಆವಾಹನಪಕ್ಷೇ **''ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನ್....ಸ್ವರೂಪಾನ್ಭವತ್ಸ್ವಾವಾಹಯಿಷ್ಯೇ''** ಇತಿ ಪೃಷ್ಟ್ವಾ ಹಸ್ತೇ ತಿಲಾನ್ಗೃಹೀತ್ವಾ॥ **''ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನ್....ಸ್ವರೂಪಾನ್ಭವತ್ಸ್ವಾವಾಹಯಾಮಿ''** ಇತಿ ಮಂತ್ರಂ ವಿನಾ ವಿಪ್ರವಾಮಾಂಗಾದಿಯುಗ್ಮಕ್ರಮೇಣ ಶಿರಸ್ಯಂಸಯೋರ್ಜಾನ್ವೋಃ ಪಾದಯೋಶ್ಚ ತಿಲಾನ್ವಿಕಿರ್ಯಾವಾಹಯೇತ್।

---

**ಪಿತ್ರಾದ್ಯುಪಚಾರವು;**ಅಪಸವ್ಯಮಾಡಿಕೊಂಡು ಪಿತ್ರ್ಯಬ್ರಾಹ್ಮಣರಿಗೆ ಹಸ್ತೋದಕವನ್ನಿತ್ತು '**ಅಸ್ಮತ್ ಪಿತೃ.. ಮಾಸನಂ**' ಎಂದು ಹೇಳಿ ಎಳ್ಳು ಮತ್ತು ದರ್ಭೆಗಳನ್ನು ಆಸನಕ್ಕಾಗಿ ಕೊಟ್ಟುಆಸನವನ್ನು ಮುಟ್ಟಿಕೊಂಡು '**ಅತ್ರಾಸ್ಯತಾಂ**' ಎಂದು ಹೇಳಿದಾಗ ಬ್ರಾಹ್ಮಣರು '**ಧರ್ಮೋಽಸಿ..**' ಎಂದು ಉತ್ತರವನ್ನೀಯಬೇಕು. ಪ್ರರ ಉಂಗುಷ್ಠವನ್ನು ಬಿಟ್ಟು ಕೈಹಿಡಿದು, '**ಪ್ರತಿಸಾಂವತ್ಸರಿಕ.. ಕ್ರಿಯತಾಂ, ಪ್ರಾಪ್ನೋತು ಭವಾನ್**' ಎಂದು ಕ್ರಮವಾಗಿ ಹೇಳಬೇಕು. ಬ್ರಾಹ್ಮಣನು '**ಓಂ ತಥಾ, ಪ್ರಾಪ್ನವಾನಿ**' ಎಂದು ಪ್ರತ್ಯುತ್ತರಿಸಬೇಕು.

ಸಾಂಕಲ್ಪಿಕಶ್ರಾದ್ಧದಲ್ಲಿ ಆವಾಹನೆಯು ಕೃತಾಕೃತವು ಆವಾಹನೆಯನ್ನು ಮಾಡುವುದಿದ್ದರೆ '**ಅಸ್ಮತ್ ಪಿತೃಪಿತಾಮಹ.. ಆವಾಹಯಿಷ್ಯೇ**' ಎಂದು ಹೇಳಿ ಅನುಜ್ಞೆಪಡೆದು ಅಮಂತ್ರಕವಾಗಿ '**ಅಸ್ಮತ್ಪಿತೃ..ಆವಾಹಯಾಮಿ**' ಎಂದು ಶಿರಭುಜತೊಡೆಪಾದಗಳಲ್ಲಿ ಎಳ್ಳುಗಳನ್ನು ಹಾಕಿ ಆವಾಹಿಸುವುದು.

## ಪಿತ್ರಾದಿಭ್ಯೋ ಗಂಧಾದ್ಯುಪಚಾರಃ

ಪ್ರತ್ಯುಪಚಾರಂ ಆದಾವನ್ತೇ ಚ ಉದಕಂ ದದ್ಯಾತ್॥ **''ಅಸ್ಮತ್ಪಿತೃಪಿತಾಮಹಪ್ರಪಿತಾಮಹಾಃ --ಶರ್ಮಾಣಃ --ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ ಯಥಾಭಾಗಶಃ ಅಮೀ ವೋ ಗಂಧಾಃ ಸ್ವಧಾ ನಮಃ''** ಇತಿ ಗಂಧಮ್। **''ಮಾಲ್ಯಾರ್ಥೇ ಇಮಾನಿ ವಃ ಪುಷ್ಪಾಣಿ ತುಲಸೀಪತ್ರಭೃಂಗರಾಜಪತ್ರಸಹಿತಾನಿ ಸ್ವಧಾ ನಮಃ''** ಇತಿ ಪತ್ರಪುಷ್ಪಾಣಿ॥ **''ಏಷ ವೋ ಧೂಪಃ ಸ್ವಧಾ ನಮಃ''** ಇತಿ ಧೂಪಮಾಘ್ರಾಪಯೇತ್॥ **''ಏಷ ವೋ ದೀಪಃ ಸ್ವಧಾ ನಮಃ''** ಇತಿ ದೀಪಂ ದರ್ಶಯೇತ್॥ **''ಆಚ್ಛಾದನಾರ್ಥೇ ಇದಂ ವಸ್ತ್ರಯುಗಲಂ ಸ್ವಧಾ ನಮಃ''** ಇತಿ ಸೋತ್ತರೀಯಂ ವಸ್ತ್ರಂ [**''ವಾಸೋನಿಷ್ಕ್ರಯಂ ಯಥಾಶಕ್ತಿದ್ರವ್ಯಂ ಸ್ವಧಾ ನಮಃ''** ಇತಿ ವಾ]। [''ಅನುಲೇಪನಾರ್ಥೇ ಗೋಪೀಚಂದನಮ್। ಧಾರಣಾರ್ಥೇ ಯಜ್ಞೋಪವೀತಮ್। ಫಲಾರ್ಥೇ ಪೂಗೀಫಲಮ್''] **''ಪವಿತ್ರಾರ್ಥೇ ಇಮೇ ಕುಶಾಃ''** {''ಸುಪವಿತ್ರಮ್''ಪ್ರ+ಉ॥ **''ಇದಂ ಪಿತೃಭ್ಯೋ ...ಸುವೃಜನಾಸು ವಿಕ್ಷು॥ ಪಿತೃಭ್ಯಃ ಏತೇ ಗಂಧಪುಷ್ಪಧೂಪದೀಪಾಚ್ಛಾದನಾನ್ತಾಃ ಉಪಚಾರಾಃ ಸರ್ವೇ ಪರಿಪೂರ್ಣಾ ಭವಂತು''**। **''ಅರ್ಚನವಿಧೇಃ ಸ್ವರ್ಚಿತಮಸ್ತು। ನ್ಯೂನಾತಿರಿಕ್ತಂ ವಿಧಿವದಸ್ತು ವಿಧಿವದಸ್ತು''** {''ಅಸ್ತು ವಿಧಿವತ್''ಪ್ರ+ಉ। **''ಯಸ್ಯ ಸ್ಮೃತ್ಯಾ ...ತಮಚ್ಯುತಮ್''** ಇತಿ ಜಪಿತ್ವಾ॥ ಸವ್ಯಮ್। ಆಚಮ್ಯ ವಿಪ್ರಾಣಾಂ ಪುರತೋಽರ್ಚನಕಾಲೇ ಪತಿತಗಂಧಪುಷ್ಪಾದ್ಯಪನೀಯ ಭೂಮಿಂ ಸಂಮೃಜ್ಯ। **''ಯುಷ್ಮದನುಜ್ಞಯಾ ಮಂಡಲಾದಿ ಪಾತ್ರಾಸಾದನಂ ಕರಿಷ್ಯೇ''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್ {''ಕುರುಷ್ವ''ಪ್ರ+ಉ।

## ಭೋಜನಪಾತ್ರಾಸಾದನಾದಿಕರ್ಮ

ಗೋಮಯೋದಕಾಭ್ಯಾಂ ಭಸ್ಮನಾ ವಾ ದೇವಪಾತ್ರಸ್ಥಾನೇ ಚತುರಸ್ರಂ ನೈರ್ಋತಿಮಾರಭ್ಯ ಈಶಾನ್ಯಪರ್ಯನ್ತಂ ಪಾತ್ರಪ್ರಮಾಣಂ ಪ್ರದಕ್ಷಿಣಂ ಮಂಡಲಂ ಕೃತ್ವಾ॥ ಪಿತೃಪಾತ್ರಸ್ಥಾನೇ

---

**ಗಂಧಾದ್ಯುಪಚಾರವು;**ಅಪಸವ್ಯದಿಂದ ಗಂಧಾದಿ ಉಪಚಾರಗಳನ್ನು ಪಿತೃವಿಪ್ರನಿಗೆ ಕೊಡಬೇಕು, ಪ್ರತ್ಯುಪಚಾರದ ಆದ್ಯಂತಗಳಲ್ಲಿ ಕೈಗೆ ನೀರನ್ನುಕೊಡಬೇಕು. ಯವಸ್ಥಾನದಲ್ಲಿ ತಿಲವನ್ನು ಬಳಸಬೇಕು. ಆನಂತರ '**ಅರ್ಚನವಿಧೇಃ..**' ಎಂದು ಪ್ರಾರ್ಥಿಸಬೇಕು. ಆಗ ವಿಪ್ರನು '**ಅಸ್ತು ವಿಧಿವತ್**' ಎಂಬ ಪ್ರತಿವಚನವನ್ನುಹೇಳಬೇಕು, ಆನಂತರ '**ಇದಂ ಪಿತೃಭ್ಯೋ..**' ಎಂದು ಜಪಿಸಿ '**ಯಸ್ಯ ಸ್ಮೃತ್ಯಾ..**' ಎಂದು ವಿಷ್ಣುವನ್ನು ಸ್ಮರಿಸುವುದು. ಆನಂತರ ಕರ್ತೃವು ಸವ್ಯದಿಂದ ಆಚಮನವನ್ನು ಮಾಡಿ ಉಪಚಾರಕಾಲದಲ್ಲಿ ಬ್ರಾಹ್ಮಣರ ಮುಂದೆ ಬಿದ್ದ ಗಂಧಾಕ್ಷತೆ ಮುಂತಾದವುಗಳನ್ನು ತೆಗೆದು ಶುದ್ಧಿಗೊಳಿಸಿ ಸವ್ಯದಿಂದ '**ಯುಷ್ಮದನುಜ್ಞಯಾ ..ಪಾತ್ರಾ..ಕರಿಷ್ಯೇ**' ಎಂದು ಬ್ರಾಹ್ಮಣರನ್ನು ಕೇಳಿಕೊಂಡಾಗ ಅವರು 'ಕುರುಷ್ವ' ಎಂದು ಉತ್ತರ ಕೊಡಬೇಕು.

ವರ್ತುಲಂಈಶಾನೀತೋನೈರ್ಋತ್ಯನ್ತಂಪಾತ್ರಪ್ರಮಾಣಮಪ್ರದಕ್ಷಿಣಂಮಂಡಲಂಕೃತ್ವಾ।ದೈವೇ ಸಯವಾನ್, ಪಿತ್ರ್ಯೇ ಸತಿಲಾನ್‌ದರ್ಭಾನ್ ಪ್ರಾಸ್ಯ। ತತಸ್ತೇಷುಭೋಜನಪಾತ್ರಾಣಿ ಸ್ಥಾಪಯೇತ್। ಅಪಸವ್ಯಮ್। ಭಸ್ಮ ಗೃಹೀತ್ವಾ ಪಿತೃಪಾತ್ರಾಣಾಂ ಪರಿತಃ ''**ಪಿಶಂಗಭೃಷ್ಟಿಮಂಭೃಣಂ ...ನಿ ಬರ್ಹಯ**'' ಇತಿ ಪ್ರಕೀರ್ಯ॥ ಸವ್ಯಮ್। ಭಸ್ಮ ಗೃಹೀತ್ವಾ ದೇವಪಾತ್ರಪರಿತಃ ''**ರಕ್ಷಾ ಣೋ ಅಗ್ನೇ ...ಚಿದ್ವಾವೃಧಾನಮ್॥ ಬ್ರಹ್ಮ ಚ ತೇ...ಅಪ್ರಯುಚ್ಛನ್॥**'' ಇತಿ ಪ್ರಕೀರ್ಯ। ''**ಯಥಾ ಚಕ್ರಧರೋ ...ಭೂತಾನಿ ರಕ್ಷತು॥ ಸರ್ವೇಷಾಂ ಪಾಪದೃಷ್ಟೀನಾಂ...ನ ವಿದ್ಯತೇ**'' ಇತಿ ಜಪಿತ್ವಾ॥ ಪಿತೃಪೂರ್ವಕಂ ಕರಶುದ್ಧಿಂ ವಿಧಾಯ ಭೋಜನಪಾತ್ರಾಣಿ ಪ್ರಕ್ಷಾಲ್ಯ, ಯಜ್ಞೋಪವೀತೀ ದೈವಪೂರ್ವಂ ಪಾತ್ರಾಣ್ಯಾಜ್ಯೇನಾಭಿಘಾರಯೇತ್ ''**ಮೂರ್ಧಾನಂ ದಿವೋ ...ಜನಯನ್ತ ದೇವಾಃ॥ ಆಮಾಸು ಪಕ್ವ...ಗಿರ್ವಣಸೇ ಬೃಹತ್**'' ಇತಿ। ತತಃ ಕರ್ತಾನ್ನಾದಿಸೂಪಾನ್ತಂ ಪರಿವೇಷಯೇತ್॥ ಅತ್ರ ತ್ರಿಸುಪರ್ಣಾನ್ನಸೂಕ್ತಾದೀನಾಂ ಜಪಃ ಕಾರ್ಯಃ॥

ತತಃ ''**ದೇವತಾಭ್ಯಃ ಪಿತೃಭ್ಯಶ್ಚ ..ನಮೋ ನಮಃ॥ ಕುರುಕ್ಷೇತ್ರಂ ಗಯಾಂ ...ಸದಾ ಪಠೇತ್। ಸಪ್ತವ್ಯಾಧಾ ದಶಾರ್ಣೇಷು...ಕಿಮವಸೀದಥ॥ ಅಮೂರ್ತಾನಾಂ ...ಯೋಗಚಕ್ಷುಷಾಮ್। ಚತುರ್ಭಿಶ್ಚ...ವಿಷ್ಣುಃ ಪ್ರಸೀದತು॥ ಈಶಾನಃ ಪಿ... ಸದಾಶಿವಃ**'' ಇತಿ ಜಪಿತ್ವಾ।

---

**ಭೋಜನಪಾತ್ರಾಸಾದನಾದಿಕರ್ಮವು;** ದೇವಪಾತ್ರಾಸಾದನೆಗೆ ದಕ್ಷಿಣಾಕಾರವಾಗಿ ಚೌಕಾಕಾರದ ಮಂಡಲವನ್ನು ಮತ್ತು ಪಿತೃಪಾತ್ರಾಸಾದನೆಗಾಗಿ ಅಪ್ರದಕ್ಷಿಣೆಯಾಗಿ ಉರುಟಾದ ಮಂಡಲವನ್ನು ಮಾಡಬೇಕು. ದೇವಪಾತ್ರಸ್ಥಾನದಲ್ಲಿಯವದರ್ಬೆಗಳನ್ನುಮತ್ತು ಪಿತ್ರ್ಯಪಾತ್ರಸ್ಥಾನದಲ್ಲಿತಿಲದರ್ಭೆಗಳನ್ನು ಇಟ್ಟು ಈ ಮಂಡಲಗಳ ಮೇಲೆ ಭೋಜನ ಪಾತ್ರಗಳನ್ನು ಇಟ್ಟು ಕೈಯಲ್ಲಿ ಭಸ್ಮವನ್ನು ತೆಕ್ಕೊಂಡು ಅಪಸವ್ಯ ಮಾಡಿ ಪಿತೃಪಾತ್ರಗಳ ಸುತ್ತಲು '**ಪಿಶಂಗ..**' ಎಂಬ ಮಂತ್ರವನ್ನು ಹೇಳಿ ಮತ್ತು '**ರಕ್ಷಾ..**' ಎಂಬ ಮಂತ್ರವನ್ನು ಹೇಳುತ್ತ ದೇವಪಾತ್ರಗಳ ಸುತ್ತಲು ಗೆರೆ ಎಳೆದು. '**ಯಥಾ ಚಕ್ರಧರೋ..**' ಎಂದು ಜಪಿಸುವುದು. ಪಿತೃಗಳಿಗೂ ದೇವವಿಪ್ರರಿಗೂ ಕೈತೊಳೆಯಲು ನೀರು ಕೊಟ್ಟು ಭೋಜನಪಾತ್ರೆಯನ್ನು ತೊಳೆಯಬೇಕು.ಸವ್ಯದಿಂದ '**ಮೂರ್ಧಾನಂ..**' ಎಂದು ಜಪಿಸಿ ದೇವಪೂರ್ವ ಭೋಜನಪಾತ್ರೆಯನ್ನು ತುಪ್ಪದಿಂದ ಅಭಿಘಾರಮಾಡಬೇಕು. ಅನ್ನದಿಂದ ಮೊದಲ್ಗೊಂಡು ತೊವ್ವೆಯವರೆಗೆ ಬಡಿಸಬೇಕು ಆಗ ತ್ರಿಸುಪರ್ಣ,ಅನ್ನಸೂಕ್ತ ಮುಂತಾದ ಸೂಕ್ತಗಳನ್ನು ಹೇಳಬೇಕು. ಆನಂತರ ಕೈಜೋಡಿಸಿ '**ದೇವತಾಭ್ಯಃ..ಪರಮಾತ್ಮಾ ಸದಾಶಿವಃ**' ಎಂಬಲ್ಲಿವರೆಗೆ ಹೇಳಬೇಕು. ಆನಂತರ

**ವಿಶ್ವೇದೇವರಿಗೆ ಆನ್ನ ನಿವೇದನೆ;** ಸವ್ಯಮಾಡಿಕೊಂಡು ದೇವಬ್ರಾಹ್ಮಣನ ಎದುರಿಗೆ ಕುಳಿತು ಎಲೆಯನ್ನು ಮುಟ್ಟಿಕೊಂಡು ಗಾಯತ್ರೀ ಮಂತ್ರದಿಂದ ದೇವಪಾತ್ರದ ಅನ್ನವನ್ನು ಪ್ರೋಕ್ಷಿಸಿ ಕೂರ್ಚದಿಂದ

## ದೇವೇಭ್ಯೋಽನ್ನನಿವೇದನಮ್

ಸವ್ಯಮ್॥ ದಕ್ಷಿಣಜಾನು ಪಾತಯಿತ್ವಾ। ದೇವಪಾತ್ರಂ ವಾಮೇನಸ್ಪೃಶನ್‌ದಕ್ಷಿಣೇನ ಪಾಣಿನಾ ಪಾತ್ರಸ್ಥಮನ್ನಂ ಗಾಯತ್ರ್ಯಾಭ್ಯುಕ್ಷ್ಯ ತೂಷ್ಣೀಂ ಪ್ರದಕ್ಷಿಣಂ ಪರಿಷಿಚ್ಯ। ಪಾಣಿಭ್ಯಾಂ ಸ್ವಸ್ತಿಕಾಕೃತಿನಾ, ಪಾತ್ರಮಾಲಭ್ಯ **''ಪೃಥಿವೀ ತೇ ...ಅಮುತ್ರಾಮುಷ್ಮಿನ್‌ಲೋಕೇ''** ಇತ್ಯಭಿಮಂತ್ರ್ಯ। **''ಇದಂ ವಿಷ್ಣುರ್ವಿ ...ಪಾಂಸುರೇ॥ ವಿಷ್ಣೋ ಹವ್ಯಂರಕ್ಷಸ್ವ''** ಇತಿ ನ್ಯುಬ್ಜೇನ ಕರೇಣ ನ್ಯುಬ್ಜಂ ದ್ವಿಜಪಾಣ್ಯಂಗುಷ್ಠಾಗ್ರಮನಖಮನ್ನೇ ನಿವೇಶ್ಯ। ಯವೋದಕಮಾದಾಯ **''ಪುರೂರವಾದ್ರವಸಂಜ್ಞಕವಿಶ್ವೇದೇವಾ ದೇವತಾ ...ಚಾಽಽತೃಪ್ತೇಃ ಸ್ವಾಹಾ॥ (ಹವ್ಯಂ ನಮೋ ನ ಮಮ। ಓಂ ತತ್ಸದ್ಗಯಾಯಾಂ ವಿಷ್ಣುಪದಾದಿ ಚತುರ್ದಶಪದೇಷುದತ್ತಮನ್ನಮಕ್ಷಯ್ಯಮಸ್ತು)''** ಇತ್ಯುಕ್ತ್ವಾ ಯವೋದಕಂ ದೇವತೀರ್ಥೇನ ಪಾತ್ರವಾಮಭಾಗೇ ಭೂಮೌ ಕ್ಷಿಪೇತ್। **''ಗಯಾ ಗಧಾಧರಃ ಪ್ರೀಯತಾಮ್''** ಇತ್ಯುಕ್ತ್ವೋತ್ಥಾಯ। **''ಯೇ ದೇವಾಸೋ ...ಜುಷಧ್ವಮ್''** ಇತಿ ದೇವಾನ್ಸಕೃದುಪಸ್ಥಾಯ॥ **''ದೇವಾನುಜ್ಞಯಾ ಪಿತ್ರಾದ್ಯನ್ನ ನಿವೇದನಂ ಕರಿಷ್ಯೇ''** ಇತಿ ದೇವಬ್ರಾಹ್ಮಣಂ ಪೃಚ್ಛೇತ್॥

## ಪಿತೃಭ್ಯೋಽನ್ನನಿವೇದನಮ್

ಅಪಸವ್ಯಮ್। ವಾಮಂ ಜಾನು ಪಾತಯಿತ್ವೋಪವಿಶ್ಯ। ಪಿತ್ರ್ಯಪಾತ್ರಸ್ಥಮನ್ನಂ ಗಾಯತ್ರ್ಯಾಭ್ಯುಕ್ಷ್ಯ। ತೂಷ್ಣೀಮಪ್ರದಕ್ಷಿಣಂ ಪರಿಷಿಚ್ಯ। ಪಾಣಿಭ್ಯಾಂ ಸ್ವಸ್ತಿಕಾಕೃತಿನಾ ಪಾತ್ರಮಾಲಭ್ಯ **''ಪೃಥಿವೀ ತೇ ...ಅಮುತ್ರಾಮುಷ್ಮಿನ್‌ಲೋಕೇ''** ಇತ್ಯಭಿಮನ್ತ್ರ್ಯ। **''ಇದಂ ವಿಷ್ಣುರ್ವಿ ...ಪಾಂಸುರೇ॥ ವಿಷ್ಣೋ ಕವ್ಯಂರಕ್ಷಸ್ವ''** ಇತಿ ನ್ಯುಬ್ಜಕರೇಣ ನ್ಯುಬ್ಜಂ

---

ಮಂತ್ರವಿಲ್ಲದೆ ಪರಿಷೇಚನೆ ಮಾಡಬೇಕು. ಕೈಗಳಿಂದ ಸ್ವಸ್ತಿಕಾಕಾರವಾಗಿ ಪಾತ್ರೆಯನ್ನು ಹಿಡಿದು **'ಪೃಥಿವೀ ತೇ.. ಲೋಕೇ'** ಎಂಬಲ್ಲಿವರೆಗೆ ಹೇಳಿ ಅಭಿಮಂತ್ರಿಸಿ. **'ಇದಂ ವಿಷ್ಣು..ಹವ್ಯಂರಕ್ಷಸ್ವ'** ಎಂದು ವಿಪ್ರಾಂಗುಷ್ಠವು ಅನ್ನದ ಮಧ್ಯದಲ್ಲಿ ಊರಿ ನಿಲ್ಲುವಂತ ಹಿಡಿಯುವುದು. ದರ್ಭೆಯವತುಲಸೀದಳನೀರನ್ನು ಹಿಡಿದುಕೊಂಡು **'ಪುರೂರವಾರ್ದ..'** ಎಂಬಲ್ಲಿಂದ **'ನಮೋ ನ ಮಮ'** ಎಂಬಲ್ಲಿ ವರೆಗೆ ಹೇಳಿ, **'ಓಂ ತತ್ಸದ್ಗಯಾಯಾಂ..ಮಸ್ತು'** ಎಂಬಲ್ಲಿಯವರೆಗೆ ಹೇಳಿ ಭೋಜನಪಾತ್ರದ ಎಡಭಾಗದಲ್ಲಿ ಬಿಟ್ಟು **'ಗಯಾ...ಪ್ರೀಯತಾಂ'** ಎಂದು, ಎದ್ದು ನಿಂತು **'ಯೇ ದೇವಾಸಃ..'** ಎಂದು ಉಪಸ್ಥಾನವನ್ನು ಮಾಡಿ. **'ದೇವಾನುಜ್ಞಯಾ..ಕರಿಷ್ಯೇ'** ಎಂದು ಬ್ರಾಹ್ಮಣರನ್ನು ಪ್ರಾರ್ಥಿಸಬೇಕು

**ಪಿತೃಗಳಿಗೆ ಆನ್ನನಿವೇದನೆ;** ಅಪಸವ್ಯಮಾಡಿ ಪಿತ್ರ್ಯಪಾತ್ರೆಯನ್ನವನ್ನು ಗಾಯತ್ರೀಮಂತ್ರದಿಂದ ಪಿತ್ರ್ಯಪಾತ್ರದ ಅನ್ನವನ್ನು ಪ್ರೋಕ್ಷಿಸಿ ಕೂರ್ಚದಿಂದ ಮಂತ್ರವಿಲ್ಲದೆ ಪರಿಷೇಚನೆ ಮಾಡಬೇಕು. ಸ್ವಸ್ತಿಕಾಕೃತಿಯಿಂದ ಪಾತ್ರೆಯನ್ನು ಹಿಡಿದು **'ಪೃಥಿವೀ ತೇ.. ಕವ್ಯಂ ರಕ್ಷ'** ಎಂಬಲ್ಲಿ ವರೆಗೆ ಹೇಳಿ ವಿಪ್ರಾಂಗುಷ್ಠವನ್ನು

ದ್ವಿಜಪಾಣ್ಯಂಗುಷ್ಠಾಗ್ರಮನಖಮನ್ನೇ ನಿವೇಶಯೇತ್। ತತೋ ವಾಮಹಸ್ತೇನ ಪಾತ್ರಮಾಲಭ್ಯ ದಕ್ಷಿಣೇನ ಪಾಣಿನಾ ತಿಲೋದಕಮಾದಾಯ **''ಪಿತೃಪಿತಾಮಹಪ್ರಪಿತಾಮಹಾದೇವತಾಃ ಇದಮನ್ನಂ ..ಚ್ಛಾಯೇಯಮ್। ಅಸ್ಮತ್ಪಿತೃಪಿತಾಮಹಪ್ರಪಿತಾಮಹೇಭ್ಯಃ ...ಚಾಽಽತೃಪ್ತೇಃ ಸ್ವಧಾ।। (ಕವ್ಯಂನವೋ ನ ಮಮ।। ಓಂ ತತ್ಸತ್ ಗಯಾಯಾಂ ರುದ್ರಪದಾದಿಚತುರ್ದಶಪದೇಷು ದತ್ತಮನ್ನಮಕ್ಷಯ್ಯಮಸ್ತು)''** ಇತ್ಯುಕ್ತ್ವಾ ತಿಲೋದಕಂ ಪಾತ್ರದಕ್ಷಿಣಭಾಗೇ ಭೂಮೌ ಪಿತೃತೀರ್ಥೇನ ನಿನಯೇತ್। **''ಗಯಾ ಗಧಾಧರಃ ಪ್ರೀಯತಾಮ್''** ಇತ್ಯುಕ್ತ್ವೋತ್ಥಾಯ। **''ಯೇ ಚೇಹ ಪಿತರೋ ..ಸುಕೃತಂ ಜುಷಸ್ವ''** ಇತಿ ಸಕೃದುಪಸ್ಥಾಯ।

ಸವ್ಯಮ್। **''ಬ್ರಹ್ಮಾರ್ಪಣಂ ಬ್ರಹ್ಮಹವಿ...ಸಮಾಧಿನಾ।। ಹರಿರ್ದಾತಾ...ಭೋಜಯತೇ ಹವಿಃ।। ತ್ವಾಂ ಯೋಗಿನಶ್ಚಿನ್ತಯಂತಿ ...ಸ್ವರೂಪಧೃಕ್।। ಚತುರ್ಭಿಶ್ಚ ...ವಿಷ್ಣುಃ ಪ್ರಸೀದತು। ತತ್ಸದ್ಬ್ರಹ್ಮಾರ್ಪಣಮಸ್ತು''** ಇತಿ ಜಪಿತ್ವಾ। ಯಥಾಚಾರಂ ಶ್ರಾದ್ಧದೇಶೇ ಸಾಲಿಗ್ರಾಮಾದಿಕಂ ಸಂಸ್ಥಾಪ್ಯ ತತ್ರ ಮಹಾವಿಷ್ಣುಂ ಧ್ಯಾತ್ವಾ ಪರ್ಣೇ ಯಥಾಚಾರಂ ಪರಿವಿಷ್ಯ ನೈವೇದ್ಯಸಮರ್ಪಣಂ ಕುರ್ಯಾತ್।। ಅಪಸವ್ಯಮ್। **''ಈಶಾನವಿಷ್ಣು... ಪಿತೃಮುಕ್ತಿಹೇತೂನ್।। ಪಂಚಕ್ರೋಶಂ... ದತ್ತಮಕ್ಷಯಮ್।। ಕಾಶಿವಿಶ್ವೇಶ್ವರಾಯ ನಮಃ। ಪುಂಡರೀಕಾಕ್ಷಾಯ ನಮಃ। ಗಯಾಗಧಾಧರಾಯ ನಮಃ''** ಇತಿ ಜಪಿತ್ವಾ।।

ಸವ್ಯಮ್। ಅನ್ನೇಷು ಮಧು ಸರ್ಪಿರ್ವಾಸಿಚ್ಯ। **''ಮಧುಮತೀಃ ಶ್ರಾವಯಿಷ್ಯೇ''** ಇತಿ ಬ್ರಾಹ್ಮಣಾನ್ಪೃಷ್ಟ್ವಾ **''ಓಮ್।ಭೂರ್ಭುವಸ್ಸ್ವಃ।ತತ್ಸವಿತು+ಯಾತ್''**ಇತಿಜಪಿತ್ವಾ।।ಅಪಸವ್ಯಮ್। **''ಮಧು ವಾತಾ ...ಭವಂತು ನಃ।। ಮಧು ಮಧು ಮಧು। ಸುಮಧು ಸರ್ವಾನ್ನಂ ಮಧು''** ಇತಿ

---

ಅನ್ನದ ಮಧ್ಯದಲ್ಲಿ ಪ್ರವೇಶಿಸಬೇಕು. ಕೈಯ್ಯಲ್ಲಿ ದರ್ಭೆ, ಎಳ್ಳು, ತುಳಸಿಗಳನ್ನಿಟ್ಟುಕೊಂಡು 'ಪಿತೃಪಿತಾಮಹ..ಕವ್ಯಂ ನಮೋ ನ ಮಮ' ಎಂದು ಹೇಳಿ **'ಓಂ ತತ್ಸದ್ಗಯಾಯಾಂ ..ಮಸ್ತು'** ಎಂದು ಬ್ರಾಹ್ಮಣನ ಬಲಭಾಗದಲ್ಲಿ ಪಿತೃತೀರ್ಥದಿಂದ ಬಿಡಬೇಕು. **'ಗಯಾಗದಾಧರಃ ಪ್ರೀಯತಾಂ'** ಎಂದು ಹೇಳಿ, ಆನಂತರ ನಿಂತುಕೊಂಡು **'ಯೇ ಚೇಹ..'** ಎಂಬ ಮಂತ್ರದಿಂದ ಉಪಸ್ಥಾನವನ್ನು ಮಾಡಬೇಕು.

ನಂತರ ಸವ್ಯಮಾಡಿಕೊಂಡು **'ಬ್ರಹ್ಮಾರ್ಪಣಂ..ತತ್ಸದ್ಬ್ರಹ್ಮಾರ್ಪಣಮಸ್ತು'** ಎಂದು ಜಪಿಸಿ. ಆಚಾರದಂತೆ ಶ್ರಾದ್ಧದೇಶದಲ್ಲಿ ಸಾಲಗ್ರಾಮವನ್ನಿಟ್ಟು ಮಹಾವಿಷ್ಣುವನ್ನು ಧ್ಯಾನಿಸಿ ಅನ್ನಾದಿದ್ರವ್ಯಗಳನ್ನು ಎಲೆಯಲ್ಲಿ ಬಡಿಸಿ ಸಮರ್ಪಣ ಮಾಡಬೇಕು. ಆನಂತರ ಅಪಸವ್ಯ ಮಾಡಿ **'ಈಶಾನವಿಷ್ಣು..ಗದಾಧರಾಯ ನಮಃ'** ಎಂದುಪ್ರಾರ್ಥಿಸಿ ಸವ್ಯದಿಂದ ಎಲೆಯಲ್ಲಿ ಜೇನು ಅಥವಾ ತುಪ್ಪವನ್ನು ಬಡಿಸಿ **'ಮಧುಮತೀ ಶ್ರಾವಯಿಷ್ಯೇ'** ಎಂದು ಕೇಳಿಕೊಂಡು ಗಾಯತ್ರೀ ಜಪಿಸಿ. **'ಮಧುವಾತಾ..ಮಧು'** ಎಂಬಲ್ಲಿ ವರೆಗೆ

ಮಧುಮತೀರ್ಜಪಿತ್ವಾ। ಅಪಸವ್ಯಮ್। ''**ಏಕೋ ವಿಷ್ಣುರ್...ವಿಶ್ವಭುಗವ್ಯಯಃ। ಪಿತೃಣಾಂ ಪ್ರತಿಸಾಂವತ್ಸರಿಕಶ್ರಾದ್ಧೀಯಬ್ರಾಹ್ಮಣಭೋಜನೇನ ಪಿತೃಪಿತಾಮಹಪ್ರಪಿತಾಮಹಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ ಪ್ರೀತೋಭವತು॥ ತತ್ಸದ್ಬ್ರಹ್ಮಾರ್ಪಣಮಸ್ತು**'' ಇತಿ ಬ್ರಹ್ಮಾರ್ಪಣಂ ಕುರ್ಯಾತ್॥

ವಿಪ್ರಾಃ ನಿತ್ಯಭೋಜನವತ್ ಬಲಿದಾನವರ್ಜಂ ಪರಿಷೇಚನಂ ಕುರ್ಯುಃ। ಸವ್ಯಮ್। ತತಃ ಕರ್ತಾ ಪಿತೃಪೂರ್ವಕಂ ವಿಪ್ರಪಾಣಿಷುಆಪೋಶನಾರ್ಥಮುದಕಂ ದತ್ವಾ ''**ಅಮೃತೋಪಸ್ತರಣಮಸಿ**'' ಇತಿ ಬ್ರೂಯಾತ್। ವಿಪ್ರಾ ಆಪೋಶನಂ ಕೃತ್ವಾ ಪ್ರಾಣಾಹುತೀರ್ಗೃಹ್ಣೀಯುಃ। ಕರ್ತಾ ಚ ಪ್ರಾಣಾಹುತಿಮನ್ತ್ರಾನ್ಪಠೇತ್ ''**ಶ್ರದ್ಧಾಯಾಂ ಪ್ರಾಣೇ ನಿವಿಷ್ಟೋಽಮೃತಂ ...ಸಮಾನಾಯ ಸ್ವಾಹಾ॥ ''ಬ್ರಹ್ಮಣಿಮ ಆತ್ಮಾಮೃತತ್ವಾಯ। ಬ್ರಹ್ಮಣೇ ಸ್ವಾಹಾ**''। ('ಪ್ರಾಣಾಯಸ್ವಾಹಾ। ಅಪಾನಾಯ ಸ್ವಾಹಾ' ಇತ್ಯೇವಂ ವಾ) ಕರಶುದ್ಧಿಃ।

ದಶ ತ್ರಿರ್ವಾ ಗಾಯತ್ರೀಜಪಂ ಕೃತ್ವಾ। ''**ಶ್ರದ್ಧಯಾಗ್ನಿಃ ...ಶ್ರದ್ಧೇ ಶ್ರದ್ಧಾಪಯೇಹ ನಃ**'' ಇತ್ಯಾಚಾರಾಜ್ಜಪಿತ್ವಾ॥ ''**ಅಪೇಕ್ಷಿತಂ ಯಾಚಿತವ್ಯಂ...ಸ್ವಸ್ಥಮಾನಸೈಃ॥ ವಿದ್ಯಮಾನಶಾಕಪಾಕಾದಿ ಪದಾರ್ಥೇಷುಯದ್ರೋಚತೇ ತದ್ಗ್ರಾಹ್ಯಂ ಯನ್ನ ರೋಚತೇ ತತ್ತ್ಯಾಜ್ಯಮ್। ಸುಖೇನೈವ ಭೋಕ್ತವ್ಯಮ್**'' {''ಜುಷಾಮಹೇ'' ಇತಿ ಬ್ರಾಹ್ಮಣಾಃ} ಇತಿ ಬ್ರಾಹ್ಮಣಾನ್ಸಂಪ್ರಾರ್ಥ್ಯ ಭೋಜನಾಯಾತಿಸೃಜೇತ್॥ ''**ಯಥಾಶಕ್ತಿ ರಾಕ್ಷೋಘ್ನಾದಿಸೂಕ್ತಾನಿ ಶ್ರಾವಯಿಷ್ಯೇ**'' {''ಶ್ರಾವಯ''ಪ್ರ+೯॥ ತತಃ ಸವ್ಯಾಹೃತಿಕಾಂ ಗಾಯತ್ರೀಂ ಜಪಿತ್ವಾ ಭುಂಜಾನಾನ್ ವೈಶ್ವದೇವರಾಕ್ಷೋಘ್ನಪಿತ್ರ್ಯಾದೀನಿ ಸೂಕ್ತಾನಿ ಶ್ರಾವಯೇತ್।

---

ಜಪಿಸಬೇಕು. ಅಪಸವ್ಯದಿಂದ ಏಕೋ '**ವಿಷ್ಣುರ್..ಬ್ರಹ್ಮಾರ್ಪಣಮಸ್ತು**' ಎಂದು ಬ್ರಹ್ಮಾರ್ಪಣ ಬಿಡಬೇಕು. ಬ್ರಾಹ್ಮಣರು ಬಲಿದಾನವಿಲ್ಲದೆ ಪರಿಷೇಚನವನ್ನು ಮಾಡಬೇಕು. ಆನಂತರ ಸವ್ಯದಿಂದ ಪಿತೃಪೂರ್ವವಾಗಿ ಆಪೋಶನಕ್ಕೆ ನೀರು ಕೊಟ್ಟು '**ಅಮೃತೋಪಸ್ತರಣಮಸಿ**' ಎನ್ನಬೇಕು ಆಗ ಬ್ರಾಹ್ಮಣರು ಆಪೋಶನ ತೆಗೆದುಕೊಂಡು ಕರ್ತೃವು '**ಶ್ರದ್ಧಾಯಾಂ..**' ಇತ್ಯಾದಿ ಜಪಿಸುವಾಗ ಒಂದೊಂದಾಗಿ ಪ್ರಾಣಾಹುತಿಯನ್ನು ತೆಗೆದುಕೊಳ್ಳಬೇಕು. ಆನಂತರ ವಿಪ್ರರ ಎಡಗೈಗೆ ನೀರು ಕೊಟ್ಟು. ಹತ್ತು ಅಥವಾ ಮೂರು ಸಲ ಗಾಯತ್ರೀ ಮಂತ್ರವನ್ನು ಜಪಿಸಿ ಆಚಾರದಂತೆ. '**ಶ್ರದ್ಧಯಾಗ್ನಿಃ..**' ಎಂಬ ಸೂಕ್ತಜಪಿಸಿ ಬ್ರಾಹ್ಮಣರನ್ನು '**ಅಪೇಕ್ಷಿತಂ ಯಾಚಿತವ್ಯಂ..ಸುಖೇನೈವ ಭೋಕ್ತವ್ಯಂ**' ಎಂಬಲ್ಲಿವರೆಗೆ ಪ್ರಾರ್ಥಿಸಬೇಕು. '**ಯಥಾಶಕ್ತಿ ರಾಕ್ಷೋಘ್ನಾ... ಶ್ರಾವಯಿಷ್ಯೇ**' ಎಂದು ಪ್ರಾರ್ಥಿಸಿ ವಿಪ್ರರು ಭೋಜನ ಮಾಡುತ್ತಿರುವಾಗ ವೈಶ್ವದೇವ ರಾಕ್ಷೋಘ್ನ ಪಿತೃಸೂಕ್ತಾದಿಗಳನ್ನು ಹೇಳಬೇಕು.

## ತೃಪ್ತಿಪ್ರಶ್ನಂ ಶೇಷಾನ್ನನಿವೇದನಂ ಚ

ಸವ್ಯಮ್। ತತಸ್ತೇಷುತೃಪ್ತೇಷು ''**ಭೋಜನಾಂತೇ ಕಿಂಚಿದ್ದಧ್ಯೋದನಂ ಗಂಗಾಮೃತಂ ಚ**'' ಇತಿ ಪೃಚ್ಛೇತ್॥ ''**ಸಿದ್ಧಸ್ಯ ಹವಿಷೋ ಮಧ್ಯೇ ಯದ್ರೋಚತೇ ತದ್ಯಾಚಯಧ್ವಮ್**'' ಇತಿ ಪ್ರಾರ್ಥಯೇತ್॥ ''**ವಿಶ್ವೇದೇವಾಃ ತೃಪ್ರತಾಸ್ಥ**''॥ ಅಪಸವ್ಯಮ್॥ ''**ಪಿತೃಪಿತಾಮಹಪ್ರಪಿತಾಮಹಾಃ ತೃಪ್ರತಾಸ್ಥ**''। ಸವ್ಯಮ್। ''**ಮಧುಮತೀಃ ಶ್ರಾವಯಿಷ್ಯೇ**'' ಇತ್ಯುಕ್ತ್ವಾ॥ ''**ಮಧುವಾತಾ ಋತಾಯತೇ...ಮಾಧ್ವೀರ್ಗಾವೋ ಭವಂತು ನಃ**'' ಇತಿ ಜಪಿತ್ವಾ। ಅಪಸವ್ಯಮ್। ''**ಅಕ್ಷನ್ನಮೀಮದಂತ ಹ್ಯ...ತೇ ಹರೀ**'' ಇತಿ ಜಪಿತ್ವಾ। ''**ಶ್ರಾದ್ಧಂ ಸಂಪನ್ನಮ್**'' ಇತಿ ವಿಪ್ರಾನ್ಪೃಚ್ಛೇತ್ {''ಸುಸಂಪನ್ನಂ''ಪ್ರ+೯॥ ತತಃ ಕರ್ತಾ ಭುಕ್ತಶೇಷಾತ್ಸಾರ್ವವರ್ಣಿಕಮನ್ನಂ ಪ್ರಕಿರಣಾರ್ಥಂ ಪೃಥಗುದ್ಧೃತ್ಯ ಶೇಷಂ ಬ್ರಾಹ್ಮಣೇಭ್ಯೋ ನಿವೇದ್ಯ ''**ಶೇಷಮನ್ನಂ ಕಿಂ ಕ್ರಿಯತಾಮ್**'' ಇತಿ ಪೃಚ್ಛೇತ್। ವಿಪ್ರಾಸ್ತದನ್ನಂ ಸ್ವೀಕುರ್ಯುರಿಚ್ಛಾ ಚೇತ್। ನೋ ಚೇತ್ ''ಇಷ್ಟೈಃ ಸಹ ಭುಜ್ಯತಾಮ್'' ಇತಿ ವದೇಯುಃ।

## ಉತ್ತರಾಪೋಶನದಾನಮ್

ತತಃ ಕರ್ತಾ ''**ಉಚ್ಛಿಷ್ಟಭಾಗೇಭ್ಯೋಽನ್ನಂ ದೀಯತಾಮ್**'' ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್। ತದಾ ಬ್ರಾಹ್ಮಣಾಃ ಭುಕ್ತಾವಶಿಷ್ಟಂ ಪಾತ್ರಸ್ಥಮನ್ನಂ ''**ಯಜಮಾನಕುಲೇ ಜಾತಾ ..ಭೂತಲೇ**'' **ಇತಿ ಮಂತ್ರೇಣ ದೈವೇ ದಕ್ಷಿಣಭಾಗೇ ಪಿತ್ರ್ಯೇ ವಾಮಭಾಗೇ ಚ ಭೂಮೌ ತ್ಯಜೇಯುಃ॥**

---

ಬ್ರಾಹ್ಮಣರ ಬೋಜನಾನಂತರ '**ಭೋಜನಾಂತೇ...ಚ**' ಎಂದು ಪ್ರಾರ್ಥಿಸಿದಾಗ ಬ್ರಾಹ್ಮಣರು '**ಸರ್ವಂ ಸಂಪೂರ್ಣಂ**' ಎಂದು ಪ್ರತ್ಯುತ್ತರವನ್ನೀಯಬೇಕು. ಶ್ರಾದ್ಧಕರ್ತನು '**ಸಿದ್ಧಸ್ಯ..ಯಾಚಯದ್ವಂ**' ಎಂದು ಪ್ರಾರ್ಥಿಸಿದಾಗ. ಬ್ರಾಹ್ಮಣರು '**ಅಲಂ**' ಎನ್ನಬೇಕು. ಆನಂತರ ಸವ್ಯದಿಂದ '**ವಿಶ್ವೇದೇವಾಃ ತೃಪ್ತಾಸ್ಥ**' ಅಪಸವ್ಯದಿಂದ '**ಪಿತೃ..ಮಹಾಃ ತೃಪ್ತಾಸ್ಥ**' ಎಂದೂ ಕೇಳಬೇಕು ಆಗ ಕ್ರಮವಾಗಿ ಬ್ರಾಹ್ಮಣರು 'ತೃಪ್ತಾಸ್ಮಃ' ಎನ್ನಬೇಕು. ಆನಂತರ ಶ್ರಾದ್ಧಕರ್ತನು '**ಮಧುಮತೀ..**' ಎಂದಾಗ ಬ್ರಾಹ್ಮಣರು 'ಶ್ರಾವಯ' ಎನ್ನಬೇಕು. ಆಗ ಕರ್ತೃವು ಸವ್ಯದಿಂದ '**ಮಧುವಾತಾ..**' ಎಂಬ ಮಂತ್ರಗಳನ್ನು ಜಪಿಸಿ, ಅಪಸವ್ಯದಿಂದ '**ಅಕ್ಷನ್ನಮೀ..**' ಮಂತ್ರವನ್ನು ಜಪಿಸಬೇಕು. ಆನಂತರ ಸವ್ಯದಿಂದ 'ಶ್ರಾದ್ಧಂ ಸಂಪನ್ನಂ' ಎಂದು '**ಶೇಷಮನ್ನಂ..**' ಎಂದು ಪ್ರಶ್ನಿಸಿ ಅವರು 'ಇಷ್ಟೈಃ ಸಹ..' ಎನ್ನಬೇಕು.

**ಉತ್ತರಾಪೋಷನದಾನಾದಿ;** ಆನಂತರ ಕರ್ತೃವು '**ಉಚ್ಚಿಷ್ಟಭಾ..ದೀಯತಾಂ**' ಎಂದು ಕೇಳಬೇಕು ಆಗ ವಿಶ್ವೇದೇವರು ಎಲೆಯ ಬಲಬದಿಯಲ್ಲೂ ಪಿತೃಗಳು ಎಡಬದಿಯಲ್ಲೂ 'ಯಜಮಾನಕುಲೇ..ಭೂತಲೇ' ಎಂದು ಉಚ್ಚಿಷ್ಟಾನ್ನವನ್ನು ತೆಗೆದಿಡಬೇಕು. ಆನಂತರ ಸವ್ಯದಿಂದ ಪಿತೃಪೂರ್ವವಾಗಿ ಉತ್ತರಾಪೋಶನಕ್ಕಾಗಿ

ತತಃ, ಸವ್ಯಮ್।। ವಿಪ್ರಾಣಾಂ ಪಿತೃಪೂರ್ವಕಮುತ್ತರಾಪೋಶನಾರ್ಥಮುದಕಂ ದತ್ವಾ ''**ಅಮೃತಾಪಿಧಾನಮಸಿ**'' ಇತಿ ಬ್ರೂಯಾತ್। ವಿಪ್ರಾ ಆಪೋಶನಂ ಕೃತ್ವಾಽವಶಿಷ್ಟಂ ''**ರೌರವೇ ಪೂಯ...ಮುಪತಿಷ್ಠತು**'' ಇತಿ ಬಹಿರ್ನಿನಯೇಯುಃ। ತತೋ ವಿಪ್ರಾಃ ಧೃತಪವಿತ್ರಗ್ರಂಥೀ ವಿಸ್ರಸ್ಯೋಚ್ಛಿಷ್ಟಮಂಡಲೇ ನಿಕ್ಷಿಪೇಯುಃ। ಕರ್ತಾ ಬ್ರಾಹ್ಮಣಾನಾಂ ಪಿತೃಪೂರ್ವಕಂ ಗಂಡೂಷಕರಣಹಸ್ತಪ್ರಕ್ಷಾಲನಾನ್ತಂ ಕಾರಯೇತ್। ಬ್ರಾಹ್ಮಣಾಃ ಹಸ್ತಪ್ರಕ್ಷಾಳನಂ ಕೃತ್ವಾ ಚಾಮೇಯುಃ। ತತಃ ಕರ್ತಾ ಚಾಮೇತ್।।

## ಸ್ವಸ್ತ್ಯಕ್ಷಯ್ಯವಾಚನಾದಿ

''**ಪವಿತ್ರವಂತಃ ...ಷ್ವಾರಭಮ್**'' ಇತಿ ಪವಿತ್ರಂ ಧೃತ್ವಾ।। ದೇವದ್ವಿಜಹಸ್ತೇ ಅಪೋ ದರ್ಭಾಂಶ್ಚ ದದ್ಯಾತ್ ''**ಶಿವಾ ಆಪಃ ಸಂತು**'' ಇತಿ। ಗಂಧಪುಷ್ಪಾಣಿ ದದ್ಯಾತ್ ''**ಸೌಮನಸ್ಯಮಸ್ತು**'' ಇತಿ।। ಯವಾನ್ದದ್ಯಾತ್ ''**ಯವಾಃ ಪಾಂತು**'' ಇತಿ।। ಪುನರಪೋ ದತ್ವಾ ಪ್ರಾರ್ಥಯೇತ್ ''**ದೀರ್ಘಮಾಯುಃ ..ಭವಂತೋ ಬ್ರುವಂತು**''।। ಅಪಸವ್ಯಮ್।। ಪಿತ್ರ್ಯದ್ವಿಜಕರೇ ಅಪೋ ದರ್ಭಾಂಶ್ಚದದ್ಯಾತ್ ''**ಶಿವಾ ಆಪಃ ಸಂತು**'' ಇತಿ। ಗಂಧಪುಷ್ಪಾಣಿ ದದ್ಯಾತ್ ''**ಸೌಮನಸ್ಯಮಸ್ತು**'' ಇತಿ।। ತಿಲಾನ್ದದ್ಯಾತ್ ''**ತಿಲಾಃ ಪಾಂತು**'' ಇತಿ।। ಪುನರಪೋ ದತ್ವಾ ಪ್ರಾರ್ಥಯೇತ್ ''**ದೀರ್ಘಮಾಯುಃ ಶ್ರೇಯಃ ...ಬ್ರುವಂತು**'' ಇತಿ।। ವಿಪ್ರಾಃ ದತ್ತಯವತಿಲಾದೀನ್ಶುಚೌ ದೇಶೇ ಪ್ರಕ್ಷಿಪೇಯುಃ।।

---

ನೀರನ್ನು ಕೊಟ್ಟು '**ಅಮೃತಾಪಿಧಾನಮಸಿ**' ಎಂದು ಹೇಳಬೇಕು ಆಗಬ್ರಾಹ್ಮಣರು ಉತ್ತರಾಪೋಶನ ಮಾಡಿ ಕೈಯ್ಯಲ್ಲಿ ಸ್ವಲ್ಪ ನೀರನ್ನುಳಿಸಿಕೊಂಡು 'ರೌರವೇ ಪೂಯನಿಲಯೇ' ಎಂಬ ಮಂತ್ರವನ್ನುಚ್ಚರಿಸಿ ಎಲೆಯಿಂದ ಹೊರಗೆ ಪಿತೃತೀರ್ಥದಿಂದ ಚೆಲ್ಲಬೇಕು. ಆನಂತರ ಬ್ರಾಹ್ಮಣರು ಕೈಯ್ಯಲ್ಲಿ ಧರಿಸಿದ ಪವಿತ್ರವನ್ನು ಬಿಚ್ಚಿ ಎಲೆಯಬಳಿಹಾಕಬೇಕು. ಕರ್ತೃವು ಬ್ರಾಹ್ಮಣರಿಗೆ ಕೈಕಾಲು ತೊಳೆಯಲು ನೀರನ್ನು ಕೊಡಬೇಕು. ಬ್ರಾಹ್ಮಣರು ಕೈಕಾಲುಗಳನ್ನು ತೊಳೆದು ಆಚಮನವನ್ನು ಮಾಡಬೇಕು ಬ್ರಾಹ್ಮಣಾಚಮನಾನಂತರ ಕರ್ತೃವು ಪವಿತ್ರವನ್ನು ವಿಸರ್ಜಿಸಿ ಆಚಮನವನ್ನು ಮಾಡಬೇಕು.

**ಸ್ವಸ್ತ್ಯಕ್ಷಯ್ಯವಾಚನಾದಿಕರ್ಮ**; ಆನಂತರ '**ಪವಿತ್ರವಂತಃ..**' ಎಂದು ಬೇರೆ ಪವಿತ್ರವನ್ನು ಧರಿಸಿ ದೇವ ಬ್ರಾಹ್ಮಣರ ಕೈಗೆ '**ಶಿವಾ ಆಪಃ ಸಂತು**' ಇತ್ಯಾದ್ಯುಚ್ಚರಿಸುತ್ತ ನೀರು, ಹೂ, ಅಕ್ಷತೆಗಳನ್ನು ಕೊಡಬೇಕು ಆನಂತರ '**ದೀರ್ಘಮಾಯುಃ..**' ಎಂದು ಕೇಳಿಕೊಳ್ಳಬೇಕು. ಆಗ ದೇವಬ್ರಾಹ್ಮಣರು 'ಸಂತು ಶಿವಾ ಆಪಃ' ಇತ್ಯಾದಿ ಯಥೋಕ್ತ ಪ್ರತಿವಚನವನ್ನೀಯಬೇಕು. ಹಾಗೆಯೇ ಅಪಸವ್ಯದಿಂದ ಪಿತೃಬ್ರಾಹ್ಮಣರಿಗೂ '**ಶಿವಾ ಆಪಃ ಸಂತು**' ಇತ್ಯಾದಿಗಳನ್ನು ಹೇಳಿ ನೀರು, ಹೂ ಮತ್ತು ತಿಲಗಳನ್ನು ಇತ್ಯಾದಿ ಕೊಡಬೇಕು ಬ್ರಾಹ್ಮಣರು

ಸವ್ಯಮ್। ಕರ್ತಾ ಬ್ರಾಹ್ಮಣಾನಭಿವಾದ್ಯ ''**ಅಸ್ಮದ್ಗೋತ್ರಂ ವರ್ಧತಾಮ್**'' ಇತಿ ಗೋತ್ರವೃದ್ಧಿಂ ಯಾಚೇತ {''ಯುಷ್ಮದ್ಗೋತ್ರಾಭಿವೃದ್ಧಿರಸ್ತು'' ಪ್ರ॥ ಸ್ವಯಂ ಶಿಷ್ಯಾದಿನಾ ವಿಪ್ರೋಚ್ಛಿಷ್ಟಪಾತ್ರಾಣಿ ಚಾಲಯೇತ್। ತತಃ ದೇವವಿಪ್ರಹಸ್ತಯೋರ್ಹಸ್ತೇನೈವ ಯವೋದಕಂ ದತ್ವಾ ''**ಪುರೂರವಾರ್ದ್ರವಸಂಜ್ಞಕೇಭ್ಯಃ..ಸ್ವಸ್ತೀತಿ ಬ್ರೂತ**'' ಇತಿ ಬ್ರೂಯಾತ್॥ ಅಪಸವ್ಯಮ್। ಪಿತ್ರ್ಯವಿಪ್ರ ಹಸ್ತಯೋರ್ಹಸ್ತೇನೈವ ತಿಲೋದಕಂ ದತ್ವಾ ''**ಪಿತೃಪಿತಾಮಹಹೇಭ್ಯಃ...ಸ್ವಸ್ತೀತಿ ಬ್ರೂತ**'' ಇತಿ ಬ್ರೂಯಾತ್॥

ಸವ್ಯಮ್॥ ದೇವವಿಪ್ರಹಸ್ತೇ ಯವೋದಕಂ ಹಸ್ತೇನೈವ ದತ್ವಾ ''**ಪುರೂರವಾರ್ದ್ರವಸಂಜ್ಞಾನಾಂ ...ತದಕ್ಷಯ್ಯಮಸ್ತ್ವಿತಿ ಭವಂತೋ ಬ್ರುವಂತು**'' ಇತಿ ಪ್ರಾರ್ಥಯೇತ್॥ ಪಿತ್ರ್ಯವಿಪ್ರಹಸ್ತೇ ತಿಲೋದಕಂ ಹಸ್ತೇನೈವ ದತ್ವಾ ''**ಪಿತೃಪಿತಾಮಹಪ್ರಪಿತಾಮಹಾನಾಂ --ಶರ್ಮಣಾಂ ...ತದಕ್ಷಯ್ಯಮಸ್ತ್ವಿತಿ ಭವಂತೋ ಬ್ರುವಂತು**'' ಇತಿ ಪ್ರಾರ್ಥಯೇತ್॥

## ದಕ್ಷಿಣಾತಾಂಬೂಲಾದಿದಾನಮ್

ತತಃ ಬ್ರಾಹ್ಮಣೇಭ್ಯಃ ದಕ್ಷಿಣಾತಾಂಬೂಲಾದಿ ದದ್ಯಾತ್ ಸವ್ಯಮ್। ''**ಅಸ್ಮತ್ಪಿತೃಪಿತಾ ಮಹಪ್ರಪಿತಾಮಹಸ್ಥಾನೇ ..ತುಭ್ಯಮಹಂ ಸಂಪ್ರದದೇ**'' ಇತಿ ದೇವೇಭ್ಯಃ। ''**ಪುರೂರವಾರ್ದ್ರವಸಂಜ್ಞಕ..ತುಭ್ಯಮಹಂ ಸಂಪ್ರದದೇ**'' ಇತಿ ಪಿತೃಭ್ಯಃ। ತತಃ

---

ಯಥೋಕ್ತಪ್ರತಿವಚನವನ್ನೀಯಬೇಕು. ಬಳಿಕ ಬ್ರಾಹ್ಮಣರು ಕೈಯ್ಯಲ್ಲಿರುವ ಅಕ್ಷತೆ, ತಿಲ, ದರ್ಭಾದಿಗಳನ್ನು ಕೆಳಗೆ ಹಾಕಬೇಕು. ಆನಂತರ ಕರ್ತೃವು ಬ್ರಾಹ್ಮಣರನ್ನು ನಮಸ್ಕರಿಸಿ '**ಅಸ್ಮದ್ಗೋತ್ರಮಭಿವರ್ಧತಾಮ್**' ಎಂದು ಗೋತ್ರ ವೃದ್ಧಿಯನ್ನು ಯಾಚಿಸಬೇಕು ಆಗ ಬ್ರಾಹ್ಮಣರು 'ಯುಷ್ಮದ್ಗೋತ್ರಂ..' ಪ್ರತಿವಚನವನ್ನು ಹೇಳಬೇಕು. ಬಳಿಕ ಕರ್ತೃವು ಉಚ್ಛಿಷ್ಟಪಾತ್ರೆಗಳನ್ನು ಜರುಗಿಸಬೇಕು.

ಆನಂತರ ಕೈತೊಳೆದು ತನ್ನ ಕೈಯ್ಯಲ್ಲಿ ಯವೋದಕವನ್ನು ತೆಗೆದುಕೊಂಡು ದೇವಬ್ರಾಹ್ಮಣರ ಕೈಗಳೆರಡರಲ್ಲೂ ಕೊಟ್ಟು '**ಪುರೂರವ..ಸ್ವಸ್ತೀತಿ ಬ್ರೂತ**' ಎಂದು ಪ್ರಾರ್ಥಿಸಬೇಕು. ಹಾಗೆಯೇ ಅಪಸವ್ಯದಿಂದ ಪಿತ್ರ್ಯ ಬ್ರಾಹ್ಮಣರ ಕೈಗಳಿಗೆ ತಿಲೋದಕವನ್ನಿತ್ತು '**ಪಿತೃಪಿತಾ..ಸ್ವಸ್ತೀತಿ ಬ್ರೂತ**' ಎಂದು ಕೇಳಿಕೊಂಡಾದ ಪ್ರತ್ಯೇಕವಾಗಿ ಬ್ರಾಹ್ಮಣರು '...ಸ್ವಸ್ತಿ' ಎನ್ನಬೇಕು ಹೀಗೆ ಸ್ವಸ್ತ್ಯುದಕವನ್ನಿತ್ತು ಅಕ್ಷಯ್ಯವಾಚನವನ್ನು ಮಾಡಬೇಕು. ದೇವಬ್ರಾಹ್ಮಣರಿಗೆ ಕೈಯ್ಯಿಂದ ಯವೋದಕವನ್ನಿತ್ತು '**ಪುರೂರವಾ..ಅಕ್ಷಯ್ಯ..ಬ್ರುವಂತು**' ಎಂದು, ಪಿತ್ರ್ಯಬ್ರಾಹ್ಮಣನ ಕೈಗೆ ಕೈಯ್ಯಿಂದ ತಿಲೋದಕವನ್ನಿತ್ತು '**ಪಿತೃಪಿತಾಮಹ..ಅಕ್ಷಯ್ಯ..ಬ್ರುವಂತು**' ಎಂದಾಗ ಅವರು ಪ್ರತ್ಯೇಕವಾಗಿ 'ಅಕ್ಷಯ್ಯಂ..ಮುದಕಾದಿ' ಎಂದು ಉತ್ತರಿಸಬೇಕು.

ಸರ್ವಾನ್ಪ್ರಾರ್ಥಯೇತ್ ''**ಶ್ರಾದ್ಧಭೋಕ್ತೃಭ್ಯೋ ಬ್ರಾಹ್ಮಣೇಭ್ಯಃ ದಕ್ಷಿಣಾಃ ಪಾಂತು**'' ಇತಿ॥ ಸವ್ಯಮ್॥ ''**(ಅಗ್ನಿಪುರೋಗಾಃ) ವಿಶ್ವೇದೇವಾಃ ಪ್ರೀಯಂತಾಮಿತಿ ಭವಂತೋ ಬ್ರುವಂತು**'' ಇತಿ ದೇವಬ್ರಾಹ್ಮಣಾನ್ಪ್ರಾರ್ಥಯೇತ್॥ ಅಪಸವ್ಯಮ್। ''**(ವಸುಪುರೋಗಾಃ) ಪಿತರಃ ಪ್ರೀಯಂತಾಮಿತಿ ಭವಂತೋ ಬ್ರುವಂತು**'' ಇತಿ ಪಿತ್ರ್ಯಬ್ರಾಹ್ಮಣಾನ್ಪ್ರಾರ್ಥಯೇತ್॥ ಸವ್ಯಮ್। ''**ಶಾಕಪಾಕಾಃ ಪಿತೃಪ್ರಿಯಾಃಉತ್ತಮೋತ್ತಮಾಃ**'' ಇತಿ ಬ್ರಾಹ್ಮಣಾ ವದೇಯುಃ॥

ಆತ್ಮಾಲಂಕಾರಃ। ಕರ್ತಾ ಸ್ವಮಸ್ತಕೇ ಚಂದನಾದಿನಾ ತಿರ್ಯಕ್ತಿಲಕಂ ಧೃತ್ವಾ॥ ಅಪಸವ್ಯಮ್। ''**ಅಘೋರಾಃ ಪಿತರಃ ಸಂತು**'' ಇತಿ ಬ್ರಾಹ್ಮಣಾನ್ ಸಂಪ್ರಾರ್ಥ್ಯ। ಸವ್ಯಮ್। ''**ಗೋತ್ರಂ ವರ್ಧತಾಮ್**'' ಇತಿ ಪೃಚ್ಛೇತ್। ''**ದೇವತಾಭ್ಯಃ+ನಮೋ ನಮಃ**'' ಇತಿ ತ್ರಿರ್ಜಪಿತ್ವಾ॥

ಬ್ರಾಹ್ಮಣಾನ್ ಪಾದಾಭ್ಯಂಗಾದಿಭಿಃ ಪ್ರಿಯೋಕ್ತಿಭಿಶ್ಚ ಪರಿತೋಷ್ಯ ''**ಕೃತಸ್ಯ ಪ್ರತ್ಯಾಬ್ದಿಕಶ್ರಾದ್ಧಸ್ಯ ಸಂಕಲ್ಪಾತ್ಸಿದ್ಧಿರಸ್ತ್ವಿತಿ ಭವಂತೋ ಬ್ರುವಂತು**'' ಇತಿ ವಿಪ್ರಾನ್ಪ್ರಾರ್ಥಯೇತ್। ವಿಪ್ರಾಃ ''ತಥಾಽಸ್ತು ಸಂಕಲ್ಪಾತ್ಸಿದ್ಧಿರಸ್ತು'' ಇತಿ ವದೇಯುಃ॥ ''**ಅದ್ಯ ಸೂರ್ಯಪರ್ವಸದೃಶೀ ತಿಥಿಃ...ತಂತ್ರದ್ರವ್ಯದಕ್ಷಿಣಾಸು ನ್ಯೂನಂ, ಬ್ರಾಹ್ಮಣವಚನಾತ್ಸರ್ವಂ ಸಂಪೂರ್ಣಮಸ್ತ್ವಿತಿ**

---

**ದಕ್ಷಿಣಾತಾಂಬೂಲಾದಿದಾನ**;ದೇವಬ್ರಾಹ್ಮಣರಿಗೆ ಸುವರ್ಣವನ್ನೂ ಪಿತೃಬ್ರಾಹ್ಮಣರಿಗೆ ಬೆಳ್ಳಿಯನ್ನೂ ದಕ್ಷಿಣೆಯಾಗಿ ಕೊಡಬೇಕು. ಅಪಸವ್ಯದಿಂದ **'ಅಸ್ಮತ್ಪಿತೃ..ಸ್ಥಾನೇ..ಸಂಪ್ರದದೇ'** ಎಂದು ಪಿತ್ರ್ಯಬ್ರಾಹ್ಮಣನಿಗೂ, ಸವ್ಯದಿಂದ **'ಪುರೂರ..ಸ್ಥಾನೇ..ಸಂಪ್ರದದೇ'** ಎಂದು ದೇವಬ್ರಾಹ್ಮಣನಿಗೂ ಪಿತೃಪೂರ್ವವಾಗಿ ದಕ್ಷಿಣೆಯನ್ನು ಕೊಟ್ಟು 'ಶ್ರಾದ್ಧಭೋಕ್ತೃ..ಪಾಂತು ಎಂದು ಪ್ರಾರ್ಥಿಸುವುದು ಆಗ ವಿಪ್ರರು ಪಾಂತು ದಕ್ಷಿಣಾಃ ಎಂದು ಪ್ರತಿವಚನವನ್ನೀಯಬೇಕು ಹಾಗೆಯೆ ಕರ್ತೃವು ತನ್ನ ಶಕ್ತ್ಯನುಸಾರ ಕೊಡೆ,ಪಾದುಕೆ ಇತ್ಯಾದಿಉಪಚಾರದ್ರವ್ಯವನ್ನೀಯಬೇಕು.

ನಂತರ ಸವ್ಯದಿಂದ ದೇವಬ್ರಾಹ್ಮಣರಲ್ಲಿ ಅಗ್ನಿಪುರೋಗಾಃ... ಎಂದೂ ಅಪಸವ್ಯದಿಂದ ಪಿತೃಬ್ರಾಹ್ಮಣರ ಬಳಿ ವಸುಪುರೋಗಾಃ... ಎಂದೂ ಕೇಳಿಕೊಳ್ಳಬೇಕು ಆಗ ಬ್ರಾಹ್ಮಣರು ಕ್ರಮವಾಗಿ ಪ್ರೀಯಂತಾಂ ವಿಶ್ವೇದೇವಾಃ, ಪ್ರೀಯಂತಾಂ ಪಿತರಃ ಎಂದು ಪ್ರತಿವಚನವನ್ನೀಯಬೇಕು ಆನಂತರ ಸಂಕಲ್ಪಸಿದ್ಧಿ... ಎಂದು ಪ್ರಾರ್ಥಿಸುವುದು. ಅಸ್ತು ಸಂಕಲ್ಪಸಿದ್ಧಿಃ'' ಎಂಬ ಪ್ರತಿವಚನ. ಆನಂತರ ಬ್ರಾಹ್ಮಣರು ಶಾಕಪಾಕಾಃ.. ಎಂದು ಅನ್ನಸ್ತುತಿಯನ್ನು ಮಾಡಬೇಕು. ಬಳಿಕ ತಾನು ತಿಲಕವಿಟ್ಟು ಅಲಂಕರಿಸಿ ಆಶೀಃಪ್ರಾರ್ಥಿಸಬೇಕು. ಕರ್ತೃವು ಗೋತ್ರಾಶಿಷಃ ಪ್ರಾರ್ಥಯತೇ ಎಂದು ಪ್ರಾರ್ಥಿಸಿ. ಅಘೋರಾಃ ಪಿತರಃ ಸಂತು ಎಂದಾಗ ಸಂತ್ವಘೋರಾಃ ಪಿತರಃ ಎಂಬ ಪ್ರತಿವಚನ. ಗೋತ್ರಂ ವರ್ಧತಾಮ್ ಎಂದಾಗ ವರ್ಧತಾಂ ಗೋತ್ರಮ್ ಎಂಬ ಪ್ರತಿವಚನ. ಆನಂತರ ಕರ್ತೃವು ದೇವತಾಭ್ಯಃ... ಎಂದು ಮೂರು ಬಾರಿ ಜಪಿಸಬೇಕು. ಬಳಿಕ ಬ್ರಾಹ್ಮಣರ ಕಾಲುಗಳನ್ನು

**ಭವಂತೋ ಬ್ರುವಂತು**'' ಇತಿ ಕರ್ಮಸಂಪೂರ್ಣತಾಂ ವಾಚಯಿತ್ವಾ ಬ್ರಾಹ್ಮಣಾನ್‌ಪಿತೃಪೂರ್ವಂ ವಿಸೃಜೇತ್॥

## ವಿಪ್ರವಿಸರ್ಜನಾದಿಕರ್ಮ

ಕರ್ತಾ ''**ವಾಜೇವಾಜೇಽವತ ...ಪಥಿಭಿರ್ದೇವಯಾನೈಃ**'' ಇತಿ ಜಪಿತ್ವಾ। ''**ಉತ್ತಿಷ್ಠತ ಪಿತರಃ ವಿಶ್ವೇದೇವೈಃ ಸಹ**'' ಇತಿ ಬ್ರಾಹ್ಮಣಾನ್ ಸಂಪ್ರಾರ್ಥ್ಯ। ದರ್ಭಾಗ್ರೈಃ ಪಿತ್ರ್ಯಬ್ರಾಹ್ಮಣಸವ್ಯಮಂಸಂ ಸ್ಪೃಶನ್ ''**ಓಂ ಸ್ವಧೋಚ್ಯತಾಮ್** ('**ಅಸ್ತು ಸ್ವಧಾ**' **ಇತಿ ವಾ**)'' ಇತ್ಯುಕ್ತ್ವೋತ್ಥಾಪಯೇತ್॥ ತತಃ ದರ್ಭಾಗ್ರೈಃ ದೇವಬ್ರಾಹ್ಮಣದಕ್ಷಿಣಮಂಸಂ ಸ್ಪೃಶನ್ ''**ವಿಶ್ವೇದೇವಾಃ ಪ್ರೀಯಂತಾಮ್**'' ಇತ್ಯುಕ್ತ್ವೋತ್ಥಾಪ್ಯ ಯಥಾಚಾರಂ ಯವತಿಲೋದಕಾದಿಪಾತ್ರಸ್ಥಕೂರ್ಚಂ ವಿಸೃಜೇತ್॥

## ಪ್ರಾರ್ಥನಾಶೀರ್ಗ್ರಹಣಾದಿ

ತತಃ ಕರ್ತಾ ಪಾದಪ್ರಕ್ಷಾಲನಮಂಡಲದೇಶೇ ವಿಪ್ರಾನುಪವೇಶ್ಯ ''**ಆ ಮಾ ವಾಜಸ್ಯ ...ಗಮ್ಯಾತ್**'' ಇತಿ ಪ್ರದಕ್ಷಿಣತ್ರಯಂ ಕೃತ್ವಾ, ತೇಷಾಂ ಹಸ್ತೇಷ್ವಕ್ಷತಪುಷ್ಪಾಣಿ ದತ್ವಾ ನಿಯತೋ ವಾಗ್ಯತಃ ಶುಚಿರ್ದಕ್ಷಿಣಾಮುಖಃ ಪ್ರಾಞ್ಜಲಿಸ್ತಿಷ್ಠನ್‌ವರಾನ್ಯಾಚೇತ। ''**ದಾತಾರೋ ನೋಽಭಿ...ಯಾಚಿಷ್ಮ ಕಂಚನ**''॥ ತತೋ ವಿಪ್ರಾಃ ''**ಸ್ವಾದುಷಂಸದಃ ಪಿತರೋ ..ಈಶತ**॥

---

ಒತ್ತಿ ಪ್ರಿಯವಾಕ್ಯಗಳಿಂದ ಅವರನ್ನು ಸಂತುಷ್ಟಿಗೊಳಿಸಿ ಅದ್ಯ ಸೂರ್ಯಪರ್ವಸದೃಶೀ... ಬ್ರುವಂತು ಎಂದು ಪ್ರಾರ್ಥಿಸಬೇಕು ಆಗ ಬ್ರಾಹ್ಮಣರು ಸರ್ವಂ ಸಂಪೂರ್ಣಮಸ್ತು ಎಂದು ಪ್ರತಿವಚನವನ್ನೀಯಬೇಕು. ಆನಂತರ ಬ್ರಾಹ್ಮಣರನ್ನು ವಿಸರ್ಜಿಸಬೇಕು.

**ವಿಪ್ರವಿಸರ್ಜನಾದಿ;** '**ವಾಜೇವಾಜೇ..**' ಎಂಬ ಮಂತ್ರವನ್ನು ಜಪಿಸಿ '**ಉತ್ತಿಷ್ಠತ ಪಿತರಃ**' ಎಂದು ಪಿತ್ರ್ಯಬ್ರಾಹ್ಮಣರನ್ನುಪ್ರಾರ್ಥಿಸಿ ದರ್ಭೆಗಳತುದಿಯಿಂದ ಪಿತ್ರ್ಯಬ್ರಾಹ್ಮಣನ ಎಡಭುಜವನ್ನು ಮುಟ್ಟಿಕೊಂಡು '**ಓಮ್ ಸ್ವಧೋಚ್ಯತಾಮ್**' ಎಂದು ಹೇಳಿ ಎಬ್ಬಿಸುವುದು. ಆಗ ಆವಿಪ್ರನು '**ಅಸ್ತು ಸ್ವಧಾ**' ಎಂದು ಪ್ರತಿವಚನವನ್ನಿತ್ತು ಎದ್ದು ನಿಲ್ಲಬೇಕು. ಬಳಿಕ ದರ್ಭಾಗ್ರದಿಂದ ದೇವಬ್ರಾಹ್ಮಣರ ಬಲಭುಜವನ್ನು ಮುಟ್ಟಿ ವಿಶ್ವೇದೇವಾಃ ಪ್ರೀಯಂತಾಂ ಎಂದು ಎಬ್ಬಿಸಿ, ಆಚಾರದಂತೆ ಯವೋದಕ ತಿಲೋದಕಪಾತ್ರೆಗಳಲ್ಲಿನ ಕೂರ್ಚಗಳನ್ನು ವಿಸರ್ಜಿಸುವುದು.

**ಪ್ರಾರ್ಥನಾಶೀರ್ಗ್ರಹಣಾದಿ;**ಬಳಿಕ ಕರ್ತೃವು ಬ್ರಾಹ್ಮಣರನ್ನು ಪಾದಪ್ರಕ್ಷಾಲನ ಮಂಡಲದಲ್ಲಿ ಕುಳ್ಳಿರಿಸಿ '**ಆಮಾ ವಾಜಸ್ಯ..**' ಎಂಬ ಮಂತ್ರವನ್ನು ಹೇಳುತ್ತಾ ಮೂರು ಪ್ರದಕ್ಷಿಣೆಯನ್ನು ಮಾಡಿ ಅವರ ಕೈಯ್ಯಲ್ಲಿ ಅಕ್ಷತಪುಷ್ಪಗಳನ್ನು ಕೊಟ್ಟು ಭಕ್ತಿಶ್ರದ್ಧೆಯಿಂದ ಕರಮುಗಿದು ದಕ್ಷಿಣಾಭಿಮುಖನಾಗಿ ನಿಂತು '**ದಾತಾರೋ ನೋಽಭಿವರ್ಧಂತಾಂ..**' ಇತ್ಯಾದಿ ವರಗಳನ್ನು ಯಾಚಿಸುವುದು. ಆನಂತರ ಬ್ರಾಹ್ಮಣರು

**ಇಹೈವ ಸ್ತಂ...ಸ್ವೇ ಗೃಹೇ॥ ಆಯುಃ ಪ್ರಜಾಂ ...ನೃಣಾಂ ಪಿತಾಮಹಾಃ॥ ಏತಾಃ ಸತ್ಯಾ ಆಶಿಷಃ ಸಂತು। ಗೋತ್ರಸ್ಯಾಭಿವೃದ್ಧಿರಸ್ತು। ಪ್ರತಿಸಾಂವತ್ಸರಿಕಶ್ರಾದ್ಧಂ ಗಯಾಕೃತಶ್ರಾದ್ಧಫಲಮಸ್ತು। ಪಿತೄಣಾಮಕ್ಷಯ್ಯಾ ತೃಪ್ತಿರಸ್ತು''** ಇತ್ಯಾಶಿಷೋ ದದ್ಯುಃ॥ ಕರ್ತಾ ವಿಪ್ರಾನ್ನಮಸ್ಕೃತ್ವಾ ತೈರ್ದತ್ತಾಕ್ಷತಾದಿ ಶಿರಸಿ ಧೃತ್ವಾ ಪ್ರಾರ್ಥಯೇತ್॥ **''ಅದ್ಯ ಮೇ ಸಫಲಂ ...ವೋಽನುಗ್ರಹಾದ್ದಿವಮ್॥ ಯತ್ತು ಶಾಕಾದಿದಾನೇನ ...ಕ್ಷಂತುಮರ್ಹಥ''** ಇತಿ ಸಂಪ್ರಾರ್ಥ್ಯ॥

ಕರ್ತಾ **''ವಸಿಷ್ಠಾಸಃ ಪಿತೃವದ್ವಾಚ...ಸದಾ ನಃ॥ ಇದಂ ಪಿತೃಭ್ಯೋ ನಮೋ ಅಸ್ತ್ವದ್ಯೇತಿ ನಮಸ್ಕಾ...ಶಂಸ್ತವ್ಯಮ್''** ಇತಿ ಪಠಿತ್ವಾ **''ಜಪಚ್ಛಿದ್ರಂ ತಪಚ್ಛಿದ್ರಂ ...ಪ್ರಸಾದತಃ॥ ಮಂತ್ರಹೀನಂ ಕ್ರಿಯಾಹೀನಂ ...ಪ್ರಸಾದಾದ್ಭವತಾಂ ಮಮ''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್॥ ತತಃ ಕರ್ತಾ ಸಪರಿವಾರಃ ಬ್ರಾಹ್ಮಣಾನಾಸೀಮಾನ್ತಮನುವ್ರಜೇತ್ (ಅಷ್ಟೌ ಪದಾನಿ ವಾ ಸಹಾಽನುವ್ರಜೇತ್)।

ಪುನರ್ಗೃಹಮಾಗತ್ಯ **''ವಷಟ್ತೇ ವಿಷ್ಣವಾಸ ...ಸ್ವಸ್ತಿಭಿಃ ಸದಾ ನಃ॥ ಯಸ್ಯ ಸ್ಮೃತ್ಯಾ ...ತಮಚ್ಯುತಮ್। ವಿಷ್ಣವೇ ನಮೋ ವಿಷ್ಣವೇ ನಮೋ ವಿಷ್ಣವೇ ನಮಃ''** ಇತಿ ವಿಷ್ಣುಂ ಸ್ಮೃತ್ವಾ॥ ದ್ವಿರಾಚಮ್ಯ॥ ಪವಿತ್ರಗ್ರಂಥಿಂ ವಿಸ್ರಸ್ಯ ತ್ಯಕ್ತ್ವಾ॥ **''ಅನೇನ ಪಿತೄಣಾಂ ಪ್ರತಿಸಾಂವತ್ಸರಿಕಯಜ್ಞೇನ ಪಿತೃಪಿತಾಮಹಪ್ರಪಿತಾಮಹಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ ತತ್ಸದ್ಬ್ರಹ್ಮಾರ್ಪಣಮಸ್ತು''** ಇತಿ ಬ್ರಹ್ಮಾರ್ಪಣಂ ಕುರ್ಯಾತ್॥

ತತೋ ವಿಪ್ರೋಚ್ಛಿಷ್ಟಂ ಭೂಮೌ ಶುಚೌ ದೇಶೇ ಅವಟಂ ಖಾತ್ವಾ ತತ್ರ ನಿಕ್ಷಿಪ್ಯ ಮೃದಾಚ್ಛಾದಯೇತ್ (ಗೃಹಾಂತರಸತ್ವೇ ಸೂರ್ಯಾಸ್ತಾದನಂತರಮುಚ್ಛಿಷ್ಟಪ್ರತಿಪತ್ತಿಃ)॥ ತತೋಽಗಾರಂ

---

**'ಸ್ವಾದುಷಂಸದಃ..'** ಇತ್ಯಾದಿ ಮಂತ್ರಗಳಿಂದಲೂ **'ಆಯುಃ ಪ್ರಜಾಂ'** ದಿಂದಾರಂಭಿಸಿ **'ಅಕ್ಷಯ್ಯಾತೃಪ್ತಿರಸ್ತು'** ಎಂಬಲ್ಲಿ ವರೆಗೆ ಆಶೀಃ ಕೊಟ್ಟು ಅಕ್ಷತೆಗಳನ್ನು ಕೊಡಬೇಕು. ಕರ್ತೃವು ಬ್ರಾಹ್ಮಣರು ಕೊಟ್ಟ ಅಕ್ಷತೆಗಳನ್ನಿ ಶಿರಸ್ಸಿನಲ್ಲಿ ಧರಿಸಿ ಆದ್ಯ ಮೇ..... ಎಂಬಲ್ಲಿಂದ ...ಕ್ಷಂತು ಮರ್ಹಥ ಎಂಬಲ್ಲಿಯವರೆಗೆ ಪ್ರಾರ್ಥಿಸಬೇಕು ಆಗ ವಿಸ್ಮೃತ್ಯ...ಕ್ಷಮಾಮಹೇ ಎಂದು ಬ್ರಾಹ್ಮಣರು ಪ್ರತಿವಚನ ಹೇಳಬೇಕು. ಆ ಆನಂತರ ಕರ್ತೃವು ವಸಿಷ್ಠಾಸಃ.. ಎಂಬ ಮಂತ್ರವನ್ನು ಜಪಿಸಿ ಇದಂ ಪಿತೃಭ್ಯೋ ನಮೋ ಅಸ್ತ್ವದ್ಯೇತಿ... ಎಂಬ ಪಿತೃಗಾಥವನ್ನು ಜಪಿಸಿ ಜಪಚ್ಛಿದ್ರಂ... ಎಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸಿದಾಗ ಅವರು ಸರ್ವಮಚ್ಛಿದ್ರಮಸ್ತು, ಸಂಪೂರ್ಣಮಸ್ತು ಎಂಬ ಪ್ರತಿವಚನವನ್ನೀಯಬೇಕು. ಬಳಿಕ ಬ್ರಾಹ್ಮಣರನ್ನು ಗ್ರಾಮ ಸೀಮೆಯವರೆಗೆ ಅಥವಾ ಎಂಟು ಹೆಜ್ಜೆಗಳವರೆಗೆ ಅನುಸರಿಸಿ ಬೀಳ್ಕೊಡಬೇಕು ಪುನಃ ಮನೆಗೆ ಬಂದು ಆಸನದಲ್ಲಿ ಕುಳಿತು

ಗೋಮಯೇನೋಪಲಿಪ್ಯ ಶ್ರಾದ್ಧಶೇಷೇಣ ವೈಶ್ವದೇವಂ ಕೃತ್ವೇಷ್ಟೈಃ ಸಹ ಭುಂಜೀತ। ಅಪರೇऽಹನಿ (ಆಚಾರಾತ್ತದೈವ ವಾ) ಶ್ರಾದ್ಧಾಂಗತರ್ಪಣಂ ಕುರ್ಯಾತ್। ಅತ್ಯಂತಾಶಕ್ತಃ ಆಚಮ್ಯ ಪ್ರಾಣಾನಾಯಮ್ಯ ಪೂರ್ವವತ್ಸಂಕಲ್ಪ್ಯ, ಆಸನಂ ದತ್ವಾ, ಪಾದಮಭ್ಯರ್ಚ್ಯ ದೇವಪಿತೃಪೂಜಾಂ ವಿಧಾಯಾನ್ನತ್ಯಾಗಮಾತ್ರಂ ಕೃತ್ವಾ ವಿಪ್ರಾನ್ಭೋಜಯಿತ್ವಾ, ತಾಂಬೂಲದಕ್ಷಿಣಾದಿ ದತ್ವಾ। ''ಸಂಕಲಸಿದ್ಧಿರಸ್ತು'' ಇತಿ ವಾಚಯಿತ್ವಾ ಕರ್ಮ ಸಮರ್ಪ್ಯ ಶ್ರಾದ್ಧಶೇಷಂ ಭುಂಜೀತ॥

**ಇತಿ ಸಾಂಕಲ್ಪಿಕಸಾಂವತ್ಸರಿಕಶ್ರಾದ್ಧವಿಧಿಃ**

★★★★★★★★★★

---

ವಷಟ್ ತೇ..., ವಿಷ್ಣವೇ....ನಮಃ ಎಂದು ವಿಷ್ಣುವನ್ನು ಸ್ಮರಿಸಿ, ಎರಡು ಸಲ ಆಚಮನ ಮಾಡಿ ಅನೇನ ಪಿತೄಣಾಂ... ಎಂದು ಬ್ರಹ್ಮಾರ್ಪಿತ ಮಾಡಬೇಕು

ಶ್ರಾದ್ಧದ ಮರುದಿನ (ಅಥವಾ ಅಚಾರದಂತೆ ಅಂದೇ) ಶ್ರಾದ್ಧಾಂಗವಾದ ತರ್ಪಣವನ್ನು ಮಾಡಬೇಕು. ಬ್ರಾಹ್ಮಣರ ಎಲೆಯನ್ನು (ಸಾಧ್ಯವಿದ್ದರೆ ಸೂರ್ಯಾಸ್ತಮಾನದ ಬಳಿಕ) ಭೂಮಿಯಲ್ಲಿ ಹೊಂಡತೆಗೆದು ಮಣ್ಣಿನಿಂದ ಮುಚ್ಚಬೇಕು. ಆ ಬಳಿಕ ಶ್ರಾದ್ಧಶೇಷದಿಂದ ವೈಶ್ವದೇವವನ್ನು ಮಾಡಿ ಇಷ್ಟಬಂಧುಗಳೊಡನೆ ಊಟಮಾಡಬೇಕು.

ಇಲ್ಲಿಗೆ ಸಂಕಲ್ಪವಿಧಾನದಸಾಂವತ್ಸರಿಕಶ್ರಾದ್ಧಪ್ರಯೋಗವು ಸಮಾಪ್ತವು

★★★★★★★★★★★★★★

## [298]ಅಥ ಆಮಶ್ರಾದ್ಧಂ ಹಿರಣ್ಯಶ್ರಾದ್ಧಂ ಚ

ಶ್ರೀಃ॥ ಕರ್ತಾ ಪೂರ್ವೇದ್ಯುಸ್ತದ್ದಿನೇ ವಾ ಬ್ರಾಹ್ಮಣಾನ್ನಿಮಂತ್ರಯೇತ್ ಶ್ರಾದ್ಧದಿನೇ ಕೃತನಿತ್ಯಕ್ರಿಯಃ ಪೂರ್ವಾಹ್ಣ ಏವ ಶ್ರಾದ್ಧಮಾರಭೇತ। ಗೋಮಯೋಪಲಿಪ್ತೇ ದೇಶೇ ಕುಶೋರ್ಣಾಜಿನಾಸನೇಷ್ವೇಷಾಮನ್ಯತಮಾಸನೇವೋಪವಿಶ್ಯ ''**ಪವಿತ್ರಂ ತೇ ..ತ್ಸಮಾಶತ**'' ಇತಿ ಬ್ರಹ್ಮಗ್ರಂಥಿಸಮನ್ವಿತಂ ಪವಿತ್ರಂ ಧೃತ್ವಾ ದ್ವಿರಾಚಮ್ಯ॥ ''**ಪೃಥ್ವಿತ್ವಯಾ ಧೃತಾ..ಚಾಮುಂಡೇ ಹ್ಯಪರಾಜಿತೇ**'' ಇತಿ ಭೂಮಿಂ ಸಂಪ್ರಾರ್ಥ್ಯ॥ ''**ಅಪಸರ್ಪಂತು ತೇ ಭೂತಾ..ಶ್ರಾದ್ಧಕರ್ಮ ಸಮಾರಭೇ**'' ಇತಿ ಜಪಿತ್ವಾ॥ ಆಚಾರಾತ್ ಶಿಖಾಕಟಿಯಜ್ಞೋಪವೀತಾಸನೇಷುದರ್ಭಧಾರಣಂ ಕೃತ್ವಾ ನೀವೀಂ ಬಧ್ವಾ ಪ್ರಾಣಾಯಾಮತ್ರಯಂ ಕುರ್ಯಾತ್॥ ''**ಪಿತೃದೇವತಾಭ್ಯೋ ನಮಃ। ವಿಷ್ಣುರ್ವಿಷ್ಣುರ್ವಿಷ್ಣುಃ**''। ಪ್ರಾಣಾನಾಯಮ್ಯ ''**ಶ್ರೀಮದ್ಭಗವತೋ ಮಹಾಪುರುಷಸ್ಯ..**'' ಇತ್ಯಾದಿ ದೇಶಕಾಲಾವುಕ್ತ್ವಾ ''**ಶ್ರೀಪರಮೇಶ್ವರಪ್ರೀತ್ಯರ್ಥಂ ಪುರೂರವಾದ್ರ್ರವಸಂಜ್ಞಕಾನಾಂ ವಿಶ್ವೇಷಾಂ ದೇವಾನಾಮ್**'' ಪ್ರಾಚೀನಾವೀತೀ ''**ಅಸ್ಮತ್ಪಿತೃಪಿತಾಮಹಪ್ರಪಿತಾಮಹಾನಾಂ --ಶರ್ಮಣಾಂ --ಗೋತ್ರಾಣಾಂವಸುರುದ್ರಾದಿತ್ಯಸ್ವರೂಪಾಣಾಮೇತೇಷಾಂ ಶ್ರೇಯೋರ್ಥಂ ಮೋಕ್ಷಾರ್ಥಂ ತೃಪ್ತ್ಯರ್ಥಂ ಮಮ ಪಿತೄಣಾಂ ಪ್ರತಿಸಾಂವತ್ಸರಿಕ (ಮೃತಾಹ)ಶ್ರಾದ್ಧಂ ಸದೈವಂ ಸಪಿಂಡಮಾಮೇನ ಹವಿಷಾ [ಹಿರಣ್ಯೇನ ವಾ] ಕರಿಷ್ಯೇ**'' ಇತಿ ಸಂಕಲ್ಪ್ಯ, ಯವೋದಕಂ

---

ಆಮ ಮತ್ತು ಹಿರಣ್ಯಶ್ರಾದ್ಧಪ್ರಯೋಗವು

ಶ್ರಾದ್ಧಕರ್ತೃವು ಶ್ರಾದ್ಧದಪೂರ್ವದಿನದಂದು ಅಥವಾ ಅಂದೇ ಬ್ರಾಹ್ಮಣವರಣವನ್ನು ಮಾಡಿ ನಿತ್ಯಕರ್ಮಗಳನ್ನನುಷ್ಠಿಸಿ ಪೂರ್ವಾಹ್ಣದಲ್ಲೇ ಶ್ರಾದ್ಧಯೋಗ್ಯ ಭೂಮಿಯಲ್ಲಿ ದರ್ಭಾದ್ಯಾಸನದಲ್ಲಿ ಕುಳಿತು ಶ್ರಾದ್ಧವನ್ನಾರಂಭಿಸಬೇಕು '**ಪವಿತ್ರಂ ತೇ..**' ಎಂದು ಪವಿತ್ರವನ್ನು ಧರಿಸಿ ಎರಡುಸಲ ಆಚಮನಮಾಡಬೇಕು.

ನಂತರ '**ಪೃಥ್ವಿ ತ್ವಯಾ..**' ಎಂದು ಭೂಮಿಯನ್ನು ಪ್ರಾರ್ಥಿಸಿ '**ಊರ್ಧ್ವಕೇಶಿ..**' ಎಂದು ಜಪಿಸುವುದು.ಆಚಾರದಂತೆ ಶಿಖೇ, ಯಜ್ಞೋಪವೀತ, ಸೊಂಟಗಳಲ್ಲಿ ದರ್ಭೆಗಳನ್ನು ಧರಿಸಿ, ನೀವೀಬಂದವನ್ನುಮಾಡಬೇಕು. ತದನಂತರ ಆಸನದಲ್ಲಿ3ದರ್ಭೆಗಳನ್ನುಧರಿಸಿಮೂರುಪ್ರಾಣಾಯಾಮ ಮಾಡಬೇಕು. '**ಪಿತೃದೇವ..ವಿಷ್ಣುಃ**' ಎಂದು ಹೇಳಿ '**ಶ್ರೀಮದ್ಭಗವತೋ..**' ಎಂಬಲ್ಲಿಂದ ದೇಶಕಾಲಗಳನ್ನು ಸ್ಮರಿಸಿ '**ಪುರೂರವ..ದೇವಾನಾಂ**' ಎಂದು ಹೇಳಿ ಅಪಸವ್ಯ ಮಾಡಿಕೊಂಡು '**ಅಸ್ಮತ್ ಪಿತೃಪಿತಾ..**' ಇತ್ಯಾದಿ ಹೇಳಿ ಸವ್ಯದಿಂದ '**ಏತೇಷಾಂ ತೃಪ್ತ್ಯರ್ಥಂ..ಶ್ರಾದ್ಧಂ ಸದೈವಂ ಸಪಿಂಡಮಾಮೇನ...ಕರಿಷ್ಯೇ**' ಇತ್ಯಾದಿ ಹೇಳಿ, '**ತದಂಗಂ ಯವತಿಲೋ...ಕರಿಷ್ಯೇ। ಆತ್ಮಶುದ್ಧ್ಯರ್ಥಂ...ಕರಿಷ್ಯೇ**' ಎಂದು ಸಂಕಲ್ಪಿಸಿ,

ತಿಲೋದಕಂ ಚ ಸಂಪಾದ್ಯಾತ್ಮಾನಂ ಬ್ರಾಹ್ಮಣಾನ್ ಶ್ರಾದ್ಧೋಪಯೋಗಿವಸ್ತೂನಿ ಚ ಸಂಪ್ರೋಕ್ಷೇತ್। ವಿಪ್ರಾನ್ ಸ್ವಾಗತೋಕ್ತ್ಯಾಹೂಯ ಯಥೋಕ್ತಮುಪವೇಶ್ಯ ಬ್ರಹ್ಮದಂಡಂದತ್ವಾ ತಾನ್ಪ್ರಣಮ್ಯಾನುಜ್ಞಾಂ ಪ್ರಾಪ್ಯ॥ ದೇವಾರ್ಥಂ ಪಿತ್ರ್ಯರ್ಥಂ ಚ ವಿಪ್ರಾನ್ವೃತ್ವಾ ಗೃಹಾಂಗಣೇಮಂಡಲೇ ಕೃತ್ವಾ ತತ್ತನ್ಮಂಡಲೇ ವಿಪ್ರಾನುಪವೇಶ್ಯ ಪಾದ್ಯಂ ನಿವೇದ್ಯ ಪಾದಪ್ರಕ್ಷಾಲನಂ ವಿಧಾಯ ತೇಷ್ವಾಚಾಂತೇಷು ಪವಿತ್ರಂ ವಿಸೃಸ್ಯ ಸ್ವಯಮಾಚಮ್ಯ॥ ಅನ್ಯಂ ಪವಿತ್ರಂ ಧೃತ್ವಾ, ಶ್ರಾದ್ಧದೇಶಮಾಗತ್ಯ ಬ್ರಾಹ್ಮಣಾನುಪವೇಶ್ಯ, ವೃತ್ವಾ ಕ್ಷಣಂ ದತ್ವಾ, ಪುನಃ ಸಂಕಲ್ಪ್ಯ, ಸ್ಥಲಶುದ್ಧಿಂ ವಿಧಾಯ ಪಾಕಪ್ರೋಕ್ಷಣಸ್ಥಾನೇ ಆಮಪ್ರೋಕ್ಷಣಮ್ ಕುರ್ಯಾತ್॥ ದೇವೇಭ್ಯ ಆಸನಾರ್ಘ್ಯಗ್ರಹಣಾವಾಹನಾರ್ಘ್ಯದಾನಾನಿ ಯಥೋಕ್ತಂ

---

ದೇವಾರ್ಚನೆಗಾಗೀ ಯವೋದಕವನ್ನೂ ಪಿತ್ರರ್ಚನೆಗಾಗಿ ತಿಲೋದಕವನ್ನೂ ಸಿದ್ಧಗೊಳಿಸಿ, ಅಭಿಮಂತ್ರಿಸಿ. ಯವೋದಕದಿಂದ ತನ್ನ ಮೇಲೂ ಬ್ರಾಹ್ಮಣರಮೇಲೂ ಪ್ರೋಕ್ಷಿಸಿ ಇತರ ಶ್ರಾದ್ಧೋಪಯೋಗಿ ವಸ್ತುಗಳ ಮೇಲೆಯೂ ಪ್ರೋಕ್ಷಿಸಬೇಕು.

ನಂತರ ಬ್ರಾಹ್ಮಣರನ್ನು ಸ್ವಾಗತೋಕ್ತಿಯಿಂದ ಆಮಂತ್ರಿಸಿ, ಯಥೋಕ್ತವಾಗಿ ಕುಳ್ಳಿರಿಸಿ ಬ್ರಹ್ಮದಂಡವನ್ನು ತೆಗೆದುಕೊಂಡು ಮೂರು ಪ್ರದಕ್ಷಿಣೆಗಳನ್ನು ಮಾಡಬೇಕು ಆನಂತರ ಬ್ರಹ್ಮದಂಡವನ್ನು ಬ್ರಾಹ್ಮಣರಿಗಿತ್ತು ಅವರಿಗೆ ಎಂದು ನಮಸ್ಕರಿಸಿ ಅದ್ಯ ತಿಥೌ...ಬ್ರುವಂತು ಇತ್ಯಾದಿ ಹೇಳಿ ಅನುಜ್ಞೆಯನ್ನು ಪಡೆದು, ದೇವಾರ್ಥವಾಗಿಯೂ ಪಿತ್ರರ್ಥವಾಗಿಯೂ ಬ್ರಾಹ್ಮಣರನ್ನು ವರಿಸಿ ಕ್ಷಣವನ್ನಿತ್ತು ಅಕ್ರೋಧನೈಃ....ಶ್ರಾದ್ಧಕಾರಿಣಾ ಎಂದು ಪ್ರಾರ್ಥಿಸುವುದು.

ನಂತರ ಹೊರಾಂಗಳದಲ್ಲಿ ಚೌಕಾಕಾರದ ಮತ್ತು ವೃತ್ತಾಕಾರ ಪಾದ್ಯಮಂಡಲಗಳನ್ನು ಮಾಡಬೇಕು. ಬಳಿಕ ಸವ್ಯಾಪಸವ್ಯಗಳಿಂದ ದರ್ಭೆ,ಗಂಧ,ಪುಷ್ಪಾಕ್ಷತೆ ಎಳ್ಳುಗಳನ್ನು ಹಾಕಬೇಕು. ಆನಂತರ ವಿಪ್ರರಿಗೆ ಗಂಧಪುಷ್ಪಯವತಿಲಾದಿಯುತಪಾದ್ಯವನ್ನು ನಿವೇದಿಸಿ. ಪಾದಪ್ರಕ್ಷಾಳನೆಮಾಡುವುದು. ಆನಂತರ ಕರ್ತೃವು ಎರಡು ಆಚಮನವನ್ನು ಮಾಡುವುದು. ಹಾಗೆಯೇ ವಿಪ್ರರು ಎರಡು ಆಚಮನವನ್ನು ಮಾಡುವುದು.

ಆನಂತರ ಕರ್ತನು ವಿಪ್ರರೊಡನೆ ಶ್ರಾದ್ಧಮಾಡುವ ಸ್ಥಲಕ್ಕೆ ಬಂದು ಪವಿತ್ರವನ್ನು ಧರಿಸಿ ವಿಪ್ರರಿಗೆ ಆಸನವನ್ನು ಸಿದ್ಧಗೊಳಿಸಿ ಬ್ರಾಹ್ಮಣರನ್ನು ಕುಳ್ಳಿರಿಸಿ ವರಿಸಿ ಕ್ಷಣವನ್ನೀಯುವುದು. ಅಪಸವ್ಯವಾಗಿ **'ಉಪಕ್ರಾಂತಂ....ಕರಿಷ್ಯೇ'** ಎಂದು ಸಂಕಲ್ಪಿಸಿ. ಪಾರ್ವಣದಂತೆ ಸ್ಥಲಶುದ್ಧಿಯನ್ನು ಮಾಡುವುದು. ಯವೋದಕದಿಂದ ಪಾಕಪ್ರೋಕ್ಷಣಸ್ಥಾನದಲ್ಲಿ ಆಮವನ್ನು ಪ್ರೋಕ್ಷಿಸಬೇಕು.

ಸವ್ಯದಿಂದದೇವಬ್ರಾಹ್ಮಣನಿಗೆಆಸನ,ಅರ್ಘ್ಯಗ್ರಹಣ,ಆವಾಹನೆ,ಅರ್ಘ್ಯದಾನ,ಗಂಧಾದ್ಯುಪಚಾರಗಳನ್ನು ಯಥೋಕ್ತವಾಗಿ ಪಾರ್ವಣದಂತೆ ಮಾಡಬೇಕು ಆನಂತರ ದೇವಾನುಜ್ಞೆಯೊಂದಿಗೆ ಅಪಸವ್ಯದಿಂದ

ವಿಧಾಯಾಭ್ಯರ್ಚ್ಯಾರ್ಚನವಿಧೇಃ ಸಂಪೂರ್ಣತಾಂ ವಾಚಯೇತ್। ತಥೈವಾಪಸವ್ಯೇನ ಪಿತೃಭ್ಯ ಆಸನಾದ್ಯಾಚ್ಛಾದನಾಂತಾನುಪಚಾರಾನ್ಯಥೋಕ್ತಂ ದದ್ಯಾತ್। [299]ಆವಾಹನಮಂತ್ರೇ **''ಉಶಂತಸ್ತ್ವಾ ನಿ ಧೀಮಹ್ಯುಶಂತಃ ಸಮಿಧೀಮಹಿ। ಉಶನ್ನುಶತ ಆ ವಹ ಪಿತೄನ್ಹವಿಷೇ ಸ್ವೀಕರ್ತವೇ''** ಇತ್ಯೂಹಃ ಕಾರ್ಯಃ॥ ಅರ್ಚವಿಧೇಃ ಸಂಪೂರ್ಣತಾಂ ವಾಚಯಿತ್ವಾಽಽಚಮ್ಯ, ದೇವಪಾತ್ರಸ್ಥಾನೇ ಚತುರಸ್ರಂ, ಪಿತೃಪಾತ್ರಸ್ಥಾನೇ ವರ್ತುಲಮಿತಿ ಮಂಡಲೇ ಕೃತ್ವಾ। ದೈವೇ ಸಯವಾನ್ಪಿತ್ರ್ಯೇ ಸತಿಲಾನ್ದರ್ಭಾನ್ ಪ್ರಾಸ್ಯ। ಭೋಜನಪಾತ್ರಾಣ್ಯಾಸಾದ್ಯ। ಅಪಸವ್ಯಮ್। ಭಸ್ಮ ಗೃಹೀತ್ವಾ ಪಿತೃಪಾತ್ರಾಣಾಂ ಪರಿತಃ **''ಪಿಶಂಗಭೃಷ್ಟಿಮಮಂಭೃಣಂ ...ನಿ ಬರ್ಹಯ''** ಇತಿ ಪ್ರಕೀರ್ಯ॥ ಸವ್ಯಮ್। ದೇವಪಾತ್ರಪರಿತಃ **''ರಕ್ಷಾ ಣೋ ಅಗ್ನೇ ...ಚಿದ್ವಾವೃಧಾನಮ್॥ ಬ್ರಹ್ಮ ಚ ತೇ...ಅಪ್ರಯುಚ್ಛನ್''** ಇತಿ ಪ್ರಕೀರ್ಯ। **''ಯಥಾ ಚಕ್ರಧರೋ ...ಭೂತಾನಿ ರಕ್ಷತು॥ ಸರ್ವೇಷಾಂ ಪಾಪದೃಷ್ಟೀನಾಂ...ನ ವಿದ್ಯತೇ''** ಇತಿ ಜಪಿತ್ವಾ॥ ಪಿತೃಪೂರ್ವಕಂ ಕರಶುದ್ಧಿಂ ವಿಧಾಯ ಭೋಜನಪಾತ್ರಾಣಿ ಪ್ರಕ್ಷಾಲ್ಯ, ಯಜ್ಞೋಪವೀತೀ ದೈವಪೂರ್ವಂ ಪಾತ್ರಾಣ್ಯಾಜ್ಯೇನಾಭಿಘಾರಯೇತ್ **''ಮೂರ್ಧಾನಂ ದಿವೋ ...ಜನಯನ್ತ ದೇವಾಃ॥ ಆಮಾಸು ಪಕ್ವ...ಗಿರ್ವಣಸೇ ಬೃಹತ್''** ಇತಿ।

[300]ಘೃತಾಕ್ತಮಾಮದ್ರವ್ಯಮಾದಾಯ ತೇನ ವಿಪ್ರಪಾಣಾವಗ್ನೌಕರಣಂ ವಿಧಾಯ॥ ದೇವಪಿತ್ರ್ಯವಿಪ್ರಾಣಾಂ ಪುರತ ಆಸಾದಿತಪಾತ್ರೇಷು [303]ಅನ್ನಾಚ್ಚತುರ್ಗುಣಂ ದ್ವಿಗುಣಂ

---

ಪಿತ್ರ್ಯವಿಪ್ರನಿಗೆ ಆಸನಾದಿ ಅರ್ಚನಾಂತ ಉಪಚಾರಗಳನ್ನು ಯಥೋಕ್ತವಾಗಿ ಮಾಡಬೇಕು ಆವಾಹನೆಯ ಮಂತ್ರದಲ್ಲಿ ಅತ್ತವೇ ಸ್ಥಾನದಲ್ಲಿ '**ಸ್ವೀಕರ್ತವೇ**' ಎಂಬ ವ್ಯೂಹವನ್ನು ಮಾಡಬೇಕು.

ನಂತರ ಆಚಮನವನ್ನು ಮಾಡಿ ಉಪಚಾರಕಾಲದಲ್ಲಿ ಬ್ರಾಹ್ಮಣರ ಮುಂದೆ ಬಿದ್ದ ಗಂಧಾಕ್ಷತೆ ಮುಂತಾದವುಗಳನ್ನು ತೆಗೆದು ಶುದ್ಧಿಗೊಳಿಸಬೇಕು. ದೇವ ಮತ್ತು ಪಿತೃ ಬ್ರಾಹ್ಮಣರ ಭೋಜನಸ್ಥಲದಲ್ಲಿ ವರ್ತುಲ ವೃತ್ತಾಕಾರದ ಯಥೋಕ್ತಮಂಡಲವನ್ನು ಮಾಡಿಯವತಿಲದರ್ಭಾದಿಗಳನ್ನು ಅಲ್ಲಿಟ್ಟು ಬೋಜನಾರ್ಥ ಪಾತ್ರೆಯನ್ನಿರಿಸಿ. ಭಸ್ಮವನ್ನು ಪಿತ್ರ್ಯಮತ್ತು ದೇವಪಾತ್ರಗಳ ಸುತ್ತಲು ಯಥೋಕ್ತ ಮಂತ್ರಜಪದೊಂದಿಗೆ ಗೆರೆ ಎಳೆದು ಭಸ್ಮಮರ್ಯಾದೆಯನ್ನು ಮಾಡಬೇಕು. ಪಿತೃಗಳಿಗೂ ದೇವವಿಪ್ರರಿಗೂ ಕೈತೊಳೆಯಲು ನೀರು ಕೊಟ್ಟು ಭೋಜನಪಾತ್ರೆಯನ್ನು ತೊಳೆಯಬೇಕು. ಸವ್ಯದಿಂದ '**ಮೂರ್ಧಾನಂ**' ಇತ್ಯಾದಿ ಮಂತ್ರಗಳಿಂದ ದೇವಪೂರ್ವ ಭೋಜನಪಾತ್ರೆಗಳನ್ನು ಅಭಿಘಾರಮಾಡಬೇಕು. ಆನಂತರ ಘೃತಾಕ್ತ ಆಮದ್ರವ್ಯದಿಂದ ಪಿತ್ರ್ಯವಿಪ್ರನ ಕೈಯ್ಯಲ್ಲಿ ಪಾರ್ವಣದಂತೆ ಯಥೋಕ್ತವಾಗಿ ಹೋಮಮಾಡಬೇಕು. ವಿಪ್ರರ ಭೋಜನಪಾತ್ರದಲ್ಲಿ ಅನ್ನಾದಿದ್ರವ್ಯಗಳ ನಾಲ್ಕು ಅಥವ ಎರಡುಪಟ್ಟು

ಸಮಂ ವಾ ತತ್ತದಾಮಂ ದದ್ಯಾತ್॥ ತತಃ ''**ದೇವತಾಭ್ಯಃ ಪಿತೃಭ್ಯಶ್ಚ ..ನಮೋ ನಮಃ॥ ಕುರುಕ್ಷೇತ್ರಂ ಗಯಾಂ ...ಸದಾ ಪಠೇತ್। ಸಪ್ತವ್ಯಾಧಾ ದಶಾರ್ಣೇಷು...ಕಿಮವಸೀದಥ॥ ಅಮೂರ್ತಾನಾಂ ...ಯೋಗಚಕ್ಷುಷಾಮ್। ಚತುರ್ಭಿಶ್ಚ ...ವಿಷ್ಣುಃ ಪ್ರಸೀದತು॥ ಈಶಾನಃ ಪಿತೃರೂಪೇಣ... ಸದಾಶಿವಃ**'' ಇತಿ ಜಪಿತ್ವಾ।

ಸವ್ಯಮ್॥ ದಕ್ಷಿಣಂ ಜಾನು ಪಾತಯಿತ್ವಾ। ದೇವಪಾತ್ರಂ ವಾಮೇನಸ್ಪೃಶನ್ ದಕ್ಷಿಣೇನ ಪಾಣಿನಾ ಪಾತ್ರಸ್ಥಮಾಮಂ ಗಾಯತ್ರ್ಯಾಭ್ಯುಕ್ಷ್ಯ ತೂಷ್ಣೀಂ ಪ್ರದಕ್ಷಿಣಂ ಪರಿಷಿಚ್ಯ। ಪಾಣಿಭ್ಯಾಂ ಸ್ವಸ್ತಿಕಾಕೃತಿನಾ, ಪಾತ್ರಮಾಲಭ್ಯ ''**ಪೃಥಿವೀ ತೇ ...ಅಮುತ್ರಾಮುಷ್ಮಿನ್ ಲೋಕೇ**'' ಇತ್ಯಭಿಮಂತ್ರ್ಯ। ''**ಇದಂ ವಿಷ್ಣುರ್ವಿ ...ಪಾಂಸುರೇ॥** ''**ವಿಷ್ಣೋ ಇದಮಾಮಂ ಹವ್ಯಂ ರಕ್ಷಸ್ವ**'' ಇತ್ಯುಕ್ತ್ವಾ। ನಾತ್ರ ವಿಪ್ರಾಂಗುಷ್ಠನಿವೇಶನಮ್। ಯವೋದಕಮಾದಾಯ ''**ಪುರೂರವಾದ್ರ್ರವಸಂಜ್ಞಕ ವಿಶ್ವೇದೇವಾ ದೇವತಾಃ, ಇದಮಾಮಂ ಹವಿರಯಂಬ್ರಾಹ್ಮಣ...ಗದಾಧರ ಇದಮಾಮಂ ಬ್ರಹ್ಮಣೇ ದತ್ತಂ ಸೌವರ್ಣಂ ಪಾತ್ರಸ್ಥಮಕ್ಷಯ್ಯವಟಚ್ಛಾಯೇಯಮ್। ಪುರೂರವಾದ್ರ್ರವಸಂಜ್ಞಕ ವಿಶ್ವೇಭ್ಯೋ ದೇವೇಭ್ಯ ಇದಮಾಮಂ ಸೋಪಸ್ಕರಮಮೃತರೂಪಂ ಸ್ವಾಹಾ॥ (ಹವ್ಯಂನಮೋ ನ ಮಮ। ಓಂ ತತ್ಸದ್ಗಯಾಯಾಂ ವಿಷ್ಣುಪದಾದಿ ಚತುರ್ದಶಪದೇಷು ದತ್ತಮಾಮಮಕ್ಷಯ್ಯಮಸ್ತು)**'' ಇತ್ಯುಕ್ತ್ವಾ ಯವೋದಕಂ ದೇವತೀರ್ಥೇನ ಪಾತ್ರವಾಮಭಾಗೇ ಭೂಮೌ ಕ್ಷಿಪೇತ್। ''**ಗಯಾ ಗಧಾಧರಃ ಪ್ರೀಯತಾಮ್**'' ಇತ್ಯುಕ್ತ್ವೋತ್ಥಾಯ। ''**ಯೇ ದೇವಾಸೋ ...ಜುಷಧ್ವಮ್**'' ಇತಿ ದೇವಾನ್ಸಕೃದುಪಸ್ಥಾಯ॥ ''**ದೇವಾನುಜ್ಞಯಾ ಪಿತ್ರಾದ್ಯಾಮನಿವೇದನಂ ಕರಿಷ್ಯೇ**'' ಇತಿ ದೇವಬ್ರಾಹ್ಮಣಂ ಪೃಚ್ಛೇತ್॥

---

ಆಮವನ್ನು ಇಡಬೇಕು. ಆನಂತರ ಕೈಜೋಡಿಸಿ '**ದೇವತಾಭ್ಯಃ..ಪರಮಾತ್ಮಾ ಸದಾಶಿವಃ**' ಎಂಬಲ್ಲಿವರೆಗೆ ಜಪಿಸಿ. ಸವ್ಯಮಾಡಿಕೊಂಡು ದೇವಬ್ರಾಹ್ಮಣನ ಎಲೆಯನ್ನು ಸ್ಪರ್ಶಿಸುತ್ತಾ, ಗಾಯತ್ರೀ ಮಂತ್ರದಿಂದ ದೇವಪಾತ್ರದಲ್ಲಿರುವ ಆಮವನ್ನು ಪ್ರೋಕ್ಷಿಸಿ ಕೂರ್ಚದಿಂದ ಮಂತ್ರವಿಲ್ಲದೆ ಪರಿಷೇಚನೆ ಮಾಡಬೇಕು. ಕೈಗಳಿಂದ ಸ್ವಸ್ತಿಕಾಕಾರವಾಗಿ ಪಾತ್ರೆಯನ್ನು ಹಿಡಿದು '**ಪೃಥಿವೀ ತೇ..ಲೋಕೆ**' ಎಂಬಲ್ಲಿವರೆಗೆ ಹೇಳಿ ಅಭಿಮಂತ್ರಿಸಿ. '**ಇದಂ ವಿಷ್ಣುಃ...ಪಾಂಸುರೇ ವಿಷ್ಣೋ ಇದಮಾಮಂ ಹವ್ಯಂ ರಕ್ಷಸ್ವ**' ಎಂಬ ಊಹವನ್ನು ಮಾಡಬೇಕು, ಇಲ್ಲಿ ವಿಪ್ರಾಂಗುಷ್ಠ ನಿವೇಶನವಿಲ್ಲ. ಆನಂತರ ದರ್ಭೆಯವತುಲಸೀದಳನೀರನ್ನು ಹಿಡಿದುಕೊಂಡು '**ಪುರೂರವಾ..**' ಎಂಬಲ್ಲಿಂದ '**ನಮೋ ನ ಮಮ**' ಎಂಬಲ್ಲಿ ವರೆಗೆ ಹೇಳಬೇಕು ಅಲ್ಲಲ್ಲಿ ಅನ್ನಸ್ಥಾನದಲ್ಲಿ ಆಮ ಶಬ್ದವನ್ನು ಬಳಸಬೇಕು. ಹೀಗೆ ಆಮನಿವೇದನವನ್ನು ಮಾಡಿ '**ಯೇ ದೇವಾಸಃ..**' ಎಂದು ಉಪಸ್ಥಾನವನ್ನು ಮಾಡಬೇಕು.

ತತಃ ಅಪಸವ್ಯಮ್॥ ವಾಮಂ ಜಾನು ಪಾತಯಿತ್ವಾ। ಪಿತ್ರ್ಯಪಾತ್ರಂ ವಾಮೇನಸ್ಪೃಶನ್ ದಕ್ಷಿಣೇನ ಪಾಣಿನಾ ಪಾತ್ರಸ್ಥಮಾಮಂ ಗಾಯತ್ರ್ಯಾಭ್ಯುಕ್ಷ್ಯ ತೂಷ್ಣೀಮಪ್ರದಕ್ಷಿಣಂ ಪರಿಷಿಚ್ಯ। ಪಾಣಿಭ್ಯಾಂ ಸ್ವಸ್ತಿಕಾಕೃತಿನಾ, ಪಾತ್ರಮಾಲಭ್ಯ ''**ಪೃಥಿವೀತೇ..ಅಮುತ್ರಾಮುಷ್ಮಿನ್‌ಲೋಕೇ**'' ಇತ್ಯಭಿಮಂತ್ರ್ಯ। ''**ಇದಂ ವಿಷ್ಣುರ್ವಿ..ಪಾಂಸುರೇ॥ ವಿಷ್ಣೋ ಇದಮಾಮಂ ಕವ್ಯಂರಕ್ಷಸ್ವ**'' ಇತ್ಯುಕ್ತ್ವಾ। ನಾತ್ರ ವಿಪ್ರಾಂಗುಷ್ಠನಿವೇಶನಮ್। ತಿಲೋದಕಮಾದಾಯ ''**ಪಿತೃಪಿತಾಮಹಪ್ರಪಿತಾಮಹಾಃ ದೇವತಾಃ, ಇದಮಾಮಂ ಹವಿರಯಂಬ್ರಾಹ್ಮಣ..ಗದಾಧರ ಇದಮಾಮಂ ಬ್ರಹ್ಮಣೇ ದತ್ತಂ ರಾಜತಪಾತ್ರಸ್ಥಮಕ್ಷಯ್ಯವಟಚ್ಛಾಯೇಯಮ್। ಅಸ್ಮತ್ಪಿತೃಪಿತಾಮಹಪ್ರಪಿತಾಮಹೇಭ್ಯಃ...ತ್ಯಸ್ವರೂಪೇಭ್ಯಃ ಇದಮಾಮಂ ಸೋಪಸ್ಕರಮಮೃತರೂಪಂ ಸ್ವಧಾ॥ (ಕವ್ಯಂನಮೋ ನ ಮಮ। ಓಂ ತತ್ಸದ್ಗಯಾಯಾಂ ರುದ್ರಪದಾದಿ ಚತುರ್ದಶಪದೇಷುದತ್ತಮಾಮಮಕ್ಷಯ್ಯಮಸ್ತು)**'' ಇತ್ಯುಕ್ತ್ವಾ ತಿಲೋದಕಂ ಪಿತೃತೀರ್ಥೇನ ಪಾತ್ರದಕ್ಷಿಣಭಾಗೇ ಭೂಮೌ ಪಿತೃತೀರ್ಥೇನ ನಿನಯೇತ್। ''**ಗಯಾ ಗಧಾಧರಃ ಪ್ರೀಯತಾಮ್**'' ಇತ್ಯುಕ್ತ್ವೋತ್ಥಾಯ। ''**ಯೇ ಚೇಹ ಪಿತರೋ..ಸುಕೃತಂ ಜುಷಸ್ವ**'' ಇತಿ ಸಕೃದುಪಸ್ಥಾನಮ್।

ಸವ್ಯಮ್। ''**ಬ್ರಹ್ಮಾರ್ಪಣಂ ಬ್ರಹ್ಮಹವಿ..ಸಮಾಧಿನಾ॥ ಹರಿರ್ದಾತಾ..ಭೋಜಯತೇ ಹವಿಃ॥ ತ್ವಾಂ ಯೋಗಿನಶ್ಚಿನ್ತಯಂತಿ ..ಸ್ವರೂಪಧೃಕ್॥ ಚತುರ್ಭಿಶ್ಚ ..ವಿಷ್ಣುಃ ಪ್ರಸೀದತು। ತತ್ಸದ್ಬ್ರಹ್ಮಾರ್ಪಣಮಸ್ತು**'' ಇತಿ ಜಪಿತ್ವಾ। ಯಥಾಚಾರಂ ಶ್ರಾದ್ಧದೇಶೇ ಸಾಲಿಗ್ರಾಮಾದಿಕಂ ಸಂಸ್ಥಾಪ್ಯ ತತ್ರ ಮಹಾವಿಷ್ಣುಂ ಧ್ಯಾತ್ವಾ ಪರ್ಣೇ ಯಥಾಚಾರಮಾಮಂ ನಿಧಾಯ ನೈವೇದ್ಯಸಮರ್ಪಣಂ

---

ನಂತರ ಅಪಸವ್ಯದಿಂದ ಪಿತ್ರ್ಯಪಾತ್ರೆಯ ಗಾಯತ್ರೀ ಮಂತ್ರದಿಂದ ಪಿತ್ರ್ಯಪಾತ್ರದ ಅನ್ನವನ್ನು ಪ್ರೋಕ್ಷಿಸಿ ಕೂರ್ಚದಿಂದ ಮಂತ್ರವಿಲ್ಲದೆ ಪರಿಷೇಚನೆ ಮಾಡಬೇಕು. ಸ್ವಸ್ತಿಕಾಕೃತಿಯಿಂದ ಪಾತ್ರೆಯನ್ನು ಹಿಡಿದು '**ಪೃಥಿವೀ ತೇ..ಲೋಕೆ**' ಎಂದು ಅಭಿಮಂತ್ರಿಸಿ, '**ಇದಂ ವಿಷ್ಣುಃ...ಪಾಂಸುರೇ ವಿಷ್ಣೋ ಇದಮಾಮಂ ಕವ್ಯಂ ರಕ್ಷಸ್ವ**' ಎಂಬ ಊಹವನ್ನು ಮಾಡಬೇಕು, ಇಲ್ಲಿ ವಿಪ್ರಾಂಗುಷ್ಠ ನಿವೇಶನವಿಲ್ಲ. ಆನಂತರ ದರ್ಭೆತಿಲತುಲಸೀದಳನೀರನ್ನು ಹಿಡಿದುಕೊಂಡು '**ಪಿತೃಪಿತಾ..**' ಎಂಬಲ್ಲಿಂದ '**ನಮೋ ನ ಮಮ**' ಎಂಬಲ್ಲಿ ವರೆಗೆ ಹೇಳಬೇಕು ಅಲ್ಲಲ್ಲಿ ಅನ್ನಸ್ಥಾನದಲ್ಲಿ ಆಮ ಶಬ್ದವನ್ನು ಬಳಸಬೇಕು. '**ಯೇ ಚೇಹ..**' ಎಂಬ ಮಂತ್ರದಿಂದ ಉಪಸ್ಥಾನವನ್ನು ಮಾಡಬೇಕು. ಆನಂತರ ಸವ್ಯಮಾಡಿಕೊಂಡು '**ಬ್ರಹ್ಮಾರ್ಪಣಂ..ತತ್ಸದ್ಬ್ರಹ್ಮಾರ್ಪಣಮಸ್ತು**' ಎಂಬಲ್ಲಿವರೆಗೆ ಜಪಿಸಿ. ಆಚಾರದಂತೆ ಶ್ರಾದ್ಧ ದೇಶದಲ್ಲಿ ಸಾಲಗ್ರಾಮವನ್ನಿಟ್ಟು ಮಹಾವಿಷ್ಣುವನ್ನು ಧ್ಯಾನಿಸಿ ಅನ್ನಾದಿದ್ರವ್ಯಗಳನ್ನು ಎಲೆಯಲ್ಲಿ ಬಡಿಸಿ ಸಮರ್ಪಣ ಮಾಡಬೇಕು. ಆನಂತರ ಅಪಸವ್ಯ ಮಾಡಿ '**ಈಶಾನವಿಷ್ಣು..ಗದಾಧರಾಯ ನಮಃ**' ಎಂದುಪ್ರಾರ್ಥಿಸಿ

ಕುರ್ಯಾತ್॥ ಅಪಸವ್ಯಮ್। ''**ಈಶಾನವಿಷ್ಣು..ಪಿತೃಮುಕ್ತಿಹೇತೂನ್॥ ಪಂಚಕ್ರೋಶಂ..ದತ್ತಮಕ್ಷಯಮ್॥ ಕಾಶಿವಿಶ್ವೇಶ್ವರಾಯ ನಮಃ। ಪುಂಡರೀಕಾಕ್ಷಾಯ ನಮಃ। ಗಯಾಗಧಾಧರಾಯ ನಮಃ**'' ಇತಿ ಜಪಿತ್ವಾ॥

ಸವ್ಯಮ್। ಆಮುಮಭಿಘಾರ್ಯ। ''**ಮಧುಮತೀಃ ಶ್ರಾವಯಿಷ್ಯೇ**'' ಇತಿ ಬ್ರಾಹ್ಮಣಾನ್ಪೃಷ್ಟ್ವಾ ''**ಓಮ್। ಭೂರ್ಭುವಸ್ವಃ। ತತ್ಸವಿತು+ಯಾತ್**'' ಇತಿ ಜಪಿತ್ವಾ॥ ಅಪಸವ್ಯಮ್। ''**ಮಧುವಾತಾ..ಭವಂತು ನಃ॥ ಮಧು ಮಧು ಮಧು। ಸುಮಧು ಸರ್ವಾಮಂ ಮಧು**'' ಇತಿ ಮಧುಮತೀರ್ಜಪಿತ್ವಾ।

ಅಪಸವ್ಯಮ್। ''**ಏಕೋ ವಿಷ್ಣುರ್..ವಿಶ್ವಭುಗವ್ಯಯಃ। ಪಿತೄಣಾಂ ಪ್ರತಿಸಾಂವತ್ಸರಿಕಶ್ರಾದ್ಧೇ ಬ್ರಾಹ್ಮಣೇಭ್ಯ ಆಮಾನ್ನದಾನೇನ ಪಿತೃಪಿತಾಮಹಪ್ರಪಿತಾಮಹಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ ಪ್ರೀತೋ ಭವತು॥ ತತ್ಸದ್ಬ್ರಹ್ಮಾರ್ಪಣಮಸ್ತು**'' ಇತಿ ಬ್ರಹ್ಮಾರ್ಪಣಂ ಕುರ್ಯಾತ್॥ [304]ಯಥಾಸುಖಂ ಜುಷಧ್ವಮಿತ್ಯಸ್ಯ ಆಪೋಶನಪ್ರಾಣಾಹುತಿ ತೃಪ್ತಿಪ್ರಶ್ನಾನಾಂ ಚ ಲೋಪಃ॥ ದಶ ತ್ರಿರ್ವಾ ಗಾಯತ್ರೀಜಪಂ ಕೃತ್ವಾ। ''**ಶ್ರದ್ಧಯಾಗ್ನಿಃ ..ಶ್ರದ್ಧೇ ಶ್ರದ್ಧಾಪಯೇಹ ನಃ**'' ಇತ್ಯಾಚಾರಾಜ್ಜಪಿತ್ವಾ॥

ಸವ್ಯಮ್। ''**ಮಧುಮತೀಃ ಶ್ರಾವಯಿಷ್ಯೇ**'' ಇತ್ಯುಕ್ತ್ವಾ॥ ''**ಮಧುವಾತಾ ಋತಾಯತೇ...ಮಾಧ್ವೀರ್ಗಾವೋ ಭವಂತು ನಃ**'' ಇತಿ ಜಪಿತ್ವಾ। ಅಪಸವ್ಯಮ್। ''**ಅಕ್ಷನ್ನಮೀಮದಂತ ಹ್ಯ...ತೇ ಹರೀ**'' ಇತಿ ಜಪಿತ್ವಾ। ''**ಶ್ರಾದ್ಧಂ ಸಂಪನ್ನಮ್**'' ಇತಿ ವಿಪ್ರಾನ್ಪೃಚ್ಛೇತ್ {''ಸುಸಂಪನ್ನಂ''ಪ್ರ+}॥ ಸಂಪನ್ನವಾಚನಾಂತೇ ಅನ್ನಶೇಷಪ್ರಶ್ನಲೋಪಃ॥

---

ಸವ್ಯದಿಂದ ಎಲೆಯಲ್ಲಿ ಜೇನು ಅಥವಾ ತುಪ್ಪವನ್ನು ಬಡಿಸಿ '**ಮಧುಮತೀ ಶ್ರಾವಯಿಷ್ಯೇ**' ಎಂದು ಕೇಳಿಕೊಂಡು ಗಾಯತ್ರೀ ಜಪಿಸಿ. '**ಮಧುವಾತಾ..ಮಧು**' ಎಂಬ ಮಧುಮತಿಯನ್ನು ಜಪಿಸಬೇಕು. ಅಪಸವ್ಯದಿಂದ ಏಕೋ '**ವಿಷ್ಣುರ್..ಬ್ರಹ್ಮಾರ್ಪಣಮಸ್ತು**' ಎಂದು ಬ್ರಹ್ಮಾರ್ಪಣ ಬಿಡಬೇಕು. ಇಲ್ಲಿ ಆಪೋಶನ. ಭೋಜನೋಪಚಾರವಚನದ, ಪ್ರಾಣಾಹುತಿ, ತೃಪ್ತಿಪ್ರಶ್ನಗಳು ಲೋಪವು. ಆನಂತರ ಹತ್ತು ಅಥವಾ ಮೂರು ಸಲ ಗಾಯತ್ರೀ ಮಂತ್ರವನ್ನು ಜಪಿಸಿ ಆಚಾರದಂತೆ. '**ಶ್ರದ್ಧಯಾಗ್ನಿಃ**' ಎಂಬ ಸೂಕ್ತಜಪಿಸಬೇಕು.ನಂತರ ಶ್ರಾದ್ಧಕರ್ತನು '**ಮಧುಮತೀ ಶ್ರಾವಯಿಷ್ಯೇ**' ಎಂದು ಪ್ರಾರ್ಥಿಸಿ ಬ್ರಾಹ್ಮಣರು 'ಶ್ರಾವಯ' ಎನ್ನಬೇಕು. ಆಗ ಕರ್ತೃವು ಸವ್ಯದಿಂದ '**ಮಧುವಾತಾ..**' ಎಂಬ ಮಂತ್ರಗಳನ್ನು ಜಪಿಸಿ, ಅಪಸವ್ಯದಿಂದ '**ಅಕ್ಷನ್ನಮೀ..**' ಮಂತ್ರವನ್ನು ಜಪಿಸಬೇಕು. ಆನಂತರ ಸವ್ಯದಿಂದ '**ಶ್ರಾದ್ಧಂ ಸಂಪನ್ನಂ**' ಎಂದು. ಅನ್ನಶೇಷಪ್ರಶ್ನಲೋಪವು.

[305]ಸರ್ವಮತೇ ತಂಡುಲೈಃ ಸಕ್ತುಭಿರ್ವಾ ಪಿಂಡದಾನಮ್॥ ಕೇಚಿದ್ಗೃಹಸಿದ್ಧಾನ್ನೇನ ಪಾಯಸೇನ ವಾ ಪಿಂಡಾನಾಹುಃ॥ ಪಿಂಡೋಪಸ್ಥಾನೇ ವಿಶೇಷಃ **''ನಮೋ ವಃಪಿತರ ಆಮದ್ರವ್ಯಾಯ। ನಮೋ ವಃಪಿತರ ಊರ್ಜೇ। ನಮೋ ವಃಪಿತರ ಶುಷ್ಮಾಯೇ...''** ಇತ್ಯಾದಿ॥ ತತಃ ಕರ್ತಾ ಬ್ರಾಹ್ಮಣಾನಚಮಯ್ಯ, ಸ್ವಯಮಪ್ಯಾಚಮ್ಯ॥ 'ವಿಕಿರಪ್ರಕಿರೇ ದದ್ಯಾದಾಮೇನ। **''ಅಸೋಮಪಾಶ್ಚ ಯೇ ದೇವಾ ಯಜ್ಞಭಾಗವಿವರ್ಜಿತಾಃ। ತೇಷಾಮಾಮಂ ಪ್ರದಾಸ್ಯಾಮಿ ವಿಕಿರಂ ವೈಶ್ವದೇವಿಕಮ್''**॥ **''ಅಸೋಮಪೇಭ್ಯೋ ವಿಶ್ವೇಭ್ಯೋ ದೇವೇಭ್ಯಃ ಇದಂ ವಿಕಿರಮಾಮಂ ದತ್ತಂ ನ ಮಮ''**। ಇತಿ ದೈವಿಕಮ್॥ ಅಪಸವ್ಯಮ್॥ **''ಅಸಂಸ್ಕೃತಪ್ರಮೀತಾ ಯೇ ತ್ಯಾಗಿನ್ಯೋ ಯಾಃಕುಲಸ್ತ್ರಿಯಃ। ದಾಸ್ಯಾಮಿ ತೇಭ್ಯಃ ಪ್ರಕಿರಮಾಮಂ ತಾಭ್ಯಶ್ಚ ಪೈತೃಕಮ್''**। **''ಕುಮಾರಕುಮಾರಿಕಾಭ್ಯಃ ಗರ್ಭಾದ್ವಿನಿಃಸೃತೇಭ್ಯಃ ಇದಂ ಪ್ರಕಿರಮಾಮಂ ದತ್ತ ನ ಮಮ''** ಇತಿ ಪೈತೃಕಮ್॥

**''ಯೇ ಅಗ್ನಿದಗ್ಧಾ...ಕಲ್ಪಯಸ್ವ'**। **''ಯೇಽಅಗ್ನಿದಗ್ಧಾಃ ..ಪರಾಂ ಗತಿಮ್''**॥ **''ಅಗ್ನಿದಗ್ಧೇಭ್ಯೋಽನಗ್ನಿದಗ್ಧೇಭ್ಯೋಽಸ್ಮತ್ಕುಲಪ್ರಸೂತೇಭ್ಯೋಽಜೀವೇಭ್ಯ ಆಮಪಿಂಡೋ ಗಯಾಸ್ಥೋ ದತ್ತೋ ನ ಮಮ''** ಇತ್ಯಾಮೇನ ಪ್ರಕಿರಂ ದತ್ವಾ ವಿಕಿರಂ ಪ್ರಕಿರಂಚಾದಾಯ ಕಾಕೇಭ್ಯೋ ದತ್ವಾ ಹಸ್ತೌ ಪಾದೌ ಪ್ರಕ್ಷಾಲ್ಯ ಪವಿತ್ರಂ ತ್ಯಕ್ತ್ವಾ ದ್ವಿರಾಚಾಮೇತ್॥

**''ಪವಿತ್ರವಂತಃ ...ಷ್ವಾರಭಮ್''** ಇತಿ ಪವಿತ್ರಂ ಧೃತ್ವಾ॥ ದೇವದ್ವಿಜಹಸ್ತೇ ಅಪೋ ದರ್ಭಾಂಶ್ಚ ದದ್ಯಾತ್ **''ಶಿವಾ ಆಪಃ ಸಂತು''** ಇತಿ। ಗಂಧಪುಷ್ಪಾಣಿ ದದ್ಯಾತ್ **''ಸೌಮನಸ್ಯಮಸ್ತು''**

---

ಪಾರ್ವಣದಂತೆ ಆಚಮನದಪೂರ್ವದಲ್ಲೋ ಅಥವಾ ಪರದಲ್ಲೋ ಅಕ್ಕಿಕಾಳುಗಳಿಂದಲೋ ಹಿಟ್ಟಿನಿಂದಲೋ ಪಿಂಡದಾನವನ್ನು ಮಾಡಬೇಕು. ಕೆಲವರ ಮತದಲ್ಲಿ ಗೃಹಸಿದ್ಧಾನ್ನದಿಂದಲೋ ಪಾಯಸದಿಂದಲೋ ಪಾರ್ವಣಶ್ರಾದ್ಧದಂತೆ ಪಿಂಡದಾನವು. ಪಿಂಡೋಪಸ್ಥಾನವನ್ನು ಮಾಡುವಾಗ **'ನಮೋ ವಃ ಪಿತರ ಇಷೇ'** ಎಂಬ ಸ್ಥಳದಲ್ಲಿ **ಇಷೇ** ಸ್ಥಾನದಲ್ಲಿ **ಆಮದ್ರವ್ಯಾಯ** ಎಂಬ ಊಹವು ವಿಶೇಷ. ಆನಂತರ ಆಮದ್ರವ್ಯದಿಂದ 'ಅಸೋಮಪಾಶ್ಚ' ಎಂಬ ಮಂತ್ರದಿಂದ ದೇವಪಾತ್ರದಬಳಿಯಲ್ಲೂ, 'ಅಸಂಸ್ಕೃತ' ಎಂಬ ಮಂತ್ರದಿಂದ ಪಿತೃಪಾತ್ರದ ಬಳಿಯಲ್ಲೂ ವಿಕಿರವನ್ನೂ **'ಯೇ ಅಗ್ನಿದಗ್ಧಾಂ..'** ಇತ್ಯಾದಿ ಮಂತ್ರಗಳಿಂದ ಪ್ರಕಿರವನ್ನೂ ಕೊಟ್ಟು ಅದನ್ನು ಕಾಗೆಗಳಿಗೆ ಕೊಡಬೇಕು. ಆನಂತರ ಕೈಕಾಲುಗಳನ್ನು ತೊಳೆದು **'ಪವಿತ್ರವಂತಃ..'** ಎಂದು ಬೇರೆ ಪವಿತ್ರವನ್ನು ಧರಿಸಿ ದೇವ ಬ್ರಾಹ್ಮಣರ ಕೈಗೆ **'ಶಿವಾ ಆಪಃ ಸಂತು'** ಇತ್ಯಾದ್ಯುಚ್ಚರಿಸುತ್ತ ನೀರು, ಹೂ, ಅಕ್ಷತೆಗಳನ್ನು ಕೊಡಬೇಕು ಆನಂತರ **'ದೀರ್ಘಮಾಯುಃ..'** ಎಂದು ಕೇಳಿಕೊಳ್ಳಬೇಕು. ಆಗ ದೇವಬ್ರಾಹ್ಮಣರು **'ಸಂತು ಶಿವಾ ಆಪಃ'** ಇತ್ಯಾದಿ ಯಥೋಕ್ತ

ಇತಿ।। ಯವಾನ್ದದ್ಯಾತ್ ''**ಯವಾಃ ಪಾಂತು**'' ಇತಿ।। ಪುನರಪೋ ದತ್ವಾ ಪ್ರಾರ್ಥಯೇತ್ ''**ದೀರ್ಘಮಾಯುಃ ..ಭವಂತೋ ಬ್ರುವಂತು**''।। ಅಪಸವ್ಯಮ್।। ಪಿತ್ರ್ಯದ್ವಿಜಕರೇ ಅಪೋ ದರ್ಭಾಂಶ್ಚದದ್ಯಾತ್ ''**ಶಿವಾ ಆಪಃ ಸಂತು**'' ಇತಿ। ಗಂಧಪುಷ್ಪಾಣಿ ದದ್ಯಾತ್ ''**ಸೌಮನಸ್ಯಮಸ್ತು**'' ಇತಿ।। ತಿಲಾನ್ದದ್ಯಾತ್ ''**ತಿಲಾಃ ಪಾಂತು**'' ಇತಿ।। ಪುನರಪೋ ದತ್ವಾ ಪ್ರಾರ್ಥಯೇತ್ ''**ದೀರ್ಘಮಾಯುಃ ಶ್ರೇಯಃ ..ಬ್ರುವಂತು**'' ಇತಿ।। ವಿಪ್ರಾಃ ದತ್ತಯವತಿಲಾದೀನ್ ಶುಚೌ ದೇಶೇ ಪ್ರಕ್ಷಿಪೇಯುಃ।। ಸವ್ಯಮ್। ಕರ್ತಾ ಬ್ರಾಹ್ಮಣಾನಭಿವಾದ್ಯ ''**ಅಸ್ಮದ್ಗೋತ್ರಂ ವರ್ಧತಾಮ್**'' ಇತಿ ಗೋತ್ರವೃದ್ಧಿಂ ಯಾಚೇತ।। ''**ಪಿಂಡಾನಾಮರ್ಚನವಿಧೇಃ ಸ್ವರ್ಚಿತಮಸ್ತು**''। ಇತ್ಯುಕ್ತ್ವಾ।

ತತಃ ದೇವವಿಪ್ರಹಸ್ತಯೋರ್ಹಸ್ತೇನೈವ ಯವೋದಕಂ ದತ್ವಾ ''**ಪುರೂರವಾರ್ದ್ರವ..ಸ್ವಸ್ತೀತಿ ಬ್ರೂತ**'' ಇತಿ ಬ್ರೂಯಾತ್।। ಅಪಸವ್ಯಮ್। ಪಿತ್ರ್ಯವಿಪ್ರ ಹಸ್ತಯೋರ್ಹಸ್ತೇನೈವ ತಿಲೋದಕಂ ದತ್ವಾ ''**ಪಿತೃಪಿತಾಮಹ..ಸ್ವಸ್ತೀತಿ ಬ್ರೂತ**'' ಇತಿ ಬ್ರೂಯಾತ್।। ಸವ್ಯಮ್।। ದೇವವಿಪ್ರಹಸ್ತೇ ಯವೋದಕಂ ದತ್ವಾ ''**ಪುರೂರವಾರ್ದ್ರವಸಂಜ್ಞಾನಾಂ ವಿಶ್ವೇಷಾಂ ದೇವಾನಾಂ ಯದ್ದತ್ತಂ ಪ್ರತಿಸಾಂವತ್ಸರಿಕಶ್ರಾದ್ಧೀಯಮಾಮಮುದಕಾದಿತದಕ್ಷಯ್ಯಮಸ್ತ್ವಿತಿ ಭವಂತೋ ಬ್ರುವಂತು**'' ಇತಿ ಪ್ರಾರ್ಥಯೇತ್ {''ಅಸ್ತ್ವಕ್ಷಯ್ಯಂ ಪ್ರತಿಸಾಂವತ್ಸರಿಕ-ಶ್ರಾದ್ಧೀಯಮಾಮಮುದಕಾದಿ''}।। ಅಪಸವ್ಯಮ್। ಪಿತ್ರ್ಯವಿಪ್ರಹಸ್ತೇ ತಿಲೋದಕಂ ಹಸ್ತೇನೈವ

---

ಪ್ರತಿವಚನವನ್ನೀಯಬೇಕು. ಹಾಗೆಯೇ ಅಪಸವ್ಯದಿಂದ ಪಿತೃಬ್ರಾಹ್ಮಣರಿಗೂ '**ಶಿವಾ ಆಪಃ ಸಂತು**' ಇತ್ಯಾದಿಗಳನ್ನು ಹೇಳಿ ನೀರು, ಹೂ ಮತ್ತು ತಿಲಗಳನ್ನು ಇತ್ಯಾದಿ ಕೊಡಬೇಕು ಬ್ರಾಹ್ಮಣರು ಯಥೋಕ್ತ ಪ್ರತಿವಚನವನ್ನೀಯಬೇಕು. ಬಳಿಕ ಬ್ರಾಹ್ಮಣರು ಕೈಯ್ಯಲ್ಲಿರುವ ಅಕ್ಷತೆ,ತಿಲ,ದರ್ಭಾದಿಗಳನ್ನು ಕೆಳಗೆ ಹಾಕಬೇಕು. ಆನಂತರ ಕರ್ತೃವು ಬ್ರಾಹ್ಮಣರನ್ನು ನಮಸ್ಕರಿಸಿ '**ಅಸ್ಮದ್ಗೋತ್ರಮಭಿವರ್ಧತಾಮ್**' ಎಂದು ಗೋತ್ರ ವೃದ್ಧಿಯನ್ನು ಯಾಚಿಸಬೇಕು ಆಗ ಬ್ರಾಹ್ಮಣರು 'ಯುಷ್ಮದ್ಗೋತ್ರಂ..' ಪ್ರತಿವಚನವನ್ನು ಹೇಳಬೇಕು. ಕೈಯ್ಯಲ್ಲಿ ಯವೋದಕವನ್ನು ತೆಗೆದುಕೊಂಡು ದೇವಬ್ರಾಹ್ಮಣರ ಕೈಗಳೆರಡರಲ್ಲೂ ಕೊಟ್ಟು '**ಪುರೂರವ..ಸ್ವಸ್ತೀತಿ ಬ್ರೂತ**' ಎಂದು ಪ್ರಾರ್ಥಿಸಬೇಕು. ಹಾಗೆಯೇ ಅಪಸವ್ಯದಿಂದ ಪಿತ್ರ್ಯ ಬ್ರಾಹ್ಮಣರ ಕೈಗಳಿಗೆ ತಿಲೋದಕವನ್ನಿತ್ತು '**ಪಿತೃಪಿತಾ..ಸ್ವಸ್ತೀತಿ ಬ್ರೂತ**' ಎಂದು ಕೇಳಿಕೊಂಡಾದ ಪಿತ್ರ್ಯಬ್ರಾಹ್ಮಣರು ಪಿತೃಪಿತಾ....ಸ್ವಸ್ತಿ ಎನ್ನಬೇಕು ಹೀಗೆ ಸ್ವಸ್ತ್ಯುದಕವನ್ನಿತ್ತು, ಅಕ್ಷಯ್ಯವಾಚನವನ್ನು ಮಾಡಬೇಕು. ಅನ್ನಸ್ಥಾನದಲ್ಲಿ ಆಮಶಬ್ದಪ್ರಯೋಗದೊಂದಿಗೆ ''**ಶ್ರಾದ್ಧೀಯಮಾಮಮುದಕಾದಿ**'' ಎಂಬ ಊಹದಿಂದ ದೇವವಿಪ್ರರ ಕೈಗೆ ಯವೋದಕವನ್ನೂ, ಪಿತ್ರ್ಯಬ್ರಾಹ್ಮಣನ ಕೈಗೆ ಕೈಯ್ಯಿಂದ ತಿಲೋದಕವನ್ನೂ ಇತ್ತು ನಾಮಾದ್ಯುಚ್ಚರಿಸಿ ''**ಅಕ್ಷಯ್ಯ..ಬ್ರುವಂತು**'' ಎಂದಾಗ ಅವರು ಪ್ರತ್ಯೇಕವಾಗಿ ಅಕ್ಷಯ್ಯಂ..ಮುದಕಾದಿ

ದತ್ವಾ **''ಪಿತೃಪಿತಾಮಹಪ್ರಪಿತಾಮಹಾನಾಂ..ಗೋತ್ರಾಣಾಂ..ಯದ್ದತ್ತಂ ಪ್ರತಿಸಾಂವತ್ಸರಿಕ-ಶ್ರಾದ್ಧೀಯಮಾಮಮುದಕಾದಿತದಕ್ಷಯ್ಯಮಸ್ತ್ವಿತಿ ಭವಂತೋ ಬ್ರುವಂತು''** {''ಅಸ್ತ್ವಕ್ಷಯ್ಯಂ ಪ್ರತಿಸಾಂವತ್ಸರಿಕ ಶ್ರಾದ್ಧೀಯಮಾಮಮುದಕಾದಿ''ಪ್ರ+}।। ಆಸಾದಿತಮರ್ಘ್ಯಪಾತ್ರಂ ಕಿಂಚಿಚ್ಚಾಲಯಿತ್ವಾ ದಕ್ಷಿಣಾತಾಂಬೂಲಾದಿ ದದ್ಯಾತ್।।

ಸವ್ಯಮ್। **''ಅಸ್ಮತ್ಪಿತೃಪಿತಾಮಹಪ್ರಪಿತಾಮಹಸ್ಥಾನೇ..ತುಭ್ಯಮಹಂ ಸಂಪ್ರದದೇ''**।। **''ಪುರೂರವಾರ್ದ್ರವಸಂಜ್ಞಕ..ತುಭ್ಯಮಹಂ ಸಂಪ್ರದದೇ''** ಇತಿ ದಕ್ಷಿಣಾಂ ದತ್ವಾ। ತತಃ ಸರ್ವಾನ್ಪ್ರಾರ್ಥಯೇತ್ **''ಶ್ರಾದ್ಧಭೋಕ್ತೃಭ್ಯೋ ಬ್ರಾಹ್ಮಣೇಭ್ಯಃ ದಕ್ಷಿಣಾಃ ಪಾಂತು''** ಇತಿ।। ತತಃ ಕರ್ತಾ ಬ್ರಾಹ್ಮಣಾನ್ಪೃಚ್ಛೇತ್ **''ಸ್ವಧಾಂ ವಾಚಯಿಷ್ಯೇ''** ಇತಿ।। ಅಪಸವ್ಯಮ್।। **''ಪಿತರಃ ಸ್ವಧೋಚ್ಯತಾಮ್। ಪಿತಾಮಹಾಃ ಸ್ವಧೋಚ್ಯತಾಮ್। ಪ್ರಪಿತಾಮಹಾಃ ಸ್ವಧೋಚ್ಯತಾಮ್''**। ತತಃ **ಪಿತ್ರ್ಯರ್ಘ್ಯಜಲಂ** ಪಿಂಡಾನಾಂ ಪುರತೋ ತೂಷ್ಣೀಂ ನಿನೀಯ, ಪಿಂಡೋಪರಿ ತಿಲೋದಕಂ ದತ್ವಾ **''ಸ್ವಧಾ ಸಂಪದ್ಯತಾಮಿತಿ ಭವಂತೋ ಬ್ರುವಂತು''** ಇತಿ ಬ್ರೂಯಾತ್।। ಸವ್ಯಮ್।। **''(ಅಗ್ನಿಪುರೋಗಾಃ) ವಿಶ್ವೇದೇವಾಃ ಪ್ರೀಯಂತಾಮಿತಿ ಭವಂತೋ ಬ್ರುವಂತು''**।। ಅಪಸವ್ಯಮ್। ''(ವಸುಪುರೋಗಾಃ) **ಪಿತರಃ ಪ್ರೀಯಂತಾಮಿತಿ ಭವಂತೋ ಬ್ರುವಂತು''**।। ಸವ್ಯಮ್। **''ಸಂಕಲ್ಪಸಿದ್ಧಿರಸ್ತ್ವಿತಿ ಭವಂತೋ ಬ್ರುವಂತು''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್ {''ಅಸ್ತು ಸಂಕಲ್ಪಸಿದ್ಧಿಃ''}।

---

ಎಂದು ಉತ್ತರಿಸಬೇಕು. ಆನಂತರ ದೇವ ಮತ್ತು ಪಿತ್ರ್ಯಾರ್ಘ್ಯಪಾತ್ರೆಗಳನ್ನು ಜರುಗಿಸಬೇಕು ನ್ಯುಬ್ಜವಾಗಿದ್ದರೆ ಮೇಲ್ಮುಖವಾಗಿಸಬೇಕು. ದೇವಬ್ರಾಹ್ಮಣರಿಗೆ ಸುವರ್ಣವನ್ನೂ ಪಿತೃಬ್ರಾಹ್ಮಣರಿಗೆ ಬೆಳ್ಳಿಯನ್ನೂ ದಕ್ಷಿಣೆಯಾಗಿ ಕೊಟ್ಟು '**ಶ್ರಾದ್ಧಭೋಕ್ತೃ..ಪಾಂತು**' ಎಂದು ಪ್ರಾರ್ಥಿಸುವುದು. ಹಾಗೆಯೆ ಕರ್ತೃವು ತನ್ನ ಶಕ್ತ್ಯನುಸಾರ ಕೊಡೆ,ಪಾದುಕೆ ಇತ್ಯಾದಿಉಪಚಾರದ್ರವ್ಯವನ್ನೀಯಬೇಕು. ಬಳಿಕ '**ಸ್ವಧಾಂ ವಾಚಯಿಷ್ಯೇ**' ಎಂದು ಬ್ರಾಹ್ಮಣರ ಅನುಮತಿ ಕೇಳುವುದು ಅವರು 'ವಾಚ್ಯತಾಮ್' ಎಂದು ಅನುಮತಿಯನ್ನಿತ್ತ ಬಳಿಕ ಅಪಸವ್ಯದಿಂದ '**ಪಿತರಃ ಸ್ವಧೋಚ್ಯತಾಂ..**' ಇತ್ಯಾದಿ ಹೇಳಬೇಕು, ಬ್ರಾಹ್ಮಣರು ಆಗ 'ಅಸ್ತು ಸ್ವಧಾ' ಎಂಬ ಪ್ರತಿವಚನವನ್ನೀಯಬೇಕು. ಅರ್ಘ್ಯಪಾತ್ರೆಯನ್ನು ಮೇಲ್ಮುಖವಾಗಿರಿಸಿದ ಪಕ್ಷದಲ್ಲಿ ಅದರಲ್ಲಿದ್ದ ಅರ್ಘ್ಯಶೇಷೋದಕವನ್ನು ಪಿಂಡಗಳ ಮುಂಬಾಗದಲ್ಲಿ ಚೆಲ್ಲುವುದು. ಆನಂತರ ಆಚಾರದಂತೆ ಪಿಂಡಗಳ ಮೇಲೆ ತಿಲೋದಕವನ್ನು ಕೊಟ್ಟು '**ಸ್ವಧಾ ಸಂಪದ್ಯತಾಮಿತಿ..**' ಬ್ರಾಹ್ಮಣರಲ್ಲಿ ಕೇಳಿಕೊಳ್ಳುವುದು ಬ್ರಾಹ್ಮಣರು 'ಸಂಪದ್ಯತಾಂ ಸ್ವಧಾ' ಎಂಬ ಪ್ರತಿವಚನವನ್ನೀಯುವುದು. ಆನಂತರ ಸವ್ಯದಿಂದ ದೇವಬ್ರಾಹ್ಮಣರಲ್ಲಿ '**ಅಗ್ನಿಪುರೋಗಾಃ..**' ಎಂದೂ ಅಪಸವ್ಯದಿಂದ ಪಿತೃಬ್ರಾಹ್ಮಣರ ಬಳಿ '**ವಸುಪುರೋಗಾಃ..**' ಎಂದೂ ಕೇಳಿಕೊಳ್ಳಬೇಕು ಆಗ ಬ್ರಾಹ್ಮಣರು ಕ್ರಮವಾಗಿ 'ಪ್ರೀಯಂತಾಂ

ಆತ್ಮಾಲಂಕಾರಃ। ಕರ್ತಾ ಚಂದನಾದಿನಾ ತಿರ್ಯಕ್ತಿಲಕಂ ಧೃತ್ವಾ॥ ಅಪಸವ್ಯಮ್। ಪಿಂಡಾನ್ನಮಸ್ಕೃತ್ಯ ''**ಗೋತ್ರಾಶಿಷಃ ಪ್ರಾರ್ಥಯತೇ**'' {''ಪ್ರಾರ್ಥಯ''ಪ್ರ+}॥ ''**ಅಘೋರಾಃ ಪಿತರಃ ಸಂತು**'' ಇತಿ ಬ್ರಾಹ್ಮಣಾನ್ ಸಂಪ್ರಾರ್ಥ್ಯ। ಸವ್ಯಮ್। ''**ಗೋತ್ರಂ ವರ್ಧತಾಮ್**'' ಇತಿ ಪೃಚ್ಛೇತ್। ''**ದೇವತಾಭ್ಯಃ+ನಮೋ ನಮಃ**'' ಇತಿ ತ್ರಿರ್ಜಪಿತ್ವಾ॥

ಬ್ರಾಹ್ಮಣಾನ್ಪಾದಾಭ್ಯಂಗಾದಿಭಿಃ ಪ್ರಿಯೋಕ್ತಿಭಿಶ್ಚ ಪರಿತೋಷ್ಯ ''**ಅದ್ಯ ಸೂರ್ಯಪರ್ವಸದೃಶೀ ...ತಂತ್ರದ್ರವ್ಯದಕ್ಷಿಣಾಸು ನ್ಯೂನಂ, ಬ್ರಾಹ್ಮಣವಚನಾತ್ಸರ್ವಂ ಸಂಪೂರ್ಣಮಸ್ತ್ವಿತಿ ಭವಂತೋ ಬ್ರುವಂತು**'' ಇತಿ ಕರ್ಮಸಂಪೂರ್ಣತಾಂ ವಾಚಯಿತ್ವಾ ಬ್ರಾಹ್ಮಣಾನ್ ಪಿತೃಪೂರ್ವಂ ವಿಸೃಜೇತ್॥

[299]ವಿಸರ್ಜನಮಂತ್ರೇऽಯಂವಿಶೇಷಃ; ''**ವಾಜೇವಾಜೇऽವತ ವಾಜಿನೋ ನೋ ಧನೇಷುವಿಪ್ರಾ ಅಮೃತಾ ಋತಜ್ಞಾಃ। ಅಸ್ಯ ಮಧ್ವಃ ಪಿಬತ ಮಾದಯಧ್ವಂ ತರ್ಪ್ಸ್ಯತ ಯಾತ ಪಥಿಭಿರ್ದೇವಯಾನೈಃ**'' ಇತಿ ಜಪಿತ್ವಾ। ''**ಉತ್ತಿಷ್ಠತ ಪಿತರಃ ವಿಶ್ವೇದೇವೈಃ ಸಹ**'' ಇತಿ ಬ್ರಾಹ್ಮಣಾನ್ಸಂಪ್ರಾರ್ಥ್ಯ। ದರ್ಭಾಗ್ರೈಃ ಪಿತ್ರ್ಯಬ್ರಾಹ್ಮಣಸವ್ಯಮಂಸಂ ಸ್ಪೃಶನ್ ''**ಓಮ್ ಸ್ವಧೋಚ್ಯತಾಮ್ ('ಅಸ್ತು ಸ್ವಧಾ' ಇತಿ ವಾ)**'' ಇತ್ಯುಕ್ತ್ವೋತ್ಥಾಪಯೇತ್॥ ತತಃ ದರ್ಭಾಗ್ರೈಃ ದೇವಬ್ರಾಹ್ಮಣದಕ್ಷಿಣಮಂಸಂ ಸ್ಪೃಶನ್ ''**ವಿಶ್ವೇದೇವಾಃ ಪ್ರೀಯಂತಾಮ್**'' ಇತ್ಯುಕ್ತ್ವೋತ್ಥಾಪ್ಯ ವಿಸೃಜೇತ್॥

---

ವಿಶ್ವೇದೇವಾಃ, ಪ್ರೀಯಂತಾಂ ಪಿತರಃ' ಎಂದು ಪ್ರತಿವಚನವನ್ನೀಯಬೇಕು ಆನಂತರ '**ಸಂಕಲ್ಪಸಿದ್ಧಿ..**' ಎಂದು ಪ್ರಾರ್ಥಿಸುವುದು. 'ಅಸ್ತು ಸಂಕಲ್ಪಸಿದ್ಧಿಃ' ಎಂಬ ಪ್ರತಿವಚನ. ಬಳಿಕ ತಾನು ತಿಲಕವಿಟ್ಟು ಅಲಂಕರಿಸಿ ಆಶೀಃಪ್ರಾರ್ಥಿಸಬೇಕು. ಕರ್ತೃವು '**ಗೋತ್ರಾಶಿಷಃ ಪ್ರಾರ್ಥಯತೇ**' ಎಂದು ಪ್ರಾರ್ಥಿಸಿ. '**ಅಘೋರಾಃ ಪಿತರಃ ಸಂತು**' ಎಂದಾಗ 'ಸಂತ್ವಘೋರಾಃ ಪಿತರಃ' ಎಂಬ ಪ್ರತಿವಚನ. '**ಗೋತ್ರಂ ವರ್ಧತಾಮ್**' ಎಂದಾಗ 'ವರ್ಧತಾಂ ಗೋತ್ರಮ್' ಎಂಬ ಪ್ರತಿವಚನ. ಆನಂತರ ಕರ್ತೃವು '**ದೇವತಾಭ್ಯಃ..**' ಎಂದು ಮೂರು ಬಾರಿ ಜಪಿಸಬೇಕು. ಬಳಿಕ ಬ್ರಾಹ್ಮಣರ ಕಾಲುಗಳನ್ನು ಒತ್ತಿ ಪ್ರಿಯವಾಕ್ಯಗಳಿಂದ ಅವರನ್ನು ಸಂತುಷ್ಟಿಗೊಳಿಸಿ '**ಅದ್ಯ ಸೂರ್ಯಪರ್ವಸದೃಶೀ.. ಬ್ರುವಂತು**' ಎಂದು ಪ್ರಾರ್ಥಿಸಬೇಕು ಆಗ ಬ್ರಾಹ್ಮಣರು 'ಸರ್ವಂ ಸಂಪೂರ್ಣಮಸ್ತು' ಎಂದು ಪ್ರತಿವಚನವನ್ನೀಯಬೇಕು. ಆನಂತರ ಬ್ರಾಹ್ಮಣರನ್ನು ವಿಸರ್ಜಿಸಬೇಕು.

'**ವಾಜೇವಾಜೇ..**' ಎಂಬ ಮಂತ್ರದಲ್ಲಿ '**ತೃಪ್ತಾ ಯಾತ**' ಸ್ಥಾನದಲ್ಲಿ '**ತರ್ಪ್ಸ್ಯತ ಯಾತ**' ಎಂಬ ಊಹದೊಂದಿಗೆ ಜಪಿಸಿ '**ಉತ್ತಿಷ್ಠತ ಪಿತರಃ**' ಎಂದು ಪಿತ್ರ್ಯಬ್ರಾಹ್ಮಣರನ್ನು ಪ್ರಾರ್ಥಿಸಿ ದರ್ಭೆಗಳತುದಿಯಿಂದ ಪಿತ್ರ್ಯಬ್ರಾಹ್ಮಣನ ಎಡಭುಜವನ್ನು ಮುಟ್ಟಿಕೊಂಡು '**ಓಮ್ ಸ್ವಧೋಚ್ಯತಾಮ್**' ಎಂದು ಹೇಳಿ

ತತಃ ಕರ್ತಾ ''**ಪಿಂಡೋದ್ಧಾರಣಂ ಕರಿಷ್ಯೇ**'' ಇತಿ ಬ್ರಾಹ್ಮಣಾನ್ಸಂಪ್ರಾರ್ಥ್ಯ। ಸ್ವಸ್ಥಾನೇ ಉಪವಿಶ್ಯ ''**ತದ್ವಿಷ್ಣೋಃ ..ಚಕ್ಷುರಾತತಮ್॥ ತದ್ವಿಪ್ರಾಸೋ ...ಪದಮ್॥ ಯತ್ರ ತತ್ಪರಮಂ ...ಪರಿಸ್ರವ॥ ಯತ್ರ ಗಂಗಾ...ಪರಿಸ್ರವ॥ ಅಯೋಧ್ಯಾ ಮಥುರಾ...ಮೋಕ್ಷದಾಯಕಾಃ**'' ಇತಿ ಯಥಾಚಾರಂ ಜಪಿತ್ವಾ ಪಿಂಡಾನಾದಾಯ ಪಾತ್ರಾನ್ತರೇ ನಿಧಾಯ॥ ಪಿಂಡನಿಪರಣದೇಶಂ ಗೋಮಯಾದಿನಾ ಸಂಮೃಜ್ಯಾಕ್ಷತಾನ್ಪ್ರಾಸ್ಯ ''**(ಪಿಂಡಸ್ಥಾನೇ) ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು**'' ಇತ್ಯುದಕಧಾರಾಂ ಕುರ್ಯಾತ್। '**ಸ್ವಸ್ಥಾನೇ ವಾಸಃ**' ಪಿಂಡಾನ್ಸಪಾತ್ರಾನ್ ಸ್ವಸ್ಥಾನೇ ಸ್ಥಾಪಯೇದಿತ್ಯಾಚಾರಃ॥ ತತಃ ಯವತಿಲೋದಕಾದಿಪಾತ್ರಸ್ಥಕೂರ್ಚಂ ವಿಸೃಜೇತ್॥

ತತಃ ಪಾದಪ್ರಕ್ಷಾಲನಮಂಡಲದೇಶೇ ವಿಪ್ರಾನುಪವೇಶ್ಯ ''**ಆ ಮಾ ವಾಜಸ್ಯ..ಗಮ್ಯಾತ್**'' ಇತಿ ಪ್ರದಕ್ಷಿಣತ್ರಯಂ ಕೃತ್ವಾ, ತೇಷಾಂ ಹಸ್ತೇಷ್ವಕ್ಷತಪುಷ್ಪಾಣಿ ದತ್ವಾ, ನಿಯತೋ ವಾಗ್ಯತಃ ಶುಚಿರ್ದಕ್ಷಿಣಾಮುಖಃ ಪ್ರಾಂಜಲಿಸ್ತಿಷ್ಠನ್ ವರಾನ್ಯಾಚೇತ ''**ದಾತಾರೋ ನೋಽಭಿ..ಯಾಚಿಷ್ಮ ಕಂಚನ**'' ಇತಿ। ವಿಪ್ರಾಃ ''**ದಾತಾರೋ ವೋಽಭಿ..**'' ಇತ್ಯಾದಿ ಯಥೋಕ್ತಂ ಪ್ರತಿವಚನಂ ದತ್ವಾ ''**ಸ್ವಾದುಷಂಸದಃ ಪಿತರೋ.. ಈಶತ॥ ಇಹೈವ ಸ್ತಂ...ಸ್ವೇ ಗೃಹೇ॥ ಆಯುಃ ಪ್ರಜಾಂ...ನೃಣಾಂ**

---

ಎಬ್ಬಿಸುವುದು. ಆಗ ಆ ವಿಪ್ರನು 'ಅಸ್ತು ಸ್ವಧಾ' ಎಂದು ಪ್ರತಿವಚನವನ್ನಿತ್ತು ಎದ್ದು ನಿಲ್ಲಬೇಕು. ಬಳಿಕ ದರ್ಭಾಗ್ರದಿಂದ ದೇವಬ್ರಾಹ್ಮಣರ ಬಲಭುಜವನ್ನು ಮುಟ್ಟಿ '**ವಿಶ್ವೇದೇವಾಃ ಪ್ರೀಯಂತಾಂ**' ಎಂದು ಎಬ್ಬಿಸಿ, ಆನಂತರ ಬ್ರಾಹ್ಮಣರಲ್ಲಿ '**ಪಿಂಡೋದ್ಧಾರಣಂ ಕರಿಷ್ಯೇ**' ಎಂದು ಅನುಜ್ಞಾಪಿಸಿ ಉದ್ಧಾರಯ ಎಂಬ ಪ್ರತಿವಚನ ಪಡೆದು ಪಿಂಡಗಳಬಳಿಯಲ್ಲಿ ಕುಳಿತು ಆಚಾರದಂತೆ '**ತದ್ವಿಷ್ಣೋಃ ಪರಮಂ..ಮೋಕ್ಷದಾಯಕಾಃ**' ಎಂಬಲ್ಲಿವರೆಗೆ ಹೇಳಿ ಹಾಸಿದ ದರ್ಭೆಗಳಸಹಿತ ಪಿಂಡಗಳನ್ನು ಎತ್ತಿ ಬೇರೆ ಒಂದು ಪಾತ್ರೆಯಲ್ಲಿ ಇಡಬೇಕು. ಪಿಂಡಗಳಿದ್ದ ಸ್ಥಳವನ್ನು ಗೋಮಯದಿಂದ ಸಾರಿಸಿ ಅಕ್ಷತೆಯನ್ನು ಹಾಕಿ '**ಪಿಂಡಸ್ಥಾನೇ ಶಾಂತಿರಸ್ತು..**' ಎಂದು ಹೇಳುತ್ತ ಪ್ರೋಕ್ಷಿಸಿ. ಪಾತ್ರಸಹಿತ ಪಿಂಡವನ್ನು ಆಸ್ಥಳದಲ್ಲಿಟ್ಟು ಆಚಾರದಂತೆ ಯವೋದಕ ತಿಲೋದಕಪಾತ್ರೆಗಳಲ್ಲಿನ ಕೂರ್ಚಗಳನ್ನು ವಿಸರ್ಜಿಸುವುದು.

ಬ್ರಾಹ್ಮಣರನ್ನು ಪಾದಪ್ರಕ್ಷಾಲನ ಮಂಡಲದಲ್ಲಿ ಕುಳ್ಳಿರಿಸಿ '**ಆಮಾ ವಾಜಸ್ಯ..**' ಎಂಬ ಮಂತ್ರವನ್ನು ಹೇಳುತ್ತಾ ಮೂರು ಪ್ರದಕ್ಷಿಣೆಯನ್ನು ಮಾಡಿ ಅವರ ಕೈಯ್ಯಲ್ಲಿ ಅಕ್ಷತಪುಷ್ಪಗಳನ್ನು ಕೊಟ್ಟು ಭಕ್ತಿಶ್ರದ್ಧೆಯಿಂದ ಕರಮುಗಿದು ದಕ್ಷಿಣಾಭಿಮುಖನಾಗಿ ನಿಂತು '**ದಾತಾರೋ ನೋಭಿವರ್ಧಂತಾಂ..**' ಇತ್ಯಾದಿ ವರಗಳನ್ನು ಯಾಚಿಸುವುದು ವಿಪ್ರರು ಯಥೋಕ್ತ ಪ್ರತಿವಚನವನ್ನೀಯಬೇಕು. ಆನಂತರ ಬ್ರಾಹ್ಮಣರು 'ಸ್ವಾದುಷಂಸದಃ..' ಇತ್ಯಾದಿ ಮಂತ್ರಗಳಿಂದಲೂ 'ಆಯುಃ ಪ್ರಜಾಂ..' ದಿಂದಾರಂಭಿಸಿ 'ಅಕ್ಷಯ್ಯಾ ತೃಪ್ತಿರಸ್ತು' ಎಂಬಲ್ಲಿವರೆಗೆ ಆಶೀಃ ಕೊಟ್ಟು ಅಕ್ಷತೆಗಳನ್ನು ಕೊಡಬೇಕು. ಕರ್ತೃವು ಬ್ರಾಹ್ಮಣರು

**ಪಿತಾಮಹಾಃ॥ ಏತಾಃ ಸತ್ಯಾ ಆಶಿಷಃ ಸಂತು। ಗೋತ್ರಸ್ಯಾಭಿವೃದ್ಧಿರಸ್ತು। ಪ್ರತಿಸಾಂವತ್ಸರಿಕಶ್ರಾದ್ಧಂ ಗಯಾಕೃತಶ್ರಾದ್ಧಫಲದಮಸ್ತು। ಪಿತೄಣಾಮಕ್ಷಯ್ಯಾ ತೃಪ್ತಿರಸ್ತು''** ಇತ್ಯಾಶಿಷೋ ದದ್ಯುಃ॥ ತತಃ ಕರ್ತಾ ವಿಪ್ರಾನ್ನಮಸ್ಕೃತ್ವಾ ತೈರ್ದತ್ತಾಕ್ಷತಾದಿ ಶಿರಸಿ ಧೃತ್ವಾ ಪ್ರಾರ್ಥಯೇತ್॥ **''ಅದ್ಯ ಮೇ ...ವೋಽನುಗ್ರಹಾದ್ದಿವಮ್॥ ಯತ್ತು ಶಾಕಾದಿದಾನೇನ ...ಕ್ಷಂತುಮರ್ಹಥ''** ಇತಿ॥ ಕರ್ತಾ **''ವಸಿಷ್ಠಾಸಃ ಪಿತೃವದ್ವಾಚ...ಸದಾ ನಃ॥ ಇದಂ ಪಿತೃಭ್ಯೋ ನಮೋ ಅಸ್ತ್ವದ್ಯೇತಿ ನಮಸ್ಕಾ...ಶಂಸ್ತವ್ಯಮ್''** ಇತಿ ಪಠಿತ್ವಾ **''ಜಪಚ್ಛಿದ್ರಂ ತಪಚ್ಛಿದ್ರಂ ...ಪ್ರಸಾದತಃ॥ ಮಂತ್ರಹೀನಂ ಕ್ರಿಯಾಹೀನಂ ...ಪ್ರಸಾದಾದ್ಭವತಾಂ ಮಮ''** ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್॥ ತತಃ ಕರ್ತಾ ಸಪರಿವಾರಃ ಬ್ರಾಹ್ಮಣಾನಾಸೀಮಾಂತಮನುವ್ರಜೇತ್ (ಅಷ್ಟೌ ಪದಾನಿ ವಾ ಸಹಾಽನುವ್ರಜೇತ್)।

ಪುನರ್ಗೃಹಮಾಗತ್ಯ। **''ವಷಟ್ತೇ ... ಸದಾ ನಃ॥ ಯಸ್ಯ ಸ್ಮೃತ್ಯಾ ...ತಮಚ್ಯುತಮ್। ವಿಷ್ಣವೇ ನಮೋ ವಿಷ್ಣವೇ ನಮೋ ವಿಷ್ಣವೇ ನಮಃ''** ಇತಿ ವಿಷ್ಣುಂ ಸ್ಮೃತ್ವಾ॥ ದ್ವಿರಾಚಮ್ಯ॥ ಪವಿತ್ರಗ್ರಂಥಿಂ ವಿಸೃಸ್ಯ ತ್ಯಕ್ತ್ವಾ॥ **''ಅನೇನ ಪಿತೄಣಾಂ ಪ್ರತಿಸಾಂವತ್ಸರಿಕಾಮಶ್ರಾದ್ಧೇನ ಪಿತೃಪಿತಾಮಹಪ್ರಪಿತಾಮಹಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ ತತ್ಸದ್ಬ್ರಹ್ಮಾರ್ಪಣಮಸ್ತು''** ಇತಿ ಬ್ರಹ್ಮಾರ್ಪಣಂ ಕುರ್ಯಾತ್॥ ತತಃ ವೈಶ್ವದೇವಂ ಕೃತ್ವಾ ಭುಂಜೀತ॥ ಅಪರೇಽಹನಿ (ಆಚಾರಾತ್ತದೈವ ವಾ) ಶ್ರಾದ್ಧಾಂಗತರ್ಪಣಂ ಕುರ್ಯಾತ್।

---

ನಮಸ್ಕರಿಸಿ ಅವರು ಕೊಟ್ಟ ಅಕ್ಷತೆಗಳನ್ನಿ ಶಿರಸ್ಸಿನಲ್ಲಿ ಧರಿಸಿ '**ಅದ್ಯ ಮೇ..**' ಎಂಬಲ್ಲಿಂದ '**ಕ್ಷಂತು ಮರ್ಹಥ**' ಎಂಬಲ್ಲಿಯವರೆಗೆ ಪ್ರಾರ್ಥಿಸಬೇಕು ಆಗ 'ವಿಸ್ಮೃತ್ಯ..ಕ್ಷಮಾಮಹೇ' ಎಂದು ಬ್ರಾಹ್ಮಣರು ಪ್ರತಿವಚನ ಹೇಳಬೇಕು. ಆ ಆನಂತರ ಕರ್ತೃವು '**ವಸಿಷ್ಠಾಸಃ..**' ಎಂಬ ಮಂತ್ರವನ್ನು ಜಪಿಸಿ '**ಇದಂ ಪಿತೃಭ್ಯೋ ನಮೋ..**' ಎಂಬ ಪಿತೃಗಾಥವನ್ನು ಜಪಿಸಿ '**ಜಪಚ್ಛಿದ್ರಂ..**' ಎಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸಿ, ಬ್ರಾಹ್ಮಣರನ್ನು ಗ್ರಾಮ ಸೀಮೆಯವರೆಗೆ ಅಥವಾ ಎಂಟು ಹೆಜ್ಜೆಗಳವರೆಗೆ ಅನುಸರಿಸಿ ಬೀಳ್ಕೊಡಬೇಕು ಪುನಃ ಮನೆಗೆ ಬಂದು ಆಸನದಲ್ಲಿ ಕುಳಿತು '**ವಷಟ್ ತೇ.., ವಿಷ್ಣವೇ..ನಮಃ**' ಎಂದು ವಿಷ್ಣುವನ್ನು ಸ್ಮರಿಸಿ, ಎರಡು ಆಚಮನ ಮಾಡಿ '**ಅನೇನ ಪಿತೄಣಾಂ..**' ಎಂದು ಬ್ರಹ್ಮಾರ್ಪಿತ ಮಾಡಬೇಕು. ಶ್ರಾದ್ಧದ ಮರುದಿನ (ಅಥವಾ ಅಚಾರದಂತೆ ಅಂದೇ) ಶ್ರಾದ್ಧಾಂಗವಾದ ತರ್ಪಣವನ್ನು ಮಾಡಬೇಕು. ವೈಶ್ವದೇವವನ್ನು ಮಾಡಿ ಇಷ್ಟಬಂಧುಗಳೊಡನೆ ಊಟಮಾಡಬೇಕು.

ಆಮಾಭಾವದಲ್ಲಿ ಹಿರಣ್ಯದಿಂದ ಶ್ರಾದ್ಧವನ್ನು ಮಾಡುವುದು ಸಂಕಲ್ಪದಲ್ಲಿ ಹಿರಣ್ಯೇನ ಎಂಬ ಊಹವು. ಗೃಹಸಿದ್ಧಾನ್ನ, ಹಿಟ್ಟು ಅಥವಾ ಪಾಯಸದಿಂದ ಅಗ್ನೌಕರಣ, ಪಿಂಡದಾನ, ವಿಕಿರಪ್ರಕಿರದಾನಗಳು. ಆಮದ್ರವ್ಯಸ್ಥಾನದಲ್ಲಿ ಅದರ 8,4,2ಪಟ್ಟು ಅಶಕ್ತಿಯಲ್ಲಿ ಸಮ ಹಿರಣ್ಯವನ್ನಿಟ್ಟು ಹಿರಣ್ಯಮಮೃತರೂಪಂ

{[306]ಅಥಾಮಾಭಾವೇ ಹಿರಣ್ಯಶ್ರಾದ್ಧಂ ಪ್ರಯೋಗಶ್ಚಾಮಶ್ರಾದ್ಧವತ್। ವಿಶೇಷಸ್ತೂಚ್ಯತೇ ;–ಸಂಕಲ್ಪೇ''**ಆಮಾನ್ನೇನಹವಿಷೇ**'ತ್ಯತ್ರ''**ಹಿರಣ್ಯೇನೇ**''ತ್ಯುಲ್ಲೇಖಃ।[307]ಗೃಹಸಿದ್ಧಾನ್ನೇನಸಕ್ತುಭಿಃ ಪಾಯಸೇನ ವಾಗ್ನೌಕರಣಂ ಪಿಂಡದಾನಂ ಪ್ರಕಿರಣಂ ಚ। [306]ಆಮದ್ರವ್ಯಮೂಲ್ಯಾದಷ್ಟಗುಣಂ ಚತುರ್ಗುಣಂದ್ವಿಗುಣಂವಾಽಽತ್ಯಶಕ್ತೌಸಮಂವಾಹಿರಣ್ಯಂನಿಧಾಯ''**ವಿಶ್ವೇಭ್ಯೋದೇವೇಭ್ಯಃ..**} **ಪಿತೃಪಿತಾಮಹಪ್ರಪಿತಾಮಹೇಭ್ಯಃ..ತ್ಯಸ್ವರೂಪೇಭ್ಯಃ ಇದಂ ಹಿರಣ್ಯಮಮೃತರೂಪಂ ಸ್ವಾಹಾ ನ ಮಮೇ**'ತ್ಯಾದಿ ದ್ರವ್ಯತ್ಯಾಗ। ಪಿಂಡೋಪಸ್ಥಾನೇ ''**ನಮೋ ವಃ ಪಿತರೋ ಹಿರಣ್ಯಾಯ। ನಮೋ ವಃ ಪಿತರ ಊರ್ಜೇ**''ಇತ್ಯೂಹಃ। ಅತ್ರ ಶ್ರಾದ್ಧೋತ್ತರಂ ತತ್ಕಾಲ ಏವ ತಿಲತರ್ಪಣಂ ಕೃತ್ವಾ ಕಾಲೇ ವೈಶ್ವದೇವಾದಿ ಕೃತ್ವಾ ಭುಂಜೀತ। } ಅತ್ರ ಪಿಂಡದಾನವಿಕಲ್ಪಾತ್ ಸಾಂಕಲ್ಪವಿಧಿನಾಪ್ಯೇತದ್ದ್ವಯಂ ಭವತಿ॥

ಇತಿ ಆಮಶ್ರಾದ್ಧಹಿರಣ್ಯಶ್ರಾದ್ಧಯೋಃ ಸಾಮಾನ್ಯಪ್ರಯೋಗಃ

★★★★★★★★★★★★★★★★★★★

---

ಇತ್ಯಾದಿ ಊಹದಿಂದ ದ್ರವ್ಯತ್ಯಾಗ. ಪಿಂಡೋಪಸ್ಥಾನದಲ್ಲಿ 'ಇಷೇ'ಯಸ್ಥಾನದಲ್ಲಿ 'ಹಿರಣ್ಯಾಯ' ಎಂಬ ಊಹ. ಶ್ರಾದ್ಧಾಂತದಲ್ಲಿ ಸದ್ಯಸ್ತಿಲತರ್ಪಣ ಆಮಹಿರಣ್ಯಶ್ರಾದ್ಧಗಳಲ್ಲಿ ಪಿಂಡದಾನವು ವಿಕಲ್ಪವಾಗಿರುವುದರಿಂದ ಈಶ್ರಾದ್ಧವನ್ನು ಸಾಂಕಲ್ಪವಿಧಿಯಂತೆಯೂ ಮಾಡಬಹುದು.

ಇಲ್ಲಿಗೆ ಆಮಹಿರಣ್ಯಶ್ರಾದ್ಧದ ಸಾಮಾನ್ಯ ಪ್ರಯೋಗವು ಸಮಾಪ್ತವು

★★★★★★★★★★★★★

## [308]ಬ್ರಹ್ಮಾರ್ಪಣವಿಧಾನಶ್ರಾದ್ಧವಿಧಿಃ

(ಅತ್ಯಶಕ್ತೌ ಬ್ರಹ್ಮಾರ್ಪಣವಿಧಿನಾ ಶ್ರಾದ್ಧಂ ಕುರ್ಯಾತ್) ವಿಪ್ರಾನ್ನಿಮನ್ತ್ರ್ಯ ಪಿತ್ರ್ಯಾಣಾಂ ತೃಪ್ತ್ಯರ್ಥಂ...ಶ್ರಾದ್ಧಂ ಸದ್ಯೈವಂ ಬ್ರಹ್ಮಾರ್ಪಣೇನ ವಿಧಿನಾ ಸದ್ಯಃ ಕರಿಷ್ಯೇ ಇತ್ಯುಕ್ತ್ವಾ ವಿಪ್ರಾಣಾಂ ಪಾದಪ್ರಕ್ಷಾಲನಂ ಕೃತ್ವಾ ಪೀಠೇಷೂಪವೇಶ್ಯಾಸನಂ ದತ್ವಾ ಕ್ಷಣಂ ದತ್ವಾ ಆವಾಹನಾರ್ಘ್ಯವರ್ಜಂ ದೇವಪಿತೃಪೂಜಾಂ ವಿಧಾಯ ಭೋಜನಪಾತ್ರಾಣ್ಯಾಸಾದ್ಯಾನ್ನಾದಿ ಪರಿವಿಷ್ಯ ತತ್ತನಾಮಾದ್ಯುಚಾರಣಪೂರ್ವಕಂ ನಿವೇದ್ಯ। ''ಏಕೋ ವಿಷ್ಣುರ್...ವಿಶ್ವಭುಗವ್ಯಯಃ। ..ಬ್ರಹ್ಮಾರ್ಪಣವಿಧಾನಶ್ರಾದ್ಧೀಯ–ಬ್ರಾಹ್ಮಣಭೋಜನೇನ ಪಿತೃ...ಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ ತತ್ಸದ್ಬ್ರಹ್ಮಾರ್ಪಣಮಸ್ತು'' ಇತಿ ಬ್ರಹ್ಮಾರ್ಪಣಂ ಕುರ್ಯಾತ್॥ ಭುಕ್ತವದ್ಭ್ಯೋ ಯಥಾಶಕ್ತಿ ದಕ್ಷಿಣಾಂ ದತ್ವಾ ''**ಗೋವಿಂದಂ ಪುಂಡರೀಕಾಕ್ಷಂ ಗಂಗಾಂ ಕಾಶೀಂ ಗಯಾಂ ಗದಾಧರಂ**'' ಚ ಭಕ್ತ್ಯಾ ಸ್ಮೃತ್ವಾ '**ಸಂಕಲ್ಪಸಿದ್ಧಿರಸ್ತ್ವಿತಿ ಭವಂತೋ ಬ್ರುವಂತು**' ಇತ್ಯುಕ್ತ್ವಾ ಯಥೋಕ್ತಂ ವಾಚಯಿತ್ವಾ ಕರ್ಮೇಶ್ವರಾರ್ಪಣಂ ಕೃತ್ವಾ ಬಂಧುಭಿಃ ಸಹ ಭುಂಜೀತ

★★★★★★★★★★★★★★★★★★★★★★★★★★★

---

## ಬ್ರಹ್ಮಾರ್ಪಣವಿಧಾನಶ್ರಾದ್ಧವಿಧಿಯು

ಅತ್ಯಶಕ್ತಿಯಲ್ಲಿ ಬ್ರಹ್ಮಾರ್ಪಣವಿಧಾನದಿಂದ ಶ್ರಾದ್ಧವನ್ನು ಮಾಡಬಹುದು ವಿಪ್ರರನ್ನು ನಿಮಂತ್ರಿಸಿ '**..ಶ್ರಾದ್ಧಂ ಬ್ರಹ್ಮಾರ್ಪಣೇನ ವಿಧಿನಾ ಸದ್ಯಃ ಕರಿಷ್ಯೇ**' ಎಂದು ಸಂಕಲ್ಪಿಸಿ, ಕ್ಷಣವನ್ನಿತ್ತು ಗೃಹಾಂಗಣದಲ್ಲಿ ವಿಪ್ರಪಾದಪ್ರಕ್ಷಾಳನೆಯನ್ನು ಮಾಡಿ. ಆಸನದಲ್ಲಿ ಅವರನ್ನು ಕುಳ್ಳರಿಸಿ ಕ್ಷಣವನ್ನಿತ್ತು ವರಣಮಾಡಬೇಕು. ಆವಾಹನಾರ್ಘ್ಯದಾನವಿಲ್ಲದೆ ದೇವಪಿತೃಪೂಜೆಯನ್ನು ಯಥೋಕ್ತವಾಗಿಮಾಡಿ ಭೋಜನಪಾತ್ರಾಸಾದನಾದಿಯನ್ನುಮಾಡಿ ಅನ್ನಾದಿಗಳನ್ನು ಬಡಿಸಿ ವಿಶ್ವೇದೇವರಿಗೆ ಮತ್ತು ಪಿತ್ರಾದಿಗಳಿಗೆ ಅನ್ನಾದಿನಿವೇದನವನ್ನು ಯಥೋಕ್ತವಾಗಿ ಮಾಡಬೇಕು. ಭೋಜನಾನಂತರ ವಿಪ್ರರಿಗೆ ದಕ್ಷಿಣಾತಾಂಬೂಲಗಳನ್ನಿತ್ತು ಗೋವಿಂದ, ಪುಂಡರೀಕಾಕ್ಷ ಇತ್ಯಾದಿಗಳನ್ನು ಭಕ್ತಿಪೂರ್ವಕವಾಗಿ ಸ್ಮರಿಸಿ, ಸಂಕಲ್ಪಸಿದ್ಧಿವಾಚನವನ್ನು ಮಾಡಬೇಕು. ಆನಂತರ ಕರ್ಮವನ್ನು ಬ್ರಹ್ಮಾರ್ಪಿತಮಾಡಿ ಬಂಧುಗಳೊಡನೆ ಭೋಜನವನ್ನು ಮಾಡಬೇಕು.

★★★★★★★★★★★★★★★★★★★★★★★★★★★

## ಅಥಾನ್ಯಾಃ ಶ್ರಾದ್ಧಾನುಕಲ್ಪಾಃ ಸಂಕ್ಷೇಪೇಣ ಪ್ರದರ್ಶ್ಯಂತೇ

[310]ದ್ರವ್ಯದ್ವಿಜಾದೀನಾಮಭಾವೇ ಅನ್ನಮಾತ್ರಂ ಪಾಚಯಿತ್ವಾ 'ಉದೀರತಾ'ಮಿತ್ಯಾದಿ ಪೈತೃಕಸೂಕ್ತೇನ ಹೋಮಃ ಕಾರ್ಯಃ॥[311]ಅಥವಾ ಅನ್ನಮಾತ್ರಂ ಪಾಚಯಿತ್ವಾ ಪಿಂಡದಾನಮಾತ್ರಂ ಕುರ್ಯಾತ್॥ [312]ದಾರಿದ್ರ್ಯೇಣ ದ್ರವ್ಯಾದಿದಾನೇಽಶಕ್ತಃ ಕಿಂಚಿದನ್ನಮಾಮಂ ತಿಲಾನುದಕುಮ್ಭಂ [313]ತತ್ರಾಪ್ಯಶಕ್ತಃ ದಕ್ಷಿಣಾಮಾಮಂ ವಾ ಪಿತ್ರ್ಯಾನುದ್ದಿಶ್ಯ ಬ್ರಾಹ್ಮಣಾಯ ದದ್ಯಾತ್। [314]ತತ್ರಾಪ್ಯಶಕ್ತಃ ತೃಣಾನಿ ಗವೇ ದದ್ಯಾತ್। [315]ಪಿತ್ರ್ಯಾನುದ್ದಿಶ್ಯ ತಿಲೋದಕೈಃ ತರ್ಪಯೇತ್। [316]ಅಗ್ನೌ ಗವೇ ವಾ ತೃಣಂ ದತ್ವೋಪವಸೇತ್। [317]ಶ್ರಾದ್ಧೋಕ್ತಮನ್ತ್ರಾನ್ ಜಪೇದ್ವಾ॥ [318]ಸರ್ವಾಭಾವೇ ವನಂ ಗತ್ವಾ ತೃಣಮೂಲಾದಿಕಂ ಗೃಹೀತ್ವಾ ರುದನ್, ಸೂರ್ಯಾದಿಲೋಕಪಾಲಾನ್ಪಿತವಿಂಶ್ಚ ಪ್ರಾರ್ಥಯೇದುಚ್ಚೈಃ 'ನ ಮೇಽಸ್ತಿ ವಿತ್ತಂ ನ ಧನಂ ನ ಚಾನ್ಯಚ್ಛ್ರಾದ್ಧೋಪಯೋಗಿ ಸ್ವಪಿತ್ರ್ಯಾನ್ನತೋಽಸ್ಮಿ। ತೃಪ್ಯಂತು ಭಕ್ತ್ಯಾ ಪಿತರೋ ಮಯೈತೋ ಭುಜೌ ಕೃತೌ ವರ್ತ್ಮನಿ ಮಾರುತಸ್ಯ॥ ನ ಮೇ ಧನಂ ನ ಚಾನ್ನಂ ಭೋಃ ಪಿತರಃ ಸರ್ವಸಾಕ್ಷಿಣಃ। ಪ್ರಾಪದ್ಧ್ವಮತುಲಾಂ ತೃಪ್ತಿಂ ಕಕ್ಷಾಮೂಲ ಪ್ರದರ್ಶನಾತ್' ಪ್ರಾರ್ಥಯೇದುಪವಸೇಚ್ಚ॥ ಸರ್ವಶ್ರಾದ್ಧಾದೌ ದೇಶಕಾಲಸಂಕೀರ್ತನಾಂತೇ 'ಶ್ರಾದ್ಧಂ ಪಿಂಡದಾನರೂಪೇಣ ಕರಿಷ್ಯೇ' ಇತ್ಯಾದಿ ಸಂಕಲ್ಪಃ ಕರ್ತವ್ಯಃ। ಅಂತೇ ತಿಲತರ್ಪಣಂ ಕಾರ್ಯಮ್॥

**ಇತಿ ಶ್ರಾದ್ಧಾನುಕಲ್ಪಾಃ**

---

ಶ್ರಾದ್ಧಾನುಕಲ್ಪಗಳು

ದಾರಿದ್ರನಿಮಿತ್ತವಾದದ್ರವ್ಯಾಭಾವದಲ್ಲಿ ವಿಪ್ರರನ್ನು ವರಿಸಿ ಶ್ರಾದ್ಧವನ್ನು ಮಾಡಲು ಅಶಕ್ತನಾದರೆ ಅನುಕಲ್ಪಗಳಿಂದ ಶ್ರಾದ್ಧವನ್ನು ಮಾಡಬಹುದು. 1.ಅನ್ನವನ್ನು ಮಾತ್ರ ಮಾಡಿ ಉದೀರತಾಂಇತ್ಯಾದಿ ಪಿತೃಸೂಕ್ತಗಳಿಂದ ಹೋಮವನ್ನು ಮಾಡುವುದು. ಅಥವಾ ಪಿಂಡದಾನವನ್ನು ಮಾತ್ರಮಾಡುವುದು. ಸ್ವಲ್ಪಾನ್ನ, ಆಮ, ಎಳ್ಳು ಮತ್ತು ಉದಕುಂಭವನ್ನು ಅದೂ ಅಸಂಭವವಾದರೆ ಆಮವನ್ನು ಮತ್ತು ದಕ್ಷಿಣೆಯನ್ನು ಪಿತೃಪ್ರೀತಿಗಾಗಿ ಬ್ರಾಹ್ಮಣನಿಗೆ ಕೊಡುವುದು. ಪಿತೃಗಳನ್ನುದ್ದೇಶಿಸಿ ತಿಲತರ್ಪಣ ಮಾಡುವುದು. ಅಗ್ನಿಗೆ ಅಥವಾ ಹಸುವಿಗೆ ಹುಲ್ಲನ್ನು ಕೊಟ್ಟು ಅಂದು ಶುದ್ಧೋಪವಾಸವನ್ನು ಮಾಡುವುದು. ಶ್ರಾದ್ಧೋಕ್ತ ಮಂತ್ರವನ್ನು ಜಪಿಸುವುದು. ಯಾವುದೇ ದ್ರವ್ಯವಿಲ್ಲದಷ್ಟು ಬಡತನವಿದ್ದರೆ ವನಪ್ರದೇಶಕ್ಕೆ ಹೋಗಿ ಹುಲ್ಲು ಅಥವಾ ಕಂದಮೂಲಗಳನ್ನು ಕೈಯ್ಯಲ್ಲಿಟ್ಟುಕೊಂಡು ಪಿತೃಗಳನ್ನು ಸ್ಮರಿಸುತ್ತಾ ಕಣ್ಣೀರಿಟ್ಟು ನನ್ನ ಬಳಿ ಯಾವುದೇ ದ್ರವ್ಯವಿಲ್ಲ ಧನವಿಲ್ಲ ಶ್ರಾದ್ಧೋಪಯೋಗಿ ವಸ್ತುವಿಲ್ಲ ನನ್ನಿಂದ ಸಮರ್ಪಿಸಲ್ಪಡುತ್ತಿರುವ ಹುಲ್ಲು ಮತ್ತು ಕಂದಮೂಲಗಳಿಂದ ತಾವು ತೃಪ್ತರಾಗಬೇಕೆಂದು ಪ್ರಾರ್ಥಿಸಿ ಅಂದು ಉಪವಾಸವಿರಬೇಕು. ಆರಂಭದಲ್ಲಿ ಸಂಕಲ್ಪವನ್ನೂ ಅಂತ್ಯದಲ್ಲಿ ತರ್ಪಣವನ್ನೂ ಮಾಡಬೇಕು ಈ ಅನುಕಲ್ಪಗಳು ಅಶಕ್ತನ ವಿಷಯದಲ್ಲಿ ಮಾತ್ರ ಗ್ರಾಹ್ಯ. ಶಕ್ತರು ಯಥೋಕ್ತ ವಿಧಿಯಲ್ಲೇ ಶ್ರಾದ್ಧವನ್ನನುಷ್ಠಿಸತಕ್ಕದ್ದು.

## [319]ಅಥಾತಿಕ್ರಾಂತಶ್ರಾದ್ಧಪ್ರಯೋಗಃ

ಆಶೌಚಾದಿನಾ ಮೃತಾಹಾತಿಕ್ರಮೇ ತದಂತೇ, ತತ್ರಾಪ್ಯತಿಕ್ರಮೇ ಕೃಷ್ಣಾಷ್ಟಮ್ಯಾಮೇಕಾದಶ್ಯಾಂ ದ್ವಾದಶ್ಯಾಮಮಾವಾಸ್ಯಾಯಾಂ ವಾಽತಿಕ್ರಾನ್ತಂ ಶ್ರಾದ್ಧಂ ಕುರ್ಯಾತ್। ತತ್ರ ವಿಶೇಷಃ;– ಸಂಕಲ್ಪೇ **''ಅತಿಕ್ರಾಂನ್ತಂ....ಶ್ರಾದ್ಧಂ ಕರಿಷ್ಯೇ'**ತಿ॥ ಸರ್ವಂ ಪ್ರಕೃತಿವತ್ಕೃತ್ವಾ ಪರೇಽಹನಿ ತಿಲತರ್ಪಣಂ ಕುರ್ಯಾತ್॥

*****************

## [320]ಅಥವಿಧವಾಸ್ತ್ರೀಕರ್ತೃಕಶ್ರಾದ್ಧಪ್ರಯೋಗಃ

ಶ್ರಾದ್ಧಕರ್ತ್ರೀ ಶ್ರಾದ್ಧದಿನೇ ದೇಶಕಾಲೌ ಸ್ಮೃತ್ವೋತ್ತರೀಯವಸ್ತ್ರೇಣ ಪ್ರಾಚೀನಾವೀತಂ ಕೃತ್ವಾ। **'ಅಸ್ಮದ್ಭರ್ತೃತತ್ಪಿತೃಪಿತಾಮಹಾನಾಂ..ಶರ್ಮಣಾಂ..ಗೋತ್ರಾಣಾಂವಸುರುದ್ರಾದಿತ್ಯಸ್ವರೂಪಾಣಾಂ ಪ್ರತ್ಯಾಬ್ದಿಕಶ್ರಾದ್ಧಂ ಸದೈವಂ ಸಪಿಂಡಂಪಾರ್ವಣೇನ ವಿಧಿನಾನ್ನೇನ ಹವಿಷಾ ಸದ್ಯಃ ಕರಿಷ್ಯ'** ಇತಿ ಸ್ವಯಂ ಸಂಕಲ್ಪಂ ಕೃತ್ವಾ। ಕಂಚಿದ್ರಾಹ್ಮಣಮೃತ್ವಿಕ್ತ್ವೇ ಪರಿಕಲ್ಪ್ಯ ತಂ ಪ್ರತಿ ಬ್ರೂಯಾತ್ **'ಮಮಾಽಽಜ್ಞಯಾ ತ್ವಮಿದಂ ..ಶ್ರಾದ್ಧಂ ಕುರು'** ಇತಿ। ಕರ್ತಾ **'ಕರಿಷ್ಯಾಮಿ'** ಇತ್ಯಂಗೀಕೃತ್ಯ ಸರ್ವಮಪಿ ಶ್ರಾದ್ಧವಿಧಿಂ ಸಮಂತ್ರಕಂ ಕುರ್ಯಾತ್। ತತ್ರ ವಿಶೇಷ;**'ಅನುಜ್ಞಾಕರ್ತ್ರ್ಯಾ ಭರ್ತೃತತ್ಪಿತೃಪಿತಾಮಹಾನಾಂ ..ಶರ್ಮಣಾಂ ..ಗೋತ್ರಾಣಾಂ ವಸುರುದ್ರಾಽಽ**

---

### ಅಥಾತಿಕ್ರಾಂತಶ್ರಾದ್ಧಪ್ರಯೋಗಃ

ಆಶೌಚಾದಿ ನಿಮಿತ್ತದಿಂದ ಮೃತಾಹವು ಅತಿಕ್ರಮಿಸಿದರೆ ಆಶೌಚಾದ್ಯಂತದಲ್ಲಿ ಮಾಡಬೇಕು. ಆಗಲೂ ಕಾರಣಾಂತರದಿಂದ ಸಾಧ್ಯವಾಗದಿದ್ದರೆ ಕೃಷ್ಣಾಷ್ಟಮಿಯಲ್ಲಿ, ಕೃಷ್ಣ ಏಕಾದಶಿಯಂದು, ದ್ವಾದಶಿಯಂದು ಅಥವಾ ಅಮಾವಾಸ್ಯೆಯಂದು ಅತಿಕ್ರಾಂತಶ್ರಾದ್ಧವನ್ನನುಷ್ಠಿಸಬೇಕು. ಸಂಕಲ್ಪದಲ್ಲಿ ಅತಿಕ್ರಾಂತಂ.. ಪ್ರತಿಸಾಂವತ್ಸರಿಕಶ್ರಾದ್ಧಂ..ಕರಿಷ್ಯೇ ಎಂಬ ಸಂಕಲ್ಪದೊಂದಿಗೆ ಯಥೋಕ್ತವಾಗಿ ಶ್ರಾದ್ಧವನ್ನಾಚರಿಸಿ ಮರುದಿನ ತಿಲತರ್ಪಣವನ್ನು ಮಾಡಬೇಕು.

*****************

### ವಿಧವಾಸ್ತ್ರೀಕರ್ತೃತ್ವಶ್ರಾದ್ಧದವಿಧಿಯು

ವಿಧವಾಸ್ತ್ರೀಯು ಅಪುತ್ರಳಾಗಿದ್ದು ತಾನೇ ಭರ್ತಾ್ರದಿಗಳಿಗೆಶ್ರಾದ್ಧ ಮಾಡುವ ನಿಮಿತ್ತವಿದ್ದರೆ ಶ್ರಾದ್ಧದಂದು ದೇಶಕಾಲಗಳನ್ನು ಸ್ಮರಿಸಿ ಉತ್ತರೀಯವಸ್ತ್ರವನ್ನು ಪ್ರಾಚೀನಾವೀತಿಯಾಗಿಧರಿಸಿ **'ಅಸ್ಮದ್ಭರ್ತೃತತ್ಪಿತೃಪಿತಾಮಹಾನಾಂ..ರೂಪಾಣಾಂ..ಸದ್ಯಃ ಕರಿಷ್ಯೇ'** ಎಂದು ಸ್ವಯಂ ಸಂಕಲ್ಪಿಸಿ. ಬ್ರಾಹ್ಮಣನೊಬ್ಬನನ್ನು ಋತ್ವಿಗನಾಗಿ ವರಿಸಿ ಅವನನ್ನು **'ಮಮಾಜ್ಞಯಾ..ಶ್ರಾದ್ಧಂ ಕುರು'** ಎಂಬಲ್ಲಿಯವರೆಗೆ ಹೇಳಿ ಪ್ರಾಥಿಸಬೇಕು. ಆಗ ವಿಪ್ರನು ಕರಿಷ್ಯಾಮಿ ಎಂಬ ಅಂಗೀಕಾರವನ್ನಿತ್ತು ಯಥೋಕ್ತವಾದ ಶ್ರಾದ್ಧವಿಧಿಯನ್ನು ಸಮಂತ್ರಕವಾಗಿ ಮಾಡಬೇಕು. ವರಣ ಆಸನಾದಿಗಳಲ್ಲಿ ವಿಭಕ್ತಿಯನ್ನು ಊಹಮಾಡಬೇಕು **'ಅನುಜ್ಞಾಕರ್ತ್ರ್ಯಾ ಭರ್ತೃತತ್ಪಿತೃಪಿತಾಮಹಾನಾಂ..'** ಮಾರ್ಜನದಲ್ಲಿ

**ದಿತ್ಯರೂಪಾಣಾಂ''** ಇತ್ಯಾದಿತತ್ತದ್ವಿಭಕ್ತ್ಯೂಹೇನ ಪ್ರಯೋಗಃ ಕಾರ್ಯಃ। ಮಾರ್ಜನಾದಿಷು **'ಶುಂಧಂತಾಂ ಅನುಜ್ಞಾಕರ್ತ್ರ್ಯಾ ಭರ್ತಾರಃ../ಶುಂಧಂತಾಂ ಅನುಜ್ಞಾಕರ್ತ್ರ್ಯಾ ಭರ್ತೃಪಿತರಃ../ಅನುಜ್ಞಾಕರ್ತ್ರ್ಯಾ ಭರ್ತೃಪಿತಾಮಹಾಃ, ಏತತ್ತೇ ಅನುಜ್ಞಾಕರ್ತ್ರ್ಯಾ ಭರ್ತಃ --ಶರ್ಮನ್..ತೇಭ್ಯಶ್ಚ..,** ಇತ್ಯಾದಿ ಸ್ಥಲೇಷೂಹಃ ಕರ್ತವ್ಯಃ। ಅನ್ಯತ್ರ **'ಉದೀರತಾ..,ಸ್ವಧಯಾ ಪಿತೄನಿಮಾನ್.., ಯೇ ಚೇಹ ಪಿತರಃ..,ಅತ್ರ ಪಿತರೋ,ಅಮೀಮದಂತ ಪಿತರೋ, ಏತದ್ವಃ ಪಿತರೋ, ನಮೋ ವಃ ಪಿತರ ಇಷೇ, ಪರೇತನ ಪಿತರಃ.., ಮನೋನ್ವಾಹುವಾಮಹೇ'** ಇತ್ಯಾದಿಷುಸ್ಥಲೇಷುನೋಹಃ॥

ಋತ್ವಿಕ್ಕರ್ಮಕಾಲೇ ತದ್ಯಜ್ಞೋಪವೀತಿತ್ವೇಽನುಜ್ಞಾತ್ರ್ಯಾಪಿ ಯಜ್ಞೋಪವೀತಿತಾ, ತತ್ಪ್ರಾಚೀನಾವೀತಿತ್ವೇ ತಯಾ ಪ್ರಾಚೀನಾವೀತಿತಾ ಕರ್ತವ್ಯಾ। ತರ್ಪಣಂ ತು ವಿಧವಾಕರ್ತೃಕಮೇವ। ಶ್ರಾದ್ಧಕರ್ತೃನಿಯಮಾಸ್ತು ಋತ್ವಿಜೋಽನುಜ್ಞಾಕರ್ತ್ರ್ಯಾಶ್ಚ ಸಮಾನಾಃ। ಋತ್ವಿಗ್ವರಣಪಕ್ಷೇ ತಸ್ಮೈ ಹಿರಣ್ಯಂ ದಕ್ಷಿಣಾಂ ದದ್ಯಾತ್। ಅಥವಾ ವಿಧವಾ ಸ್ವಯಮೇವ ವೈದಿಕಮಂತ್ರವರ್ಜಂ ಸರ್ವಂ ವಿಧಿಂ ಕುರ್ಯಾತ್। ಮಂತ್ರಸಾಧ್ಯಂ ಕರ್ಮಾಪಿ ತೂಷ್ಣೀಂ ಕರ್ತವ್ಯಮೇವ। ಬ್ರಾಹ್ಮಣದ್ವಾರಾ ಶ್ರಾದ್ಧಪ್ರಯೋಗೇಽಪಿ ಮಂತ್ರರಹಿತಃ ಪ್ರಯೋಗ ಇತಿ ಬಹವಃ। ಏಕೋದ್ದಿಷ್ಟಪಕ್ಷೇ 'ಅಸ್ಮತ್ಪುತ್ರಸ್ಯ, ಪಿತೃವ್ಯಸ್ಯ,ಮಾತುಲಸ್ಯ' ಇತ್ಯಾದಿ ಸಂಕಲ್ಪ್ಯೈಕೋದ್ದಿಷ್ಟಧರ್ಮೇಣ ಶ್ರಾದ್ಧಂ ಕುರ್ಯಾತ್॥

ಇತಿ ವಿಧವಾಸ್ತ್ರೀಕರ್ತೃಕಶ್ರಾದ್ಧಪ್ರಯೋಗಃ ಸಮಾಪ್ತಃ

---

**'ಮಾರ್ಜಯಂತಾಂ ಅನುಜ್ಞಾಕರ್ತ್ರ್ಯಾ ಭರ್ತಾರಃ/ಭರ್ತೃಪಿತರಃ/ಭರ್ತೃಪಿತಾಮಹಾಃ'** ಎಂದು ಬಹುವಚನಾಂತದಲ್ಲೂ, ಪಿಂಡಪ್ರದಾನದಲ್ಲಿ **'ಏತತ್ತೇ ಅನುಜ್ಞಾಕರ್ತ್ರ್ಯಾ ಭರ್ತಃ ...ಶರ್ಮನ್..'** ಇತ್ಯಾದಿ ಏಕವಚನದಲ್ಲೂ ಊಹ ಮಾಡಬೇಕು. ಮತ್ತು **'ಉದೀರತಾಂ..,..ಸ್ವಧಯಾ ಪಿತೄನಿಮಾನ್, ಯೇ ಚೇಹ ಪಿತರಃ..'** ಇತ್ಯಾದಿ ಸ್ಥಳಗಳಲ್ಲಿ ಊಹ ಮಾಡಬಾರದು. ಋತ್ವಿಜನು ಕರ್ಮಕಾಲದಲ್ಲಿ ಉಪವೀತವನ್ನು ಸವ್ಯಾಪಸವ್ಯಗಳನ್ನು ಮಾಡಿಕೊಳ್ಳುವಾಗ ಕರ್ತ್ರಿಯೂ ತನ್ನ ಉತ್ತರೀಯದಿಂದ ಸವ್ಯಾಪಸವ್ಯ ಮಾಡಿಕೊಳ್ಳಬೇಕು. ತರ್ಪಣವನ್ನು ಅನುಜ್ಞಾಪ್ತ್ರಿಯೇ ಸ್ವಯಂ ಮಾಡಬೇಕು. ಶ್ರಾದ್ಧನಿಯಮಗಳು ಇಬ್ಬರಿಗೂ ಅನ್ವಯಿಸುತ್ತದೆ. ಕರ್ಮಾಂತದಲ್ಲಿ ಋತ್ವಿಜನಿಗೆ ದಕ್ಷಿಣೆಯನ್ನೀಯಬೇಕು.

ವಿಧವಾ ಸ್ತ್ರೀಯು ಸ್ವಯಮೇವ ವೈದಿಕಮಂತ್ರವಿಲ್ಲದೆ ಶ್ರಾದ್ಧವಿಧಿಯನ್ನು ಮಾಡಬಹುದು. ಮಂತ್ರೋಕ್ತಕರ್ಮವನ್ನೂ ಮಂತ್ರರಹಿತವಾಗಿಯೇ ಮಾಡಬೇಕು. ಋತ್ವಿಗ್ವರಣಪೂರ್ವಕಶ್ರಾದ್ಧದಲ್ಲೂ ಮಂತ್ರವಿಲ್ಲದೇ ಶ್ರಾದ್ಧವಿಧಿಯನ್ನು ಮಾಡಬೇಕೆನ್ನುವುದು ಅನೇಕರ ಅಭಿಪ್ರಾಯವು.

ವಿಧವಾಕರ್ತೃಕ ಏಕೋದ್ದಿಷ್ಟಶ್ರಾದ್ಧವನ್ನು ಅಸ್ಮತ್ಪುತ್ರಸ್ಯ,ಪಿತೃವ್ಯಸ್ಯ,ಮಾತುಲಸ್ಯ ಇತ್ಯಾದಿ ಸಂಕಲ್ಪವನ್ನು ಮಾಡಿ ಏಕೋದ್ದಿಷ್ಟ ಧರ್ಮದಿಂದ ಶ್ರಾದ್ಧವನ್ನಾಚರಿಸಬೇಕು.

ವಿಧವಾಸ್ತ್ರೀಕರ್ತೃಕಶ್ರಾದ್ಧಪ್ರಯೋಗವು ಸಮಾಪ್ತವು

## ಅಥಾನುಪನೀತಕರ್ತೃಕಶ್ರಾದ್ಧಪ್ರಯೋಗಃ

ಪುತ್ರಾನ್ತರಾಭಾವೇ ಕೃತಚೂಡೋಽಕೃತಚೂಡೋ ವಾಽನುಪನೀತಃ ಪುತ್ರೋಽಪಿ ಶ್ರಾದ್ಧಂ ಕುರ್ಯಾತ್। ಸಂಕಲ್ಪಮಾತ್ರಂ ಕೃತ್ವಾ ಸರ್ವಂ ಬ್ರಾಹ್ಮಣದ್ವಾರಾ ಕಾರಯೇತ್। ತತ್ರ ವಿಧಿಃ ಪ್ರಯೋಗಶ್ಚ ವಿಧವಾ ಕರ್ತೃಕಶ್ರಾದ್ಧೋಕ್ತವತ್। ಸಂಕಲ್ಪಾದಿಷು'ಅನುಜ್ಞಾಕರ್ತುಃ ಪಿತೃಪಿತಾಮಹಪ್ರ....' ಇತ್ಯಾದ್ಯೂಹಃ॥ ಅತ್ರ ಮಂತ್ರವರ್ಜಶ್ರಾದ್ಧಪ್ರಯೋಗೋ ಬಹುಸಮ್ಮತಃ।

★★ಇತ್ಯನುಪನೀತಕರ್ತೃಕಶ್ರಾದ್ಧಪ್ರಯೋಗಃ★★

## ಅಥ ದರ್ಭಬಟುಶ್ರಾದ್ಧವಿಧಿಃ

ಸರ್ವಥಾ ವಿಪ್ರಾಲಾಭೇ ತತ್ಪ್ರತಿನಿಧಿತ್ವೇನಾಽಽಸನೇಷುದರ್ಭಬಟುಂ ನಿಧಾಯ ತಾನೇವ ವಿಪ್ರಾನ್‌ಧ್ಯಾಯನ್‌ಸರ್ವಮವಿಕೃತಂ ಶ್ರಾದ್ಧಪ್ರಯೋಗಂ ಕುರ್ಯಾತ್। ನ ನಿಯಮ ಶ್ರಾವಣಂ ತಸ್ಯ ದೃಷ್ಟಾರ್ಥತ್ವಾತ್। ದರ್ಭಬಟೂನಾಂ ಪ್ರಾಙ್ಮುಖೋದಙ್ಮುಖತಾ ದರ್ಭಾಗ್ರಸ್ಯ ಮುಖಕಲ್ಪನಯಾ ಜ್ಞೇಯಾ। ದರ್ಭಬಟುನಿರ್ಮಾಣೇ ನ ದರ್ಭಸಂಖ್ಯಾ ನಿಯಮಃ। ಬ್ರಾಹ್ಮಣಸಂಬಂಧಿಮಂತ್ರಪ್ರತಿವಚನಾನಿ ಸ್ವಯಮೇವ ವದೇತ್। ಅನ್ನ ನಿವೇದನಾದೌ ಯಥಾಶ್ರುತಂ ಬ್ರಾಹ್ಮಣಶಬ್ದಸ್ಯೈವ ನಿರ್ದೇಶೋ ಯುಕ್ತಃ **'ಇದಮನ್ನಂ ಹವಿರಯಂ ಬ್ರಾಹ್ಮಣ ಆಹವನೀಯಾರ್ಥ'** ಇತ್ಯಾದಿ॥ ಪಾತ್ರಾದಿಷು ಪರಿವೇಷಿತಮನ್ನಾದಿದ್ರವ್ಯಂ ಗವೇ ದದ್ಯಾದಥವಾ ಅಪ್ಸ್ವಗ್ನೌ ವಾ ಕ್ಷಿಪೇತ್। ದಕ್ಷಿಣಾಮನ್ಯಸ್ಮೈ ದದ್ಯಾತ್। ಆಮಹೇಮಪಕ್ಷಯೋಸ್ತು ದರ್ಭಬಟುಂ

---

## ಅನುಪನೀತಕರ್ತೃಕಶ್ರಾದ್ಧಪ್ರಯೋಗವು

ಪುತ್ರರಿಲ್ಲದಿದ್ದರೆ ಚೌಲವಯಸ್ಕನಾದ ಪುತ್ರನು ಚೌಲೋಪನಯನಗಳು ಆಗದಿದ್ದರೂ ಸ್ವಯಂ ಶ್ರಾದ್ಧಸಂಕಲ್ಪವನ್ನು ಮಾಡಿ ಋತ್ವಿಗ್ವರಣವನ್ನು ಮಾಡಿ ವಿಧವಾಕರ್ತೃಕಶ್ರಾದ್ಧದಂತೆ ಶ್ರಾದ್ಧವನ್ನನುಷ್ಠಿಸಬೇಕು. ಸಂಕಲ್ಪಾದಿಗಳಲ್ಲಿ ಅನುಜ್ಞಾಕರ್ತುಃ ಪಿತೃಪಿತಾಮಹಪ್ರಪಿತಾಮಹಾನಾಂ ಇತ್ಯಾದಿ ಯಥೋಚಿತ ಊಹವು. ಇಲ್ಲಿಯೂ ಅಮಂತ್ರಕಶ್ರಾದ್ಧಪ್ರಯೋಗವು ಬಹು ಸಮ್ಮತವು.

## ದರ್ಭಬಟುಶ್ರಾದ್ಧವಿಧಿಯು

ಶ್ರಾದ್ಧಕ್ಕೆ ಬ್ರಾಹ್ಮಣರೇ ಸಿಗದಪಕ್ಷದಲ್ಲಿ ಬ್ರಾಹ್ಮಣಪ್ರತಿನಿಧಿಯಾಗಿ ದರ್ಭಬಟುವನ್ನಿಟ್ಟು ಅದನ್ನೇ ಬ್ರಾಹ್ಮಣನೆಂದು ಭಾವಿಸಿ ಯಥೋಕ್ತ ಶ್ರಾದ್ಧಪ್ರಯೋಗವನ್ನು ಮಾಡಬೇಕು. ಅಕ್ರೋಧನೈಃ.. ಇತ್ಯಾದಿ ನಿಯಮ ಶ್ರಾವಣವಿಲ್ಲ. ದರ್ಭಾಗ್ರಗಳನ್ನು ಪೂರ್ವ ಮತ್ತು ಉತ್ತರಾಗ್ರವಾಗಿಟ್ಟು ಮುಖತ್ವವನ್ನು ಸಾಧಿಸಿಕೊಳ್ಳಬೇಕು. ಬಟುವಿಗೆ ದರ್ಭಸಂಖ್ಯಾನಿಯಮವಿಲ್ಲ. ಬ್ರಾಹ್ಮಣರು ಹೇಳಬೇಕಾದ ವಚನ ಪ್ರತಿವಚನಗಳನ್ನು ಕರ್ತೃವೇ ಸ್ವಯಂ ಹೇಳಬೇಕು. ಅನ್ನ ನಿವೇದನಾದಿಗಳಲ್ಲಿ ಬ್ರಾಹ್ಮಣ ಶಬ್ದಗಳನ್ನು ಪ್ರಕೃತಿಯಂತೇ ಹೇಳಬೇಕು. ಎಲೆಯಲ್ಲಿ ಬಡಿಸಿದ ಅನ್ನಾದಿದ್ರವ್ಯಗಳನ್ನು ಹಸುವಿಗೆ ಕೊಡಬೇಕು ಅಥವಾ ನೀರಿನಲ್ಲೋ ಅಗ್ನಿಯಲ್ಲೋ ಹಾಕಬೇಕು. ದಕ್ಷಿಣೆಯನ್ನು ಯಾವುದಾದರು ವಿಪ್ರರಿಗೆ ಕೊಡಬೇಕು.

ನಿಧಾಯ ಶ್ರಾದ್ಧಂ ನಿರ್ವರ್ತ್ಯ ತತ್ತದ್ರವ್ಯಂ ಕಾಲಾಂತರೇ ಬ್ರಾಹ್ಮಣಾಯ ಬ್ರಾಹ್ಮಣೇಭ್ಯೋ ವಾ ದದ್ಯಾತ್॥ {ಕೇಚಿದತ್ರ 'ಅಗ್ನೌಕರಣಂ ಗೃಹ್ಯಾಗ್ನಿಮತಾ ಗೃಹ್ಯಾಗ್ನೌ ಕರ್ತವ್ಯಂ ತದಭಾವೇ ಲೌಕಿಕಾಗ್ನಾವಪಿ। ಯದ್ಯಪ್ಯಾಶ್ವಲಾಯನೀನಾಂ ಸೂತ್ರೇ ಪಾಣೌಸ್ಮಾರ್ತಾಗ್ನೀ ವಿನಾ ವಿಧಾನಾಂತರಂ ನೋಕ್ತಂ ತಥಾಪ್ಯೇತಾದೃಶಸ್ಥಾನೇ ಸ್ವಾವಿರುದ್ಧಮನ್ಯತೋ ಗ್ರಾಹ್ಯಮಿತಿ ನ್ಯಾಯೇನ ಶಾಸ್ತ್ರಾಂತರಮಪಿ ಸ್ವೀಕರಣೀಯಂ ಭವತೀತಿ' ಇತಿ ವದಂತಿ}

ಯದಾ ಏಕ ಏವ ವಿಪ್ರಃ ಲಭ್ಯತೇ ತದಾ ತಂ ಪೈತೃಕೇ ನಿಮಂತ್ರಯೇತ್। ವೈಶ್ವದೇವಿಕವಿಪ್ರನಿಮಂತ್ರಣಾದೀನಾಂ ಲೋಪಃ। ಶ್ರಾದ್ಧಕಾಲೇ ವಿಶ್ವದೇವಾಯತನೇ ಪೀಠೇ ಶಾಲಗ್ರಾಮಂ ಶಿವಲಿಂಗಂ ತದುಭಯಂ ವಾ ಸಂಸ್ಥಾಪ್ಯ। ತದ್ದಕ್ಷಿಣತಃ ಪಿತ್ರ್ಯವಿಪ್ರಮುದಙ್ಮುಖಮುಪವೇಶ್ಯ ಸರ್ವಮವಿಕೃತಂ ಶ್ರಾದ್ಧಪ್ರಯೋಗಂ ಕುರ್ಯಾತ್। ಪರಿವೇಷಣ ಕಾಲೇ ಸರ್ವಸ್ಮಾದನ್ನಾತ್ ಪುರುಷಾಹಾರಪರಿಮಿತಂ ಪಾತ್ರಾನ್ತರೇ ಕೃತ್ವಾ ದೇವಸಮೀಪೇ ನಿಧಾಯ ನಿವೇದನಕಾಲೇ '**ವಿಶ್ವೇಭ್ಯೋ ದೇವೇಭ್ಯ ಇದಮನ್ನಮಮೃತರೂಪಂ ಪರಿವಿಷ್ಟಂ ಸ್ವಾಹಾ ಹವ್ಯಂನಮೋ ನ ಮಮ**' ಇತಿ ವಿಶ್ವದೇವೋದ್ದೇಶೇನ ದೇವಾಯ ನಿವೇದಯೇತ್। ಶ್ರಾದ್ಧಾಂತೇ ದೇವನಿವೇದಿತಮನ್ನಾದಿಕಂ ಬ್ರಹ್ಮಚಾರಿಣೇ ದದ್ಯಾತ್। ತದಲಾಭೇಽಗ್ನೌ ದಹೇದಿತಿ ಚಂದ್ರಿಕಾಯಾಮ್॥

★★ಇತಿ ದರ್ಭಬಟು ಶ್ರಾದ್ಧಪ್ರಯೋಗಃ★★

---

ಆಮಹಿರಣ್ಯದರ್ಭಬಟುಶ್ರಾದ್ಧಗಳಲ್ಲಿ ಕಾಲಾಂತರದಲ್ಲಿ ಆಮಾದಿದ್ರವ್ಯಗಳನ್ನು ವಿಪ್ರರಿಗೆ ಕೊಡಬೇಕು. {ಕೆಲವರು ದರ್ಭಬಟುಶ್ರಾದ್ಧದಲ್ಲಿ ಅಗ್ನೌಕರಣವನ್ನು ಗೃಹ್ಯಾಗ್ನಿಯಲ್ಲೇ ಮಾಡಬೇಕೆಂದೂ ಗೃಹ್ಯಾಗ್ನಿ ರಹಿತರು ಲೌಕಿಕಾಗ್ನಿಯಲ್ಲಿ ಹೋಮಿಸಬೇಕೆನ್ನುವರು ಆಶ್ವಲಾಯನಿಗಳಿಗೆ ಸೂತ್ರದಲ್ಲಿ ಸ್ಮಾರ್ತಾಗ್ನಿಯಲ್ಲಿ ಅಥವಾ ಪಾಣಿಯಲ್ಲಿ ಮಾತ್ರ ಹೋಮಿಸುವಂತೆ ವಿಧಿಯಿದ್ದರೂ ಅವಿರುದ್ದವಾದ ಅನ್ಯಮತವನ್ನೂ ಗ್ರಹಿಸಬಹುದೆಂಬ ನ್ಯಾಯದಂತೆ ಅನ್ಯಸೂತ್ರೀಯಪಕ್ಷವನ್ನು ಗ್ರಹಿಸಬೇಕೆನ್ನುವರು}

ಬ್ರಾಹ್ಮಣನೊಬ್ಬನು ಲಭಿಸಿದ ಪಕ್ಷದಲ್ಲಿ ಅವನನ್ನು ಪಿತೃಸ್ಥಾನಕ್ಕೆ ನಿಮಂತ್ರಿಸಬೇಕು. ಇಲ್ಲಿ ವಿಶ್ವದೇವ ನಿಮಂತ್ರಣಾದಿಲೋಪವು. ಶ್ರಾದ್ಧಕಾಲದಲ್ಲಿ ವಿಶ್ವೇದೇವಸ್ಥಾನದ ಆಸನದಲ್ಲಿ ಸಾಲಗ್ರಾಮವನ್ನೋ ಶಿವಲಿಂಗವನ್ನೋ ಅಥವಾ ಎರಡನ್ನೂ ಇರಿಸಿ, ಯಥೋಕ್ತಶ್ರಾದ್ಧವನ್ನು ಮಾಡಬೇಕು ಅನ್ನನಿವೇದನ ಕಾಲದಲ್ಲಿಒಬ್ಬವ್ಯಕ್ತಿಭೋಜನಪರ್ಯಾಪ್ತ ಅನ್ನಾದಿಗಳನ್ನುವಿಶ್ವದೇವಪಾತ್ರೆಯಲ್ಲಿಬಡಿಸಿ, ಶ್ರಾದ್ಧಾಂತ್ಯದಲ್ಲಿ ಅದನ್ನು ಬ್ರಹ್ಮಚಾರಿಗೆ ಕೊಡಬೇಕು. ಬ್ರಹ್ಮಚಾರಿಯೂ ಲಭಿಸದಿದ್ದರೆ ಅಗ್ನಿಯಲ್ಲಿ ದಹಿಸಬೇಕು ಎಂದು ಚಂದ್ರಿಕಾಕಾರರ ಮತ.

★★ದರ್ಭಬಟು ಶ್ರಾದ್ಧಪ್ರಯೋಗವು ಸಮಾಪ್ತವು★★

## [322]ಅಥ ಪುರಾಣೈಕೋದ್ದಿಷ್ಟಶ್ರಾದ್ಧಪ್ರಯೋಗಃ

{ಅಥೈಕೋದ್ದಿಷ್ಟಾನಿ ತತ್ತ್ರಿವಿಧಾನಿ। ಮೃತಾಹಾದ್ಯೇಕಾದಶಾಹಾನ್ತಂ ವಿಹಿತಾನಿ ನವಶ್ರಾದ್ಧಾನಿ। ಏಕಾದಶಾಹಾದಿನ್ಯೂನಾಬ್ದಾಂತಂ (ಅಕೃತಸಪಿಂಡೀಕರಣಸ್ಯ) ವಿಹಿತಾನಿ ನವಮಿಶ್ರಾಣಿ। ಪಿತೃ-ವ್ಯಭ್ರಾತೃಮಾತುಲಾದೀನ್ಯುದ್ದಿಶ್ಯ ಪಾರ್ವಣೈಕದೇಶವತ್ತಂತ್ರೇಣ ಪಿತೃಶಬ್ದಮೇಕವದೂಹೇನ ಕ್ರಿಯಮಾಣಾನಿ ಪುರಾಣಾನಿ। [323]ಆಶ್ವಲಾಯನೀನಾಂ ಪುರಾಣೈಕೋದ್ದಿಷ್ಟಶ್ರಾದ್ಧೇ 'ನೈಕೇಽತ್ರಾಪಿ ದೈವಂ ಕುರ್ವಂತಿ' ಇತಿ ವಚನಾದ್ವಿಶ್ವದೇವವರಣಂ ಕೃತಾಕೃತಮ್। ತಥೈವ 'ನಾರ್ಘ್ಯಪಿಂಡಾವಪೀತ್ಯೇಕ' ಇತಿ ವಚನಾರ್ಘ್ಯದಾನಂ ಪಿಂಡದಾನಂ ಚಾತ್ರ ಕೃತಾಕೃತಮ್। ಕೇಚಿದಾವಾಹನಾಭಾವೇ ಪಿತೃಸಾನ್ನಿಧ್ಯಾಭಾವಾದಾವಾಹನಮಿಚ್ಛಂತಿ। ಆಚಾರಾದ್ವ್ಯವಸ್ಥಾ॥}

ಶ್ರಾದ್ಧದಿನೇ ನಿತ್ಯಕರ್ಮಾಣಿ ನಿರ್ವರ್ತ್ಯ ಪಿತೃವ್ಯಾರ್ಥಂ ವಿಪ್ರಮಾಹೂಯಾಭ್ಯಜ್ಯ ಸ್ನಾಪಯಿತ್ವಾ, ಸ್ವಯಂ ಮಧ್ಯಾಹ್ನೇ ಸ್ನಾತ್ವಾ ದರ್ಭಾದ್ಯನ್ಯತಮ ಆಸನೇ ಉಪವಿಶ್ಯ **'ಪವಿತ್ರಂತ'** ಇತಿ ಪವಿತ್ರಂ ಧೃತ್ವಾ ಭೂಮಿಪ್ರಾರ್ಥನಾದಿ ವಿಧಿಂ ವಿಧಾಯ। ಶಿಖಾದಿಷು ಆಸನೇ ಚ ಯಥಾಚಾರಂ ದರ್ಭಾನ್ ಧೃತ್ವಾ ಪ್ರಾಣಾನಾಯಮ್ಯ ದೇಶಕಾಲೌ ಸ್ಮೃತ್ವಾ **'ಶ್ರೀಪರಮೇಶ್ವರಪ್ರೀತ್ಯರ್ಥಂ ಪುರೂರವಾರ್ದ್ರ...ಅಸ್ಮನ್ಮಾತುಲಸ್ಯ ..ಶರ್ಮಣಃ ..ಗೋತ್ರಸ್ಯ ವಸುರೂಪಸ್ಯ ಚ ಮೋಕ್ಷಾರ್ಥಂ ತೃಪ್ತ್ಯರ್ಥಂ ಮಮ ಮಾತುಲಸ್ಯ ಪ್ರತ್ಯಾಬ್ದಿಕಶ್ರಾದ್ಧಂ ಸಪಿಂಡಮೇಕೋದ್ದಿಷ್ಟೇನವಿಧಿನಾಽನ್ನೇನ**

---

### ಪುರಾಣೈಕೋದ್ದಿಷ್ಟಶ್ರಾದ್ಧಪ್ರಯೋಗವು(ಪುರಾಣ)

ಏಕೋದ್ದಿಷ್ಟದಲ್ಲಿ ಮೂರುವಿಧ. ಮರಣಾನಂತರ ಹತ್ತು ದಿನದೊಳಗೆ ಮಾಡುವಂತಹವು ನವೈಕೋದ್ದಿಷ್ಟವು. ಸಪಿಂಡೀಕರಣದಪೂರ್ವದಲ್ಲಿ ಮಾಡುವ ಮಾಸಿಕಾದಿಗಳು ಮಿಶ್ರೈಕೋದ್ದಿಷ್ಟವು. ಪಕ್ಷಾಂತರದಂತೆ ಪಿತೃವ್ಯಾದಿಗಳನ್ನುದ್ದೇಶಿಸಿ ಮಾಡುವ ಪಾರ್ವಣೈಕಾಂಶಶ್ರಾದ್ಧವು ಪುರಾಣೈಕೋದ್ದಿಷ್ಟವು. ಇಲ್ಲಿ ಪರಿಶಿಷ್ಟವಚನದಂತೆ ವಿಶ್ವೇದೇವವರಣ,ಅರ್ಘ್ಯದಾನ ಮತ್ತು ಪಿಂಡದಾನಗಳು ಕೃತಾಕೃತವು. ಕೆಲವರು ಆವಾಹನವೂ ಅವಶ್ಯವೆನ್ನುವರು. ಇಲ್ಲಿ ಕುಲಾಚಾರವು ವ್ಯವಸ್ಥಾಪಕವು.

ಶ್ರಾದ್ಧಕರ್ತೃವು ಶ್ರಾದ್ಧದಂದು ನಿತ್ಯಕರ್ಮವನ್ನನುಷ್ಠಿಸಿ ಬ್ರಾಹ್ಮಣರನನ್ನು ಕರೆದು ಅಭ್ಯಂಜನಾದ್ಯುಪಚಾರವನ್ನುಗೈದು ಮಧ್ಯಾಹ್ನಕಾಲದಲ್ಲಿ ತಾನು ಸ್ನಾನಮಾಡಿ ಶ್ರಾದ್ಧಯೋಗ್ಯ ಭೂಮಿಯಲ್ಲಿ ದರ್ಭಾದ್ಯಾಸನದಲ್ಲಿ ಕುಳಿತು ಶ್ರಾದ್ಧವನ್ನಾರಂಭಿಸಬೇಕು **'ಪವಿತ್ರಂ ತೇ..'** ಎಂದು ಪವಿತ್ರವನ್ನು ಧರಿಸಿ ಎರಡುಸಲ ಆಚಮನಮಾಡಬೇಕು. ಆನಂತರ ಯಥೋಕ್ತವಾಗಿ ಭೂಮಿಯನ್ನು ಪ್ರಾರ್ಥನೆಯನ್ನುಗೈದು, ಆಚಾರದಂತೆ ಶಿಖೇ, ಯಜ್ಞೋಪವೀತ, ಸೊಂಟಗಳಲ್ಲಿ ದರ್ಭೆಗಳನ್ನು ಧರಿಸಿ, ನೀವೀಬಂಧವನ್ನು ಮಾಡಬೇಕು. ಪ್ರಾಣಾಯಾಮವನ್ನು ಮಾಡಿ. ದೇಶಕಾಲಗಳನ್ನು ಸ್ಮರಿಸಿ **'ಅಸ್ಮನ್ಮಾತುಲಸ್ಯ..'** ಇತ್ಯಾದಿ ಹೇಳಿ ಸವ್ಯದಿಂದ **'..ತೃಪ್ತ್ಯರ್ಥಂ ..ಶ್ರಾದ್ಧಂ**

**ಹವಿಷಾ ಸದ್ಯಃ ಕರಿಷ್ಯೇ**' ಇತಿ ಸಂಕಲ್ಪ್ಯ ತಿಲೋದಕಂ ಸಂಪಾದ್ಯಾಭಿಮಂತ್ರಣಾದಿಕೃತ್ವಾ। ವಿಪ್ರಾಯ ಬ್ರಹ್ಮದಂಡಂದತ್ವಾಽನುಜ್ಞಾಂ ಪ್ರಾಪ್ಯ ''**ಮಾತುಲಸ್ಯಪ್ರತಿಸಾಂವತ್ಸರಿಕಶ್ರಾದ್ಧೇ ಮಾತುಲಾರ್ಥೇ ತ್ವಯಾ ಕ್ಷಣಃ+ಭವಾನ್**'' ಇತಿ ಕ್ಷಣಂ ದತ್ವಾ ಪಾದೌ ಪ್ರಕ್ಷಾಲ್ಯ ಶ್ರಾದ್ಧದೇಶಂ ಗತ್ವಾ। ಆಸನಂ ದತ್ವೋದಙ್ಮುಖಮುಪವೇಶ್ಯ ಪುನಃ ಸಂಕಲ್ಪ್ಯ ಸ್ಥಲಶುದ್ಧಿಂ ವಿಧಾಯ ವಿಧಿವತ್ಪಾಕಪ್ರೋಕ್ಷಣಂ ಕುರ್ಯಾತ್।

..ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ/ ಮಾತೃಪಿತಾಮಹೀಪ್ರಪಿತಾಮಹ್ಯಃ ..ದಾಃ ..ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ/ ಸಾಪತ್ನಮಾತಃ ..ದೇ ..ಗೋತ್ರೇ ವಸುರೂಪೇ/ ಮಾತಾಮಹ ಮಾತುಃಪಿತಾಮಹ ಮಾತುಃಪ್ರಪಿತಾಮಹಾಃ ..ಶರ್ಮಾಣಃ ..ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ/ ಮಾತಾಮಹೀ ಮಾತುಃಪಿತಾಮಹೀ ಮಾತುಃಪ್ರಪಿತಾಮಹ್ಯಃ ..ದಾಃ ..ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ/ ಪತ್ನಿ ..ದೇ ..ಗೋತ್ರೇ ವಸುರೂಪೇ/ ಪುತ್ರ ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ/ ದುಹಿತಃ ..ದೇ ..ಗೋತ್ರೇ (ಸಭರ್ತೃಕೇ ಸಸುತೇ) ವಸುರೂಪೇ/ ಪಿತೃವ್ಯ ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ/ ಮಾತುಲ ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ/ ಭ್ರಾತಃ ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ/ ಪಿತೃಭಗಿನಿ ..ದೇ ..ಗೋತ್ರೇ (ಸಭರ್ತೃಕೇ ಸಸುತೇ) ವಸುರೂಪೇ/ ಮಾತೃಭಗಿನಿ ..ದೇ ..ಗೋತ್ರೇ (ಸಭರ್ತೃಕೇ ಸಸುತೇ) ವಸುರೂಪೇ/ ಆತ್ಮಭಗಿನಿ ..ದೇ ..ಗೋತ್ರೇ (ಸಭರ್ತೃಕೇ ಸಸುತೇ) ವಸುರೂಪೇ/ ಶ್ವಶುರ ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ/ ಗುರೋ ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ/ ಶಿಷ್ಯ ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ/ ಆಪ್ತ..ಶರ್ಮನ್ ..ಗೋತ್ರ (ಸಪತ್ನೀಕ ಸಸುತ) ವಸುರೂಪ; ಬ್ರಹ್ಮಣೇ ಭೂರ್ಭುವಃ ಸ್ವಃ ಇದಂ ವಃ ಪಾದ್ಯಮ್ '' ಇತ್ಯಾದಿ ಯಥೋಕ್ತಂ ಪಾದ್ಯಂ ನಿವೇದ್ಯ ''**ಶಂ ನೋ ದೇವೀರಭಿಷ್ಟ+ಸ್ರವಂತು ನಃ॥ ಆಧಿವ್ಯಾಧಿ..ಪಾದಪಂಕಜಮ್**'' ಇತ್ಯಾದ್ಯುಚ್ಚರನ್ ಪಾದಪ್ರಕ್ಷಾಲನಂ ಕುರ್ಯಾತ್॥ ಏವಂ ಪಾದಪ್ರಕ್ಷಾಲನಂ ಕೃತ್ವಾ ಹಸ್ತೌ ಪಾದೌ ಪ್ರಕ್ಷಾಲ್ಯ ಪವಿತ್ರಂ ವಿಸೃಜ್ಯ ದ್ವಿರಾಚಮ್ಯಾನ್ಯಂ ಪವಿತ್ರಂ ಧಾರಯೇತ್। ದೈವಬ್ರಾಹ್ಮಣಃ ಮಂಡಲತಃ ಪ್ರಾಚ್ಯಾಂ, ಪಿತ್ರಾದಿ ಬ್ರಾಹ್ಮಣಾ ಉದೀಚ್ಯಾಂ ಇತಿ ದ್ವಿರಾಚಾಮೇಯುಃ॥

ತತಃ ಕರ್ತಾ ಬ್ರಾಹ್ಮಣೈಃ ಸಹ ಶ್ರಾದ್ಧಭೂಮಿಮಾಗತ್ಯ ದೈವೇ ಪ್ರಾಗಗ್ರಕುಶದ್ವಯ ಸಹಿತಕಂಬಾಲಾದ್ಯಾಸನಮುಪಕಲ್ಪ್ಯ ಪಿತ್ರಾದಿಭ್ಯಃ ದಕ್ಷಿಣಾಗ್ರದರ್ಭತ್ರಯಸಹಿತಂ

---

ವಿಪ್ರರನ್ನು ಕರೆದು ಯಥೋಕ್ತವಾದ ಮೇಲ್ಕಂಡ ವಾಕ್ಯಗಳಿಂದ ಪಾದ್ಯವನ್ನಿತ್ತು, ಪಾದಪ್ರಕ್ಷಾಳನೆಯನ್ನು ಮಾಡುವುದು. ಆನಂತರ ಕರ್ತೃವು ಉಪವೀತಿಯಾಗಿ ದೇವಮಂಡಲದ ಐಶಾನ್ಯದಲ್ಲಿ ದೇವಬ್ರಾಹ್ಮಣನು ದೇವಮಂಡಲದ ಪೂರ್ವದಲ್ಲಿ ಮತ್ತು ಪಿತ್ರ್ಯಬ್ರಾಹ್ಮಣನು ಉತ್ತರದಲ್ಲಿ ಹೀಗೆ ಎರಡು ಆಚಮನವನ್ನು ಮಾಡುವುದು. ಆನಂತರ ಶ್ರಾದ್ಧಮಾಡುವ ಸ್ಥಲಕ್ಕೆ ಬಂದು ದೇವಬ್ರಾಹ್ಮಣನಿಗಾಗಿ ಪ್ರಾಗಗ್ರವಾದ ಎರಡು ದರ್ಭೆಗಳನ್ನುಳ್ಳ ಕಂಬಳಿ ಮೊದಲಾದ ಆಸನವನ್ನೂ, ಪಿತೃ ಬ್ರಾಹ್ಮಣರಿಗೆ ದಕ್ಷಿಣಾಗ್ರವಾದ

ಕಂಬಲಾದ್ಯಾಸನಾನ್ಯುಪಕಲ್ಪಯೇತ್॥ ಸವ್ಯಮ್। **''ಸರ್ವೇಷಾಂ ಸ್ವಾಗತಮ್''** ಇತಿ ವಿಪ್ರಾನಾಹೂಯ। ವಾಮೇನ ಹಸ್ತೇನಾಸನಂ ಧೃತ್ವಾ ದಕ್ಷಿಣೇನ ದೇವಬ್ರಾಹ್ಮಣದಕ್ಷಿಣಹಸ್ತಂ ನಿರಂಗುಷ್ಠಂ ಗೃಹೀತ್ವಾ **''ಭೂರ್ಭುವಃ ಸ್ವಃ ಸಮಾಧ್ವಮ್''** ಪ್ರಾಙ್ಮುಖಮುಪವೇಶಯೇತ್॥ ಏವಮುಪಸವ್ಯೇನ ಪಿತ್ರಾದೀನ್ಸರ್ವಾನ್ಪಿತ್ರ್ಯಾನುದಙ್ಮುಖಾನುಪವೇಶ್ಯ ಪ್ರತಿವಿಪ್ರಂ ಶ್ವೇತಸೂತ್ರವರ್ತಿಯುಕ್ತಮವಿಚ್ಛಿನ್ನಂ ತೈಲದೀಪಂ ಸ್ಥಾಪಯೇತ್॥

ಸವ್ಯಮ್। ಆಚಮ್ಯ, ಪ್ರಾಣಾಯಾಮತ್ರಯಂ ಕೃತ್ವಾ। **''ಅದ್ಯಪೂರ್ವೋಚ್ಚರಿ+ತಿಥೌ''**। ಇತಿ ದೇಶಕಾಲೌ ಸ್ಮೃತ್ವಾ ಅಪಸವ್ಯಮ್। **''ಉಪಕ್ರಾಂತಂ ಸಕೃನ್ಮಹಾಲಯಶ್ರಾದ್ಧಂ ಕರಿಷ್ಯೇ''** ಇತಿ ಸಂಕಲ್ಪೇ ವಿಶೇಷಃ। ಅಪಸವ್ಯಮ್॥ ವಾಯುಂ ನಿರುದ್ಧ್ಯ ತಿಲಾನಾದಾಯಾಪ್ರದಕ್ಷಿಣಂ ಶ್ರಾದ್ಧಭೂಮೌಸರ್ವತಃವಿಕೀರೇತ್**''ಅಪಹತಾ+ಗತಂಮನಃ''**ಇತಿ॥ತತಸ್ತಿಲೋದಕಮಾದಾಯ **''ಉದೀರತಾಮವರ+ಹವೇಷು''** ಇತಿ ಪಿತ್ರ್ಯಾಣಾಂ ಪುರತಃ ಪ್ರೋಕ್ಷ್ಯ। ಸವ್ಯಮ್। ಯವೋದಕಮಾದಾಯ **''ತತ್ಸವಿತು+ಪ್ರಚೋದಯಾತ್''** ಇತಿ ದೇವಾನಾಂ ಪುರತಃ ಪ್ರೋಕ್ಷಯೇತ್॥ **''ರಕ್ಷೋಹಣಂ +ಪಾತು ನಕ್ತಮ್। ಅಷ್ಟೌವಸವ+ಭೂಮಿಃ''** ಇತಿ ಜಪಿತ್ವಾ। ಅಪಸವ್ಯಮ್। **''ತಿಲಾರಕ್ಷ+ಸರ್ವರಕ್ಷಕಃ''** ಇತಿ ಗೃಹದ್ವಾರೇ ಕುಶತಿಲಾನ್ಕ್ಷಿಪೇತ್॥

ಸವ್ಯಮ್। ಪಾತ್ರಾಂತರೇ ಕಿಂಚಿದ್ಯವೋದಕಂ ಗೃಹೀತ್ವಾ **''ತರತ್ಸಮಂದೀ ಧಾವತಿ ಧಾರಾ..(3)..ಧಾವತಿ॥ ತ್ರಿಭಿಷ್ಟ್ವಂ ದೇವ..ಉತ್ತಮಂ ಹವಿಃ॥ ತದ್ವಿಷ್ಣೋ**

---

ಮೂರುದರ್ಭಯುಕ್ತ ಪ್ರತ್ಯೇಕ ಆಸನಗಳನ್ನು ಸಿದ್ಧಗೊಳಿಸಿ ಸ್ವಾಗತೋಕ್ತಿಯಿಂದ ಪ್ರತಿಒಬ್ಬರನ್ನೂ ಕರೆದು ಸವ್ಯಾಪಸವ್ಯಗಳಿಂದ ವಾಮಹಸ್ತದಿಂದ ಆಸನವನ್ನೂ ದಕ್ಷಿಣಹಸ್ತದಿಂದ ದೇವಬ್ರಾಹ್ಮಣನ ದಕ್ಷಿಣಹಸ್ತವನ್ನೂ ಹಿಡಿದು ಕುಳ್ಳಿರಿಸುವುದು ಪ್ರತಿವಿಪ್ರನ ಬಳಿಯಲ್ಲಿ ಎಳ್ಳೆಣ್ಣೆಯ ದೀಪವೊಂದನ್ನು ಉರಿಸಿಡುವುದು.

ನಂತರ ಸವ್ಯದಿಂದ ಆಚಮನವನ್ನು ಮಾಡಿ '**ಅದ್ಯಪೂರ್ವೋ.. ದಿಂದ ..ತಿಥೌ**' ವರೆಗೆ ಹೇಳಿ ಅಪಸವ್ಯವಾಗಿ '**ಉಪಕ್ರಾಂತಂ..ಕರಿಷ್ಯೇ**' ಎಂದು ಸಂಕಲ್ಪಮಾಡಬೇಕು. ಆನಂತರ ಎಳ್ಳನ್ನು ತೆಕ್ಕೊಂಡು ಅಪಸವ್ಯದಿಂದ ಪ್ರಾಣವಾಯುವನ್ನು ಕಿಂಚಿತ್ಕಾಲ ನಿರೋಧಿಸಿ '**ಅಪಹತಾಃ..**' ಎಂದು ಶ್ರಾದ್ಧಸ್ಥಲದ ನಿರ್ಋತಿದಿಕ್ಕಿನಿಂದಾರಂಭಿಸಿ ಅಪ್ರದಕ್ಷಿಣವಾಗಿ ಚೆಲ್ಲುವುದು ಪಿತ್ರ್ಯಬ್ರಾಹ್ಮಣನ ಮುಂದೆ '**ಉದೀರತಾಂ..**' ಎಂಬ ಮಂತ್ರದಿಂದ ತಿಲೋದಕಪ್ರೋಕ್ಷಿಸಿ ಸವ್ಯದಿಂದ '**ತತ್ಸವಿರ್ವರೇಣ್ಯಂ..**' ಎಂಬ ಮಂತ್ರದಿಂದ ದೇವಬ್ರಾಹ್ಮಣ ಮುಂದೆ ಯವೋದಕವನ್ನು ಪ್ರೋಕ್ಷಿಸಿವುದು. '**ರಕ್ಷೋಹಣಂ..**' ಎಂಬಲ್ಲಿಂದ '**ರಕ್ಷಾ ಗಯೇಽಯಂ ಭೂಮಿಃ**' ಎಂಬಲ್ಲಿವರೆಗೆ ಜಪಿಸಿ ಅಪಸವ್ಯದಿಂದ '**ತಿಲಾರಕ್ಷಂತ್ವಸು..**' ಎಂಬ ಮಂತ್ರದಿಂದ ಮನೆಯ ಬಾಗಿಲಿನಲ್ಲಿ ದರ್ಭೆಮತ್ತುಎಳ್ಳನ್ನಿಡುವುದು. ಸವ್ಯದಿಂದ ಯವೋದಕವನ್ನು ದರ್ಭೆಗಳಿಂದ

**ಪರಮಂ..ಚಕ್ಷುರಾತತಮ್॥ ಭೂರ್ಭುವಸ್ಸ್ವಃ॥ ತತ್ಸವಿತು+ಪ್ರಚೋದಯಾತ್**'' ಇತಿ ದರ್ಭೈಃ ಪಾಕಪ್ರೋಕ್ಷಣಂ ಕೃತ್ವಾ ''**ಪಾಕಾದೀನಂ..ಪಾಕಪ್ರೋಕ್ಷಣಂ ವಿಧಿವದಸ್ತು॥ ದೇವತಾಭ್ಯಃ..ನಮೋ ನಮಃ**'' ಇತಿ ತ್ರಿರ್ಜಪಿತ್ವಾ॥ ಅಪಸವ್ಯಮ್। ''**ಶ್ರಾದ್ಧಭೂಮೌ ಗಯಾಂ..ಪ್ರವರ್ತತೇ**'' ಇತಿ ಗಯಾಂ ಗದಾಧರಂ ಪಿತೄಂಶ್ಚ ಧ್ಯಾತ್ವಾ ದೇವಾದ್ಯುಪಚಾರಂ ಕುರ್ಯಾತ್॥

ಸವ್ಯಮ್। ಕರ್ತಾ ಉದಙ್ಮುಖಃ ದಕ್ಷಿಣಂ ಜಾನು ನಿಪಾತ್ಯ। '**ಧುರಿಲೋಚನಸಂಜ್ಞಕಾನಾಂ ವಿಶ್ವೇಷಾಂ ದೇವಾನಾಂ ಬ್ರಹ್ಮಣೇ ಭೂರ್ಭುವಃ ಸ್ವರಿದಮಾಸನಮ್**' ಇತ್ಯಾಸನೇ ದರ್ಭದ್ವಯಂ ದತ್ವಾ। '**ಅತ್ರಾಸ್ಯತಾಮ್**' ಇತ್ಯಾಸನಮುಪಸ್ಪೃಶೇತ್॥ ತತಃ ನಿರಙ್ಗುಷ್ಠಂ ದಕ್ಷಿಣಂ ಕರಂ ಧೃತ್ವಾ ''**ಸಕೃನ್ಮಹಾಲಯಶ್ರಾದ್ಧೇ ದೈವೇ ಕ್ಷಣಃ ಕ್ರಿಯತಾಮ್, ಪಾಪ್ನೋತು ಭವಾನ್**'' ಇತಿ ಕ್ಷಣಂ ದದ್ಯಾತ್। ತತಃ ದೇವವಿಪ್ರಾಗ್ರೇ ಭುವಂ ಪ್ರೋಕ್ಷ್ಯ। ಪ್ರಾಗಗ್ರೌ ದ್ವೌ ದ್ವೌ ದರ್ಭಾವಾಸ್ತೀರ್ಯ। ತತ್ರ ಪಾತ್ರದ್ವಯಮೀಶಾನಸಂಸ್ಥಂ ನ್ಯುಬ್ಜಂ ನಿಧಾಯ। ಗಾಯತ್ರ್ಯಾ ಪ್ರೋಕ್ಷ್ಯ ಉದ್ಧೃತ್ಯ ಪುನಃ ಪ್ರೋಕ್ಷ್ಯ॥ ಪ್ರತ್ಯೇಕಂ ಕೂರ್ಚಂ ನಿಧಾಯಾಪ ಆಸಿಚ್ಯ। ''**ಶಂನೋ ದೇವೀರ..ಸ್ರವಂತು ನಃ**'' ಇತಿ ಪಾತ್ರದ್ವಯಂ ಸಕೃದಭಿಮನ್ತ್ರ್ಯ। ''**ಯವೋಸಿ ..ಸ್ಮೃತಮ್**'' ಇತಿ ಮಂತ್ರಾವೃತ್ತ್ಯಾ ಯವಾನ್ಪ್ರಕ್ಷಿಪ್ಯ॥ ''**ದೇವಾರ್ಘ್ಯಪಾತ್ರಯೋಃ..ಯವೈಃ ಸಂಪೂರ್ಣಾಃ ಸಂತು**'' ಇತ್ಯಂತಂ ಕೃತ್ವಾ

---

'**ತರತ್ಸಮಂದೀ ಧಾವತಿ**' ಇತ್ಯಾದಿ ಮಂತ್ರಗಳನ್ನು ಹೇಳುತ್ತ ಪಾಕಗಳನ್ನು ಪ್ರೋಕ್ಷಿಸಿ '**ಪಾಕಾದೀನಾಂ.. ವಿಧಿವದಸ್ತು**' ಎಂದು ಹೇಳಬೇಕು. ಆನಂತರ '**ದೇವತಾಭ್ಯಃ..**' ಎಂದು 3ಬಾರಿ ಜಪಿಸಬೇಕು. ಅಪಸವ್ಯದಿಂದ '**ಶಾದ್ಧಭೂಮೌ..ಪ್ರವರ್ತತೇ**' ಎಂದು ಪುನಃ ಪ್ರಾರ್ಥಿಸಿ ದೇವಾದ್ಯರ್ಚನೆಯನ್ನು ಸಾಂವತ್ಸರಿಕಶ್ರಾದ್ಧದಂತೆ ಮಾಡಬೇಕು.

ಕರ್ತೃವು ಸವ್ಯಮಾಡಿಕೊಂಡು ಬಲದ ಮೊಣಕಾಲನ್ನು ನೆಲಕ್ಕೆ ತಾಗಿಸಿ ಉತ್ತರಾಭಿಮುಖನಾಗಿ ಕುಳಿತು. '**ಧುರಿಲೋಚನ.. ಮಾಸನಂ,ಆತ್ರಾಸ್ಯತಾಂ, ಸಕೃನ್ಮಹಾಲಯ.. ಕ್ರಿಯತಾಂ, ಪ್ರಾಪ್ನೋತು ಭವಾನ್**' ಇತ್ಯಾದಿಯನ್ನು ಹೇಳಿ ಆಸನವರಣಾದಿಗಳನ್ನೀಯಬೇಕು. ದೇವಬ್ರಾಹ್ಮಣರ ಮುಂಭಾಗದಲ್ಲಿ ಪ್ರೋಕ್ಷಿಸಿ, ಅಲ್ಲಿ ಪೂರ್ವಾಗ್ರ ದರ್ಭೆಗಳನ್ನಿಟ್ಟು ಎರಡು ಪಾತ್ರೆಗಳನ್ನು ಕವಚಿ ಇಟ್ಟು ಗಾಯತ್ರೀ ಮಂತ್ರದಿಂದ ಪ್ರೋಕ್ಷಿಸಿ, ಸರಿಯಾಗಿ ಇಟ್ಟು ಪುನಃ ಪ್ರೋಕ್ಷಿಸಿ ಪ್ರತ್ಯೇಕ ಪ್ರಾಗಗ್ರ ಕೂರ್ಚಗಳನ್ನಿಟ್ಟು ನೀರು ತುಂಬಿಸಿ, '**ಶಂ ನೋ ದೇವಿ..**' ಮಂತ್ರ ಹೇಳಿ ಅಭಿಮಂತ್ರಿಸಿ '**ಯವೋಸಿ..**' ಎಂದು ಯವಾಕ್ಷತೆಗಳನ್ನು ಹಾಕಿ, '**ದೇವಾರ್ಘ್ಯ ಪಾತ್ರಯೋಃ..**' ಎನ್ನುತ್ತ ಗಂಧಾದಿಗಳನ್ನು ಹಾಕಿ ಯಜಮಾನನು '**ದೇವಾರ್ಘ್ಯಪಾತ್ರಂ..**' ಎಂದು ಮುಟ್ಟಿ, ವಿಶ್ವೇದೇವರನ್ನು ಆವಾಹಿಸಬೇಕು ದರ್ಭೆ ಮತ್ತು ಅಕ್ಕಿಕಾಳುಗಳನ್ನು ಹಿಡಿದ ಎಡಗೈಯನ್ನು

**''ದೇವಪಾತ್ರಂ ಸಂಪನ್ನಮ್''** ಇತ್ಯಭಿಮೃಶೇತ್॥ **''ಧುರಿಲೋಚನಸಂಜ್ಞಕಾನ್ವಿಶ್ವಾನ್ದೇವಾನ್ ಭವತ್ಸ್ವಾವಾಹಯಿಷ್ಯೇ''** ಇತಿ ಪೃಷ್ಟ್ವಾ **''ವಿಶ್ವೇ ದೇವಾಸ..ಷೀದತ। ಧುರಿಲೋಚನಸಂಜ್ಞಕಾನ್ ವಿಶ್ವಾನ್ದೇವಾನ್ ಭವತ್ಸ್ವಾವಾಹಯಾಮಿ''** ಇತಿ ಯವಾನ್ವಿಕೀರ್ಯಾವಾಹ್ಯ। **''ವಿಶ್ವೇ ದೇವಾಃ..ಮಾದಯಧ್ವಮ್॥ ಆಗಚ್ಛಂತು ..ಭವಂತು ತೇ''** ಇತ್ಯಂಜಲಿಂ ಕೃತ್ವೋಪಸ್ಥಾಯ॥ ಅಧಸ್ತದರ್ಭಸಹಿತಮೇಕೈಕಂ ಪಾತ್ರಮುದ್ಧೃತ್ಯ **''ಸ್ವಾಹಾರ್ಘ್ಯಾಃ''** ಇತ್ಯರ್ಘ್ಯಂ ಸಕೃನ್ನಿವೇದ್ಯ ದೇವಬ್ರಾಹ್ಮಣಸ್ಯ ಪುರತೋ ನಿಧಾಯ, ಅಪೋ ದತ್ವಾ। **''ಧುರಿಲೋಚನಸಂಜ್ಞಕಾ ವಿಶ್ವೇದೇವಾಃ ಇದಂ ವೋಽರ್ಘ್ಯಂ ಸ್ವಾಹಾ ನಮಃ''** ಇತ್ಯರ್ಘ್ಯಂ ದತ್ವಾ **''ಯಾ ದಿವ್ಯಾ..ಭವಂತು''** ಇತಿ ಸ್ರವಂತೀರನುಮನ್ತ್ರ್ಯಾಪೋ ದದ್ಯಾತ್। ಏವಂ ದ್ವಿತೀಯಾರ್ಘ್ಯಮಪಿ ದತ್ವಾ ದೇವಬ್ರಾಹ್ಮಣದಕ್ಷಿಣಭಾಗೇ **''ದೇವೇಭ್ಯಃ ಸ್ಥಾನಮಸಿ''** ಇತಿ ನ್ಯುಬ್ಜಮುತ್ತಾನಂ ವಾ ನಿದಧ್ಯಾತ್॥ **''ಧುರಿಲೋಚನಸಂಜ್ಞಕಾ ವಿಶ್ವೇದೇವಾಃ ಯಥಾಭಾಗಶಃ ಅಮೀ ವೋ ಗಂಧಾಃ ಸ್ವಾಹಾ ನಮಃ''** ಇತ್ಯಾದಿ ಗಂಧಪುಷ್ಪಧೂಪದೀಪವಸ್ತ್ರಾದ್ಯುಪಚಾರಾನ್ ದತ್ವಾ **''ಅರ್ಚನವಿಧೇಃ ಸ್ವರ್ಚಿತಮಸ್ತು। ನ್ಯೂನಾತಿರಿಕ್ತಂ ವಿಧಿವದಸ್ತು''** ಇತ್ಯರ್ಚನವಿಧೇಃ ಸಂಪೂರ್ಣತಾಂ ವಾಚಯಿತ್ವಾ ತೈರನುಜ್ಞಾತಃ ಪಿತ್ರಾದ್ಯರ್ಚನಂ ಕುರ್ಯಾತ್।

---

ಬ್ರಾಹ್ಮಣನ ಬಲದ ಮೊಣಕಾಲಿನ ಮೇಲೆ ಇಟ್ಟು '**ಧುರಿಲೋಚನ..ಯಿಷ್ಯೇ**' ಎಂದು ಹೇಳಿ. '**ವಿಶ್ವೇ ದೇವಾಸ..ಆವಾಹಯಾಮಿ**' ಎಂದು ಹೇಳಿ ಅಕ್ಷತೆ ಕಾಳುಗಳನ್ನು ಬ್ರಾಹ್ಮಣರ ಪಾದಾದಿಗಳಲ್ಲಿ ದಕ್ಷಿಣಾದಿ ಯುಗ್ಮಕ್ರಮದಿಂದ ಹಾಕಿ ಆವಾಹಿಸಿ ಶೇಷವನ್ನು ವಿಪ್ರನ ಕಾಲಬುಡದಲ್ಲಿ ಪ್ರದಕ್ಷಿಣವಾಗಿ ಹಾಕಬೇಕು. ಆನಂತರ ನಿಂತು '**ವಿಶ್ವೇದೇವಾಃ .., ಆಗಚ್ಛನ್ತು..**' ಎಂದು ಉಪಸ್ಥಾನವನ್ನು ಮಾಡಿ, ಅರ್ಘ್ಯಪಾತ್ರೆಗಳನ್ನು '**ಸ್ವಾಹಾರ್ಘ್ಯಾಃ**' ಎಂದು ನಿವೇದಿಸಿ ಅವರ ಮುಂದಿಟ್ಟು ಅರ್ಘ್ಯದಾನವನ್ನು ಮಾಡಬೇಕು.

ದೇವಬ್ರಾಹ್ಮಣನ ಕೈಗೆ ಯವೋದಕವನ್ನಿತ್ತು ಮೊದಲ ಅರ್ಘ್ಯಪಾತ್ರೆ ಮೇಲಿರುವ ಕೂರ್ಚವನ್ನು ಬ್ರಾಹ್ಮಣನ ಕೈಯ್ಯಲ್ಲಿಟ್ಟು ಪ್ರಥಮಾರ್ಘ್ಯಜಲದಿಂದ ಸ್ವಲ್ಪವನ್ನು ಪಾತ್ರಾಂತರದಲ್ಲಿ ತೆಗೆದುಕೊಂಡು '**ಧುರಿಲೋಚನ.. ಅರ್ಘ್ಯಂ**' ಎಂದು ಬ್ರಾಹ್ಮಣರಿಗೆ ಕೊಟ್ಟು. '**ಯಾ ದಿವ್ಯಾ..**' ಎಂದು ಅಭಿಮಂತ್ರಿಸಿ, ದ್ವಿತೀಯಾರ್ಘ್ಯವನ್ನು ಇದೇಕ್ರಮದಲ್ಲಿ ಕೊಡುವುದು. ಆನಂತರ ದೇವಬ್ರಾಹ್ಮಣರ ದಕ್ಷಿಣಭಾಗದಲ್ಲಿ **''ದೇವೇಭ್ಯಃ ಸ್ಥಾನಮಸಿ''** ಎಂದು ಪಾತ್ರಗಳನ್ನು ಇಟ್ಟು ಗಂಧಪುಷ್ಪಾದಿಗಳಿಂದ ಅರ್ಚಿಸುವುದು. ಆನಂತರ ದೇವಬ್ರಾಹ್ಮಣರಿಗೆ ಗಂಧಾದ್ಯುಪಚಾರಗಳನ್ನು ಮಾಡುವುದು. ಪ್ರತ್ಯುಪಚಾರದ ಮೊದಲೂ ಅಂತ್ಯದಲ್ಲೂ ಹಸ್ತೋದಕವನ್ನೀಯಬೇಕು ಮತ್ತು ಗಂಧವನ್ನು ಅರ್ಪಿಸುವಾಗ ಪವಿತ್ರವನ್ನು ತೆಗೆದಿಡಬೇಕು. **''ಧುರಿಲೋಚನ.. ಗಂಧಾಃ ಸ್ವಾಹಾ ನಮಃ''** ಇತ್ಯಾದಿಯಾಗಿ ಒಂದೊಂದೇ ಉಪಚಾರವನ್ನು ಬ್ರಾಹ್ಮಣರಿಗೆ ಅರ್ಪಿಸಿ. '**ಯಸ್ಯಸ್ಮೃತ್ಯಾ..**' ಎಂದು ವಿಷ್ಣುವನ್ನು ಸ್ಮರಿಸಿ. ಪಿತ್ರಾದ್ಯುಪಚಾರವನ್ನು ಮಾಡಬೇಕು.

ಅಪಸವ್ಯಮ್॥ ಪ್ರಾಗ್ದಕ್ಷಿಣಾಮುಖೋ ಭೂತ್ವಾ ವಾಮಂ ಜಾನು ನಿಪಾತ್ಯ। ಸತಿಲದ್ವಿಗುಣ ಭುಗ್ನದರ್ಭಾನುದಗಗ್ರಾನಾದಾಯ **''ಪಿತೃಪಿತಾಮಹಪ್ರಪಿತಾಮಹಾನಾಂ ..ಶರ್ಮಣಾಂ ..ಗೋತ್ರಾಣಾಂ ವಸುರುದ್ರಾದಿತ್ಯಸ್ವರೂಪಾಣಾಮ್/ ಮಾತೃಪಿತಾಮಹೀನಾಂ+ ವಸುರುದ್ರಾ../ ಸಾಪತ್ನಮಾತುಃ+ವಸುರೂಪಾಯಾಃ/ ಮಾತಾಮಹ+ವಸುರುದ್ರಾ../ ಮಾತಾಮಹೀ+ ವಸುರುದ್ರಾ../ ಪತ್ನ್ಯಾಃ+ ವಸುರೂಪಾಯಾಃ/ ಪುತ್ರಸ್ಯ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ/ ದುಹಿತುಃ+(ಸಭರ್ತೃಕಾಯಾಃ ಸಸುತಾಯಾಃ) ವಸುರೂಪಾಯಾಃ/ ಪಿತೃವ್ಯಸ್ಯ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ/ ಮಾತುಲಸ್ಯ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ / ಭ್ರಾತುಃ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ/ ಪಿತೃಭಗಿನ್ಯಾಃ..(ಸಭರ್ತೃಕಾಯಾಃ ಸಸುತಾಯಾಃ) ವಸುರೂಪಾಯಾಃ/ ಮಾತೃಭಗಿನ್ಯಾಃ+ (ಸಭರ್ತೃಕಾಯಾಃ ಸಸುತಾಯಾಃ) ವಸುರೂಪಾಯಾಃ / ಆತ್ಮಭಗಿನ್ಯಾಃ +(ಸಭರ್ತೃಕಾಯಾಃ ಸಸುತಾಯಾಃ) ವಸುರೂಪಾಯಾಃ/ ಶ್ವಶುರಸ್ಯ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ/ ಗುರೋಃ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ / ಶಿಷ್ಯಸ್ಯ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ/ ಆಪ್ತಸ್ಯ+(ಸಪತ್ನೀಕಸ್ಯ ಸಸುತಸ್ಯ) ವಸುರೂಪಸ್ಯ; ಬ್ರಹ್ಮಣೇ ಭೂರ್ಭುವಃ ಸ್ವರಿದಮಾಸನಮ್''** ಇತ್ಯಾದಿ ತತ್ತನ್ನಾಮಾದ್ಯುಚ್ಚಾರಣ ಪೂರ್ವಕಮಾಸನವಾಮಭಾಗೇ ದತ್ವಾ ಪ್ರತ್ಯೇಕಮಾಸನಂ ಸ್ಪೃಷ್ಟ್ವಾ **''ಅತ್ರಾಸ್ಯತಾಮ್''** ಇತಿ ವದೇತ್॥ ತತಃ ಪ್ರತ್ಯೇಕಸ್ಯ ನಿರಂಗುಷ್ಠಂ ಕರಂ ಧೃತ್ವಾ **''ಸಕೃನ್ಮಹಾಲಯಶ್ರಾದ್ಧೇ ಪಿತ್ರಾದ್ಯರ್ಥೇ/ ಮಾತ್ರಾದ್ಯರ್ಥೇ''** ಇತ್ಯಾದಿಯಥೋಕ್ತಮುಕ್ತ್ವಾ **''ಕ್ಷಣಃ..ಪ್ರಾಪ್ನೋತು ಭವಾನ್''** ಇತಿ ಪ್ರತ್ಯೇಕಂ ಕ್ಷಣಂ ದದ್ಯಾತ್। ಏವಂ ತೃತೀಯ ನಿಮಂತ್ರಣಂ ಕುರ್ಯಾತ್।

---

ಕರ್ತೃವು ಅಪಸವ್ಯದಿಂದ ಎಡಮೊಣಕಾಲನ್ನು ನೆಲಕ್ಕೆ ತಾಗಿಸಿ ಕುಳಿತು, **'ಅಸ್ಮತ್ ಪಿತೃಪಿತಾಮಹ..ಮಾಸನಂ,ಆತ್ರಾಸ್ಯತಾಂ, ಸಕೃನ್ಮಹಾಲಯ.. ಕ್ರಿಯತಾಂ, ಪ್ರಾಪ್ನೋತು ಭವಾನ್'** ಇತ್ಯಾದಿಯನ್ನು ಹೇಳಿ ಆಸನವರಣಾದಿಗಳನ್ನೀಯಬೇಕು. ಹೀಗೆಯೇ ಮಾತ್ರಾದಿ ಸ್ಥಾನದಲ್ಲಿ ವರಿಸಲ್ಪಟ್ಟ ವಿಪ್ರರಿಗೂ ಆಸನಾದಿ ಉಪಚಾರವನ್ನೀಯುವುದು ಮೇಲ್ಕಂಡಂತೇ ಊಹವನ್ನು ಮಾಡುವುದು.

ತತಃ ಪ್ರೋಕ್ಷಿತಾಯಾಂ ಭುವ್ಯಾಗ್ನೇಯ್ಯಾಗ್ರೇಷು ದರ್ಭೇಷು ಪಿತೃವರ್ಗಾರ್ಥಂ ಪಾತ್ರತ್ರಯಂ, ಮಾತೃವರ್ಗಾರ್ಥಂ ಪಾತ್ರತ್ರಯಂ ಚ ದರ್ಭತ್ರಯಾತ್ಮಕಪವಿತ್ರಯುಕ್ತಂ ಸಂಸ್ಥಾಪ್ಯ, ಸಾಪತ್ನಮಾತ್ರೇ ಪ್ರತ್ಯೇಕಾರ್ಘ್ಯಪಾತ್ರಂ ಸಂಸ್ಥಾಪ್ಯ, ('ಸರ್ವಮಾತ್ರರ್ಥಮೇಕೋ ವಿಪ್ರಃ ಪಿಂಡೋಽರ್ಘ್ಯಶ್ಚೇ'ತಿ ಪಕ್ಷೇ ಮಾತ್ರಾರ್ಘ್ಯಪಾತ್ರ ಏವ ಸಾಪತ್ನ ಮಾತ್ರರ್ಘ್ಯಗ್ರಹಣಂ) ಮಾತಾಮಹವರ್ಗಾರ್ಥಂ ಮಾತಾಮಹೀವರ್ಗಾರ್ಥಂ ಚ ಪ್ರತ್ಯೇಕಂ ಪಾತ್ರತ್ರಯಂ ದರ್ಭತ್ರಯಪವಿತ್ರಾತ್ಮಕಂ ಸಂಸ್ಥಾಪ್ಯ, ಪತ್ನ್ಯಾದ್ಯರ್ಥಂ ಪ್ರತ್ಯೇಕಮೇಕದರ್ಭಾತ್ಮಕ–ಪವಿತ್ರಯುಕ್ತಮೇಕೈಕಂ ಪಾತ್ರಂ ಸಂಸ್ಥಾಪಯೇತ್([358]ಅತ್ರ ಕೇಚಿಲ್ಲಾಘವಮಿತಿ ಮತ್ವಾ ಏಕೋದ್ದಿಷ್ಟಸ್ಥಾನೀಯೇಭ್ಯ ಏಕಸ್ಮಿನ್ನೇವಪಾತ್ರೇಽರ್ಘ್ಯಂ ಗೃಹ್ಣಂತಿ ತತ್ರ ಪ್ರಮಾಣಂ ಮೃಗ್ಯಮ್)। ತೇಷು ಕ್ರಮೇಣಾಪ ಆಸಿಚ್ಯ "**ಶಂ ನೋ ದೇವೀ..ವಂತು ನಃ**" ಇತಿ ಸಕೃದನುಮಂತ್ರ್ಯ "**ತಿಲೋಽಸೀ..ಸ್ವಧಾ ನಮಃ**" ಇತಿ ಮಂತ್ರಾವೃತ್ತ್ಯಾ ಪ್ರತಿಪಾತ್ರಂ ತಿಲಾನೋಪ್ಯ ಗಂಧಪುಷ್ಪಾದಿ ಕ್ಷಿಪ್ತ್ವಾ "**ಪಿತೃಪಾತ್ರಂ ಸಂಪನ್ನಮ್/ ಪಿತಾಮಹಪಾತ್ರಂ..**" ಇತ್ಯಾದಿ ಯಥಾಲಿಂಗಂ ಕ್ರಮೇಣಾಭಿಮೃಶೇತ್। ಏತಾದೃಶಸ್ಥಲೇ ಪಿತೃವ್ಯಾದೀನಾಂ ಮಂತ್ರೇಷು ಸಪತ್ನೀಕಶಬ್ದಸ್ಯ ನ ವಾ ಪ್ರಯೋಗಃ। ಕಿಂತ್ವಭಿಧ್ಯಾನಮಾತ್ರಮ್। ಏವಮುತ್ತರತ್ರಾಪಿ।

---

ಪಿತ್ರಾದಿ ಬ್ರಾಹ್ಮಣರಮುಂಬಾಗದಲ್ಲಿ ಮುಂಭಾಗದಲ್ಲಿ ಕೂರ್ಚದಿಂದ ನೀರನ್ನು ಪ್ರೋಕ್ಷಿಸಿ, ಅಲ್ಲಿ ಆಗ್ನೇಯಕ್ಕೆ ತುದಿಗಳಿರುವಂತೆ ದರ್ಭೆಗಳನ್ನು ಹಾಸಿ ಅರ್ಘ್ಯಪಾತ್ರೆಗಳನ್ನಿಡಬೇಕು. ಪಿತೃ ಮತ್ತು ಮಾತೃವರ್ಗಕ್ಕಾಗಿ ಪ್ರತ್ಯೇಕ ಮೂರು ಪಾತ್ರೆಗಳನ್ನಿಡಬೇಕು. ಆನಂತರ ಸಾಪತ್ನಮಾತೃವಿಗಾಗಿ ಅರ್ಘ್ಯಪಾತ್ರೆಯೊಂದನ್ನಿಡಬೇಕು, (ವಿಕಲ್ಪಪಕ್ಷದಲ್ಲಿ ಮಾತ್ರರ್ಘ್ಯಪಾತ್ರದಲ್ಲೇ ಸಾಪತ್ನಮಾತೃವಿಗೂ ಅರ್ಘ್ಯವನ್ನು ಸಂಪಾದಿಸಬೇಕು) ಆನಂತರ ಮಾತಾಮಹವರ್ಗಕ್ಕಾಗಿ, ಮಾತಾಮಹೀವರ್ಗಕ್ಕಾಗಿ ಹೀಗೆ ಪ್ರತ್ಯೇಕ ಮೂರು ಪಾತ್ರೆಗಳನ್ನಿಡಬೇಕು. ಆನಂತರ ಪತ್ನ್ಯಾದ್ಯೇಕೋದ್ದಿಷ್ಟಸ್ಥಾನೀಯರಿಗೆ ಒಂದೊಂದು ಪ್ರತ್ಯೇಕ ಅರ್ಘ್ಯಪಾತ್ರೆಗಳನ್ನಿಡಬೇಕು (ಕೆಲವರು ಸರ್ವ ಏಕೋದ್ದಿಷ್ಟಸ್ಥಾನೀಯರಿಗೂ ಸೇರಿ ಒಂದೇ ಅರ್ಘ್ಯಪಾತ್ರೆಯನ್ನಿರಿಸುವರು ಅದಕ್ಕೆ ಪ್ರಮಾಣವು ಶೋಧನೀಯ). ಪಾರ್ವಣಪಾತ್ರೆಗಳಲ್ಲಿ ಪ್ರತ್ಯೇಕ ಮೂರುದರ್ಭೆಗಳ ಕೂರ್ಚವನ್ನೂ ಏಕೋದ್ದಿಷ್ಟಪಾತ್ರೆಗಳಲ್ಲಿ ಒಂದೊಂದು ದರ್ಭೆಯ ಕೂರ್ಚವನ್ನೂ ಇಡಬೇಕು. ಆನಂತರ ಅವುಗಳನ್ನು ಕ್ರಮವಾಗಿ ಗಂಧೋದಕದಿಂದ ತುಂಬಿಸಿ '**ಶಂ ನೋ ದೇವೀ**'ಎಂದು ಒಮ್ಮೆಗೆ ಅನುಮಂತ್ರಿಸಿ '**ತಿಲೋಸಿ**' ಮಂತ್ರದಿಂದ ಪ್ರತಿಪಾತ್ರೆಗೂ ಮಂತ್ರಾವೃತ್ತಿಯಿಂದ ಎಳ್ಳನ್ನು ಹಾಕುವುದು ಗಂಧಪುಷ್ಪಭೃಂಗರಾಜಾದಿಗಳನ್ನು ಹಾಕುವುದು. '**ಪಿತೃಪಾತ್ರಂ ಸಂಪನ್ನಂ**' ಇತ್ಯಾದಿ ಊಹದಿಂದ ಪ್ರತಿಪಾತ್ರೆಯನ್ನು ಸ್ಪರ್ಶಿಸುವುದು. ಇಂತಹ ಸ್ಥಳಗಳಲ್ಲಿ ಪಿತೃವ್ಯಾದಿ ಮಂತ್ರಗಳಲ್ಲಿ ಸಪತ್ನೀಕಾದಿ ಉಲ್ಲೇಖವಿಲ್ಲ, ಸ್ಮರಣಮಾತ್ರ.

**''ಅಸ್ಮತ್ ಪಿತೃಪಿತಾಮಹಪ್ರಪಿತಾಮಹಾನ್ ..ಶರ್ಮಣಃ ಗೋತ್ರಾನ್ ವಸುರುದ್ರಾದಿತ್ಯಸ್ವರೂಪಾನ್/ ಅಸ್ಮನ್ಮಾತೃಪಿತಾಮಹೀಪ್ರಪಿತಾಮಹೀಃ ..ದಾಃ ..ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ/ ಅಸ್ಮನ್ಮಾತಾಮಹಮಾತುಃಪಿತಾಮಹಮಾತುಃ ಪ್ರಪಿತಾಮಹಾನ್ ..ಶರ್ಮಣಃ ..ಗೋತ್ರಾನ್ ವಸು..ರೂಪಾನ್/ ಅಸ್ಮನ್ಮಾತಾಮಹೀಮಾತುಃ ಪಿತಾಮಹೀಮಾತುಃಪ್ರಪಿತಾಮಹೀಃ ..ದಾಃ ..ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ|| ..ಭವತ್ಸ್ವಾವಾಹಯಿಷ್ಯೇ''** ಇತ್ಯಾದಿ ಕ್ರಮೇಣ ಪೃಷ್ಟ್ವಾ ತೈರನುಜ್ಞಾತೋ ಹಸ್ತೇ ತಿಲಾನ್ ಗೃಹೀತ್ವಾ **''ಉಶನ್ತಸ್ತ್ವಾ ..ಪಿತೄನ್ಹವಿಷೇ ಅತ್ತವೇ|| ಅಸ್ಮತ್ ಪಿತೃಪಿತಾಮಹಪ್ರಪಿತಾಮಹಾನ್ ..ಶರ್ಮಣಃ ..ಗೋತ್ರಾನ್ ವಸುರುದ್ರಾದಿತ್ಯಸ್ವರೂಪಾನ್ ಭವತ್ಸ್ವಾವಾಹಯಾಮಿ''** ಇತ್ಯಾದಿ ಕ್ರಮೇಣ ತತ್ತತ್ಸಂಬಂಧ ನಾಮಾದ್ಯುಚ್ಚಾರಣಪೂರ್ವಕಂ ವಿಪ್ರಶಿರಸ್ಯಂಸಯೋರ್ಜಾನ್ವೋಃ ಪಾದಯೋಶ್ಚ ತಿಲಾನ್ವಿಕೀರ್ಯಾವಾಹಯೇತ್|| ಏವಂ ಪಿತ್ರಾದಿವರ್ಗಚತುಷ್ಟಯಸ್ಯಾವಾಹನಂ ಕುರ್ಯಾತ್|| [322]ಕೇಚಿದೇಕೋದ್ದಿಷ್ಟಾನಾಮಾವಾಹನಂ ನೇಚ್ಛಂತಿ, ಅಪರ ಅವಾಹನಾಭಾವೇ ಪಿತೃಸಾನ್ನಿಧ್ಯಾಭಾವಾತ್ ಮಂತ್ರಂ ವಿನಾ ಕರ್ತವ್ಯಮೇವೇತಿ|| {ಏಕೋದ್ದಿಷ್ಟಾನಾಮಾವಾಹನ ಪಕ್ಷೇ; **''ಅಸ್ಮತ್ಸಾಪತ್ನಮಾತರಂ ..ದಾಂ ..ಗೋತ್ರಾಂ ವಸುರೂಪಾಮ್/ ಪತ್ನೀಂ ..ದಾಂ ..ಗೋತ್ರಾಂ ವಸುರೂಪಾಮ್/ ಪುತ್ರಂ ..ಶರ್ಮಾಣಂ ..ಗೋತ್ರಂ ವಸುರೂಪಂ (ಸಪತ್ನೀಕಂ ಸಸುತಂ)/ ದುಹಿತರಂ ..ದಾಂ ..ಗೋತ್ರಾಂ ವಸುರೂಪಾಂ (ಸಭರ್ತೃಕಾಂ ಸಸುತಾಂ)/ ಪಿತೃವ್ಯಂ ..ಶರ್ಮಾಣಂ ..ಗೋತ್ರಂ ವಸುರೂಪಂ (ಸಪತ್ನೀಕಂ ಸಸುತಂ)/ ಮಾತುಲಂ ..ಶರ್ಮಾಣಂ ..ಗೋತ್ರಂ ವಸುರೂಪಂ (ಸಪತ್ನೀಕಂ ಸಸುತಂ)/ ಭ್ರಾತರಂ ..ಶರ್ಮಾಣಂ ..ಗೋತ್ರಂ ವಸುರೂಪಂ (ಸಪತ್ನೀಕಂ ಸಸುತಂ)/ ಪಿತೃಭಗಿನೀಂ ..ದಾಂ ..ಗೋತ್ರಾಂ ವಸುರೂಪಾಂ(ಸಭರ್ತೃಕಾಂ ಸಸುತಾಂ)/ ಮಾತೃಭಗಿನೀಂ ..ದಾಂ ..ಗೋತ್ರಾಂ ವಸುರೂಪಾಂ(ಸಭರ್ತೃಕಾಂ ಸಸುತಾಂ)/ ಆತ್ಮಭಗಿನೀಂ ..ದಾಂ ..ಗೋತ್ರಾಂ**

---

ಆನಂತರ **''ಅಸ್ಮತ್ ಪಿತೃಪಿತಾ..ಸ್ವರೂಪಾನ್.. ಭವತ್ಸ್ವಾವಾಹಯಿಷ್ಯೇ''** ಇತ್ಯಾದಿಯಾಗಿ ಪ್ರಾರ್ಥಿಸಿ ವಿಪ್ರಾನುಜ್ಞೆಪಡೆದು **''ಉಶಂತಸ್ತ್ವಾ''** ಮಂತ್ರದಿಂದ ಸಂಬಂಧ ನಾಮಗೋತ್ರರೂಪಾದಿಗಳನ್ನು ಹೇಳಿ ಶಿರಃ ಪ್ರಭೃತಿ ಪಾದಾಂತ್ಯವಾಗಿ ಎಳ್ಳನ್ನು ಹಾಕಿ ಪಿತ್ರಾದಿ ವರ್ಗಚತುಷ್ಟಯರನ್ನು ಪ್ರತ್ಯೇಕವಾಗಿ ಆವಾಹಿಸಬೇಕು. ಏಕೋದ್ದಿಷ್ಟಸ್ಥಾನೀಯರ ಅವಾಹನೆಯಲ್ಲಿ ವಿಕಲ್ಪವಿದೆ ಕೆಲವರು ಏಕೋದ್ದಿಷ್ಟರ ಅವಾಹನೆ ಇಲ್ಲವೆನ್ನುವರು, ಉಳಿದವರು ಅವಾಹನೆಮಾಡದಿದ್ದರೆ ಪಿತೃಗಳ ಸಾನ್ನಿಧ್ಯಾಭಾವವಾಗುವುದರಿಂದ ಅವಾಹನೆ ಅವಶ್ಯವೆನ್ನುವರು. ಆವಾಹನೆಯ ಪಕ್ಷದಲ್ಲಿ ಮಂತ್ರವಿಲ್ಲದೆ ಸಂಬಂಧನಾಮಾದ್ಯುಚ್ಚಾರಣ ಪೂರ್ವಕ ಅವಾಹಿಸಬೇಕು.

**ವಸುರೂಪಾಂ(ಸಭರ್ತೃಕಾಂ ಸಸುತಾಂ)/ ಶ್ವಶುರಂ ..ಶರ್ಮಾಣಂ ..ಗೋತ್ರಂ ವಸುರೂಪಂ (ಸಪತ್ನೀಕಂಸಸುತಂ)/ಗುರುಂ..ಶರ್ಮಾಣಂ..ಗೋತ್ರಂವಸುರೂಪಂ(ಸಪತ್ನೀಕಂಸಸುತಂ)/ ಶಿಷ್ಯಂ ..ಶರ್ಮಾಣಂ ..ಗೋತ್ರಂ ವಸುರೂಪಂ (ಸಪತ್ನೀಕಂ ಸಸುತಂ)/ ಆಪ್ತಂ..ಶರ್ಮಾಣಂ ..ಗೋತ್ರಂ ವಸುರೂಪಂ (ಸಪತ್ನೀಕಂ ಸಸುತಂ)/ ..ಭವತ್ಸ್ವಾವಾಹಯಿಷ್ಯೇ''** ಇತ್ಯಾದಿ ಪೃಷ್ಟ್ವಾನುಜ್ಞಾಂ ಲಬ್ಧ್ವಾ ಮಂತ್ರಂ ವಿನಾ ''**ಅಸ್ಮತ್ಸಾಪತ್ನಮಾತರಂ+ ಭವತ್ಸ್ವಾವಾಹಯಾಮಿ**'' ಇತ್ಯಾದ್ಯಾವಾಹಯೇತ್} ಏವಮಾವಾಹ್ಯ ''**ಆಯಂತು ನಃ..ತೇಽವನ್ತ್ವಸ್ಮಾನ್**'' ಇತಿ ಸರ್ವಾನ್ ಸಕೃದುಪತಿಷ್ಠೇತ್॥

ಅಧಸ್ತದರ್ಭೈಃ ಸಹಾರ್ಘ್ಯಪಾತ್ರಾಣ್ಯಾದಾಯ ''**ಸ್ವಧಾರ್ಘ್ಯಾಃ**'' ಇತಿ ಮಂತ್ರಾವೃತ್ತ್ಯಾ ಪ್ರತಿಪಾತ್ರಂ ತತ್ತದ್ಬ್ರಾಹ್ಮಣಾಯ ನಿವೇದ್ಯ ತತ್ತದಗ್ರೇ ನಿಧಾಯ। ''**ಪಿತರಿದಂ ತೇಽರ್ಘ್ಯಂ**'' ಇತ್ಯಾದ್ಯುದಕದಾನಪೂರ್ವಕಮರ್ಘ್ಯಂ ದತ್ವಾ ''**ಯಾ ದಿವ್ಯಾ ..ಸ್ಯೋನಾ ಭವಂತು**'' ಇತಿ ಸ್ರವಂತೀರನುಮಂತ್ರ್ಯ ಪುನರಪೋ ದದ್ಯಾತ್॥ ಏವಂ ''**ಪಿತಾಮಹ/ ಪ್ರಪಿತಾಮಹ॥ ಮಾತಃ/ ಪಿತಾಮಹಿ/ ಪ್ರಪಿತಾಮಹಿ॥ ಮಾತಾಮಹ/ ಮಾತುಃಪಿತಾಮಹ/ ಮಾತುಃಪ್ರಪಿತಾಮಹ॥ ಮಾತಾಮಹಿ/ ಮಾತುಃಪಿತಾಮಹಿ/ಮಾತುಃಪ್ರಪಿತಾಮಹಿ॥ ಸಾಪತ್ನಮಾತಃ/ ಪತ್ನಿ/ಪುತ್ರ (ಸಪತ್ನೀಕ, ಸಸುತ)/ ದುಹಿತಃ(ಸಭರ್ತೃಕೇ, ಸಸುತೇ)/ ಪಿತೃವ್ಯ(ಸಪತ್ನೀಕ, ಸಸುತ)/ಮಾತುಲ (ಸಪತ್ನೀಕ,ಸಸುತ)/ಭ್ರಾತಃ(ಸಪತ್ನೀಕ,ಸಸುತ)/ಪಿತೃಭಗಿನಿ(ಸಭರ್ತೃಕೇ,ಸಸುತೇ)/ಮಾತೃಭಗಿನಿ(ಸಭರ್ತೃಕೇ, ಸಸುತೇ)/ ಆತ್ಮಭಗಿನಿ(ಸಭರ್ತೃಕೇ, ಸಸುತೇ)/ ಶ್ವಶುರ(ಸಪತ್ನೀಕ, ಸಸುತ)/ ಗುರೋ (ಸಪತ್ನೀಕ, ಸಸುತ)/ ಶಿಷ್ಯ(ಸಪತ್ನೀಕ, ಸಸುತ)/ ಆಪ್ತ(ಸಪತ್ನೀಕ, ಸಸುತ)**'' ಇತ್ಯಾದಿ ಯಥೋಕ್ತೋಹಪುರಃಸರಮರ್ಘ್ಯದಾನಂ ಕುರ್ಯಾತ್॥

ತತಃ ಪ್ರಥಮಪಿತ್ರರ್ಘ್ಯಪಾತ್ರ ಏವ ಸರ್ವಪಾತ್ರಸ್ಥಾನಪಃ ಸಂಸ್ರಾವಾನ್ ಸಮವನಯೇತ್। ಏವಂ ಸಮವನೀಯ ತಾಭಿರದ್ಭಿಃ ಪುತ್ರಕಾಮಶ್ಚೇನ್ಮುಖಮಂಕ್ತ್ವಾ, ಸರ್ವಪಿತ್ರ್ಯವಾಮಭಾಗೇ

---

ಆನಂತರ ''**ಆಯಂತು ನಃ**'' ಎಂಬ ಮಂತ್ರದಿಂದ ಒಂದೇ ಬಾರಿ ಉಪಸ್ಥಾನವನ್ನು ಮಾಡುವುದು. ಆನಂತರ ಹಾಸಿದದರ್ಭೆಗಳೊಂದಿಗೆ ಅರ್ಘ್ಯಪಾತ್ರೆಗಳನ್ನೆತ್ತಿ ''**ಸ್ವಧಾರ್ಘ್ಯಾಃ**'' ಎಂಬ ಮಂತ್ರಾವೃತ್ತಿಯೊಂದಿಗೆ ಬ್ರಾಹ್ಮಣರಿಗೆ ನಿವೇದಿಸಿ ಅವರವರ ಮುಂದೆ ಪಾತ್ರೆಯನ್ನಿರಿಸಿ ಅಬ್ದಾನ ಪುರಃಸರ ಕೂರ್ಚವನ್ನು ಕೈಯ್ಯಲ್ಲಿತ್ತು ಸವ್ಯದಿಂದ ''**ಪಿತರಿದಂ ತೇಽರ್ಘ್ಯಂ/ಪಿತಾಮಹೇದಂ ತೇಽರ್ಘ್ಯಂ..**'' ಇತ್ಯಾದಿ ವಿಭಕ್ತಿ ಊಹದೊಂದಿಗೆ ಅರ್ಘ್ಯವನ್ನು ಕೊಟ್ಟು ''**ಯಾ ದಿವ್ಯಾ**'' ಎಂಬ ಮಂತ್ರದಿಂದ ಸ್ರವಿಸುವ ಜಲವನ್ನು ಅಭಿಮಂತ್ರಿಸಿ ಪುನಃ ಶುದ್ಧೋದಕದಾನ. ಹೀಗೆ ಸರ್ವಪಿತೃಗಳಿಗೂ ಅರ್ಘ್ಯವನ್ನೀಯಬೇಕು. ಆನಂತರ

(ದೇವಪಾತ್ರಾದುತ್ತರತಃ) ಭುವಂ ಪ್ರೋಕ್ಷ್ಯ ಅರ್ಘ್ಯಪಾತ್ರಾಧಃ ಸ್ಥಿತಾನ್ದರ್ಭಾನಾಸ್ತೀರ್ಯ, ತೇಷು ''**ಪಿತೃಭ್ಯಃ ಸ್ಥಾನಮಸಿ**'' ಇತಿ ಪ್ರಥಮಮರ್ಘ್ಯಪಾತ್ರಂ ನುಬ್ಜಮುತ್ತಾನಂ ವಾ ಸಂಸ್ಥಾಪ್ಯ ತತ್ಪಾತ್ರಂ ಪಿತಾಮಹಪಾತ್ರೇಣ ಪಿಧಾಯ ಪ್ರಪಿತಾಮಹಪಾತ್ರೇಣಾಪಿದಧ್ಯಾತ್ ''**(ಪ್ರಣೀತಾಯ್ಯೈ ನಮಃ) ಇದಂ ಗಂಧಂ..**'' ಇತಿ ಗಂಧಾದೀನ್ಪ್ರಕ್ಷಿಪ್ಯ। ''**ಸರ್ವೇ ಉಪಚಾರಾಸ್ತಿಲೈ ಸಂಪೂರ್ಣಾಃ ಸಂತು**'' ಇತಿ ತಿಲಾನ್ಕ್ಷಿಪೇದಿತ್ಯಂತಂಕೃತ್ವಾ, ತತ್ಪಾತ್ರಮಕ್ಷಯ್ಯವಾಚನಾಂತಂ ನ ಚಾಲಯೇತ್॥

ಪ್ರತ್ಯುಪಚಾರಂ ಆದಾವಂತೇ ಚ ಉದಕಂ ದೇಯಮ್॥ ''**ಅಸ್ಮತ್ ಪಿತೃಪಿತಾಮಹಪ್ರಪಿತಾಮಹಾಃ ಶರ್ಮಾಣಃ ಗೋತ್ರಾಃ ವಸುರುದ್ರಾದಿತ್ಯಸ್ವರೂಪಾಃ ಯಥಾಭಾಗಶಃ ಅಮೀ ವೋ ಗಂಧಾಃ ಸ್ವಧಾ ನಮಃ,ಮಾಲ್ಯಾರ್ಥೇ ಇಮಾನಿ ವಃ ಪುಷ್ಪಾಣಿ ತುಲಸೀಪತ್ರಭೃಂಗರಾಜಪತ್ರಸಹಿತಾನಿ ಸ್ವಧಾ ನಮಃ, ಏಷ ವೋ ಧೂಪಃ ಸ್ವಧಾ ನಮಃ ,ಏಷ ವೋ ದೀಪಃ ಸ್ವಧಾ ನಮಃ,ಆಚ್ಛಾದನಾರ್ಥೇ ಇದಂ ವಸ್ತ್ರಯುಗಲಂ ಸ್ವಧಾ ನಮಃ, ಪವಿತ್ರಾರ್ಥೇ ಇಮೇ ಕುಶಾಃ**'' ಇತ್ಯಾದಿ ತತ್ತತ್ಸಂಬಂಧನಾಮಾದಿವಿಭಕ್ತ್ಯೂಹೇನ ಗಂಧಾದ್ಯಾಚ್ಛಾದನಾಂತಾನುಪಚಾರಾನ್ದತ್ವಾ॥ ''**ಇದಂ ಪಿತೃಭ್ಯೋ..ಸುವೃಜನಾಸು ವಿಕ್ಷು॥ ಪಿತೃಭ್ಯಃ ಏತೇ ಗಂಧಪುಷ್ಪಧೂಪದೀಪಾರ್ಚನಾಚ್ಛಾದನಾಂತಾಃ ಉಪಚಾರಾಃ ಸರ್ವೇ ಪರಿಪೂರ್ಣಾ ಭವಂತು**''। ಇತ್ಯರ್ಚನವಿಧೇಃ ಸಂಪೂರ್ಣತಾಂ ವಾಚಯಿತ್ವಾ ''**ಯಸ್ಯ ಸ್ಮೃತ್ಯಾ ಚ ..ತಮಚ್ಯುತಮ್**'' ಇತಿ ಜಪಿತ್ವಾ॥

---

ಅಪಸವ್ಯದಿಂದ ಶೇಷಾರ್ಘ್ಯಜಲಗಳೆಲ್ಲವನ್ನೂ ಪಿತ್ರರ್ಘ್ಯಪಾತ್ರೆಯಲ್ಲೇ ಹಾಕಿ ಪುತ್ರಕಾಮನಾಗಿದ್ದರೆ ಮುಖಕ್ಕೆ ಲೇಪಿಸಿಕೊಳ್ಳುವುದು. ಬಳಿಕ ಕೈತೊಳೆದು ಅಪಸವ್ಯದಿಂದ ಸರ್ವಪಿತ್ರ್ಯವಾಮಭಾಗದಲ್ಲಿ (ದೇವಪಾತ್ರೆಯ ಉತ್ತರದಲ್ಲಿ) ಭೂಮಿಯನ್ನು ಪ್ರೋಕ್ಷಿಸಿ ಅರ್ಘ್ಯಪಾತ್ರೆಗಳಡಿಗಿನದರ್ಭೆಯನ್ನಲ್ಲಿ ಹರಡಿ ಅದರಮೇಲೆ ''**ಪಿತೃಭ್ಯಃ ಸ್ಥಾನಮಸಿ**'' ಎಂದು ಪ್ರಥಮಪಾತ್ರೆಯನ್ನಿಟ್ಟು ಕ್ರಮವಾಗಿ ಪಿತಾಮಹ ಪ್ರಪಿತಾಮಹಪಾತ್ರೆಗಳಿಂದ ಅದನ್ನು ಮುಚ್ಚಿ ''**ಪ್ರಣೀತಾಯ್ಯೈ ನಮಃ**'' ಎಂದು ಗಂಧ ಪುಷ್ಪಗಳಿಂದ ಪೂಜಿಸಬೇಕು ಅದನ್ನು ಅಕ್ಷಯ್ಯವಾಚನೆಪರ್ಯಂತ ಜರುಗಿಸಬಾರದು.

ನಂತರ ದೇವಾರ್ಚನೆಯಂತೆಯೇ ಪಿತ್ರರ್ಚನೆಯನ್ನು. ''**ಪಿತೃಪಿತಾಮಹಪ್ರಪಿತಾಮಹಾಃ**'' ಇತ್ಯಾದಿ ಸಂಬಂಧನಾಮಾದ್ಯುಚ್ಚಾರಣೆ ಪುರಃಸರವಾಗಿ ಅಪಸವ್ಯದಿಂದ ಮಾಡುವುದು. ಪ್ರತ್ಯುಪಚಾರದ ಆದ್ಯಂತಗಳಲ್ಲಿ ಕೈಗೆ ನೀರನ್ನು ಕೊಡಬೇಕು. ಯವಸ್ಥಾನದಲ್ಲಿ ತಿಲವನ್ನು ಬಳಸಬೇಕು. ಆನಂತರ ''**ಅರ್ಚನವಿಧೇಃ..**'' ಎಂದು ಪ್ರಾರ್ಥಿಸಿ ''**ಇದಂ ಪಿತೃಭ್ಯೋ..**'' ಎಂದು ಜಪಿಸಿ ''**ಯಸ್ಯ ಸ್ಮೃತ್ಯಾ..**'' ಎಂದು ವಿಷ್ಣುವನ್ನು ಸ್ಮರಿಸುವುದು.

ಸವ್ಯಮ್। ಆಚಮ್ಯ ವಿಪ್ರಾಣಾಂ ಪುರತೋಽರ್ಚನಕಾಲೇ ಗಂಧಪುಷ್ಪಾದ್ಯಪನೀಯ ಭೂಮಿಂ ಸಮ್ಮೃಜ್ಯ। ''**ಯುಷ್ಮದನುಜ್ಞಯಾ ಮಂಡಲಾದಿ ಪಾತ್ರಾಸಾದನಂ ಕರಿಷ್ಯೇ**'' ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್।

ಗೋಮಯೋದಕಾಭ್ಯಾಂ ಭಸ್ಮನಾ ವಾ ದೇವಪಾತ್ರಸ್ಥಾನೇ ಚತುರಸ್ರಂ ಮಂಡಲಂ ಕೃತ್ವಾ॥ ಪಿತ್ರಾದಿಸ್ಥಾನೇ ಪ್ರತ್ಯೇಕವೃತ್ತಮಂಡಲಾನಿ ಕೃತ್ವಾ, ದೈವೇ ಸಯವಾನ್ಪಿತ್ರ್ಯೇ ಸತಿಲಾನ್ದರ್ಭಾನ್ ನಿದಧ್ಯಾತ್। ತತಸ್ತೇಷು ಭೋಜನಪಾತ್ರಾಣಿ ಸ್ಥಾಪಯೇತ್। ಅಪಸವ್ಯಮ್। ಭಸ್ಮ ಗೃಹೀತ್ವಾ ಪಿತೃಪಾತ್ರಾಣಾಂ ಪರಿತಃ ''**ಪಿಶಂಗಭೃಷ್ಟಿಮಂಭೃಣಂ ..ನಿ ಬರ್ಹಯ**'' ಇತಿ ಪ್ರಕೀರ್ಯ॥ ಸವ್ಯಮ್। ಭಸ್ಮ ಗೃಹೀತ್ವಾ ದೇವಪಾತ್ರಪರಿತಃ ''**ರಕ್ಷಾ ಣೋ ಅಗ್ನೇ ..ಚಿದ್ವಾವೃಧಾನಮ್॥ ಬ್ರಹ್ಮ ಚ ತೇ..ಅಪ್ರಯುಚ್ಛನ್**''॥ ಇತಿ ಪ್ರಕೀರ್ಯ। ''**ಯಥಾ ಚಕ್ರಧರೋ ..ಭೂತಾನಿ ರಕ್ಷತು॥ ಸರ್ವೇಷಾಂ ಪಾಪದೃಷ್ಟೀನಾಂ..ನ ವಿದ್ಯತೇ**'' ಇತಿ ಜಪಿತ್ವಾ॥ ಪಿತೃಪೂರ್ವಕಂ ಕರಶುದ್ಧಿಃ। ಭೋಜನಪಾತ್ರಾಣಿ ಪ್ರಕ್ಷಾಲ್ಯ, ಹಸ್ತಪ್ರಕ್ಷಾಲನಜಲಂ ಪಾತ್ರಪ್ರಕ್ಷಾಲನಜಲಂ ಚ ಶುಚೌ ದೇಶೇ ಕ್ಷಿಪೇತ್।

ಅಪಸವ್ಯಮ್। ಘೃತಾಕ್ತಮನ್ನಮಾದಾಯ ಪಿತ್ರ್ಯಬ್ರಾಹ್ಮಣಪುರತಃ ಸವ್ಯಂ ಜಾನ್ವಾಚ್ಯೋಪವಿಶ್ಯ॥ ಬ್ರಾಹ್ಮಣಪಾಣೌ ಪ್ರಾಗ್ದಕ್ಷಿಣಾಗ್ರಾನ್ದರ್ಭಾನಾಸ್ತೀರ್ಯ। (ಮೇಕ್ಷಣೇನ ಕರೇಣ ವಾ

---

ಆನಂತರ ಕರ್ತೃವು ಸವ್ಯದಿಂದ ಆಚಮನವನ್ನು ಮಾಡಿ. ಉಪಚಾರಕಾಲದಲ್ಲಿ ಬಿದ್ದಿರುವ ಗಂಧಾಕ್ಷತೆದರ್ಭೆಗಳನ್ನು ತೆಗೆದು ಶುದ್ಧಿಗೊಳಿಸಿ ವಿಪ್ರಾನುಜ್ಞೆಯನ್ನು ಪಡೆದು ಗೋಮಯೋದಕದಿಂದ ದೇವಪಾತ್ರೆಗಳನ್ನು ಇಡುವಲ್ಲಿ ಚೌಕಾಕಾರದ ಮಂಡಲವನ್ನು ಮತ್ತು ಪಿತ್ರಾದಿಪಾತ್ರಸ್ಥಾನದಲ್ಲಿ ಪ್ರತ್ಯೇಕ ಉರುಟಾದ ಮಂಡಲವನ್ನು ಮಾಡಬೇಕು. ದೇವಪಾತ್ರಸ್ಥಾನದಲ್ಲಿ ಯವದರ್ಬೆಗಳನ್ನು ಮತ್ತು ಪಿತ್ರ್ಯಾದಿಪಾತ್ರಸ್ಥಾನಗಳಲ್ಲಿ ತಿಲದರ್ಭೆಗಳನ್ನು ಇಟ್ಟು ಈ ಮಂಡಲಗಳ ಮೇಲೆ ಭೋಜನ ಪಾತ್ರೆಗಳನ್ನು ಇಟ್ಟು, ಭಸ್ಮವನ್ನು ತೆಕ್ಕೊಂಡು ಅಪಸವ್ಯದಿಂದ ಪಿತೃಪಾತ್ರಗಳ ಸುತ್ತಲು '**ಪಿಶಂಗ**' ಎಂಬ ಮಂತ್ರದಿಂದ ಮತ್ತು ಸವ್ಯದಲ್ಲಿ '**ರಕ್ಷಾಣೋ**' ಎಂಬ ಮಂತ್ರದಿಂದ ದೇವಪಾತ್ರೆಗಳ ಸುತ್ತಲು ಗೆರೆ ಎಳೆದು. '**ಯಥಾ ಚಕ್ರಧರೋ**' ಎಂದು ಜಪಿಸುವುದು. ಪಿತೃಪೂರ್ವವಾಗಿ ವಿಪ್ರರಿಗೆ ಕೈತೊಳೆಯಲು ನೀರು ಕೊಟ್ಟು ಭೋಜನಪಾತ್ರೆಯನ್ನು ತೊಳೆಯಬೇಕು ಮತ್ತು ಕೈತೊಳೆದ ನೀರನ್ನು ಮತ್ತು ಪಾತ್ರೆಯನ್ನು ತೊಳೆದ ನೀರನ್ನು ಶುದ್ಧಸ್ಥಳದಲ್ಲಿ ಚೆಲ್ಲಬೇಕು.

ಆನಂತರ ಅಪಸವ್ಯದಿಂದ ಒಂದು ಎಲೆ ಅಥವಾ ಪಾತ್ರೆಯಲ್ಲಿ ಅನ್ನವನ್ನು ತೆಕ್ಕೊಂಡು ಪಿತ್ರ್ಯಬ್ರಾಹ್ಮಣನ ಮುಂದೆ ಎಡದಕಾಲನ್ನು ಮಡಿಸಿ ಕುಳಿತು ಬ್ರಾಹ್ಮಣನ ಕೈಯಲ್ಲಿ ಆಗ್ನೇಯಾಗ್ರದರ್ಭೆಗಳನ್ನಿಟ್ಟು,

ಹೋಮಃ) ಸದರ್ಭೇಣ ವಾಮಹಸ್ತೇನ ಸ್ವದಕ್ಷಿಣಹಸ್ತಮುಪಸ್ತೀರ್ಯ। ಸವ್ಯೇನಪಾಣಿನಾ ಮಧ್ಯಾತ್ಪೂರ್ವಾರ್ಧಾಚ್ಚ ಹವಿರವದಾಯ ದಕ್ಷಿಣಪಾಣೌ ನಿಧಾಯ (ಪಂಚಾವತ್ತೀ ತು ತೃತೀಯಂ ಪಶ್ಚಾರ್ಧಾದವದಾಯ)॥ ಪಾತ್ರಸ್ಥಮವತ್ತಂ ಚಾಭಿಘಾರ್ಯ। **''ಸೋಮಾಯ ಪಿತೃಮತೇ ಸ್ವಧಾ ನಮಃ''** ಇತಿ ಪಿತೃತೀರ್ಥೇನ ವಿಪ್ರದಕ್ಷಿಣಪಾಣೌ ಪ್ರಥಮಾಹುತಿಂ ಹುತ್ವಾ। **''ಸೋಮಾಯ ಪಿತೃಮತ ಇದಂ ನ ಮಮ''** ಇತಿ ತ್ಯಜೇತ್॥ ಪುನಃ ಪೂರ್ವವದವದಾಯ। ಪಾತ್ರಸ್ಥಮವತ್ತಂ ಚಾಭಿಘಾರ್ಯ। **''ಅಗ್ನಯೇ ಕವ್ಯವಾಹನಾಯ ಸ್ವಧಾ ನಮಃ''** ಇತಿ ದ್ವಿತೀಯಾಮಾಹುತಿಂ ಹುತ್ವಾ। **''ಅಗ್ನಯೇ ಕವ್ಯವಾಹನಾಯೇದಂ ನ ಮಮ''** ಇತಿ ತ್ಯಜೇತ್॥ ಸವ್ಯೇನೋದಕೋಪಸ್ಪರ್ಶನಮ್॥ ಏವಂ ಸರ್ವಪಿತ್ರ್ಯಪಾಣಿಷು ಹುತ್ವೋತ್ಥಾಯ **''ಓಂ ಚ ಮೇ ..ತೇ ನಮಃ॥ ಅಗ್ನಯೇ ನಮಃ॥ ಸ್ವಸ್ತಿ॥ ಶ್ರದ್ಧಾಂ ಮೇಧಾಂ..ಕವ್ಯವಾಹನ''** ಇತ್ಯುಪಸ್ಥಾಯ। ಪಿತ್ರಾದೀನ್ ಬ್ರಾಹ್ಮಣಾನ್ಪೃಚ್ಛೇತ್ **''ಪಾಣಿಷು ಹುತಮ್''**॥ (ಕರ್ತಾ ವಿಧುರಶ್ಚೇತ್ ಪ್ರಥಮದೈವವಿಪ್ರಪಾಣೌ ಜುಹುಯಾತ್। ಶೇಷಂ ತು ಪಿತ್ರ್ಯೇ ದದ್ಯಾತ್॥)

ತತಃ ಕರ್ತಾ ಘೃತೇನ ತೂಷ್ಣೀಂ ಪಿತ್ರ್ಯಪಾತ್ರೇಽಭಿಘಾರಂ ಕುರ್ಯಾತ್॥ ಅಭಿಘಾರಿತೇ ಪಾತ್ರೇ ಪಿತ್ರ್ಯವಿಪ್ರಾಃ ಸ್ವಪಾಣಿಸ್ಥಮನ್ನಂ ನಿಧಾಯ ಬಹಿರ್ಗತ್ವಾಽಽಚಮ್ಯ ಯಥಾಸ್ಥಾನಮುಪವಿಶೇಯುಃ॥ ತತಃ ಯಜ್ಞೋಪವೀತೀ **''ಮೂರ್ಧಾನಂ ದಿವೋ ..ಜನಯಂತ ದೇವಾಃ॥ ಆಮಾಸು ಪಕ್ವ..ಗಿರ್ವಣಸೇ ಬೃಹತ್''** ಇತಿ ದೈವಪೂರ್ವಂ ಪಾತ್ರಾಣ್ಯಾಜ್ಯೇನಾಭಿಘಾರಯೇತ್ । ತತಃ

---

ಅನ್ನವನ್ನು ಮೇಕ್ಷಣದಿಂದಲೋ ಕೈಯ್ಯಿಂದಲೋ ಅವದಾನಧರ್ಮದಿಂದ ಹೋಮವನ್ನು ಮಾಡಬೇಕು ಅನ್ನವನ್ನು ತೆಗೆದುಕೊಂಡು. **'ಸೋಮಾಯ ಪಿತೃಮತೇ... , ಅಗ್ನಯೇ ಕವ್ಯವಾಹನಾಯ...'** ಎಂಬೆರಡು ಮಂತ್ರಗಳಿಂದ ಎರಡು ಅಹುತಿಗಳನ್ನು ಹೋಮಿಸುವುದು. ಹೀಗೆ ಪ್ರತಿಪಿತ್ರ್ಯವಿಪ್ರಕರದಲ್ಲೂ ಹೋಮಿಸಿ ಸವ್ಯದಿಂದ ಕೈತೊಳೆದು ನಿಂತು **'ಓಂ ಚ ಮೇ..'** ಎಂದು ಉಪಸ್ಥಾನವನ್ನುಮಾಡಿ, ಬ್ರಾಹ್ಮಣರನ್ನು **'ಪಾಣಿಷು ಹುತಮ್'** ಎಂದುಕೇಳುವುದು. (ಕರ್ತೃವು ವಿಧುರನಾಗಿದ್ದರೆ ದೈವಿಕನಿಯಮದಿಂದ ಪ್ರಥಮದೇವವಿಪ್ರನ ಕೈಯ್ಯಲ್ಲಿ ಹೋಮಿಸಿ, ಪಿತೃಗಳಿಗೆ ಶೇಷನಿವೇದನವನ್ನು ಮಾಡುವುದು)

ಆನಂತರ ಪಿತ್ರ್ಯಬ್ರಾಹ್ಮಣನ ಭೋಜನಪಾತ್ರೆಗೆ ಅಭಿಘಾರಮಾಡುವುದು ಆಗ ಪಿತ್ರ್ಯಬ್ರಾಹ್ಮಣನು ತನ್ನಕೈಯ್ಯಲ್ಲಿರುವ ಅನ್ನವನ್ನು ಭೋಜನಪಾತ್ರೆಯಲ್ಲಿಟ್ಟು ಸ್ವಲ್ಪದೂರ ಸರಿದು ಆಚಮನವನ್ನು ಮಾಡಿ ಭೋಜನಸ್ಥಾನದಲ್ಲಿಕುಳಿತುಕೊಳ್ಳಬೇಕು. ಬಳಿಕ ಕರ್ತೃವು ಸವ್ಯದಿಂದ **'ಮೂರ್ಧಾನಂ'** ಎಂದು ಜಪಿಸಿ ದೇವಪೂರ್ವ ಭೋಜನಪಾತ್ರೆಗೆ ಅಭಿಘಾರಮಾಡಬೇಕು. ಅನ್ನದಿಂದ ಮೊದಲ್ಗೊಂಡು ತೊವ್ವೆಯವರೆಗೆ

ಕರ್ತಾನ್ನಾದಿಸೂಪಾಂತಂ ಪರಿವೇಷಯೇತ್॥ ಅತ್ರ ತ್ರಿಸುಪರ್ಣಾನ್ನಸೂಕ್ತಾದೀನಾಂ ಜಪಃ ಕಾರ್ಯಃ।

ತತಃ ''**ದೇವತಾಭ್ಯಃ ಪಿತೃಭ್ಯಶ್ಚ ..ನಮೋ ನಮಃ॥ ಕುರುಕ್ಷೇತ್ರಂ ಗಯಾಂ ..ಸದಾ ಪಠೇತ್। ಸಪ್ತವ್ಯಾಧಾ ದಶಾರ್ಣೇಷು ..ಕಿಮುವಸೀದಥ॥ ಅಮೂರ್ತಾನಾಂ ..ಯೋಗಚಕ್ಷುಷಾಮ್। ಚತುರ್ಭಿಶ್ಚ ..ವಿಷ್ಣುಃ ಪ್ರಸೀದತು॥ ಈಶಾನಃ ಪಿ.. ಸದಾಶಿವಃ**'' ಇತಿ ಜಪಿತ್ವಾ। ಅಪಸವ್ಯಮ್। ಪಾಣಿಹುತಶೇಷಮನ್ನಂ ಸರ್ವಂ ಪಿತ್ರಾದಿಸರ್ವಪಿತೃಪಾತ್ರೇಷು ತೂಷ್ಣೀಂ ದದ್ಯಾತ್।

ಸವ್ಯಮ್॥ ದಕ್ಷಿಣಂ ಜಾನು ಪಾತಯಿತ್ವಾ। ದೇವಪಾತ್ರಂ ವಾಮೇನಸ್ಪೃಶನ್ ದಕ್ಷಿಣೇನ ಪಾಣಿನಾ ಪಾತ್ರಸ್ಥಮನ್ನಂ ಗಾಯತ್ರ್ಯಾಭ್ಯುಕ್ಷ್ಯ ತೂಷ್ಣೀಂ ಪ್ರದಕ್ಷಿಣಂ ಪರಿಷಿಚ್ಯ। ಪಾಣಿಭ್ಯಾಂ ಸ್ವಸ್ತಿಕಾಕೃತಿನಾ, ಪಾತ್ರಮಾಲಭ್ಯ ''**ಪೃಥಿವೀ ತೇ ..ಅಮುತ್ರಾಮುಷ್ಮಿನ್ಲೋಕೇ**'' ಇತ್ಯಭಿಮಂತ್ರ್ಯ। ''**ಇದಂ ವಿಷ್ಣುರ್ವಿ ..ಪಾಂಸುರೇ॥ ವಿಷ್ಣೋ ಹವ್ಯಂ ರಕ್ಷಸ್ವ**'' ಇತಿ ನ್ಯುಬ್ಜೇನ ಕರೇಣ ನ್ಯುಬ್ಜಂ ದ್ವಿಜಪಾಣ್ಯಂಗುಷ್ಠಾಗ್ರಮನಖಮನ್ನೇ ನಿವೇಶ್ಯ। ಯವೋದಕಮಾದಾಯ ''**ಧುರಿಲೋಚನಸಂಜ್ಞಕವಿಶ್ವೇದೇವಾ ದೇವತಾ ..ಚಾಽಽತೃಪ್ತೇಃ ಸ್ವಾಹಾ॥(ಹವ್ಯಂ ನಮೋ ನ ಮಮ।ಓಂ ತತ್ಸದ್ಗಯಾಯಾಂ ವಿಷ್ಣುಪದಾದಿ ಚತುರ್ದಶಪದೇಷು ದತ್ತಮನ್ನಮಕ್ಷಯ್ಯಮಸ್ತು)**'' ಇತ್ಯುಕ್ತ್ವಾ ಯವೋದಕಂ ದೇವತೀರ್ಥೇನ ಪಾತ್ರವಾಮಭಾಗೇ ಭೂಮೌ ಕ್ಷಿಪೇತ್। ''**ಗಯಾ**

---

ಬಡಿಸಬೇಕು ಬಡಿಸುವಾಗ ತ್ರಿಸುಪರ್ಣ,ಅನ್ನಸೂಕ್ತ ಮುಂತಾದ ಸೂಕ್ತಗಳನ್ನು ಹೇಳಬೇಕು. ಆನಂತರ ಕೈಜೋಡಿಸಿ '**ದೇವತಾಭ್ಯಃ..ಪರಮಾತ್ಮಾ ಸದಾಶಿವಃ**' ಎಂಬಲ್ಲಿವರೆಗೆ ಹೇಳಬೇಕು. ಪಾಣಿಹೋಮ ಶೇಷಾನ್ನವನ್ನು ಪೂರ್ತಿಯಾಗಿ ಅಪಸವ್ಯದಿಂದ ಪಿತ್ರಾದಿ ಸಮಸ್ತಪಿತೃಎಲೆಗಳಲ್ಲಿಬಡಿಸುವುದು.

ಆನಂತರ ಸವ್ಯಮಾಡಿಕೊಂಡು ದೇವಬ್ರಾಹ್ಮಣನ ಎದುರಿಗೆ ಕುಳಿತು ಎಲೆಯನ್ನು ಮುಟ್ಟಿಕೊಂಡು '**ಗಾಯತ್ರೀ**' ಮಂತ್ರದಿಂದ ದೇವಪಾತ್ರದ ಅನ್ನವನ್ನು ಅಭ್ಯುಕ್ಷಿಸಿ, ಕೂರ್ಚದಿಂದ ಮಂತ್ರವಿಲ್ಲದೆ ಪರಿಷೇಚನೆ ಮಾಡಬೇಕು. ಸ್ವಸ್ತಿಕಾಕಾರದಿಂದ ಪಾತ್ರೆಯನ್ನು ಹಿಡಿದು '**ಪೃಥಿವೀ ತೇ**' ಎಂಬ ಮಂತ್ರದಿಂದ ಅಭಿಮಂತ್ರಿಸಿ. '**ಇದಂ ವಿಷ್ಣು..ರಕ್ಷಸ್ವ**' ಎಂದು ಜಪಿಸಿ, ವಿಪ್ರಾಂಗುಷ್ಠವು ಅನ್ನದ ಮಧ್ಯದಲ್ಲಿ ಊರಿ ನಿಲ್ಲುವಂತ ಹಿಡಿದು ಆನಂತರ ಎಡದ ಕೈಯ್ಯಿಂದ ಎಲೆಯನ್ನು ಮುಟ್ಟುತ್ತ ಬಲದಕೈಯ್ಯಲ್ಲಿ ದರ್ಭೆಯವತುಲಸೀದಳನೀರನ್ನು ಹಿಡಿದುಕೊಂಡು '**ಧುರಿಲೋಚನ..**' ಎಂಬಲ್ಲಿಂದ '**ನಮೋ ನ ಮಮ**' ಎಂಬಲ್ಲಿ ವರೆಗೆ ಹೇಳಿ '**ಓಂ ತತ್ಸದ್ಗಯಾಯಾಂ..ಮಸ್ತು**' ಎಂಬಲ್ಲಿಯವರೆಗೆ ಹೇಳಿ ಭೋಜನಪಾತ್ರದ ಎಡಭಾಗದಲ್ಲಿ ಬಿಟ್ಟು '**ಗಯಾಗದಾಧರಃ ಪ್ರೀಯತಾಂ**' ಎಂದು ಹೇಳಿ ಎದ್ದು ನಿಂತು '**ಯೇ ದೇವಾಸಃ..**'

**ಗಧಾಧರಃ ಪ್ರೀಯತಾಮ್। ಯೇ ದೇವಾಸೋ ..ಜುಷಧ್ವಮ್''** ಇತಿ ದೇವಾನ್ಸಕೃದುಪಸ್ಥಾಯ॥ ''**ದೇವಾನುಜ್ಞಯಾ ಪಿತ್ರಾದ್ಯನ್ನ ನಿವೇದನಂ ಕರಿಷ್ಯೇ**'' ಇತಿ ದೇವಬ್ರಾಹ್ಮಣಂ ಪೃಷ್ಟ್ವಾ ಪಿತೃಭ್ಯೋಽನ್ನಂ ನಿವೇದಯೇತ್॥

ಅಪಸವ್ಯಮ್। ವಾಮಂ ಜಾನು ಪಾತಯಿತ್ವೋಪವಿಶ್ಯ। ಪಿತ್ರ್ಯಪಾತ್ರಸ್ಥಮನ್ನಂ ಗಾಯತ್ರ್ಯಾಭ್ಯುಕ್ಷ್ಯ। ತೂಷ್ಣೀಮಪ್ರದಕ್ಷಿಣಂ ಪರಿಷಿಚ್ಯ। ಪಾಣಿಭ್ಯಾಂ ಸ್ವಸ್ತಿಕಾಕೃತಿನಾ ಪಾತ್ರಮಾಲಭ್ಯ ''**ಪೃಥಿವೀ ತೇ ಪಾತ್ರಂ ..ಅಮುತ್ರಾಮುಷ್ಮಿನ್ಲೋಕೇ**'' ಇತ್ಯಭಿಮಂತ್ರ್ಯ। **ಇದಂ ವಿಷ್ಣುರ್ವಿ ..ಪಾಂಸುರೇ॥ ವಿಷ್ಣೋ ಕವ್ಯಂ ರಕ್ಷಸ್ವ**'' ಇತಿ ನ್ಯುಬ್ಜೇನ ಕರೇಣ ನ್ಯುಬ್ಜಂ ದ್ವಿಜಪಾಣ್ಯಙ್ಗುಷ್ಠಾಗ್ರಮನಖಮನ್ನೇ ನಿವೇಶಯೇತ್। ತತೋ ವಾಮಹಸ್ತೇನ ಪಾತ್ರಮಾಲಭ್ಯ ದಕ್ಷಿಣೇನ ಪಾಣಿನಾ ತಿಲೋದಕಮಾದಾಯ ''**ಪಿತೃಪಿತಾಮಹಪ್ರಪಿತಾಮಹಾದೇವತಾಃ ಇದಮನ್ನಂ ..ಚ್ಛಾಯೇಯಮ್। ಅಸ್ಮತ್ ಪಿತೃಪಿತಾಮಹಪ್ರಪಿತಾಮಹೇಭ್ಯಃ..ಶರ್ಮಭ್ಯಃ ..ಗೋತ್ರೇಭ್ಯಃ ವಸುರುದ್ರಾದಿತ್ಯಸ್ವರೂಪೇಭ್ಯಃ ಇದಮನ್ನಮಮೃತ ..ಚಾಽಽತೃಪ್ತೇಃ ಸ್ವಧಾ**''॥ **(ಕವ್ಯಂ ನಮೋ ನ ಮಮ॥ ಓಂ ತತ್ಸತ್ ಗಯಾಯಾಂ ರುದ್ರಪದಾದಿಚತುರ್ದಶಪದೇಷು ದತ್ತಮನ್ನಮಕ್ಷಯ್ಯಮಸ್ತು)** ಇತ್ಯುಕ್ತ್ವಾ ತಿಲೋದಕಂ ಪಾತ್ರದಕ್ಷಿಣಭಾಗೇ ಭೂಮೌ ಪಿತೃತೀರ್ಥೇನ ನಿನಯೇತ್। ''**ಗಯಾ ಗಧಾಧರಃ ಪ್ರೀಯತಾಮ್**'' ಇತ್ಯುಕ್ತ್ವೋತ್ಥಾಯ।

ಏವಂ ತತ್ತದ್ವಿಭಕ್ತ್ಯೂಹೇನಾನ್ನನಿವೇದನಮ್ ಕಾರ್ಯಮ್॥ ತತ್ರ ವಿಶೇಷಃ; **ಮಾತೃಪಿತಾಮಹೀಪ್ರಪಿತಾಮಹ್ಯಃ ದೇವತಾಃ। ಇದಮನ್ನಂ.. ಚ್ಛಾಯೇಯಮ್।**

---

ಎಂದು ಉಪಸ್ಥಾನವನ್ನು ಮಾಡಿ. ದೇವಬ್ರಾಹ್ಮಣಾನುಜ್ಞೆಯನ್ನು ಪಡೆದು ಪಿತೃಗಳಿಗೆ ಅನ್ನವನ್ನು ನಿವೇದಿಸುವುದು.

ಅಪಸವ್ಯ ಮಾಡಿ ಪಿತ್ರ್ಯಪಾತ್ರೆಯ ಮುಂದೆ ಎಡಕಾಲನ್ನು ಮಡಿಸಿ ಕುಳಿತು ಎಲೆಯನ್ನು ಮುಟ್ಟಿಕೊಂಡು '**ಗಾಯತ್ರೀ**' ಮಂತ್ರದಿಂದ ಪಿತ್ರ್ಯಪಾತ್ರದ ಅನ್ನವನ್ನು ಅಭ್ಯುಕ್ಷಿಸಿ, ಕೂರ್ಚದಿಂದ ಮಂತ್ರವಿಲ್ಲದೆ ಅಪ್ರದಕ್ಷಿಣವಾಗಿ ಪರಿಷೇಚನೆ ಮಾಡಬೇಕು. ಆನಂತರ ಎಡಗೈ ಮೇಲೆ ಮತ್ತು ಬಲಗೈ ಕೆಳಗೆ ಇರುವಂತೆ ಸ್ವಸ್ತಿಕಾಕೃತಿಯಿಂದ ಪಾತ್ರೆಯನ್ನು ಹಿಡಿದು '**ಪೃಥಿವೀ ತೇ..ಲೋಕೇ**' ಎಂಬಲ್ಲಿವರೆಗೆ ಹೇಳಿ ಅಭಿಮಂತ್ರಿಸಿ. '**ಇದಂ ವಿಷ್ಣು.. ಕವ್ಯಂ ರಕ್ಷಸ್ವ**' ಎಂದು ಜಪಿಸಿ ಬ್ರಾಹ್ಮಣನ ಕೈಯನ್ನು ಹಿಡಿದು ವಿಪ್ರಾಂಗುಷ್ಠವು ಅನ್ನದ ಮಧ್ಯದಲ್ಲಿ ಊರಿ ನಿಲ್ಲುವಂತೆ ಹಿಡಿಯುವುದು. ಆನಂತರ ಬಲದಕೈಯ್ಯಲ್ಲಿ ದರ್ಭೆಎಳ್ಳುತುಳಸಿಗಳನ್ನಿಟ್ಟಕೊಂಡು '**ಪಿತೃಪಿತಾಮಹ.. ಕವ್ಯಂ ನಮೋ ನ ಮಮ**' ಎಂದು ಹೇಳಿ '**ಓಂ ತತ್ಸದ್ಗಯಾಯಾಂ ..ಮಸ್ತು**' ಎಂದು ಬ್ರಾಹ್ಮಣನ ಬಲಭಾಗದಲ್ಲಿ ಪಿತೃತೀರ್ಥದಿಂದ ಬಿಡಬೇಕು. '**ಗಯಾಗದಾಧರಃಪ್ರೀಯತಾಂ**' ಎಂದು ಶ್ರಾದ್ಧಕರ್ತನು ಹೇಳುವುದು. ಹೀಗೆ ಮಾತ್ರಾದಿ ವಿಪ್ರರಿಗೂ ಮೇಲ್ಕಂಡಂತೆ ನಾಮಗೋತ್ರಾದಿಗಳನ್ನು

ಅಸ್ಮತ್ ಮಾತೃಪಿತಾಮಹೀಪ್ರಪಿತಾಮಹೀಭ್ಯಃ ..ದಾಭ್ಯಃ ..ಗೋತ್ರಾಭ್ಯಃ ವಸುರುದ್ರಾದಿತ್ಯಸ್ವರೂಪಾಭ್ಯಃ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಸಾಪತ್ನಮಾತಾ ದೇವತಾ ಇದಮನ್ನಂ.. ಚ್ಛಾಯೇಯಮ್। ಸಾಪತ್ನೀಮಾತ್ರೇ ..ದಾಯ್ಯೈ ಗೋತ್ರಾಯ್ಯೈ ವಸುರೂಪಾಯ್ಯೈ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಮಾತಾಮಹಮಾತುಃಪಿತಾಮಹ ಮಾತುಃ ಪ್ರಪಿತಾಮಹಾ ದೇವತಾಃ। ಇದಮನ್ನಂ.. ಚ್ಛಾಯೇಯಮ್ ಮಾತಾಮಹ ಮಾತುಃಪಿತಾಮಹಮಾತುಃಪ್ರಪಿತಾಮಹೇಭ್ಯಃ ..ಶರ್ಮಭ್ಯಃ ..ಗೋತ್ರೇಭ್ಯಃ ವಸುರುದ್ರಾದಿತ್ಯಸ್ವರೂಪೇಭ್ಯಃ ಇದಮನ್ನಮಮೃತ ..ಚಾಽಽತೃಪ್ತೇಃ ಸ್ವಧಾ/ ಮಾತಾಮಹೀ ಮಾತುಃಪಿತಾಮಹೀಮಾತುಃಪ್ರಪಿತಾಮಹ್ಯಃ ದೇವತಾಃ ಇದಮನ್ನಂ.. ಚ್ಛಾಯೇಯಮ್। ಮಾತಾಮಹೀ- ಮಾತುಃಪಿತಾಮಹೀಮಾತುಃಪ್ರಪಿತಾಮಹೀಭ್ಯಃ ..ದಾಭ್ಯಃ ..ಗೋತ್ರಾಭ್ಯಃ ವಸುರುದ್ರಾದಿತ್ಯಸ್ವರೂಪಾಭ್ಯಃ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಪತ್ನೀ ದೇವತಾ..ಇದಮನ್ನಂ.. ಚ್ಛಾಯೇಯಮ್। ಪತ್ನ್ಯೈ ..ದಾಯ್ಯೈ ..ಗೋತ್ರಾಯ್ಯೈ ವಸುರೂಪಾಯ್ಯೈ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಪುತ್ರೋ ದೇವತಾ ಇದಮನ್ನಂ.. ಚ್ಛಾಯೇಯಮ್। ಪುತ್ರಾಯ ..ಶರ್ಮಣೇ ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ದುಹಿತಾ ದೇವತಾ ..ಇದಮನ್ನಂ.. ಚ್ಛಾಯೇಯಮ್। ದುಹಿತ್ರೇ ..ದಾಯ್ಯೈ ..ಗೋತ್ರಾಯ್ಯೈ (ಸಭರ್ತೃಕಾಯ್ಯೈ ಸಸುತಾಯ್ಯೈ) ..ವಸುರೂಪಾಯ್ಯೈ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಪಿತೃವ್ಯೋ ದೇವತಾ ಇದಮನ್ನಂ.. ಚ್ಛಾಯೇಯಮ್। ಪಿತೃವ್ಯಾಯ ..ಶರ್ಮಣೇ ..ಗೋತ್ರಾಯ (ಸಪತ್ನೀಕಾಯ ಸಸುತಾಯ) ವಸುರೂಪಾಯ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಮಾತುಲೋ ದೇವತಾ ಇದಮನ್ನಂ.. ಚ್ಛಾಯೇಯಮ್। ಮಾತುಲಾಯ ..ಶರ್ಮಣೇ ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಭ್ರಾತಾ ದೇವತಾ ಇದಮನ್ನಂ.. ಚ್ಛಾಯೇಯಮ್। ಭ್ರಾತ್ರೇ ..ಶರ್ಮಣೇ ..ಗೋತ್ರಾಯ(ಸಪತ್ನೀಕಾಯ ಸಸುತಾಯ)ವಸುರೂಪಾಯಇದಮನ್ನಮಮೃತ..ಚಾಽಽತೃಪ್ತೇಃಸ್ವಧಾ/ಪಿತೃಭಗಿನೀದೇವತಾ ಇದಮನ್ನಂ.. ಚ್ಛಾಯೇಯಮ್। ಪಿತೃಭಗಿನ್ಯೈ ..ದಾಯ್ಯೈ ..ಗೋತ್ರಾಯ್ಯೈ (ಸಭರ್ತೃಕಾಯ್ಯೈ

---

ಊಹಿಸಿ ಯಥೋಕ್ತವಾಗಿ ಅನ್ನನಿವೇದನೆಯನ್ನು ಮಾಡುವುದು. ಹೀಗೆ ಸರ್ವಪಿತೃಗಳಿಗೂ ಅನ್ನವನ್ನು ನಿವೇದಿಸಿ, ನಿಂತುಕೊಂಡು '**ಯೇ ಚೇಹ..**' ಎಂಬಮಂತ್ರದಿಂದ ಉಪಸ್ಥಾನವನ್ನು ಮಾಡಬೇಕು.

**ಸಸುತಾಯೈ)ವಸುರೂಪಾಯೈ ಇದಮನ್ನಮಮೃತ.. ಚಾಽಽತೃಪ್ತೇಃ ಸ್ವಧಾ/ ಮಾತೃಭಗಿನೀ ದೇವತಾ ಇದಮನ್ನಂ.. ಚ್ಚಾಯೇಯಮ್। ಮಾತೃಭಗಿನ್ಯೈ ..ದಾಯೈ ..ಗೋತ್ರಾಯೈ (ಸಭರ್ತೃಕಾಯೈ ಸಸುತಾಯೈ)ವಸುರೂಪಾಯೈ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಆತ್ಮಭಗಿನೀ ದೇವತಾ ಇದಮನ್ನಂ.. ಚ್ಚಾಯೇಯಮ್। ಆತ್ಮಭಗಿನ್ಯೈ ..ದಾಯೈ ..ಗೋತ್ರಾಯೈ (ಸಭರ್ತೃಕಾಯೈ ಸಸುತಾಯೈ)ವಸುರೂಪಾಯೈ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಶ್ವಶುರೋ ದೇವತಾ ಇದಮನ್ನಂ.. ಚ್ಚಾಯೇಯಮ್। ಶ್ವಶುರಾಯ ..ಶರ್ಮಣೇ ..ಗೋತ್ರಾಯ (ಸಪತ್ನೀಕಾಯ ಸಸುತಾಯ)ವಸುರೂಪಾಯ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಗುರುರ್ದೇವತಾ ಇದಮನ್ನಂ.. ಚ್ಚಾಯೇಯಮ್। ಗುರವೇ ..ಶರ್ಮಣೇ ..ಗೋತ್ರಾಯ (ಸಪತ್ನೀಕಾಯ ಸಸುತಾಯ)ವಸುರೂಪಾಯ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಶಿಷ್ಯೋ ದೇವತಾ ಇದಮನ್ನಂ.. ಚ್ಚಾಯೇಯಮ್। ಶಿಷ್ಯಾಯ ..ಶರ್ಮಣೇ ..ಗೋತ್ರಾಯ (ಸಪತ್ನೀಕಾಯ ಸಸುತಾಯ)ವಸುರೂಪಾಯ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/ ಆಪ್ತೋ ದೇವತಾ ಇದಮನ್ನಂ.. ಚ್ಚಾಯೇಯಮ್। ಆಪ್ತಾಯ ..ಶರ್ಮಣೇ ..ಗೋತ್ರಾಯ (ಸಪತ್ನೀಕಾಯ ಸಸುತಾಯ) ವಸುರೂಪಾಯ ಇದಮನ್ನಮಮೃತ..ಚಾಽಽತೃಪ್ತೇಃ ಸ್ವಧಾ/''**

ಇತ್ಯನ್ನಂನಿವೇದ್ಯ। ''**ಯೇ ಚೇಹ ಪಿತರೋ..ಸುಕೃತಂ ಜುಷಸ್ವ**''ಇತಿ ಸರ್ವಾನ್ಸಕೃದುಪಸ್ಥಾಯ।

ಸವ್ಯಮ್। ''**ಬ್ರಹ್ಮಾರ್ಪಣಂ ಬ್ರಹ್ಮಹವಿ..ಸಮಾಧಿನಾ॥ ಹರಿರ್ದಾತಾ..ಭೋಜಯತೇ ಹವಿಃ॥ ತ್ವಾಂ ಯೋಗಿನಶ್ಚಿಂತ್ಯ..ಸ್ವರೂಪಧೃಕ್॥ ಚತುರ್ಭಿಶ್ಚ ..ವಿಷ್ಣುಃ ಪ್ರಸೀದತು। ತತ್ಸದ್ಬ್ರಹ್ಮಾರ್ಪಣಮಸ್ತು**'' ಇತಿ ಜಪಿತ್ವಾ। ಯಥಾಚಾರಂ ಶ್ರಾದ್ಧದೇಶೇ ಸಾಲಗ್ರಾಮಾದಿಕಂ ಸಂಸ್ಥಾಪ್ಯ ತತ್ರ ಮಹಾವಿಷ್ಣುಂ ಧ್ಯಾತ್ವಾ ಪರ್ಣೇ ಯಥಾಚಾರಂ ಪರಿವಿಷ್ಯ ನೈವೇದ್ಯಸಮರ್ಪಣಂ ಕುರ್ಯಾತ್॥

ಅಪಸವ್ಯಮ್। ''**ಈಶಾನವಿಷ್ಣು.. ಪಿತೃಮುಕ್ತಿಹೇತೂನ್॥ ಪಂಚಕ್ರೋಶಂ.. ದತ್ತಮಕ್ಷಯಮ್॥ ಕಾಶಿವಿಶ್ವೇಶ್ವರಾಯ ನಮಃ। ಪುಂಡರೀಕಾಕ್ಷಾಯ ನಮಃ। ಗಯಾಗಧಾಧರಾಯ ನಮಃ**'' ಇತಿ ಜಪಿತ್ವಾ॥ ಸವ್ಯಮ್। ಅನ್ನೇಷು ಮಧು ಸರ್ಪಿರ್ವಾಸಿಚ್ಯ। ''**ಮಧುಮತೀಃ ಶ್ರಾವಯಿಷ್ಯೇ**'' ಇತಿ

---

ಆನಂತರ ಸವ್ಯಮಾಡಿಕೊಂಡು 'ಬ್ರಹ್ಮಾರ್ಪಣಂ..ತತ್ಸದ್ಬ್ರಹ್ಮಾರ್ಪಣಮಸ್ತು' ಎಂದು ಜಪಿಸಿ, ಆಚಾರದಂತೆ ಶ್ರಾದ್ಧದೇಶದಲ್ಲಿ ಸಾಲಗ್ರಾಮವನ್ನಿಟ್ಟು ಮಹಾವಿಷ್ಣುವನ್ನು ಧ್ಯಾನಿಸಿ ಅನ್ನಾದಿದ್ರವ್ಯಗಳನ್ನು ಎಲೆಯಲ್ಲಿ ಬಡಿಸಿ ಸಮರ್ಪಣ ಮಾಡಬೇಕು.

ನಂತರ ಅಪಸವ್ಯ ಮಾಡಿ '**ಈಶಾನವಿಷ್ಣು..ಗಯಾಗದಾಧರಾಯ ನಮಃ**' ಎಂದು ಕೈಜೋಡಿಸಿ ಪ್ರಾರ್ಥಿಸಿ ಸವ್ಯದಿಂದ ಎಲೆಯಲ್ಲಿ ಜೇನು ಅಥವಾ ತುಪ್ಪವನ್ನು ಬಡಿಸಿ '**ಮಧುಮತೀ ಶ್ರಾವಯಿಷ್ಯೇ**' ಎಂದು

ಬ್ರಾಹ್ಮಣಾನ್ಸ್ಪೃಷ್ಟ್ವಾ **''ಓಮ್।ಭೂರ್ಭುವಸ್ವಃ।ತತ್ಸವಿತು+ಯಾತ್''**ಇತಿಜಪಿತ್ವಾ॥ಅಪಸವ್ಯಮ್। **''ಮಧು ವಾತಾ ..ಭವಂತು ನಃ॥ ಮಧು ಮಧು ಮಧು। ಸುಮಧು ಸರ್ವಾನ್ನಂ ಮಧು''** ಇತಿ ಮಧುಮತೀರ್ಜಪಿತ್ವಾ। ಅಪಸವ್ಯಮ್। **''ಏಕೋ ವಿಷ್ಣು..ವಿಶ್ವಭುಗವ್ಯಯಃ। ಪಿತೃಣಾಂ ಸ-ಕೃನ್ಮಹಾಲಶ್ರಾದ್ಧೀಯಬ್ರಾಹ್ಮಣಭೋಜನೇನ ಪಿತ್ರಾದಿಸ್ವರೂಪೀ ಜನಾರ್ದನವಾಸುದೇವಃ ಪ್ರೀಯತಾಮ್॥ಪ್ರೀತೋಭವತು॥ತತ್ಸದ್ಬ್ರಹ್ಮಾರ್ಪಣಮಸ್ತು''** ಇತಿ ಬ್ರಹ್ಮಾರ್ಪಣಂ ಕುರ್ಯಾತ್॥

ವಿಪ್ರಾಃ ನಿತ್ಯಭೋಜನವತ್ ಬಲಿದಾನವರ್ಜಂ ಪರಿಷೇಚನಂ ಕುರ್ಯುಃ। ಸವ್ಯಮ್। ತತಃ ಕರ್ತಾ ಪಿತೃಪೂರ್ವಕಂ ವಿಪ್ರಪಾಣಿಷು ಆಪೋಶನಾರ್ಥಮುದಕಂ ದತ್ವಾ **''ಅಮೃತೋಪಸ್ತರಣಮಸಿ''** ಇತಿ ಬ್ರೂಯಾತ್। ವಿಪ್ರಾ ಆಪೋಶನಂ ಕೃತ್ವಾ ಪ್ರಾಣಾಹುತೀರ್ಗೃಹ್ಣೀಯುಃ। ಕರ್ತಾ ಚ ಪ್ರಾಣಾಹುತಿಮಂತ್ರಾನ್ಪಠೇತ್ **''ಶ್ರದ್ಧಾಯಾಂ ಪ್ರಾಣೇ ನಿವಿಷ್ಟೋಽಮೃತಂ..ಸಮಾನಾಯಸ್ವಾಹಾ॥ ಬ್ರಹ್ಮಣಿಮ ಆತ್ಮಾಮೃತತ್ವಾಯ। ಬ್ರಹ್ಮಣೇ ಸ್ವಾಹಾ। ('ಪ್ರಾಣಾಯಸ್ವಾಹಾ। ಅಪಾನಾಯ ಸ್ವಾಹಾ' ಇತ್ಯೇವಂ ವಾ)''**ಕರಶುದ್ಧಿಃ।

ದಶ ತ್ರಿರ್ವಾ ಗಾಯತ್ರೀಜಪಂ ಕೃತ್ವಾ। **''ಶ್ರದ್ಧಯಾಗ್ನಿಃ..ಶ್ರದ್ಧಾಪಯೇಹ ನಃ''** ಇತ್ಯಾಚಾರಾಜ್ಜಪಿತ್ವಾ॥ **''ಅಪೇಕ್ಷಿತಂ ಯಾಚಿತವ್ಯಂ ..ಸ್ವಸ್ಥಮಾನಸೈಃ॥ ವಿದ್ಯಮಾನಶಾಕಪಾಕಾದಿ ಪದಾರ್ಥೇಷು ಯದ್ರೋಚತೇ ತದ್ಗ್ರಾಹ್ಯಂ ಯನ್ನ ರೋಚತೇ ತತ್ತ್ಯಾಜ್ಯಮ್। ಸುಖೇನೈವ ಭೋಕ್ತವ್ಯಮ್''** ಇತಿ ಬ್ರಾಹ್ಮಣಾನ್ ಸಂಪ್ರಾರ್ಥ್ಯ ಭೋಜನಾಯಾತಿಸೃಜೇತ್॥ **'ಯಥಾಶಕ್ತಿ**

---

ಕೇಳಿಕೊಂಡು ಅವರು ಶ್ರಾವಯ ಎಂದಾಗ. **ಗಾಯತ್ರೀ** ಮಂತ್ರವನ್ನು ಜಪಿಸಿ **'ಮಧುವಾತಾ..ಮಧು'** ಎಂಬಲ್ಲಿ ವರೆಗೆ ಜಪಿಸಬೇಕು. ಪುನಃ ಅಪಸವ್ಯದಿಂದ **'ಏಕೋ ವಿಷ್ಣು..ಬ್ರಹ್ಮಾರ್ಪಣಮಸ್ತು'** ಎಂದು ಬ್ರಹ್ಮಾರ್ಪಣ ಬಿಡಬೇಕು.

ಬ್ರಾಹ್ಮಣರು ನಿತ್ಯಭೋಜನದಂತೆ ಬಲಿದಾನವಿಲ್ಲದೆ ಪರಿಷೇಚನವನ್ನು ಮಾಡಬೇಕು. ಸವ್ಯದಿಂದ ಪಿತೃಪೂರ್ವವಾಗಿ ಬ್ರಾಹ್ಮಣರಿಗೆ ಆಪೋಶನಕ್ಕೆ ನೀರು ಕೊಟ್ಟು **'ಅಮೃತೋಪಸ್ತರಣಮಸಿ'** ಎನ್ನಬೇಕು ಬ್ರಾಹ್ಮಣರು ಆಪೋಶನ ತೆಗೆದುಕೊಂಡು ಕರ್ತೃವು **'ಶ್ರದ್ಧಾಯಾಂ..'** ಇತ್ಯಾದಿ ಜಪಿಸುವಾಗ ಒಂದೊಂದಾಗಿ ಪ್ರಾಣಾಹುತಿಯನ್ನು ತೆಗೆದುಕೊಳ್ಳಬೇಕು. ಆನಂತರ ಎಡಗೈಗೆ ನೀರು ಕೊಟ್ಟು, ಹತ್ತು ಅಥವಾ ಮೂರು ಸಲ ಗಾಯತ್ರೀ ಮಂತ್ರವನ್ನು ಜಪಿಸಿ ಆಚಾರದಂತೆ **'ಶ್ರದ್ಧಯಾಗ್ನಿಃ'** ಎಂಬ ಮಂತ್ರಗಳನ್ನು ಜಪಿಸಿ ಬ್ರಾಹ್ಮಣರನ್ನು ಮುಂದೆ ನಿಂತು **'ಅಪೇಕ್ಷಿತಂ ಯಾಚಿತವ್ಯಂ..'** ಎಂದು ಪ್ರಾರ್ಥಿಸಿ **'ಯಥಾಶಕ್ತಿ ರಾಕ್ಷೋಘ್ನಾ..ಶ್ರಾವಯಿಷ್ಯೇ'** ಎಂದು ಅನುಜ್ಞಾಪಿಸಿ ವಿಪ್ರರು ಭೋಜನ ಮಾಡುತ್ತಿರುವಾಗ ವೈಶ್ವದೇವ ರಾಕ್ಷೋಘ್ನ ಪಿತೃಸೂಕ್ತಾದಿಗಳನ್ನು ಹೇಳಬೇಕು.

**ರಾಕ್ಷೋಘ್ನಾದಿಸೂಕ್ತಾನಿ ಶ್ರಾವಯಿಷ್ಯೇ'** ॥ ತತಃ ಸವ್ಯಾಹೃತಿಕಾಂ ಗಾಯತ್ರೀಂ ಜಪಿತ್ವಾ ಭುಂಜಾನಾನ್ ವೈಶ್ವದೇವರಾಕ್ಷೋಘ್ನಪಿತ್ರ್ಯಾದೀನಿ ಸೂಕ್ತಾನಿ ಶ್ರಾವಯೇತ್।

ಸವ್ಯಮ್। ತತಸ್ತೇಷು ತೃಪ್ತೇಷು ''**ಭೋಜನಾಂತೇ ಕಿಂಚಿದ್ದಧ್ಯೋದನಂ ಗಂಗಾಮೃತಂ ಚ**'' ಇತಿ ಪೃಚ್ಛೇತ್॥ ''**ಸಿದ್ಧಸ್ಯ ಹವಿಷೋ ಮಧ್ಯೇ ಯದ್ರೋಚತೇ ತದ್ಯಾಚಯಧ್ವಮ್**'' ಇತಿ ಪ್ರಾರ್ಥಯೇತ್॥ ''**ವಿಶ್ವೇದೇವಾಃ ತೃಪ್ತಾಸ್ಥ**''॥ ಅಪಸವ್ಯಮ್॥ ''**ಪಿತ್ರಾದಯಃ ತೃಪ್ತಾಸ್ಥ**''। ಸವ್ಯಮ್। ''**ಮಧುಮತೀಃ ಶ್ರಾವಯಿಷ್ಯೇ**'' ಇತ್ಯುಕ್ತ್ವಾ॥ ''**ಮಧುವಾತಾ ಋತಾಯತೇ..ಮಾಧ್ವೀರ್ಗಾವೋ ಭವಂತು ನಃ**'' ಇತಿ ಜಪಿತ್ವಾ। ಅಪಸವ್ಯಮ್। ''**ಅಕ್ಷನ್ನಮೀಮದನ್ತ..ತೇ ಹರೀ**'' ಇತಿ ಜಪಿತ್ವಾ। ''**ಶ್ರಾದ್ಧಂ ಸಂಪನ್ನಮ್**'' ಇತಿ ವಿಪ್ರಾನ್ಪೃಚ್ಛೇತ್ ಸುಸಂಪನ್ನಂಪ್ರ+॥ ತತಃ ಕರ್ತಾ ಭುಕ್ತಶೇಷಾತ್ಸಾರ್ವವರ್ಣಿಕಮನ್ನಂ ಪಿಂಡಾರ್ಥಂ ಪ್ರಕಿರಣಾರ್ಥಂಚ ಪೃಥಕ್ಪೃಥಗುದ್ಧೃತ್ಯ ಶೇಷಂ ಬ್ರಾಹ್ಮಣೇಭ್ಯೋ ನಿವೇದ್ಯ ''**ಶೇಷಮನ್ನಂ ಕಿಂ ಕ್ರಿಯತಾಮ್**'' ಇತಿ ಪೃಚ್ಛೇತ್। ವಿಪ್ರಾಸ್ತದನ್ನಂ ಸ್ವೀಕುರ್ಯುರಿಚ್ಛಾ ಚೇತ್। ನೋ ಚೇತ್ ''ಇಷ್ಟೈಃ ಸಹ ಭುಜ್ಯತಾಮ್'' ಇತಿ ವದೇಯುಃ।

ತತಃ ಕರ್ತಾ ''**ಉಚ್ಛಿಷ್ಟಭಾಗೇಭ್ಯೋಽನ್ನಂ ದೀಯತಾಮ್**'' ಇತಿ ಬ್ರಾಹ್ಮಣಾನ್ಪ್ರಾರ್ಥಯೇತ್। ತದಾ ಬ್ರಾಹ್ಮಣಾಃ ಭುಕ್ತಾವಶಿಷ್ಟಂ ''**ಯಜಮಾನಕುಲೇ..ಭೂತಲೇ**'' ಇತಿ ಭೂಮೌ ತ್ಯಜೇಯುಃ॥ ಸವ್ಯಮ್॥ ವಿಪ್ರಾಣಾಂ ಪಿತೃಪೂರ್ವಕಂ ಉತ್ತರಾಪೋಶನಾರ್ಥಮುದಕಂ ದತ್ವಾ ''**ಅಮೃತಾಪಿಧಾನಮಸಿ**'' ಇತಿ ಬ್ರೂಯಾತ್। ವಿಪ್ರಾ ಆಪೋಶನಂ ಕೃತ್ವಾಽ

---

ಬ್ರಾಹ್ಮಣರು ಭೋಜನವನ್ನು ಮಾಡಿದ ಮೇಲೆ ಮೇಲೆ '**ಭೋಜನಾಂತೇ..ಗಾಮೃತಂಚ**' ಎಂದು ಪ್ರಾರ್ಥಿಸಿ '**ಸಿದ್ಧಸ್ಯ..ಯಾಚಯದ್ವಂ**' ಎಂದು ಪ್ರಾರ್ಥಿಸಬೇಕು. ಆನಂತರ ಸವ್ಯದಿಂದ '**ವಿಶ್ವೇದೇವಾಃ ತೃಪ್ತಾಸ್ಥ**' ಅಪಸವ್ಯದಿಂದ '**ಪಿತ್ರಾದಯಃ ತೃಪ್ತಾಸ್ಥ**' ಎಂದೂ ಕೇಳಬೇಕು ಆನಂತರ ಶ್ರಾದ್ಧಕರ್ತನು ಸವ್ಯದಿಂದ '**ಮಧುಮತೀ..**' ಶ್ರಾವಯ ಎಂದು ಪ್ರಾರ್ಥಿಸಿ '**ಮಧುವಾತಾ..**' ಮಂತ್ರವನ್ನು ಜಪಿಸಿ, ಅಪಸವ್ಯದಿಂದ '**ಆಕ್ಷನ್ನಮೀ..**' ಮಂತ್ರವನ್ನು ಜಪಿಸಬೇಕು. ಆನಂತರ ಸವ್ಯದಿಂದ '**ಶ್ರಾದ್ಧಂ ಸಂಪನ್ನಂ**' ಪ್ರಾರ್ಥಿಸಿ, '**ಶೇಷಮನ್ನಂ..**' ಎಂದು ಶೇಷಾನ್ನವನ್ನು ನಿವೇದಿಸಬೇಕು. ಬಳಿಕ ಶ್ರಾದ್ಧಕರ್ತನು '**ಉಚ್ಚಿಷ್ಟಭಾ..ದೀಯತಾಂ**'ಎಂದು ಕೇಳಿದಾಗ ವಿಶ್ವೇದೇವರುಭೋಜನಪಾತ್ರದ ಬಲಬದಿಯಲ್ಲೂ ಪಿತೃಗಳು ಎಡಬದಿಯಲ್ಲೂ 'ಯಜಮಾನಕುಲೇ..ಭೂತಲೇ' ಎಂದು ಉಚ್ಚಿಷ್ಟಾನ್ನವನ್ನು ತೆಗೆದಿಡಬೇಕು. ಆನಂತರ ಸವ್ಯದಿಂದ ಪಿತೃಪೂರ್ವವಾಗಿ ಬ್ರಾಹ್ಮಣರಿಗೆ ಉತ್ತರಾಪೋಶನಕ್ಕಾಗಿ ನೀರನ್ನು ಕೊಟ್ಟು '**ಅಮೃತಾಪಿಧಾನಮಸಿ**' ಎಂದು ಹೇಳಬೇಕು ಆಗ ಬ್ರಾಹ್ಮಣರು ಉತ್ತರಾಪೋಶನ ಮಾಡಿ ಕೈಯ್ಯಲ್ಲಿ

ವಶಿಷ್ಟಂ ''**ರೌರವೇ ಪೂಯ..ಮಕ್ಷಯ್ಯಮುಪತಿಷ್ಠತು**'' ಇತಿ ಬಹಿರ್ನಿನಯೇಯುಃ। ತತೋ ವಿಪ್ರಾಃ ಧೃತಪವಿತ್ರಗ್ರಂಥೀ ವಿಸ್ರಸ್ಯೋಚ್ಛಿಷ್ಟಮಂಡಲೇ ನಿಕ್ಷಿಪೇಯುಃ। ಕರ್ತಾ ಬ್ರಾಹ್ಮಣಾನಾಂ ಪಿತೃಪೂರ್ವಕಂ ಗಂಡೂಷಕರಣಹಸ್ತಪ್ರಕ್ಷಾಲನಾಂತಂ ಕಾರಯೇತ್॥ ತತಃ ಬ್ರಾಹ್ಮಣೇಷು ಅನಾಚಾಂತೇಷ್ವಾಚಾನ್ತೇಷು ವಾ ಸಾಂವತ್ಸರಿಕಶ್ರಾದ್ಧಕಲ್ಪೇನ ಪಿಂಡಪ್ರದಾನಂ ಕುರ್ಯಾತ್ ವಿಶೇಷಸ್ತೂಚ್ಯತೇ। ಅತ್ರಾಸ್ಮಾಭಿಃ 'ಅನಾಚಾಂತ'ಪಕ್ಷಮಾಶ್ರಿತ್ಯ ಪ್ರಯೋಗಃ ಪ್ರದರ್ಶಿತಃ॥ (ಆಚಾಂತೇಷು ಪಿಂಡದಾನಮಿತಿ ಪಕ್ಷೇ ಉತ್ತರಾಪೋಶನದಾನಾಂತೇ ಗಂಡೂಷಕರಣಹಸ್ತಪ್ರಕ್ಷಾಲನಾಂತಂ ಕಾರಯಿತ್ವಾ ತೇಷ್ವಾಚಾಂತೇಷು ಸ್ವಯಮಪ್ಯಾಚಮ್ಯ, ಪಿಂಡಾನ್ ದತ್ವಾ ವಿಕಿರಪ್ರಕಿರೇ ದದ್ಯಾತ್। ಪಕ್ಷದ್ವಯೇಽಪಿ ಪಿಂಡದಾನಾಂತ ಏವ ವಿಕಿರಪ್ರಕಿರದಾನಮ್॥ )

ಭುಕ್ತಶೇಷಾದುದ್ಧೃತಂ ಸಾವರ್ಣಿಕಮನ್ನಂ ಘೃತಮಧುತಿಲೈಃ ಸಂಮಿಶ್ರ್ಯ ಪಿಂಡಾನ್ಕೃತ್ವಾ ಪಿಂಡದಾನಂ ಕುರ್ಯಾತ್ತದ್ಯಥಾ; ಸವ್ಯಮ್। ''**ಅದ್ಯ ಪೂರ್ವೋಚ್ಚರಿತ..ತಿಥೌ ಸಕೃನ್ಮಹಾಲಯಶ್ರಾದ್ಧೇ ತಿಲೋದಕಪಿಂಡಪ್ರದಾನಂ ಕರಿಷ್ಯೇ**''। ಅಪಸವ್ಯಮ್॥ ದ್ವಿಜೋಚ್ಛಿಷ್ಟಸಮೀಪೇ ಸ್ಫ್ಯೇನ ದರ್ಭಮೂಲೇನ ವಾ ಪಿತೃವರ್ಗಾರ್ಥಮಾಗ್ನೇಯೀಸಂಸ್ಥಾಂ

---

ಸ್ವಲ್ಪ ನೀರನ್ನುಳಿಸಿಕೊಂಡು '**ರೌರವೇ ಪೂಯನಿಲಯೇ..**' ಎಂಬ ಮಂತ್ರವನ್ನುಚ್ಚರಿಸಿ ಎಲೆಯಿಂದ ಹೊರಗೆ ಪಿತೃತೀರ್ಥದಿಂದ ಚೆಲ್ಲಬೇಕು. ಆನಂತರ ಬ್ರಾಹ್ಮಣರು ಕೈಯ್ಯಲ್ಲಿ ಧರಿಸಿದ ಪವಿತ್ರವನ್ನು ಬಿಚ್ಚಿ ಎಲೆಯಬಳಿಹಾಕಬೇಕು. ಆನಂತರ ಕರ್ತೃವು ಬ್ರಾಹ್ಮಣರಿಗೆ ಪಿತೃಪೂರ್ವಕ ಕೈಕಾಲು ತೊಳೆಯಲು ನೀರನ್ನು ಕೊಡಬೇಕು. ತದನಂತರ ಬ್ರಾಹ್ಮಣರ ಆಚಮನದ ಮೊದಲು ಅಥವಾ ಆನಂತರ ಪಿಂಡದಾನವನ್ನು ಮಾಡಬೇಕು. ಇಲ್ಲಿ 'ಅನಾಚಾಂತ' ಪಕ್ಷವನ್ನಾಶ್ರಯಿಸಿ ಪ್ರಯೋಗವು ಕೊಡಲ್ಪಟ್ಟಿದೆ.

ಆಚಮನಪೂರ್ವದಲ್ಲಿ ಪಿಂಡದಾನಮಾಡುವುದಿದ್ದರೆ ಕ್ರಮ; 'ಉತ್ತರಾಪೋಶದಾನ, ಪಾದ ಪ್ರಕ್ಷಾಳನ, ಗಂಡೂಷ, ಪಿಂಡಪ್ರದಾನ, ಬ್ರಾಹ್ಮಣರು ಆಚಮನ, ಕರ್ತೃ ಆಚಮನ, ವಿಕಿರಪ್ರಕಿರದಾನ'. ಆಚಮನಾಂತಪಿಂಡಪ್ರದಾನಪಕ್ಷದಲ್ಲಿ; 'ಉತ್ತರಾಪೋಶದಾನ, ಪಾದಪ್ರಕ್ಷಾಳನ, ಗಂಡೂಷದಾನ, ವಿಪ್ರಾಚಮನ, ಕರ್ತೃ ಆಚಮನ, ಪಿಂಡಪ್ರದಾನ, ವಿಕಿರಪ್ರಕಿರದಾನ' ಪಕ್ಷದ್ವಯದಲ್ಲೂ ಪಿಂಡಪ್ರದಾನಾಂತದಲ್ಲೇ ವಿಕಿರಪ್ರಕಿರದಾನವು ಯುಕ್ತ.

ಭುಕ್ತಶೇಷಾನ್ನವನ್ನು ತೆಗೆದುಕೊಂಡು ಅದಕ್ಕೆ ತುಪ್ಪಜೇನು,ಎಳ್ಳುಗಳನ್ನು ಬೆರೆಸಿ ಪಿಂಡಗಳನ್ನು ಮಾಡಿಕೊಳ್ಳಬೇಕು ಆನಂತರ ಆಸನದಲ್ಲಿ ಕುಳಿತು '**ಅದ್ಯ ಪೂರ್ವೋ..ಕರಿಷ್ಯೇ**' ಎಂದು ಸಂಕಲ್ಪಿಸಿ ಆಗ್ನೇಯಾಭಿಮುಖನಾಗಿ ಕುಳಿತು ಮರದಕತ್ತಿ ಅಥವಾ ದರ್ಭೆಯ ಮೂಲಭಾಗದಿಂದ ಭೂಮಿಯಲ್ಲಿ

ರೇಖಾಮುಲ್ಲಿಖ್ಯ ತತ್ಪಶ್ಚಾನ್ಮಾತೃವರ್ಗಾರ್ಥಂ (ಕೇವಲಸಾಪತ್ನಮಾತೃಪಕ್ಷೇ ತಸ್ಯಾರ್ಥಂ ವಾ), ತತ್ಪಶ್ಚಾನ್ಮಾತಾಮಹವರ್ಗಾರ್ಥಂ ತತ್ಪಶ್ಚಾನ್ಮಾತಾಮಹೀವರ್ಗಾರ್ಥಂ ಚ ತತ್ಪಶ್ಚಾತ್ ಸರ್ವೈಕೋದ್ದಿಷ್ಟಾರ್ಥಂ ದೀರ್ಘಾಂ ಲೇಖಾಮಲಿಖೇತ್। ಅಪಿ ವಾಗ್ನೇಯೀಸಂಸ್ಥಾ ದಕ್ಷಿಣಾಪವರ್ಗಾಃ ಪಂಚಲೇಖಾ ಆಲಿಖೇತ್। ಕೇಚಿತ್ ಪ್ರತ್ಯೇಕೋದ್ದಿಷ್ಟಮೇಕೈಕಾಂ ಲೇಖಾಮಿತ್ಯೇವಂ ಪಂಕ್ತ್ಯಾಕಾರೇಣ ಲೇಖಾ ಲೇಖನೀಯೇತ್ಯಾಹುಃ ''**ಅಪಹತಾ ಅಸುರಾ ರಕ್ಷಾಂಸಿ ವೇದಿಷದಃ**'' ಇತಿ ಮನ್ತ್ರಾವೃತ್ತ್ಯಾ ರೇಖಾಃ ಲಿಖಿತ್ವಾ ರೇಖಾ ಅಭ್ಯುಕ್ಷ್ಯ, ಸಕೃದಾಚ್ಛಿನ್ನೈರ್ದರ್ಭೈಃ ಪ್ರಾಗ್ದಕ್ಷಿಣಾಗ್ರೈರವಸ್ತೀರ್ಯ। ಸಕೃದಾಚ್ಛಿನ್ನಾಸ್ತೃತಾಸು ಲೇಖಾಸು ಪಿಂಡದೇಶೇಷು ಪಿತೃತೀರ್ಥೇನ ತಿಲೋದಕಂ ನಿನಯೇತ್ ''**ಶುಂಧಂತಾಂ ಪಿತರಃ। ಶುಂಧಂತಾಂ ಪಿತಾಮಹಾಃ। ಶುಂಧಂತಾಂ ಪ್ರಪಿತಾಮಹಾಃ**'' ಇತಿ ಪ್ರಥಮಲೇಖಾಯಮ್॥ ''**ಶುಂಧಂತಾಂ ಮಾತರಃ। ಶುಂಧಂತಾಂ ಪಿತಾಮಹ್ಯಃ। ಶುಂಧಂತಾಂ ಪ್ರಪಿತಾಮಹ್ಯಃ॥ ಶುಂಧಂತಾಂ ಸಾಪತ್ನಮಾತರಃ**'' ಇತಿ ದ್ವಿತೀಯಲೇಖಾಯಾಮ್ (ಸಾಪತ್ನಿಮಾತೃಬಹುತ್ವೇ ತತ್ತತ್ಸಂಖ್ಯಾಕ ಮಾರ್ಜನಾವೃತ್ತಿಃ। ಸರ್ವಾಸಾಂ ಮಾತೃಣಾಂ ಏಕ ಏವ ಪಿಂಡ ಇತಿ ಪಕ್ಷೇ ಮಾತೃಪಿಂಡಸ್ಥಾನ ಏವ ಮಾರ್ಜನಾವೃತ್ತಿಃ)॥ ''**ಶುಂಧಂತಾಂ ಮಾತಾಮಹಾಃ। ಶುಂಧಂತಾಂ ಮಾತುಃಪಿತಾಮಹಾಃ। ಶುಂಧಂತಾಂ ಮಾತುಃಪ್ರಪಿತಾಮಹಾಃ**'' ಇತಿ ತೃತೀಯಲೇಖಾಯಾಮ್॥ **ಶುಂಧಂತಾಂ**

---

ಪಿತೃವರ್ಗಕ್ಕಾಗಿ '**ಅಪಹತಾ..ವೇದಿಷದಃ** ' ಎಂದು ಆಗ್ನೇಯಾಗ್ರಗೆರೆಯನ್ನು ಎಳೆಯಬೇಕು ಅದರ ಪಶ್ಚಿಮಭಾಗದಲ್ಲಿ ಮಾತೃವರ್ಗಕ್ಕಾಗಿಯೂ (ತಾಯಿಜೀವಿಸಿದ್ದು, ಕೇವಲಸಾಪತ್ನಮಾತೃಪಕ್ಷದಲ್ಲಿ ಆಕೆಗಾಗಿ) ಆಗೆರೆಯ ಪಶ್ಚಿಮದಲ್ಲಿ ಮಾತಾಮಹವರ್ಗಕ್ಕೂ ಅದರ ಪಶ್ಚಿಮದಲ್ಲಿ ಮಾತಾಮಹೀವರ್ಗಕ್ಕೂ ಅದರ ಪಶ್ಚಿಮದಲ್ಲಿ ಏಕೋದ್ದಿಷ್ಟರಿಗಾಗಿ ದೀರ್ಘವಾದ ಗೆರೆಯನ್ನು ಮಂತ್ರಾವೃತ್ತಿಯಿಂದ ಎಳೆಯಬೇಕು ಅಥವಾ ಅಗ್ನೇಯ್ಯಾಗ್ರವಾದ ದಕ್ಷಿಣಾಂತ ಐದು ರೇಖೆಗಳನ್ನು ಮಾಡಬೇಕು. (ಕೆಲವರು ಏಕೋದ್ದಿಷ್ಟರಿಗೂ ಸಾಲಾದ ಪ್ರತ್ಯೇಕ ರೇಖೆಗಳನ್ನು ಎಳೆಯಬೇಕೆನ್ನುವರು.) ಅಲ್ಲಿ ಕೂರ್ಚದಿಂದ ಪ್ರೋಕ್ಷಿಸಿ ಆಗ್ನೇಯ ದಿಕ್ಕಿಗೆ ತುದಿಗಳಿರುವಂತ ದರ್ಭೆಗಳನ್ನು ಅದರ ಮೇಲೆ ಹರಡಿ '**ಶುಂಧಂತಾಂ ಪಿತರಃ..**' ಇತ್ಯಾದಿ ಮೂರು ಮಂತ್ರಗಳಿಂದ ಪ್ರಥಮರೇಖೆಯಲ್ಲಿ ಮಾರ್ಜನಗಳನ್ನು ಮಾಡಬೇಕು, '**ಶುಂಧಂತಾಂ ಮಾತರಃ..**' ಇತ್ಯಾದಿ ಮಂತ್ರಗಳಿಂದ ದ್ವಿತೀಯರೇಖೆಯಲ್ಲಿ ಮಾರ್ಜನಗಳನ್ನು ಮಾಡಿ '**ಶುಂಧಂತಾಂ ಸಾಪತ್ನಮಾತರಃ**' ಎಂದು ಮಾತೃಮಾರ್ಜನಸಮೀಪದಲ್ಲಿ ಮಾರ್ಜನಮಾಡಬೇಕು(ಸಾಪತ್ನಮಾತೃಗಳಿಗೆ ಪ್ರತ್ಯೇಕ ಪಿಂಡದಾನ ಮಾಡುವುದಿದ್ದು, ಅನೇಕರಿದ್ದರೆ ಪ್ರತ್ಯೇಕ ಮಂತ್ರಾವೃತ್ತಿಯಿಂದ ಮಾರ್ಜನಾವೃತ್ತಿ. ಸರ್ವಮಾತೃಗಳಿಗೂ ಸೇರಿ ಒಂದೇ ಪಿಂಡವೆಂಬ ಪಕ್ಷದಲ್ಲಿ ಮಾತೃಸ್ಥಾನದಲ್ಲೇ ಮಾರ್ಜನಾವೃತ್ತಿ). '**ಶುಂಧಂತಾಂ ಮಾತಾಮಹಾಃ..**' ಇತ್ಯಾದಿ ಮಂತ್ರಗಳಿಂದ ತೃತೀಯ ರೇಖೆಯಲ್ಲಿಯೂ, '**ಶುಂಧಂತಾಂ**

**ಮಾತಾಮಹ್ಯಃ। ಶುಂಧಂತಾಂ ಮಾತುಃ ಪಿತಾಮಹ್ಯಃ। ಶುಂಧಂತಾಂ ಮಾತುಃ ಪ್ರಪಿತಾಮಹ್ಯಃ''** ಇತಿ ತುರೀಯಲೇಖಾಯಾಮಿತ್ಯನ್ತಂ ಮಾರ್ಜಯಿತ್ವಾ॥

ಏಕೋದ್ದಿಷ್ಟಾರ್ಥಾಯಾಂ ಲೇಖಾಯಾಂ ಕ್ರಮೇಣ ಮಾರ್ಜಯೇತ್ ತತ್ರ ಮಂತ್ರಾಃ; **''ಶುಂಧಂತಾಂ ಪತ್ನ್ಯಃ, ಶುಂಧಂತಾಂ ಪುತ್ರಾಃ, ಶುಂಧಂತಾಂ ದುಹಿತರಃ, ಶುಂಧಂತಾಂ ಪಿತೃವ್ಯಾಃ, ಶುಂಧಂತಾಂ ಮಾತುಲಾಃ, ಶುಂಧಂತಾಂ ಭ್ರಾತರಃ, ಶುಂಧಂತಾಂ ಪಿತೃಭಗಿನ್ಯಃ, ಶುಂಧಂತಾಂ ಮಾತೃಭಗಿನ್ಯಃ, ಶುಂಧಂತಾಮಾತ್ಮಭಗಿನ್ಯಃ, ಶುಂಧಂತಾಂ ಶ್ವಶುರಾಃ, ಶುಂಧಂತಾಂ ಗುರವಃ, ಶುಂಧಂತಾಂ ಶಿಷ್ಯಾಃ, ಶುಂಧಂತಾಮಾಪ್ತಾಃ''** ಪತ್ನ್ಯಾದಿಬಹುತ್ವೇ ತು ತತ್ತತ್ಸಂಖ್ಯಯಾ ತತ್ತನ್ಮಂತ್ರಸ್ಯಾವೃತ್ತಿಃ॥

ಮಾರ್ಜನಕ್ರಮೇಣ ಪಿಂಡಾನ್ ದದ್ಯಾತ್ **''ಏತತ್ತೇ ಪಿತಃ ..ಶರ್ಮನ್ ..ಗೋತ್ರ ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ। (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಪಿತ್ರೇ ..ಶರ್ಮಣೇ ..ಗೋತ್ರಾಯ ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ / ಏತತ್ತೇ ಪಿತಾಮಹ ..ಶರ್ಮನ್ ..ಗೋತ್ರ ರುದ್ರರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ। (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಪಿತಾಮಹಾಯ ..ಶರ್ಮಣೇ ..ಗೋತ್ರಾಯ ರುದ್ರರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ ಏತತ್ತೇ ಪ್ರಪಿತಾಮಹ ..ಶರ್ಮನ್ ..ಗೋತ್ರ ಆದಿತ್ಯರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ। (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಪ್ರಪಿತಾಮಹಾಯ ..ಶರ್ಮಣೇ ..ಗೋತ್ರಾಯ ಆದಿತ್ಯರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ''** ಇತಿ ಪ್ರಥಮಲೇಖಾಯಾಂ ಮಾರ್ಜನಕ್ರಮೇಣ ದತ್ವಾ॥

**''ಏತತ್ತೇ ಮಾತಃ ..ದೇ ..ಗೋತ್ರೇ ವಸುರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮನ್ಮಾತ್ರೇ ..ದಾಯೈ ..ಗೋತ್ರಾಯೈ ವಸುರೂಪಾಯೈ ಅಯಂ ಪಿಂಡೋ**

---

**ಮಾತಾಮಹ್ಯಃ..'** ಇತ್ಯಾದಿ ಮಂತ್ರಗಳಿಂದ ಚತುರ್ಥರೇಖೆಯಲ್ಲಿಯೂ ಮಾರ್ಜನವನ್ನು ಮಾಡಬೇಕು. ಏಕೋದ್ದಿಷ್ಟಕ್ಕಾಗಿರಿಸಿದ ರೇಖೆಯ ಮೇಲೆ **'ಶುಂಧಂತಾಂ ಪತ್ನ್ಯಃ'** ಇತ್ಯಾದಿ ಮಂತ್ರಗಳಿಂದ ಮಾರ್ಜನಗಳನ್ನು ಮಾಡಬೇಕು. ಪತ್ನ್ಯಾದಿಗಳು ಅನೇಕರಿದ್ದರೆ ಪ್ರತಿಯೊಬ್ಬರಿಗೂ ಪ್ರತ್ಯೇಕ ಮಾರ್ಜನ, ಆನಂತರ ಮೊದಲನೆಯ ರೇಖೆಯಮೇಲೆ ಮಾರ್ಜನಕ್ರಮದಿಂದ **'ಏತತ್ತೇ ಅಸ್ಮತ್ಪಿತಃ..'** ಇತ್ಯಾದಿಯಾಗಿ ಪಿಂಡಪ್ರದಾನವನ್ನು ಮಾಡಿ ಆಚಾರದಂತೆ **'ಅಸ್ಮತ್ ಪಿತ್ರೇ.., ತತ್ಸದ್ಗಯಾಯಾಂ..'** ಇತ್ಯಾದಿ ತ್ಯಾಗವನ್ನು ಹೇಳಬೇಕು. ಎರಡನೆಯ ರೇಖೆಯಲ್ಲಿ ಮಾರ್ಜನ ಕ್ರಮದಲ್ಲಿ **''ಏತತ್ತೇ ಮಾತಃ..''** ಇತ್ಯಾದಿ ಹೇಳುತ್ತ

**ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ ಏತತ್ತೇ ಪಿತಾಮಹಿ ..ದೇ ..ಗೋತ್ರೇ ರುದ್ರರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಪಿತಾಮಹ್ಯೈ ..ದಾಯ್ಯೈ ..ಗೋತ್ರಾಯ್ಯೈ ರುದ್ರರೂಪಾಯ್ಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ಏತತ್ತೇ ಪ್ರಪಿತಾಮಹಿ ..ದೇ ..ಗೋತ್ರೇ ಆದಿತ್ಯರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಪ್ರಪಿತಾಮಹ್ಯೈ ..ದಾಯ್ಯೈ ..ಗೋತ್ರಾಯ್ಯೈ ಆದಿತ್ಯರೂಪಾಯ್ಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ ಏತತ್ತೇ ಸಾಪತ್ನಮಾತಃ ..ದೇ ..ಗೋತ್ರೇ ವಸುರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ಸಾಪತ್ನಮಾತ್ರೇ ..ದಾಯ್ಯೈ ..ಗೋತ್ರಾಯ್ಯೈ ವಸುರೂಪಾಯ್ಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥** (ಸರ್ವಾಸಾಂ ಮಾತೄಣಾಂ ಏಕ ಏವ ಪಿಂಡ ಇತಿ ಪಕ್ಷೇ; ಮಾತೃದ್ವಿತ್ವೇ ''ಏತದ್ವಾಂ ಮಾತರೌ ..ದೇ/..ದೇ ..ಗೋತ್ರೇ ವಸುರೂಪೇ ಯೇ ಚ ಯುವಾಮತ್ರಾನು..'' ಇತಿ ಪಿಂಡಂ ದತ್ವಾ ''ಅಸ್ಮನ್ಮಾತೃಭ್ಯಾಂ ..ದಾಭ್ಯಾಂ ..ಗೋತ್ರಾಭ್ಯಾಂ ..ವಸುರೂಪಾಭ್ಯಾಮಯಂ ಪಿಂಡೋ..'' ಇತಿ ತ್ಯಾಗಃ॥ ಮಾತೃ ಬಹುತ್ವೇ; ''ಏತದ್ವೋ ಮಾತರೋ ..ದೇ/ ..ದೇ/..ದೇ ..ಗೋತ್ರಾಃ ಯೇ ಚ ಯುಷ್ಮಾನತ್ರಾನು..'' ಇತ್ಯೇಕಂ ಪಿಂಡಂ ದತ್ವಾ। ''ಅಸ್ಮನ್ಮಾತೃಭ್ಯಃ .., .., ..ದಾಭ್ಯಃ ..ಗೋತ್ರಾಭ್ಯಃ ವಸುರೂಪಾಭ್ಯಃ ಅಯಂ ಪಿಂಡೋ .. ಇತಿ ತ್ಯಾಗಃ॥) ಇತಿ ದ್ವಿತೀಯಲೇಖಾಯಾಂ ಮಾರ್ಜನಕ್ರಮೇಣ ದತ್ವಾ॥

**''ಏತತ್ತೇ ಮಾತಾಮಹ ..ಶರ್ಮನ್ ..ಗೋತ್ರ ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ। (ಅಯಂತೇಪಿಂಡಃಸ್ವಧಾ)।ಅಸ್ಮನ್ಮಾತಾಮಹಾಯ..ಶರ್ಮಣೇ..ಗೋತ್ರಾಯವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ ಏತತ್ತೇ ಮಾತುಃಪಿತಾಮಹ ..ಶರ್ಮನ್ ..ಗೋತ್ರ ರುದ್ರರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ। (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಮಾತುಃಪಿತಾಮಹಾಯ ..ಶರ್ಮಣೇ ..ಗೋತ್ರಾಯ ರುದ್ರರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ ಏತತ್ತೇ ಮಾತುಃಪ್ರಪಿತಾಮಹ**

---

ಮಾತ್ರಾದಿಗಳಿಗೆ ಪಿಂಡದಾನವನ್ನು ಮಾಡುವುದು. ಆನಂತರ **''ಏತತ್ತೇ ಸಾಪತ್ನಮಾತಃ..''** ಎಂದು ಮಲತಾಯಿಯರಿಗೆ ಪ್ರತ್ಯೇಕವಾಗಿ ಪಿಂಡಪ್ರದಾನವನ್ನು ಮಾಡುವುದು. (ಸರ್ವಮಾತೃಗಳಿಗೆ ಒಂದೇ ಪಿಂಡವೆಂಬ ಪಕ್ಷದಲ್ಲಿ **'ಏತದ್ವಾಸ್ಮನ್ಮಾತರೌ, ಏತದ್ವೋಽಸ್ಮನ್ಮಾತರೋ'** ಇತ್ಯಾದಿ ದ್ವಿವಚನ ಬಹುವಚನಾದಿ ಊಹದೊಂದಿಗೆ ಪಿಂಡಪ್ರದಾನವನ್ನು ಮಾಡುವುದು.) ಮೂರನೆಯ ರೇಖೆಯಲ್ಲಿ ಮಾರ್ಜನ ಕ್ರಮದಲ್ಲಿ **''ಏತತ್ತೇ ಮಾತಾಮಹ..''** ಇತ್ಯಾದಿಯಾಗಿಯೂ, ನಾಲ್ಕನೆಯ ರೇಖೆಯಲ್ಲಿ **''ಏತತ್ತೇ ಮಾತಾಮಹೀ''** ಇತ್ಯಾದಿಯಾಗಿಯೂ ಪಿಂಡದಾನವನ್ನು ಮಾಡುವುದು.

**..ಶರ್ಮನ್ ..ಗೋತ್ರ ಆದಿತ್ಯರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ। (ಅಯಂ ತೇ ಪಿಂಡಃ ಸ್ವಧಾ)। ಅಸ್ಮನ್ಮಾತುಃ ಪ್ರಪಿತಾಮಹಾಯ ..ಶರ್ಮಣೇ ..ಗೋತ್ರಾಯ ಅದಿತ್ಯರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ''** ಇತಿ ತೃತೀಯಲೇಖಾಯಾಂ ಮಾರ್ಜನಕ್ರಮೇಣ ದತ್ವಾ॥

**''ಏತತ್ತೇ ಮಾತಾಮಹಿ ..ದೇ ..ಗೋತ್ರೇ ವಸುರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮನ್ಮಾತಾಮಹ್ಯೈ ..ದಾಯೈ ..ಗೋತ್ರಾಯೈ ವಸುರೂಪಾಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ ಏತತ್ತೇ ಮಾತುಃಪಿತಾಮಹಿ ..ದೇ ..ಗೋತ್ರೇ ರುದ್ರರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಮಾತುಃಪಿತಾಮಹ್ಯೈ ..ದಾಯೈ ..ಗೋತ್ರಾಯೈ ರುದ್ರರೂಪಾಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ/ ಏತತ್ತೇ ಮಾತುಃಪ್ರಪಿತಾಮಹಿ ..ದೇ ..ಗೋತ್ರೇ ಆದಿತ್ಯರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ ಮಾತುಃಪ್ರಪಿತಾಮಹ್ಯೈ ..ದಾಯೈ ..ಗೋತ್ರಾಯೈ ಆದಿತ್ಯರೂಪಾಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥''** ಇತಿ ತುರೀಯಲೇಖಾಯಾಂ ಮಾರ್ಜನಕ್ರಮೇಣ ದತ್ವಾ॥

**''ಏತತ್ತೇ ಪತ್ನಿ ..ದೇ ..ಗೋತ್ರೇ ವಸುರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ಪತ್ನ್ಯೈ ..ದಾಯೈ ..ಗೋತ್ರಾಯೈ ವಸುರೂಪಾಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥**

**ಏತತ್ತೇ ಪುತ್ರ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ(ಅಯಂತೇಪಿಂಡಃಸ್ವಧಾ)।ಅಸ್ಮತ್ಪುತ್ರಾಯ..ಶರ್ಮಣೇ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥**

**ಏತತ್ತೇ ದುಹಿತಃ ..ದೇ ..ಗೋತ್ರೇ ವಸುರೂಪೇ(ಸಭರ್ತೃಕೇ ಸಸುತೇ) ಯೇ ಚ ತ್ವಾಮತ್ರಾನು ತೇಭ್ಯಶ್ಚ(ಅಯಂತೇ ಪಿಂಡಃಸ್ವಧಾ)। ಅಸ್ಮದ್ದುಹಿತ್ರೇ ..ದಾಯೈ ..ಗೋತ್ರಾಯೈ(ಸಭರ್ತೃಕಾಯೈ ಸಸುತಾಯೈ) ವಸುರೂಪಾಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥**

---

ಏಕೋದ್ದಿಷ್ಟಕ್ಕಾಗಿರುವ ಐದನೆಯ ದರ್ಭೆಯಲ್ಲಿ ''ಏತತ್ತೇ ಪತ್ನಿ..'' ಇತ್ಯಾದಿ ಮಂತ್ರಗಳಿಂದ ಪತ್ನ್ಯಾದಿಗಳಿಗೆ ಪಿಂಡದಾನಮಾಡುವುದು (ಪತ್ನ್ಯಾದಿಗಳು ಅನೇಕರಿದ್ದರೆ ಮಂತ್ರಾವೃತ್ತಿಯಿಂದ ಪ್ರತ್ಯೇಕ ಪಿಂಡದಾನ).

ಏತತ್ತೇ ಪಿತೃವ್ಯ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ಪಿತೃವ್ಯಾಯ ..ಶರ್ಮಣೇ ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥

ಏತತ್ತೇ ಮಾತುಲ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮನ್ಮಾತುಲಾಯ ..ಶರ್ಮಣೇ ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥

ಏತತ್ತೇ ಭ್ರಾತಃ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ(ಅಯಂ ತೇ ಪಿಂಡಃ ಸ್ವಧಾ)। ಅಸ್ಮದ್ಭ್ರಾತ್ರೇ ..ಶರ್ಮಣೇ ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥

''ಏತತ್ತೇ ಪಿತೃಭಗಿನಿ ..ದೇ ..ಗೋತ್ರೇ(ಸಭರ್ತೃಕೇ ಸಸುತೇ) ವಸುರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮತ್ಪಿತೃಭಗಿನ್ಯೈ ..ದಾಯ್ಯೈ ..ಗೋತ್ರಾಯ್ಯೈ(ಸಭರ್ತೃಕಾಯ್ಯೈ ಸಸುತಾಯ್ಯೈ) ವಸುರೂಪಾಯ್ಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥

''ಏತತ್ತೇ ಮಾತೃಭಗಿನಿ ..ದೇ ..ಗೋತ್ರೇ(ಸಭರ್ತೃಕೇ ಸಸುತೇ) ವಸುರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮನ್ಮಾತೃಭಗಿನ್ಯೈ ..ದಾಯ್ಯೈ ..ಗೋತ್ರಾಯ್ಯೈ(ಸಭರ್ತೃಕಾಯ್ಯೈ ಸಸುತಾಯ್ಯೈ) ವಸುರೂಪಾಯ್ಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥

''ಏತತ್ತ ಆತ್ಮಭಗಿನಿ ..ದೇ ..ಗೋತ್ರೇ(ಸಭರ್ತೃಕೇ ಸಸುತೇ) ವಸುರೂಪೇ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮದಾತ್ಮಭಗಿನ್ಯೈ ..ದಾಯ್ಯೈ ..ಗೋತ್ರಾಯ್ಯೈ(ಸಭರ್ತೃಕಾಯ್ಯೈ ಸಸುತಾಯ್ಯೈ) ವಸುರೂಪಾಯ್ಯೈ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ॥

''ಏತತ್ತೇ ಶ್ವಶುರ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)। ಅಸ್ಮಚ್ಛ್ವಶುರಾಯ ..ಶರ್ಮಣೇ

**..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ||**

**''ಏತತ್ತೇ ಗುರೋ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ (ಅಯಂ ತೇ ಪಿಂಡಃ ಸ್ವಧಾ)| ಅಸ್ಮದ್ಗುರವೇ ..ಶರ್ಮಣೇ ..ಗೋತ್ರಾಯ ವಸುರೂಪಾಯ(ಸಪತ್ನೀಕಾಯ ಸಸುತಾಯ) ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ||**

**''ಏತತ್ತೇ ಶಿಷ್ಯ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ(ಅಯಂತೇಪಿಂಡಃಸ್ವಧಾ)|ಅಸ್ಮಚ್ಛಿಷ್ಯಾಯ..ಶರ್ಮಣೇ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ||**

**''ಏತತ್ತ ಆಪ್ತ ..ಶರ್ಮನ್ ..ಗೋತ್ರ(ಸಪತ್ನೀಕ ಸಸುತ) ವಸುರೂಪ ಯೇ ಚ ತ್ವಾಮತ್ರಾನು ತೇಭ್ಯಶ್ಚ(ಅಯಂತೇಪಿಂಡಃಸ್ವಧಾ)|ಅಸ್ಮದಾಪ್ತಾಯ..ಶರ್ಮಣೇ..ಗೋತ್ರಾಯ(ಸಪತ್ನೀಕಾಯ ಸಸುತಾಯ) ವಸುರೂಪಾಯ ಅಯಂ ಪಿಂಡೋ ಗಯಾಸ್ಥೋ ದತ್ತೋ ನ ಮಮ ತೇಭ್ಯಶ್ಚ||**

ಏವಂ ತತ್ತನ್ನಾಮಾದ್ಯುಚ್ಚಾರಪೂರ್ವಕಂ ಪಿಂಡಾನ್ದತ್ವಾ. ಅಪ್ತಪಿಂಡಸ್ಯ ಪುರಸ್ತಾತ್ (ಪಿಂಡಾನಾಂ ಚತುರ್ದಿಕ್ಷ್ವಾ) ಚತುರ್ಭಿಮನ್ತ್ರೈಃ ಮಂತ್ರಲಿಂಗೋಕ್ತಪಿತೄನುದ್ದಿಶ್ಯ ಚತುರಃ ಪಿಂಡಾನ್ದದ್ಯಾತ್|

**(1)ಆಬ್ರಹ್ಮಣೋ ಯೇ ಪಿತೃವಂಶಜಾತಾ ಮಾತುಸ್ತಥಾ ವಂಶಭವಾ ಮದೀಯಾಃ| ವಂಶದ್ವಯೇಸ್ಮಿನ್ ಮಮ ದಾಸಭೂತಾ ಭೃತ್ಯಾಸ್ತಥೈವಾಶ್ರಿತಸೇವಕಾಶ್ಚ|| ಮಿತ್ರಾಣಿ ಸಖ್ಯಃ ಪಶವಶ್ಚ ವೃಕ್ಷಾ ದೃಷ್ಟಾಶ್ಚ ಪೃಷ್ಟಾಶ್ಚ ಕೃತೋಪಕಾರಾಃ| ಜನ್ಮಾಂತರೇ ಯೇ ಮಮ ಸಂಗತಾಶ್ಚ ತೇಭ್ಯ ಸ್ಸ್ವಧಾಪಿಂಡಮಹಂ ದದಾಮಿ||**

**(2) ಪಿತೃವಂಶೇ ಮೃತಾ ಯೇ ಚ ಮಾತೃವಂಶೇ ತಥೈವ ಚ| ಗುರುಶ್ವಶುರಬಂಧೂನಾಂ ಯೇ ಚಾನ್ಯೇ ಬಾಂಧವಾಃ ಸ್ಮೃತಾಃ| ಯೇ ಮೇ ಕುಲೇ ಲುಪ್ತಪಿಂಡಾಃ ಪುತ್ರದಾರವಿವರ್ಜಿತಾಃ| ಕ್ರಿಯಾಲೋಪಗತಾಶ್ಚೈವ ಜಾತ್ಯಂಧಾಃ ಪಂಗವಸ್ತಥಾ| ವಿರೂಪಾ ಆಮಗರ್ಭಾಶ್ಚ ಜ್ಞಾತಾಽ ಜ್ಞಾತಾಃ ಕುಲೇ ಮಮ| ಧರ್ಮಪಿಂಡೋ ಮಯಾ ದತ್ತೋ ಹ್ಯಕ್ಷಯ್ಯಮುಪತಿಷ್ಠತು||**

**(3) ಅಸಿಪತ್ರವನೇ ಘೋರೇ ಕುಂಭಿಪಾಕೇ ಚ ಯೇ ಗತಾಃ| ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಮ್||**

---

ಹೀಗೆ ಏಕೋದ್ದಿಷ್ಟರಿಗೂ ಪಿಂಡದಾನವನ್ನಿತ್ತ ಬಳಿಕ ಆಪ್ತ ಪಿಂಡದ ಮೇಲ್ಭಾಗದಲ್ಲಿ ಅಥವಾ ಪಿಂಡಗಳ ನಾಲ್ಕು ಬದಿಗಳಲ್ಲಿ 'ಆಬ್ರಹ್ಮಣೋ, ಪಿತೃವಂಶ, ಅಸಿಪತ್ರವನೇ, ಉಚ್ಛಿನ್ನಕುಲ' ಎಂಬ ನಾಲ್ಕು ಮಂತ್ರಗಳಿಂದ

(4) **ಉಚ್ಛಿನ್ನಕುಲವಂಶಾನಾಂ ಯೇಷಾಂ ದಾತಾ ಕುಲೇ ನ ಹಿ। ಧರ್ಮಪಿಂಡೋ ಮಯಾ ದತ್ತೋ ಹ್ಯಕ್ಷಯ್ಯಮುಪತಿಷ್ಠತು॥ (ಶಮೀಪತ್ರ ಪ್ರಮಾಣೇನ ಪಿಂಡಂ ದದ್ಯಾದ್ಗಯಾಶಿರೇ। ಉದ್ಧರೇತ್ಸಪ್ತಗೋತ್ರಾಣಿ ಕುಲ ಮೇಕೋತ್ತರಂ ಶತಮ್॥)**

ಇತಿ ಪಿಂಡಾನ್ದತ್ವಾ ''**ತತ್ಸದ್ಗಯಾಯಾಂ ವಿಷ್ಣುಪದಾದಿ ಚತುರ್ದಶಪದೇಷು ದತ್ತಮಕ್ಷಯ್ಯಮಸ್ತು**'' **ಇತಿ ಜಪೇತ್**॥ ತತೋ ಲೇಪಭಾಕ್ತೃಪ್ತಯೇ ಹಸ್ತಲೇಪಂ ಪಿಂಡದರ್ಭಮೂಲೇಷು ನಿಮೃಜೇತ್।

ತತಃ ''**ಅತ್ರ ಪಿತರೋ ಮಾದಯಧ್ವಂ ಯಥಾಭಾಗಮಾವೃಷಾಯಧ್ವಮ್**'' ಇತಿ ಪಿಂಡಾನ್ ಸಕೃದನುಮನ್ತ್ರ್ಯ ಸವ್ಯಪಾರ್ಶ್ವೇನೋದಙ್ಙಾವೃತ್ಯಾ ಯಥಾಶಕ್ತಿಪ್ರಾಣಾನ್ನಿಯಮ್ಯ ಅಭಿಪರ್ಯಾವೃತ್ಯ ''**ಅಮೀಮದಂತ ಪಿತರೋ ಯಥಾಭಾಗಮಾವೃಷಾಯಿಷತ**'' ಇತಿ ತಥೈವಾನುಮಂತ್ರ್ಯ। ಚರೋಃ ಪಾಣಭಕ್ಷಂ ಭಕ್ಷಯೇತ್। ಸವ್ಯೇನ ಪಿಂಡಾವಶಿಷ್ಟಂ ಗ್ರಾಸಮಾತ್ರಮನ್ನಮವದಾಯ ಬಹಿರ್ನಿಷ್ಕ್ರಮ್ಯ ತದವಘ್ರಾಯ ತ್ಯಜೇತ್। ಸವ್ಯೇನಾಚಮ್ಯ। ಅಪಸವ್ಯಮ್। ಪುನರ್ಯಥಾಸ್ಥಾನಮುಪವಿಶ್ಯ ಪೂರ್ವವತ್ಪಿಂಡೇಷು ತಿಲೋದಕಂ ದದ್ಯಾತ್ ''**ಶುಂಧಂತಾಂ ಪಿತರಃ..**'' ಇತ್ಯಾದಿಭಿಸ್ತತ್ತನ್ಮಂತ್ರೈಃ॥

ತತಃ ನೀವೀಂ ವಿಸ್ರಸ್ಯ ಪ್ರತಿಪಿಂಡಮಭ್ಯಂಜನಾಂಜನೇ ಪ್ರತ್ಯೇಕಂ ದದ್ಯಾತ್ತದ್ಯಥಾ;''**ಅಸ್ಮತ್ ಪಿತಃ ..ಶರ್ಮನ್ ..ಗೋತ್ರ ವಸುರೂಪ ಅಭ್ಯಂಕ್ಷ್ವ/ಅಂಕ್ಷ್ವ। ಅಸ್ಮತ್ ಪಿತಾಮಹ ..ಶರ್ಮನ್ ..ಗೋತ್ರ ರುದ್ರರೂಪ ಅಭ್ಯಂಕ್ಷ್ವ/ಅಂಕ್ಷ್ವ। ಅಸ್ಮತ್ ಪ್ರಪಿತಾಮಹ ..ಶರ್ಮನ್ ..ಗೋತ್ರ ಆದಿತ್ಯರೂಪ ಅಭ್ಯಂಕ್ಷ್ವ**'॥

---

ಧರ್ಮಪಿಂಡದಾನವನ್ನು ಮಾಡಬೇಕು.''**ತತ್ಸದ್ಗಯಾಯಾಂ..**' ಎಂದು ಹೇಳಬೇಕು ಆನಂತರ ಕೈಗೆ ಅಂಟಿದ ಅನ್ನದ ಲೇಪವನ್ನು ಲೇಪಭಾಕ್ಪಿತೃಗಳ ತೃಪ್ತಿಗಾಗಿ ದರ್ಭೆಗಳ ಬುಡದಲ್ಲಿ ಲೇಪಿಸಬೇಕು. ಬಳಿಕ '**ಅತ್ರ ಪಿತರೋ..**' ಎಂದು ಹೇಳಿ ಪಿಂಡಗಳನ್ನು ಅನುಮಂತ್ರಿಸಿ ಉತ್ತರಾಭಿಮುಖವಾಗಿ ತಿರುಗಿ ಯಥಾಶಕ್ತಿ ಪ್ರಾಣವಾಯುನಿರೋಧ ಮಾಡಿ ಮೊದಲಿನಂತೆ ತಿರುಗಿ ಕುಳಿತುಕೊಂಡು '**ಅಮೀಮದಂತ..**' ಎಂದು ಪಿಂಡಗಳನ್ನು ಅನುಮಂತ್ರಿಸಿ, ಸವ್ಯದಿಂದ ಪಿಂಡಶೇಷವನ್ನು ಆಘ್ರಾಣಿಸಿ ತ್ಯಜಿಸಬೇಕು. ಪುನಃ ಯಥಾಸ್ಥಾನದಲ್ಲಿ ಕುಳಿತು '**ಶುಂಧಂತಾಂ..**' ಇತ್ಯಾದಿ ಮಂತ್ರಗಳನ್ನು ಉಚ್ಚರಿಸಿ ಮೊದಲಿನಂತೆ ಪಿಂಡಗಳ ಮೇಲೆ ತಿಲೋದಕವನ್ನು ಕೊಡಬೇಕು. ಆನಂತರ ನೀವಿಯನ್ನು ವಿಸರ್ಜಿಸಿ ಪಿಂಡಗಳ ಮೇಲೆ ದರ್ಭೆಯಿಂದ ಎಳ್ಳೆಣ್ಣೆ ಅಥವಾ ತುಪ್ಪವನ್ನು ತೆಗೆದುಕೊಂಡು '**ಅಸ್ಮತ್ಪಿತಃ..ಅಭ್ಯಂಕ್ಷ್ವ..**' ಇತ್ಯಾದಿ ಮಂತ್ರಗಳನ್ನುಚ್ಚರಿಸಿ ಪ್ರತ್ಯೇಕವಾಗಿ ಅಭ್ಯಂಜನವನ್ನೀಯಬೇಕು. ಹಾಗೆಯೇ ದರ್ಭೆಯಿಂದ ಕಜ್ಜಲವನ್ನು ತೆಗೆದುಕೊಂಡು '**ಅಸ್ಮತ್ಪಿತಃ..ಅಂಕ್ಷ್ವ..**' ಎಂದು ಅಂಜನವನ್ನೀಯಬೇಕು. ಹೀಗೆ

**‘‘ಅಸ್ಮತ್ ಮಾತಃ .. ದೇ ..ಗೋತ್ರೇ ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಪಿತಾಮಹಿ ..ದೇ ..ಗೋತ್ರೇ ರುದ್ರರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಪ್ರಪಿತಾಮಹಿ ..ದೇ ..ಗೋತ್ರೇ ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಸಾಪತ್ನಮಾತಃ ..ದೇ ..ಗೋತ್ರೇ ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥(ಸರ್ವಾಸಾಂ** ಮಾತೄಣಾಂ ಏಕ ಏವ ಪಿಂಡ ಇತಿ ಪಕ್ಷೇ; ಮಾತೃ ದ್ವಿತ್ವೇ ; ‘‘ಅಸ್ಮತ್ ಮಾತರೌ ..ದೇ/ ..ದೇ/ ..ಗೋತ್ರೇ ವಸುರೂಪೇ ಅಭ್ಯಂಜಾಥಾಂ/ಅಂಜಾಥಾಂ’’ ಇತಿ ದ್ವಿವಚನಾಂತ ಊಹಃ ಕಾರ್ಯಃ॥ ಮಾತೃ ಬಹುತ್ವೇ; ‘‘ಅಸ್ಮತ್ ಮಾತರೋ ..ದೇ/ ..ದೇ/ ..ದೇ/ ..ಗೋತ್ರಾಃ ವಸುರೂಪಾಃ ಅಭ್ಯಂಗ್ಧ್ವಂ/ಅಂಗ್ಧ್ವಂ’ ಇತಿ ಬಹುವಚನೇನ ಅಭ್ಯಂಜನಾಂಜನೇ ದೇಯೇ॥)

**‘‘ಅಸ್ಮತ್ ಮಾತಾಮಹ ..ಶರ್ಮನ್ ..ಗೋತ್ರ ವಸುರೂಪ ಅಭ್ಯಂಕ್ಷ್ವ/ಅಂಕ್ಷ್ವ॥ ‘‘ಅಸ್ಮತ್ ಮಾತುಃಪಿತಾಮಹ ..ಶರ್ಮನ್ ..ಗೋತ್ರ ರುದ್ರರೂಪ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಮಾತುಃಪ್ರಪಿತಾಮಹ ..ಶರ್ಮನ್ ..ಗೋತ್ರ ಆದಿತ್ಯರೂಪ ಅಭ್ಯಂಕ್ಷ್ವ/ಅಂಕ್ಷ್ವ॥**

**‘‘ಅಸ್ಮತ್ ಮಾತಾಮಹಿ ..ದೇ ..ಗೋತ್ರೇ ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಮಾತುಃಪಿತಾಮಹಿ ..ದೇ ..ಗೋತ್ರೇ ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ‘‘ಅಸ್ಮತ್ ಮಾತುಃಪ್ರಪಿತಾಮಹಿ ..ದೇ ..ಗೋತ್ರೇ ಅಭ್ಯಂಕ್ಷ್ವ/ಅಂಕ್ಷ್ವ॥**

**‘‘ಅಸ್ಮತ್ ಪತ್ನಿ ದೇ ..ಗೋತ್ರೇ ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಪುತ್ರ ..ಶರ್ಮನ್ ..ಗೋತ್ರ ವಸುರೂಪ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ದುಹಿತಃ ..ದೇ ..ಗೋತ್ರೇ ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಪಿತೃವ್ಯ ..ಶರ್ಮನ್ ..ಗೋತ್ರ ವಸುರೂಪ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಮಾತುಲ ..ಶರ್ಮನ್ ..ಗೋತ್ರ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಭ್ರಾತಃ ..ಶರ್ಮನ್ ಗೋತ್ರ(ಸಪತ್ನೀಕ ಸಸುತ) ವಸುರೂಪ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಪಿತೃಭಗಿನಿ ..ದೇ ಗೋತ್ರೇ(ಸಭರ್ತೃಕೇ ಸಸುತೇ) ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಮಾತೃಭಗಿನಿ ..ದೇ ಗೋತ್ರೇ(ಸಭರ್ತೃಕೇ ಸಸುತೇ) ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮದಾತ್ಮಭಗಿನಿ ..ದೇ ಗೋತ್ರೇ(ಸಭರ್ತೃಕೇ ಸಸುತೇ) ವಸುರೂಪೇ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಶ್ವಶುರ ..ಶರ್ಮನ್ ಗೋತ್ರ(ಸಪತ್ನೀಕ ಸಸುತ) ವಸುರೂಪ ಅಭ್ಯಂಕ್ಷ್ವ/ಅಂಕ್ಷ್ವ॥ ಅಸ್ಮತ್ ಗುರೋ ..ಶರ್ಮನ್**

---

ಪ್ರತಿಪಿಂಡಕ್ಕೂ ಅಂಜನಾಭ್ಯಂಜನವನ್ನರ್ಪಿಸುವುದು (ಸರ್ವಮಾತೃಗಳಿಗೆ ಒಂದೇ ಪಿಂಡವೆಂಬ ಪಕ್ಷದಲ್ಲಿ ‘ಅಸ್ಮನ್ಮಾತರೌ/ಅಸ್ಮನ್ಮಾತರೋ’ ಇತ್ಯಾದಿ ದ್ವಿವಚನ ಬಹುವಚನಾದಿ ಊಹದೊಂದಿಗೆ ಅಂಜನಾಭ್ಯಂಜನಪ್ರದಾನ)

त्रे "अङ्गुष्ठमुपयमन्पात्रे प्रदक्षिणं दैवे अपसव्यं पित्र्ये" इति ॥ [225]आश्व.गृ.प "ये देवासो दिव्येकादशस्थे'त्युपस्थाय" इति ॥ [226]आश्व.गृ.प "यथालिङ्गमनुदिश्य 'ये चेह पितर' इत्युपस्थाय" इति ॥ [227]याज्ञवल्क्यः "सव्याहृतिं च गायत्रीं मधुवाता इति तृचम्। जप्त्वा यथासुखं वाच्यं भुञ्जीरंस्तेऽपि वाग्यताः" इति। आश्व.गृ.प "अन्नेषु मधु सर्पिर्वासिच्य सप्रणवव्याहृतिं सावित्रीं मधुमतीं च जपित्वा, 'मध्वि'ति त्रिरुक्त्वा" इति ॥ [228]ल.आश्व.स्मृ"न्यूनं चैवातिरिक्तं च मन्त्रादीनां भवेद्यदि। तद्दोषपरिहारार्थं गायत्रीं समुदीरयेत्। ततश्चैवापसव्येन मधुवाता जपेदथ"इति ॥ [229]भरद्वाजः "पितॄणामन्नमादाय बलिं यस्तु प्रयच्छति। स्तेयेन ब्राह्मणास्तेन स सर्वस्तेयकृद्भवेत्"इति ॥ [230]आश्व.गृ.प"पितॄननुस्मृत्यापोशनं प्रदाय ब्राह्मणान्यथासुखं जुषध्वमिति" इति ॥ ल.आश्व.स्मृ"आपोशनार्थमुदकं पितृपूर्वं निवेदयेत्"इति ॥

[231]ಬ್ರಾಹ್ಮಣಭೋಜನಾನಂತರ ಪ್ರಸಕ್ತ ಪ್ರಯೋಗಕ್ರಮವು ೧)ಮಧುಮತೀ ಜಪ, ೨)ಸಂಪನ್ನ ಪ್ರಶ್ನೆ, ೩)ತೃಪಿಪ್ರಶ್ನ ೪)ಶೇಷನಿವೇದನ ಹೀಗಿದೆ ಆದರೆ ಆಶ್ವಲಾಯನರು आश्व.गृ.सू:- "तृप्तान् ज्ञात्वा मधुमतीः श्रावयेदक्षन्नमीमदन्तेति च संपन्न पृष्ट्वा यद्यदन्नमुपभुक्तं ततस्ततः स्थालीपाकेन सह पिण्डार्थमुद्धृत्य शेषं निवेदयेत्"इति ॥ ಎಂಬಂತೆ ಸ್ವಲ್ಪ ವ್ಯತ್ಯಸ್ತ-ಪ್ರಯೋಗವನ್ನು ಸೂಚಿಸಿದ್ದು ಅದರ ಅನುಸರಣೆಯು ಯೋಗ್ಯವಾಗಿದೆ. ಅದರ ಅನುಕ್ರಮಣಿಯು ಹೀಗಿದೆ "೧.ತೃಪಿಪ್ರಶ್ನ, ೨.ಮಧುಮತೀ ಜಪ, ೩.ಸಂಪನ್ನ ಪ್ರಶ್ನೆ, ೪.ಶೇಷನಿವೇದನ" ಆದ್ದರಿಂದ ಚಿಕ್ಕಮಾರ್ಪಾಡಿನ ಅವಶ್ಯಕತೆಯಿದೆ. [232]लघ्वाश्वलायनस्मृतौ "इच्छातृप्तेषु विप्रेषु गायत्रीं समुदीरयेत्। तृप्ताः स्थ इति तान्पृष्ट्वा ह्यपसव्येन पैतृके" इति ॥ आ.गृ.प "अथ तृप्ताञ्ज्ञात्वा 'मधुमतीरक्षन्नमीमदन्ते'ति श्रावयित्वा संपन्नं पृष्ट्वा" इति ॥ [233]स्मृति चन्द्रिकायां "यजमानस्य दासादीन्नुद्दिश्य द्विजसत्तमः। पात्रादन्नं त्यजेद्भूमौ वामभागे तु पैतृके"इति ॥{ಪಿಂಡಪ್ರದಾನಸಂಕಲ್ಪದನಂತರ ಉಚ್ಛಿಷ್ಟಭಾಗಾನ್ನದಾನವು ಆಚಾರದಲ್ಲಿದೆ ಅದಕ್ಕೆ ಅಂಗವೂ ಪೋಷಕವೂ ಅಲ್ಲದ ಉಚ್ಛಿಷ್ಟಭಾಗಾನ್ನದಾನವನ್ನು ಮಧ್ಯದಲ್ಲಿ ಸೇರಿಸುವು-ದಕ್ಕೆ ಕಾರಣಗಳಿಲ್ಲ ಆದ್ದರಿಂದ ಪಿಂಡಪ್ರದಾನಸಂಕಲ್ಪದಪೂರ್ವದಲ್ಲೇ ಅನುಷ್ಠಿಸುವುದು ಯುಕ್ತ.

[234]संग्रहे "विसर्गश्चुलकश्चैव अक्षय्यं पङ्क्तिवारणम्। करशुद्धिरपोशानं पितृपूर्वाणि कारयेत्"इति ॥ शातातपः "विश्वदेवनिविष्टानां चरमं हस्तधावनम्"इति ॥

[235]ಪ್ರಸಕ್ತ ಬ್ರಹ್ಮಕರ್ಮಪ್ರಯೋಗಾನುಸಾರಿಗಳಾದ ನಮ್ಮಲ್ಲಿ ಚಾಲ್ತಿಯಲ್ಲಿರುವ ಕ್ರಮವು ಹೀಗಿದೆ ತೃಪ್ತಿಪ್ರಶ್ನದನಂತರ ೧.ಪಿಂಡಪ್ರದಾನ ಸಂಕಲ್ಪ ೨.ಉಚ್ಛಿಷ್ಟಭಾಗಾನ್ನದಾನ ೩.ಉತ್ತರಾಪೋಶನ-ದಾನ ೪.ಪಿಂಡಪ್ರದಾನ ೫)ವಿಕಿರದಾನ ೬)ಪ್ರಕಿರ(ಉಚ್ಛಿಷ್ಟಪಿಂಡ)ದಾನ ೭)ಆಚಮನ ಪವಿತ್ರಧಾ-ರಣ ಹೀಗಿರುತ್ತದೆ. ಆದರೆ ಈ ಕ್ರಮವು ಆಶ್ವಲಾಯನಸೂತ್ರಾಕಾರರಿಗೆ ಅಭಿಮತವಲ್ಲದ್ದು. ಅದನ್ನು ವಿವರಿಸುವ ಪ್ರಯತ್ನವನ್ನಿಲ್ಲಿ ಮಾಡುವೆವು. ಪಿಂಡಪ್ರದಾನಕ್ಕೆ ಗೃಹ್ಯಸೂತ್ರಗಳು ಬ್ರಾಹ್ಮಣಬೋ-ಜನಾತ್ಪೂರ್ವ, ಬ್ರಾಹ್ಮಣ ಭೋಜನಾನಂತರ, ಬ್ರಾಹ್ಮಣ ವಿಸರ್ಜನಾತ್ಪರ ಎಂಬ ಭಿನ್ನಕಾಲಗಳ-ನ್ನು ಸೂಚಿಸಿವೆ. ಹಾಗಿರುವಾಗ ಆಶ್ವಲಾಯನಾಚಾರ್ಯರು ಗೃಹ್ಯದಲ್ಲಿ "भुक्तवत्स्वनाचान्तेषु पिण्डान्निदध्यात्। आचान्तेष्वेके"ಎನ್ನುವ ವಚನದಮೂಲಕ "ಬ್ರಾಹ್ಮಣಭೋಜನಾನಂತರ ಆಚಮನಾತ್ಪೂರ್ವ ಅಥವಾ ಆಚಮನಾತ್ಪರದಲ್ಲಿ" ಎಂಬ ಎರಡು ಕಾಲವನ್ನು ಸೂಚಿಸಿರುತ್ತಾರೆ. ಇಲ್ಲಿನ "ಆಚಮನ"ಶಬ್ದವನ್ನು ಪ್ರಯೋಗಕಾರರು ಭಿನ್ನರೀತಿಯಲ್ಲಿ ಅರ್ಥೈಸಿರುವುದು ಗಮನಾರ್ಹ. ಅದು ಉತ್ತರಾಪೋಶನಬೋಧಕವೋ ಅಥವಾ ಶುಧ್ಯಾಚಮನಬೋಧಕವೋ ಎನ್ನುವ ಗೋಂ-ದಲಕ್ಕೆ ಬಿದ್ದು ಪ್ರಯೋಗಾಂತರಗಳನ್ನು ಸೃಷ್ಟಿಸಿದ್ದು ನಮಗೆ ಗೊಂದಲವನ್ನುಂಟು ಮಾಡುತ್ತದೆ. ಹಾಗಿರುವಾಗ ಗೃಹ್ಯಪರಿಶಿಷ್ಟಕಾರರ "शेषं निवेद्यानुमते गण्डूषं दत्वा तेष्वाचान्तेष्वना-चान्तेषु वा तदन्नशेषेण पिण्डान्निपृणुयात्" ಎಂಬ ಈ ವಾಕ್ಯವು ನಮ್ಮ ಗೊಂದಲವನ್ನು ನಿವಾರಣೋಪಕಾರಿಯಗಿರುತ್ತದೆ. ಅವರು "(ಬ್ರಾಹ್ಮಣರಿಗೆ) ಗಂಡೂಷವನ್ನಿತ್ತು ಅವರ(ಬ್ರಾಹ್ಮ-ಣರ) ಆಚಮನಾನಂತರವೋ ಮೊದಲೋ ಪಿಂಡಪ್ರದಾನವನ್ನು ಮಾಡುವುದು" ಎಂಬ ಮಾರ್ಗ-ದರ್ಶನವನ್ನಿತ್ತಿರುತ್ತಾರೆ ಅದನ್ನನುಸರಿಸಿ ಆಚಮನಾಂತ ಆಚಮನಾತ್ಪೂರ್ವ ಎಂಬೆರಡು ಕಾಲದ ಪಿಂಡಪ್ರದಾನದ ಅನುಕ್ರಮಣಿಯು ಹೀಗಿದೆ.;- ಆಚಮನಾತ್ಪೂರ್ವ ಪಿಂಡಪ್ರದಾನಪಕ್ಷ. ೧.ಉಚ್ಛಿ-ಷ್ಟಭಾಗಾನ್ನದಾನ ೨.ಪಿಂಡಪ್ರದಾನ ಸಂಕಲ್ಪ ೩.ಪಿಂಡಪ್ರದಾನ ೪.ಉತ್ತರಾಪೋಶನದಾನ, ಗಂಡೂಷ ೫.ಶುದ್ಧ್ಯಾಚಮನ ೬.ವಿಕಿರದಾನ ೭.ಪ್ರಕಿರ(ಉಚ್ಛಿಷ್ಟಪಿಂಡ)ದಾನ|| ಆಚಮನೋತ್ತರ ಪಿಂಡಪ್ರದಾನಪಕ್ಷ ಹೀಗಿದೆ;- ೧.ಉಚ್ಛಿಷ್ಟಭಾಗಾನ್ನದಾನ ೨.ಉತ್ತರಾಪೋಶನದಾನ, ಗಂಡೂಷ ೩.ಶುದ್ಧ್ಯಾಚಮನ ೪.ಪಿಂಡಪ್ರದಾನ ಸಂಕಲ್ಪ ೫.ಪಿಂಡಪ್ರದಾನ ೬.ವಿಕಿರದಾನ ೭.ಪ್ರಕಿರ(ಉ-ಚ್ಛಿಷ್ಟಪಿಂಡ)ದಾನ|| ಈಕ್ರಮಗಳೆರಡೂ ಸಂಪ್ರದಾಯಕ್ಕೆ ವ್ಯತ್ಯಾಸವುಳ್ಳದ್ದಾಗಿ ಕಂಡರೂ ಈ ಬದ-ಲಾವಣೆಗಳು ಅತ್ಯಗತ್ಯವಾಗಿದೆ.

[236]प्रयोगरत्नेऽन्त्येष्टिपद्धतौ "एकोद्दिष्टे सपिण्डे च कपित्थं तु विधीयते। नालिकेरप्रमाणं तु प्रत्यब्दे मासिके तथा॥ तीर्थे दर्शे च सम्प्राप्ते कुक्कुटाण्डप्रमाणतः। महालये गयाश्राद्धे कुर्यादामलकोपमम्" इति॥ [237]चन्द्रिकायां "वज्रेण वा कुशैर्वाऽपि उल्लिखेत्तु महीं द्विजः' इति। वज्रेण स्फ्येनेत्यर्थः। 'वज्रो वै स्फ्यः' इति श्रुतेः। [238]ಗೃಹ್ಯಸೂತ್ರದಲ್ಲಿ ಗೃಹ್ಯಸೂತ್ರದಲ್ಲಿ "एतत्ते अस्मत् पितः --शर्मन् --गोत्र वसुरूप ये च त्वामत्रानु" ಎಂದುಚ್ಚರಿಸಿ ಪಿಂಡಪ್ರದಾನವನ್ನು ಸೂಚಿಸಲ್ಪಟ್ಟಿರುತ್ತದೆ ಮತ್ತು ಪರಿಶಿಷ್ಟದಲ್ಲಿ "वसुरूप ये च त्वामत्रानु"ವಿನ ನಂತರ "तेभ्यश्च" ಎಂಬ ಮಂತ್ರಶೇಷವನ್ನು ಸೇರಿಸಿ "एतत्ते अस्मत् पितः.... त्वामत्रानु तेभ्यश्च' ಎಂದಷ್ಟೇ ಉಚ್ಚರಿಸಿ ಪಿಂಡಪ್ರದಾನವು ವಿಧಿಸಲ್ಪಟ್ಟಿರುವುದು ಗ್ರಾಹ್ಯವಿಷಯ. ಆದರೆ ಇಲ್ಲಿ ಸಂಪ್ರದಾಯದಂತೆ "एतत्ते अस्मत् पितः --शर्मन् --गोत्र वसुरूप ये च त्वामत्रानु। अयं ते पिण्डः स्वधा" ಎಂದುಚ್ಚರಿಸಿ ಪಿಂಡಪ್ರದಾನ ಮಾಡುವ ವಾಡಿಕೆಯಿದೆ. ಮತ್ತು ಇಲ್ಲಿ ಸಂಪ್ರದಾಯದಂತೆ ಸೇರಿಸಲ್ಪಡುವ "ಪಿಂಡ" ಶಬ್ದಕ್ಕೆ "महालये गयायां च प्रेतश्राद्धे दशाहिके। पिण्डशब्दप्रयोगस्यादन्नमन्यत्र कीर्तयेत्" ಎಂಬ ಲೌಗಾಕ್ಷಿಯ ವಚನವು ನಿಷೇಧವನ್ನು ಸೂಚಿಸಿರುವುದು ಗಮನೀಯ ಮತ್ತು ಅಲ್ಲಿ "ಅನ್ನ" ಶಬ್ದವನ್ನು ಬಳಸುವಂತೆ ಸೂಚನೆಯಿದೆ ಹಾಗಾಗಿ ಆಮೂಲಾಗ್ರ ವ್ಯತ್ಯಾಸವನ್ನು ಮಾಡಿ ಗೃಹ್ಯಸೂತ್ರೋಕ್ತ ಮಂತ್ರವನ್ನೋ ಪರಿಶಿಷ್ಟ ಗ್ರಾಹ್ಯ ಮಂತ್ರವನ್ನೋ ಮಾತ್ರ ಬಳಸಿ ಅರ್ಥಾತ್ "एतत्ते अस्मत् पितः.... त्वामत्रानु तेभ्यश्च' ಪಿಂಡಪ್ರದಾನವನ್ನು ಮಾಡುವುದು ಉಚಿತವೆಂದೆಣಿಸುತ್ತದೆ. [239]आचार्यः"पितुः पितामहादूर्ध्वं त्रयः पितरः स्मृताः। ते लेपान्नेन तृप्यन्ति तेषां कार्यं हि तर्पणम्।" [240]"ಅತ್ರಪಿತರೋ..." ಮಂತ್ರದಿಂದ ಪಿಂಡಗಳನ್ನು ತನ್ನೆರಡು ಕೈಗಳಿಂದ ಸರಿಪಡಿಸಬೇಕು ಎಂದು ಪ್ರಯೋಗಪುಸ್ತಕಗಳಲ್ಲಿ ಕಾಣಲ್ಪಡುತ್ತದೆ. ಅದು ಯುಕ್ತವಲ್ಲ ಲ.आश्व.स्मृ "अत्रे'ति चानुमन्त्र्याथ यथावद्वर्तयेदुदक्। अप्रदक्षिणमावर्त्य कुर्याद्वायुनिरोधनम्॥ पुनश्चाऽऽवर्तयेत्तद्व'दमी मदन्त' चैव हि"इति॥ आश्व.गृ.प"अत्रपितरो..ध्वमितिसकृदनुमन्त्र्य सव्यावृदावृत्योदङ्मुखो यथाशक्त्यायतप्राणः प्रत्यावृत्य 'अमीमदन्त..षते'ति पुनरभिमन्त्र्य"इति॥ ಎಂಬ ಇತ್ಯಾದಿ ಸ್ಪಷ್ಟವಾಕ್ಯಗಳು "ಅತ್ರಪಿತತರೋ" ಎಂಬ ಮಂತ್ರದಿಂದ ಪಿಂಡವನ್ನು ಅನುಮಂತ್ರಣವನ್ನು ಮಾಡಿ ನಂತರ ಎಡದ ಬದಿಯಾಗಿ ಉತ್ತರಕ್ಕೆ ತಿರುಗಿ ಪಾಣವಾಯುವನ್ನು ಕಿಂಚಿತ್ಕಾಲ ನಿರೋಧಿಸಿ ಮತ್ತೆ ಮೊದಲಿನಂತೆ ಕುಳಿತು

"ಅಮೀಮದಂತ...." ಮಂತ್ರದಿಂದ ಪುನಃ ಅನುಮಂತ್ರಣೆಯನ್ನು ಮಾಡುವುದು ಯುಕ್ತವಾದದ್ದು. [243]श्राद्धमञ्जर्याम् ;-शुन्धन्तां पितर इति द्वितीय निनयनान्ते कर्तव्यमाहाऽऽचार्यः "ततः सम्यग्दिराचम्य नीवीं विस्रस्य वाग्यत"इति ॥ "पूर्ववन्नीविं विस्रंस्य नमो व इत्यञ्जलिं करोति" इति कात्ययनश्रौतसूत्रेऽपि ॥ [244]एतद्व इति वासोदानां प्रतिपि-ण्डमन्त्रावृत्त्येति केचित्। बहुवचनलिङ्गात्सर्वेभ्यः सकृन्मन्त्रेणेत्यन्ये। [245]वासस्थाने दशामूर्णास्तुकां वा दद्यात् 'दशा वस्त्रस्यान्तप्रदेशः ॥ [246]पूजा सव्यमपसव्येनेति विकल्पः दृश्यते। लघ्वाश्वलायनस्मृतौ तु "सव्येन चार्चयेत् पिण्डान्गन्धपुष्पाक्षता-दिभि" इति वचनादाश्वलायनीनां सव्येनैव पिण्डपूजा युक्ता ॥ [247]व्याघ्रः;-"गन्ध-पुष्पाणि धूपं च दीपं च विनिवेदयेत्" ॥ देवलः;- "दक्षिणां सर्वभोगांश्च प्रतिपिण्डं प्रदापयेत्"इति ॥ [248]ल.आ.स्मृतौ तु "धूपं दीपं च नैवेद्यं ताम्बूलं चैव दक्षिणाम्। दत्वा तिष्ठन्नुपस्थायात्प्राचीनावीतिना ततः"इति ॥ [249] गृ.प "'मनोन्वा हुवामहे' इति तिसृभिरुपस्थायाथ पिण्डस्थान्पितॄन्प्रवाहयेत्। 'परेतन...नियच्छत' इति" ॥ ल.आ.स्मृ. "नमो व इति मन्त्रो वै मनश्चैव पठेदिति। मनोन्विति त्रिभिर्मन्त्रैः किञ्चित्पिण्डान्प्रवाहयेत् ॥ परेतनेति मन्त्रं वै जपेत्पिण्डान्तिके ततः"इति ॥ [250]ಇಲ್ಲಿ "ವೀರಂ ಮೇ ದತ್ತ ಪಿತರ ಇತಿ ಪಿಂಡಾನಾಂ ಮಧ್ಯಮಂ ಪತ್ನೀಂ ಪ್ರಾಶಯೇತ್" ಎಂಬ ಆಶ್ವಲಾ-ಯನ ವಚನವು ಪುತ್ರಕಾಮನೆಯನ್ನುಳ್ಳ ಪುರುಷನು ತನ್ನ ಪತ್ನಿಗೆ "ವೀರಂ ಮೇ ದತ್ತ ಪಿತರಃ" ಎಂದು ಮಂತ್ರವನ್ನುಚ್ಚರಿಸಿ ಮಧ್ಯಮ ಪಿಂಡವನ್ನು ಕೊಡುವ ಮತ್ತು ಪತ್ನಿಯು "ಆಧತ್ತ ಪಿತರೋ.." ಎಂಬ ಮಂತ್ರವನ್ನುಚ್ಚರಿಸಿ ಪಿಂಡವನ್ನು ಪ್ರಾಶನಮಾಡುವ ಪ್ರಯೊಗವು ವಿಧಿಸಲ್ಪಟ್ಟಿರುತ್ತದೆ. ಹಾ-ಗಿರುವಾಗ ಇಲ್ಲಿ ವೀರಂ ದತ್ತ ಪಿತರಃ ಎಂದು ಮಂತ್ರವನ್ನು ಕರ್ತನು ೩ಬಾರಿ ಜಪಿಸಬೇಕೆಂಬ ಪದ್ಧ-ತಿಯು ಕಾಣಲ್ಪಡುತ್ತದೆ. ನಾರಯಣಭಟ್ಟೀಯದ ಗಂಗಾಧರಶಾಸ್ತ್ರ್ಯುದ್ಧೃತ ಪ್ರಯೋಗದಲ್ಲಿ ಒಂದು ಪ್ರಯೋಗ ವಾಕ್ಯವು ಹೀಗಿದೆ "ಗಹ್ಯೇತು ಜಪಾಂತೇ ದಕ್ಷಿಣಾಮುಖ ಉಪವಿಶ್ಯವಿಮಾನಸ್ಥಾನ್ ಪಿ-ತೄನ್ಪಶ್ಯನ್ ಮಂದ್ರಮಧ್ಯೋಚ್ಚಸ್ವರೈರ್ಯಾಚೇತ್| ವೀರಮ್ಮೇ ೩ ಪಿಂಡಾನ್ನಮಸ್ಕೃತ್ಯಪತ್ನ್ಯಾ ಪು-ತ್ರಕಾಮತ್ವೇ ಪೂರ್ವವತ್ಪಿಂಡಂ ಪ್ರಾಶಯೇತ್" ಎಂದು ಅಲ್ಲಿ "ವೀರಂ ಮೇ೩.." ಎಂಬ ವಾಕ್ಯವು ಮಂದ್ರಮಧ್ಯೋಚ್ಚಸ್ವರಗಳಲ್ಲಿ ೩ಬಾರಿ ಜಪಿಸುವಂತೆ ಭ್ರಮೆಯನ್ನುಂಟುಮಾಡುತ್ತದೆ. ಆದರೆ ಕೂ-ಲಂಕುಶವಾಗಿ ವಾಕ್ಯಗಳ ಸರಣಿಯನ್ನು ಗಮನಿಸುವಾಗ ಅಲ್ಲಿ ಮಂತ್ರದ ವಿನಿಯೋಗವೂ ಪ್ರಾಶ-ನಪಕ್ಷದಲ್ಲಿ ಮಾತ್ರ ಎಂಬುದು ಸ್ಪಷ್ಟ. ವಾಸ್ತವಾಂಶ ಹೀಗಿರುವಾಗ ಮಂತ್ರವನ್ನು ಜಪಕ್ಕೆ ಬಳಸುವ

ಪ್ರಕ್ರಿಯೆಯು ಯುಕ್ತವಲ್ಲ. ಒಂದೋ ಮಂತ್ರಕ್ಕೆ ವಿಧಿಸಿರುವಂತೆ ಪಿಂಡಪ್ರಾಶನವನ್ನು ಮಾಡುವುದು ಅಥವಾ ಪಿಂಡಪ್ರಾಶನಮಾಡದಿರುವ ಪಕ್ಷದಲ್ಲಿ ಮಂತ್ರಜಪವನು ತ್ಯಜಿಸುವುದು ಯುಕ್ತ. ಇಲ್ಲಿ ಮಂತ್ರವನ್ನು ೩ಬಾರಿ ಜಪಿಸುವ ಪ್ರಕ್ರಿಯೆಯೂ ಶಿಷ್ಟಾಚಾರಪ್ರಾಪ್ತವೆಂದು ಕಾಣುತ್ತದೆ.
[253]ल.आश्व.स्मृ "पिण्डप्राशनपक्षे तु विशेषः कथ्यतेऽधुना ॥ तावन्न प्राशयेत्पिण्डं न हि श्राद्धविसर्जनम्" इति । [254]आश्व.गृ.प. "यद्यनाचान्तेषु निपृणियादाचान्तानन्वन्नं प्रकिरेत् । अथाऽऽचान्तेषु निपरणमनुप्रकिरेन्न तु पूर्वं निपरणात्प्रकिरेत्"इति ॥ ೨೦೮ ವಚನದಂತೆ ಆಶ್ವಲಾಯನಿಗಳಿಗೆ ಆಚಮನಾತ್ಪೂರ್ವಾಪರ ಪಕ್ಷಗಳೆರಡರಲ್ಲೂ ಪಿಂಡದಾನಾಂತದಲ್ಲೇ ವಿಕಿರಪ್ರಕಿರಾದಿದಾನಗಳು ಯುಕ್ತವು. ನಿರ್ಣಯಸಿಂಧುಕಾರರೂ;- "आश्वलायनानां तु पिण्डान्त एव सूत्रकृतोक्तम्" ೨೦೮ ಸ್ಪಷ್ಟೀಕರಣವನ್ನಿತ್ತಿರುತ್ತಾರೆ. [256]चन्द्रिकायां देवलः "ततः सर्वाशनं पात्रे गृहीत्वा विविधं बुधः । तेषामुच्छेषणस्थाने विकिरं भुवि निक्षिपेत् ॥ [255]आश्व.गृ.प."अथ ब्राह्मणानाचमय्य यत्सार्ववर्णिकं पृथगुद्धृतं तत्प्रकिरान्नमम्भसा परिप्लाव्योच्छिष्टान्ते [257]दर्भान्दक्षिणाग्रान्प्रकीर्य तेषु 'ये अग्नि......तदन्नं प्रकीर्य, 'येऽग्निदग्धाः...गतिम्' इति तिलाम्बु च निनीयाऽऽचामेत्" इति ॥ [258] आश्व.गृ.प;-"अथ ब्राह्मण हस्तेष्वपो दर्भांश्च दद्यात् । यवांस्तिलांश्चावधाय पुनरपो दद्यादेषा हस्तशुद्धिः"इति ॥ अत्र शिवा आपः सन्त्वित्यादिप्रयोगो ज्ञेय इति कमलाकरः ॥ [260]ಗೃಹ್ಯಸೂತ್ರದಲ್ಲಿ ಮತ್ತು ಚಾಲ್ತಿಯಲ್ಲಿರುವ ಪ್ರಯೋಗಗಳ ಮಧ್ಯೆ ಇರುವ ವ್ಯತ್ಯಾಸವು ಗಮನಾರ್ಹ ಇಲ್ಲಿ ಅನೇಕಾನೇಕ ಬದಲಾವಣೆಗಳು ಅವಶ್ಯವಾಗಿದೆ. ಸಂಪ್ರದಾಯರೀತ್ಯ ಪ್ರಯೋಗದಲ್ಲಿ ಕೆಲ ವ್ಯತ್ಯಾಸಗಳು ಅವಶ್ಯವಾಗಿರುತ್ತದೆ॥ ಪ್ರಯೋಗದಲ್ಲಿ "ಪ್ರಣೀತಾಪಾತ್ರಮುದ್ಧೃತ್ಯ ಪಿತೃ....ಅಕ್ಷಯ್ಯಮಸ್ತ್ವಿತಿ...ಬ್ರುವಂತು" ಇತ್ಯಾದಿ ವಾಕ್ಯವಿದ್ದು ಅದರ ಕ್ರಮವು ೧)ಗೋತ್ರವೃದ್ಧಿವಾಚನ ೨)ಅರ್ಘ್ಯಪಾತ್ರಚಾಲನ ೩)ಅಕ್ಷಯ್ಯವಾಚನ ೪)ದಕ್ಷಿಣಾದಾನ ೫)ಸ್ವಧಾವಾಚನ ೬) ಪ್ರೀತಿವಾಚನದ ೭)ವರಯಾಚನೆ(ದಾತಾರೊ ನಃ) ೮)ಪಿಂಡೋದ್ಧಾರಣೆ ೯)ಉಚ್ಛಿಷ್ಟಪಾತ್ರೋಚ್ಚಾಲನೆ ೧೦)ಬ್ರಾಹ್ಮಣ ವಿಸರ್ಜನೆ ಇತ್ಯಾದಿ. ಇದರಲ್ಲಿ ಕೆಲವು ಕ್ರಮಗಳ ಆನುಪೂರ್ವಿಯ ವ್ಯತ್ಯಾಸವು ಅವಶ್ಯವಾಗಿದೆ आश्व.गृ.प;- "अथ ब्राह्मणानभिवाद्योपवीयादस्मद्गोत्रं वर्धतामितिगोत्रवृद्धिं वाचयित्वा पात्राणि चालयित्वा देवान्पितॄंश्च यथालिङ्गमामन्त्र्य स्वस्तीति ब्रूतेत्यपोदद्यात् ॥ अथ दैवे दत्तं श्राद्धं देवानामक्षय्यमस्त्विति ब्रूतेति पृथग्यवाम्बु दत्वा, पित्र्ये......... तिलाम्बु दत्वा न्युब्जं पात्रं विवृत्योपवीती ब्राह्मणेभ्यो मुखवा-

सनताम्बूलादि दक्षिणां....."इति ಎಂಬ ಗೃಹ್ಯಪರಿಶಿಷ್ಟವು ಇವುಗಳ ಕ್ರಮದ ಆನುಪೂರ್ವಿ-ಯನ್ನು ಸುಸ್ಪಷ್ಟವಾಗಿ ತಿಳಿಸಿದ್ದು ಅದು ಹೀಗಿದೆ; ೧)ಗೋತ್ರವೃದ್ಧಿವಾಚನ ೨)ಉಚ್ಛಿಷ್ಟಪಾತ್ರೋಚ್ಚಾ-ಲನೆ ೩)ಸ್ವಸ್ತಿವಾಚನ(ಇದು ಚಾಲ್ತಿಯಲ್ಲಿಲ್ಲ) ಮತ್ತುಅಕ್ಷಯ್ಯವಾಚನ ೪)ಅರ್ಘ್ಯಪಾತ್ರಚಾಲನ ೫) ದಕ್ಷಿಣಾದಾನ ೬)ಸ್ವಧಾವಾಚನ ೭)ಪ್ರೀತಿವಾಚನ ೮)ಬ್ರಾಹ್ಮಣ ವಿಸರ್ಜನೆ ೯)ಪಿಂಡಸ್ಥಾನೆ ಶಾಂ-ತಿರಸ್ತು ೧೦)ವರಯಾಚನೆ(ದಾತಾರೋ ನಃ) ॥ ಸ್ವಸ್ತಿವಾಚನದಪೂರ್ವದಲ್ಲಿ ವಿಪ್ರೋಚ್ಛಿಷ್ಟವನ್ನು ಜರುಗಿಸುವಂತೆ ಸೂಚಿಸಿರುತ್ತದೆ. ಅದನ್ನು ಬದಲಿಸಿ ಗೋತ್ರವೃದ್ಧಿ,ಸ್ವಸ್ತಿವಾಚನ, ಅಕ್ಷಯ್ಯಪ್ರಾರ್ಥ-ನೆ ಪಿಂಡೋದ್ವಾಸನೆಗಳ ನಂತರ ಉಚ್ಛಿಷ್ಟಪಾತೋಚ್ಚಾಲನೆಯನ್ನು ಮಾಡುವುದು ಗೃಹ್ಯಕ್ಕೆ ವಿ-ರೋಧವಾಗುತ್ತದೆ ಮತ್ತು "भाजनेषु च तिष्ठत्सु स्वस्तिं कुर्वन्ति ये द्विजाः ॥ तदन्नमसु-रैर्भुक्तं निराशाः पितरो गताः" ಸ್ಕಾಂದ,ಪರಾಶರಸ್ಮೃತ್ಯಾದಿ ವಚನಗಳು ಎಂಜಲೆಲೆಯನ್ನು ಸರಿಸದೆ ಸ್ವಸ್ತಿವಾಚನವನ್ನು ಮಾಡಿದರೆ ಪಿತೃಗಳು ಅತೃಪ್ತರಾಗುವರು ಎಂಬ ನಿಷೇಧವೂ ಇರುವುದು ಗಮನಾರ್ಹ ಸಂಗತಿ. ಹಾಗೆಯೇ ಚಾಲ್ತಿಯಲ್ಲಿರುವ ಅರ್ಘ್ಯಪಾತ್ರೆಯನ್ನು ಜರುಗಿಸಿದ ನಂತರ ಸ್ವಸ್ತಿವಾಚನ ಮತ್ತು ಅಕ್ಷಯೋದಕ ದಾನವೂ ಯುಕ್ತವಲ್ಲ ಪರಿಶಿಷ್ಟದಲ್ಲಿ ಅಕ್ಷಯ್ಯೋದಕ-ದಾನದ ನಂತರ ಅರ್ಘ್ಯಪಾತ್ರವನ್ನು ಸರಿಸಲು ಹೇಳಿರುವಾಗ ಅದಕ್ಕೆ ಮಾರ್ಪಟ್ಟ ಪ್ರಯೋಗವು ಯುಕ್ತವಲ್ಲ. [261]चन्द्रिकायां भविष्योत्तरे;-"चालयेद्विप्रपात्राणि स्वयं शिष्योऽथ्यवा सुतः । न स्त्री प्रचालयेत्तानि हीनजातिर्न चाग्रजः"इति ॥ [263]श्राद्धमञ्जर्याम् "दक्षि-णादानं सव्येनेति वृत्तिकृत्। पित्रुद्देशेन दक्षिणादानेऽपसव्यं विप्रोद्देशे तु सव्यमिति माधवः" इति ॥ [262]नागरखण्डे;- "उत्तानमर्घ्यपात्रं तु कृत्वा दद्याच्च दक्षिणाम्। हिरण्यं देवानां च पितॄणां रजतं तथा"इति ॥ [264]एतस्मिन्काले सति सम्भवे विशे-षदक्षिणोक्ता मत्स्यपुराणे" गोभूहिरण्य-वासांसि यानानि शयनानि च। दद्याद्यदिष्टं विप्राणामात्मनः पितुरेव च" इति ॥ [265]निर्णयसिन्धावत्रिः "वदेच्च तांस्ततो विप्रान्पि-त्रादिभ्यः स्वधोच्यताम्" इति ॥ [268]ಪಿತ್ರರ್ಘ್ಯಕ್ಕೆ, ದಾನಾನಂತರ ವಿನಿಯೋಗವೇನು ಎಂಬ ಬಗೆ ನಮ್ಮ ಚಾಲ್ತಿಯಲ್ಲಿ ಅನೇಕ ಭಿನ್ನ ಪ್ರಯೋಗಗಳಿವೆ. ೧)ಅರ್ಘ್ಯದಾನಾನಂತರ ಅರ್ಘ್ಯಪಾತ್ರೆ-ಯನ್ನು ಕೆಳಮುಖ(ನ್ಯುಬ್ಜ)ವಾಗಿಸುವುದು ೨)ಅರ್ಘ್ಯದಾನಾನಂತರ ಮೇಲ್ಮುಖಗಾಗಿರಿಸಿ ಗೋ-ತ್ರವೃದ್ಧಿವಾಚನಾನಂತರ "ಪ್ರಣೀತಾಪಾತ್ರಮುದೃತ್ಯ" ಎಂಬಲ್ಲಿ ಮುಚ್ಚಿದ ಪಾತ್ರೆಯನ್ನು ಜರುಗಿ-ಸುವುದು ೩)ಅಕ್ಷಯ್ಯೋದಕದಾನ ಕಾಲದಲ್ಲಿ ಬ್ರಾಹ್ಮಣರ ಕೈಯ್ಯಲ್ಲಿ ಹೊಯ್ಯುವುದು ೪)ಪಿಂಡಗಳ

ಮೇಲೆ "ಊರ್ಜಂ ವಹನ್ತೀ" ಮಂತ್ರವನ್ನು ಹೇಳಿಯೋ ಅಮಂತ್ರಕವಾಗಿಯೋ ಸ್ವಧಾವಾಚನದ ಮೊದಲು ಅಥವಾ ನಂತರ ಪಿಂಡಗಳ ಮೇಲೆ ಅಥವಾ ಸುತ್ತಲೂ ಹೊಯ್ಯುವುದು ಇತ್ಯಾದಿ ಅನೇಕ ಪ್ರಯೋಗಗಳು ಋಗ್ವೇದಿಗಳಲ್ಲಿ ಕಾಣಲ್ಪಡುತ್ತವೆ. ಇದರಲ್ಲಿ ಕೆಲವು ಅನ್ಯಸೂತ್ರೀಯವಿಷಯ, ಕೆಲವು ಆಧಾರರಹಿತ ಆದರೆ ಸಂಪ್ರದಾಯಪ್ರಾಪ್ತವಾದವುಗಳು. ಆಶ್ವ.ಗೃ.ಪರಿಶಿಷ್ಟದಲ್ಲಿ ಇದಕ್ಕೆ ವಿನಿಯೋಗ ಹೀಗಿದೆ "अथ ब्राह्मणानभिवाद्योपवीयादस्मद्गोत्रं ............ देवानामक्षय्यमस्त्विति ब्रूतेति पृथग्यवाम्बु दत्वा, पित्र्ये......... तिलाम्बु दत्वा न्युब्जं पात्रं विवृत्योपवीती ब्राह्मणेभ्यो मुखवासनताम्बूलादि दक्षिणां..." ॥इति {ಬ್ರಾಹ್ಮಣರನ್ನು ನಮಸ್ಕರಿಸಿ ಗೊತ್ರಾಭಿವರ್ಧನಕ್ಕೆ ಪ್ರಾರ್ಥಿಸಿ.. ಸ್ವಸ್ತಿ, ಅಕ್ಷಯ್ಯೋದಕದಾನದ ನಂತರ ತಲೆಕೆಳಗಾದ(ಅರ್ಘ್ಯಪಾತ್ರೆಯನ್ನು) ಜರುಗಿಸಿ ಬ್ರಾಹ್ಮಣರಿಗೆ ತಾಂಬೂಲದಕ್ಷಿಣೆಯನ್ನು ಕೊಡುವುದು ಹೀಗೆಯೆ ಶ್ರಾದ್ಧಮಂಜರಿಯಲ್ಲೂ ಪ್ರಯೋಗ ಕಾಣಲ್ಪಡುತ್ತದೆ. ಅದರಲ್ಲಿ ಅರ್ಘ್ಯಶೇಷವಿದ್ದರೆ (ಪ್ರಥಮಾರ್ಘ್ಯಪಾತ್ರೆಯನ್ನು ಉತ್ತಾನವಾಗಿರಿಸಿದ ಪಕ್ಷದಲ್ಲಿ) ಅದಕ್ಕೆ ವಿನಿಯೋಗವೇನು ಎಂಬ ಪ್ರಶ್ನೆಗೆ ಅಲ್ಲಿ ಸಮಾಧಾನ ದೊರಕುವುದಿಲ್ಲ. ಹಾಗಿರುವಾಗ ल.आश्व.स्मृति "विसृजेत्पितृपात्रस्थं पिण्डानां पुरतो जलम्। स्वधोच्यतामनेनैव ततः पिण्डान्समुच्चरेत्" इति ॥ ಈ ವಾಕ್ಯವು ನಮಗೆ ಬಹೂಪಕಾರಿಯಾಗಿದೆ, ಅದರರ್ಥ {ಪಿಂಡಗಳ ಎದುರು ಬದಿಯಲ್ಲಿ ಪಿತ್ರರ್ಘ್ಯಪಾತ್ರೆಯ ನೀರನ್ನು ವಿಸರ್ಜಿಸುವುದು..}. ಆದ್ದರಿಂದ ಅದನ್ನನುಸರಿಸಿ ಇಲ್ಲಿ ಪ್ರಯೋಗವು ಕೊಡಲ್ಪಟ್ಟಿದೆ. [269]ಇಲ್ಲಿ ಮಾಡಲ್ಪಡುವ ತಿಲೋದಕದಾನವು ಆಚಾರಪ್ರಾಪ್ತವು ಅದರಬಗ್ಗೆ ಹೇಮಾದ್ರಿಯ ಪುಟ ೧೪೮೮ರಲ್ಲಿ ವಿಸ್ತೃತವಾದ ವಿವರಣೆಯಿದೆ ಅದು ಹೀಗಿದೆ "ಇಲ್ಲಿ ಕೆಲವರ ಶ್ರಾದ್ಧಕಲ್ಪದಲ್ಲಿ "ಋಚೇತ್ವಾ...ಅಮೃತಸ್ಯಧಾರಾಂ"ಎಂಬ ಮಂತ್ರದಿಂದ ಸ್ವಧಾದಾರಾ(ತಿಲೋದಕ) ಹೇಳಲ್ಪಟ್ಟಿದೆ. ಕೆಲವರು ಸ್ವಧಾಧಾರಾದ ನಂತರ "ಸ್ವಧಾ ಸಂಪದ್ಯಂತಾಂ" ಎಂದು ಬ್ರಾಹ್ಮಣರನ್ನು ಪ್ರಾರ್ಥಿಸುತ್ತಾರೆ. ಕೆಲವರು ಕೂರ್ಚಸಹಿತ ಅರ್ಘ್ಯಪಾತ್ರೆಯನ್ನು, ಭೂಮಿಯಲ್ಲಿ ದರ್ಭೆಗಳನ್ನು ಹಾಸಿ ಅಲ್ಲಿ ಚೆಲ್ಲಿ 'ಸ್ವಧೋದಕನಿಷೇಚನ'ವನ್ನು ಮಾಡೂತ್ತಾರೆ ಅದು ಕಾತ್ಯಾಯನ ಮತ ಕೆಲವರು ಪಿಂಡಗಳ ಮೇಲೆಯೇ 'ಸ್ವಧೋದಕ(ಅರ್ಘ್ಯೋದಕ)ನಿಷೇಚನ'ವನ್ನುಮಾಡುತ್ತಾರೆ ಅದಕ್ಕೆ 'ಸ್ವಧಾವಾಚನಿಕಂ ಸರ್ವಂ ಪಿಂಡೋಪರಿ ಸಮಾಚರೇತ್' ಎಂಬ ಮತ್ಸ್ಯವಚನವು ಪ್ರಮಾಣ. ಕೆಲವರು ಇದಕ್ಕೆ 'ಸಂಸ್ರವ'ವನ್ನು ಬಳಸುತ್ತಾರೆ. ಬ್ರಹ್ಮಾಂಡಪುರಾಣದ ವಚನ ಹೀಗಿದೆ 'ನಂತರ ಸಂಸ್ರವಪಾತ್ರೆಯ ನೀರನ್ನು "ಊರ್ಜಂ ವಹಂತಿ" ಮಂತ್ರವನ್ನು ಜಪಿಸುತ್ತ ಪಿಂಡಗಳಮೇಲೆ ಚೆಲ್ಲುವುದು. ಈ ವಾಕ್ಯಗಳ ಪರಿಶೀಲನೆಯಿಂದ ಸ್ಪಷ್ಟವಾಗುವ ವಿಷಯವೇನೆಂದರೆ ಈ ಸ್ವಧೋದಕ-

ನಿಷೇಚನ ಆಶ್ವಲಾಯನಾತಿರಿಕ್ತರ ವಿಷಯವೆಂದು. [269]"वसिष्ठः" श्राद्धावसाने कर्तव्या द्विजैरन्नगुणस्तुतिः" इति ॥ [270]मात्स्ये " अघोरा पितरः सन्तु सन्त्वित्युक्ते पुनर्द्विजैः । गोत्रं तथा वर्धतां नस्तथेत्युक्तः स तैः पुनः ॥ [271]"देवताभ्यः + नमो नमः ॥ आदिमध्यावसाने तु त्रिरावृत्त्या जपेद्बुधः । पितरः क्षिप्रमायान्ति राक्षसाः प्रद्रवन्ति च" इति ॥ [272]आश्व.गृ.प "दक्षिणां च दत्वा तान्पादावभ्यङ्गादिभिः प्रियोक्थिभिश्च परितोष्य [273]कर्मसम्पूर्णतां वाचयित्वा स्वधोच्यतामिति चास्तु स्वधेति चोत्त्वा पितृपूर्वं विसृजेत् ॥ [274]ल.आश्व.स्मृ "वाजे वाजेऽथ मन्त्रेण कुर्याच्छ्राच्छ्राद्धविसर्जनम् । सव्यमंसं पितॄणां च देवानां दक्षिणं स्पृशेत् । मात्स्ये "वाजे वाज इति जपन्कुशाग्रेण विसर्जयेत्" इति ॥ [277]आश्व.गृ.प "ओं स्वधोच्यतामिति चास्तु स्वधेति चोक्ता पितृपूर्वं विसृजेत् ॥ तथा ओं स्वधेति वास्तु स्वधेतिवा ब्रुवन्तः उत्तिष्ठेयुः" इति ॥ [278]आश्व.गृ.प "विश्वेदेवाः प्रीयन्तामिति देवब्राह्मणौ विसृजेत् । प्रीयन्तां विश्वेदेवा इति..." ॥ [279]आश्व.गृ.प "पिण्डनिपरणदेशं सम्मृज्याक्षतान्प्रास्य तत्र शान्तिरस्त्वित्युदक-धारामासिच्य दक्षिणामुखः......" इति ॥ [280]"पादप्रक्षालनमण्डलदेशे प्रदक्षिणादिकार्य"मिति हेमाद्रिः ॥ शौनकः "ब्राह्मणानथ निर्यातान्परीत्य त्रिः प्रदक्षिणम्"इति ॥ [281]ल.आश्व.स्मृ "पठेदुच्चैरिमं मन्त्रमामा वाजस्य चैव हि । प्रदक्षिणत्रयं कुर्वन्भुञ्जतः पितृसेवितान्"इति ॥ [282]"ದಾತಾರೋ ನಃ..." ಎಂಬ ವರ ಯಾಚನೆಯು ಬ್ರಾಹ್ಮಣ ವಿಸರ್ಜನೆಯ ಪೂರ್ವದಲ್ಲಿ ಅಥವಾ ಪರದಲ್ಲಿ ಮಾಡುವ ಎರಡು ಸಂಪ್ರದಾಯಗಳು ನಮ್ಮಲ್ಲಿವೆ. ಚತುರ್ವರ್ಗಚಿಂತಾಮಣಿಯಲ್ಲಿ (ಪುಟ೧೪೮೩) ಇದರ ಬಗ್ಗೆ ವಿಸ್ತೃತ ವಿವರಣೆಯಿದೆ. ಅದರ ಸಾರವನ್ನಷ್ಟೆ ಇಲ್ಲಿ ಸಂಗ್ರಹಿಸಲ್ಪಟ್ಟಿರುತ್ತದೆ ಅದು ಹೀಗಿದೆ "ಮನುಮತ್ತು ವಿಷ್ಣುನಿನ ವಚನವು ಹೀಗಿದೆ "विसृज्य ब्राह्मणांस्तांस्तु नियतो वाग्यतः शुचिः । दक्षिणादिशमाकाङ्क्षन् याचेतेमान् वरान् पितृन् ॥ दातारोनोभि... विसृज्य यथासुखं विहाराय पीठेभ्यः समुत्थाय...." ಮಾತ್ಸ್ಯದಲ್ಲಿ "विसृज्य ब्राह्मणांस्तद्वत् तेषां कृत्वा प्रदक्षिणम् । दक्षिणां दिशमाकाङ्क्षन् पितॄन् याचेत मानवः । दातारो नोऽभि..." ಇತ್ಯಾದಿ ವಿಸರ್ಜನಾನಂತರ ವರಯಾಚನೆಗೆ ಆಧಾರವನ್ನು ಒದಗಿಸುತ್ತ, ಕೆಲವು ಗೃಹ್ಯಗಳಲ್ಲಿ ವಿಸರ್ಜನಪೂರ್ವದಲ್ಲಿಯೂ ಕೆಲವಲ್ಲಿ ವಿಸರ್ಜನೆಯ ಪರದಲ್ಲಿಯ್ಯೂ ವಿಕಲ್ಪವಾಗಿ ಹೇಳಿರುವುದನ್ನೂ ವಿವರಿಸಿ ಸಂಗ್ರಹಕಾರರ ವಚನವನ್ನೂ ಉದಾಹರಿಸಿ "ಪ್ರಚೇತ,ಯಾಜ್ಞವಲ್ಕ್ಯರು ಪೂರ್ವದಲ್ಲೂ, ವಸಿಷ್ಠ ಮನುಗಳು ವಿಸರ್ಜ-

ನಾತ್ವರದಲ್ಲೂ ಹೇಳಿದ್ದಾರೆ...... ಇತ್ಯಾದಿ ವಿವರಿಸಿ "स्वगृह्योक्तानुसारेण विकल्पेषु युज्यते ।" (ವಿಕಲ್ಪಗಳಲ್ಲಿ ಸ್ವಗೃಹ್ಯೋಕ್ತರೀತ್ಯಾ ಆಚರಿಸುವುದು) ಎಂದು ಸೂಚಿಸಿರುತ್ತಾರೆ ಮತ್ತು ಪುಟ ೧೪೮೪ ಗೃಹ್ಯದಲ್ಲಿ ಹೇಳಲ್ಪಡದಿದ್ದರೆ ಯಾವುದಾದರೊಂದು ಸ್ಮೃತಿಯನ್ನನುಸರಿಸಿ ಮಾಡುವಂತೆ ಸೂಚಿಸಿರುವುದು ಕಾಣುತ್ತದೆ. ಈ ಮಾರ್ಗವನ್ನನುಸರಿಸಿ ಆಶ್ವಲಾಯನಸೂತ್ರಿಗ-ಳಾದ ನಮಗೆ ಯಾವುದು ಯುಕ್ತ. ಎಂದು ವಿಮರ್ಶಿಸುವಾಗ ಆಶ್ವಲಾಯನಗೃಹ್ಯ-ಪರಿಶಿಷ್ಟದಲ್ಲಿ "अस्तु स्वधेति पितृपूर्वं विसृजेत्...पिण्डनिपरणदेशं संमृज्याक्षतान्प्रास्य तत्र...धारा-मासिच्य दक्षिणामुखः प्राञ्जलिस्तिष्ठन् 'दातारोनः...इत्यनेन वरान्याचेत" {ಪಿತೃಪೂ-ರ್ವ ಕ್ರಮದಲ್ಲಿ ಬ್ರಾಹ್ಮಣರನ್ನು ವಿಸರ್ಜಿಸಿ.. ಪಿಂಡನಿಪರಣದೇಶದಲ್ಲಿ ಜಲಧಾರೆಯನ್ನು ಕೊಟ್ಟು... ದಕ್ಷಿಣಾಭಿಮುಖವಾಗಿ ನಿಂತು ದಾತಾರೋ ನಃ..} ಎಂಬ ವಚನವಿದ್ದು ಸ್ಪಷ್ಟ ನಿರ್ದೇಶನವಿದೆ ಹಾಗೆಯೇ [283]ल.आश्व.स्मृ "स्वादुषंसद इत्युक्त्वा मन्त्रानुच्चैः पठेदथ । दक्षिणाभिमु-खस्तिष्ठेद्विप्राणां पुरतश्च हि ।।" ಲಘ್ವಾಶ್ವಲಾಯನಸ್ಮೃತಿಯಲ್ಲೂ ವಿಸರ್ಜನಾನಂತರವೇ ಹೇಳಲ್ಪಟ್ಟಿದ್ದು ಹಾಗಾಗಿ ಆಶ್ವಲಾನಯನಸೂತ್ರಾನುಸಾರಿಗಳಾದ ನಮಗೆ ವಿಸರ್ಜನಾನಂತರವೇ ವರಯಾಚನೆಯು ಯುಕ್ತವೆಂಬುದು ಸುಸ್ಪಷ್ಟ. [284]इहैवेति पठेन्मन्त्रं भुक्तवद्भिर्द्विजैः सह । सन्तुष्टा आशिषो दद्युर्भुक्तिमुक्तिप्रदाः शुभाः" इति ॥ [285]ल.आश्व.स्मृ "वसिष्ठास-स्ततो देवा वसिष्ठश्च जपेदिमौ । पितृस्तुतिकरां गाथामिमं पितृभ्य एव च ॥ [286]श्रा-द्धमञ्जर्याम् कूर्मपुराणे "नोद्वासयेत्तदुच्छिष्टं यावन्नस्तमितो रविः' इति ॥ इदं गृहा-न्तरसत्व इति कमलाकरः" इति ॥ [287]अत्र वैश्वदेवः "पितृपाकात्समुद्धृत्य वैश्वदेवं करोति यः । आसुरं तद्भवेच्छ्राद्धं पितॄणां नोपतिष्ठति" इति पैठीनसिस्मरणात्पृथ-क्पाकेनेति केचित् । अन्ये तु "श्राद्धाह्नि श्राद्धशेषेण वैश्वदेवं समाचरे"दिति चतुर्विं-शतिमताच्छ्राद्धशेषेणैव वैश्वदेवः इति वदन्तः 'श्राद्धात्पूर्वं मध्ये वा निषेध स्ततस्त-स्माद्धेतोः श्राद्धं निर्वर्त्य ततस्तच्छिष्टान्नाद्वैश्वदेवादिकं' कर्तव्यमिति । विश्वामित्रस्मृतावपि "प्रेतश्राद्धे पृथक्पाकं वैश्वदेवं समाचरेत् । क्षये दर्शे च पक्षे च एक पाको विधीयते"इति ॥

## मातृश्राद्धे विशेषः

[288]निर्णयसिन्धौ नागरखण्डे "मातर्मात्रे तथा मातुरासने कल्पनेऽक्षये। गोत्रे गोत्रायै गोत्रायाः प्रथमाद्या विभक्तय" इति॥[289]कारिकायां "अर्घ्यप्रदानमन्त्रे तु मात्रादिपदमावपेत्। शुन्धन्तामिति पित्रादौ मात्रादिपदमावपेत्" इति॥ मातृश्राद्धे पिण्डदाने 'ये च त्वामत्रानु' इत्यत्र नोह इति वृत्तिकृत्॥ निर्णयसिन्धौ "मातुः श्राद्धेऽप्यनूहेन कुर्यात्पिण्डानुमन्त्रम्। दशदानमुपस्थानं तद्वत्कार्यमितिस्थितिः। प्रवाहण मनूहेन तद्वत्प्राशनमिष्यते" इति॥ तथा "आयन्तु नस्तिलोऽसीति उशन्तस्त्वेति यानि तु। अनूह्यः पितृशब्दोऽत्र पितृसामान्यवाचक"इति॥ [290]चन्द्रिकायां स्मृत्यन्तरे "भर्तुरग्रे मृता नारी सह तेन या मृता तस्याः स्थाने नियुञ्जीत विप्रैः सह सुवासनीम्"इति॥ यल्लाजीये "सुवासिन्यां मृतायान्तु ब्राह्मणैः सह भोजने। सुवासिनीं ततः पश्चादमन्त्रकमथर्चयेत्। माता मङ्गलसूत्रेण मृता च तद्दिने। उद्दिश्य द्विजपङ्क्तौ तां भोजयेत्सधवां स्त्रियम्" इति॥ [291]विष्णुधर्मे "स्त्रीणां श्राद्धे तु सिन्दूरं दद्युश्चण्डातकानि च। निमन्त्रिताभ्यः स्त्रीभ्या ये ते स्युः सौभाग्यसंयुताः"इति॥ [292]निर्णयसिन्धौ गार्ग्यः- "यस्तर्पयति तान्विप्रः श्राद्धं कृत्वा परेऽहनि। पितरस्तेन तृप्यन्ति न चेत्कुप्यन्ति वैभृशम्"इति॥ तत्रैव "प्रत्यब्दाङ्गं तिलं दद्यान्निषिद्धेऽपि परेऽहनि। वर्गैकस्य वचो येषामन्येषां तु वर्जयेत्" इति॥ [293]पैठीनसिः "मातापित्रोः क्षयाहे तु ह्याशौचं यदि पातयेत्। कर्तुस्तात्कालिकीशुद्धिरिति वासिष्ठभाषितम्॥ पित्रोर्मृताहे संप्राप्ते मृतकं सूतकं यदि। तृतीयवरणात्पश्चात्सद्यः शुद्धिरिति स्मृतिः" इति॥ तर्पणदर्पणेऽपि "प्रत्याब्दिके चोपक्रान्ते सति आशौचमापतितं यदि तदा कर्तुः परेद्युः प्रातः तर्पणम्। सद्यः शुद्धिः स्नात्वा तर्पयेत्" इति॥

## एकोद्दिष्टश्राद्धम्

[294]हेमाद्रौ कात्यायनः "सपिण्डाकरणादूर्ध्वं पित्रोरेव हि पार्वणम्। पितृव्यभ्रातृमातॄणामेकोद्दिष्टं सदैव तु"इति॥ वृद्धपराशरः "अपुत्रस्य पितृव्यस्य तत्पुत्रो भ्रातृजो भवेत्। पितृस्थाने तु तं कृत्वा शेषं पूर्ववदुच्चरेत्" इति॥ चतुर्विंशतिमते "पितृव्यभ्रातृमातॄणां ज्येष्ठानां पार्वणं भवेत्। एकोद्दिष्टं कनिष्ठानां दंपत्योः पार्वणं मिथः॥

अपुत्रस्य पितृव्यस्य भ्रातुश्चैवाग्रजन्मनः। मातामहस्य तत्पत्न्याः श्राद्धं पार्वणवद्भवेत्"इति॥ अत्रिवृद्धवसिष्ठौ "सपिण्डीकरणादूर्ध्वं यत्तु यत्र प्रदीयते। भ्रात्रे भगिन्यै पुत्राय स्वामिने मातुलाय च॥ मातामहस्यासुतस्य श्राद्धं वै पितृवद्भवेत्" इति॥ एतच्चाऽऽवश्यकत्वार्थं न तु पार्वणार्थमिति हेमाद्रिः। स्मृत्यन्तरेऽपि "पितृव्यभ्रातृपुत्राणामेकोद्दिष्टं न पार्वणम्" इति॥ अत्रिः "भ्रात्रे भगिन्यै पुत्राय श्वशुरे मातुलाय च। पितृव्ये गुरवे श्राद्धमेकोद्दिष्टं न पार्वणम्" इति॥ श्वशुरे श्वशुराय। पितृव्ये पितृव्यस्य(व्याय)। न च सपिण्डीकरणादूर्ध्वं यत्र यत्र प्रदीयत इतिवृद्धवसिष्ठवचनादमावास्यादिष्वपि श्राद्धप्रसक्तिरिति वाच्यम्। [295]"वृद्धशातातपः "देशधर्मं समाश्रित्य वंशधर्मं तथापरे। सूरयः श्राद्धमिच्छन्ति पार्वणं च क्षयाह्न्यपि"इति॥

## साङ्कल्पिकश्राद्धम्

[297]हेमाद्रौ संवर्तः "समग्रं यस्तु शक्नोति नैवेह पार्वणम्। अपि सङ्कल्पविधिना काले तस्य विधीयते॥ पात्रे भोज्यस्य चान्नस्य त्यागः सङ्कल्प उच्यते" इति॥ व्यासः "सङ्कल्पं तु यदा कुर्यान्न कुर्यात्पात्रपूरणम्। नावाहनाग्नौकरणे पिण्डांश्चैव न दापयेत्" ति॥ पृथ्विचन्द्रोदये वसिष्ठः "आवाहनं स्वधाशब्दं पिण्डाग्नौकरणं तथा। विकिरं चार्घ्यदानं च सांकल्पे षड्विवर्जयेत्" इति॥ "आवाहाहनस्य समन्त्रकस्य निषेधः, नत्वावाहनमात्रस्य तदाभावे देवपितृसान्निध्याभावात्" इत्यादिवचनेन चन्द्रिकाकारादयः समन्त्रकस्यावाहनस्य निषेधः प्रतिपादयन्ति। तूष्णीमावाहनं भवत्येवेति॥ निर्णयसिन्धौ स्मृत्यन्तरे "त्यजेदावाहनं चार्घ्यमग्नौकरणमेव च। पिण्डांश्च विकिराक्षय्ये श्राद्धे सांकल्पसंज्ञके"इति विकिराक्षय्यवाचनयोरपि लोपमुक्तम्॥

## आम(हिरण्य)श्राद्धम्

[298]कात्यायनः "आपद्यनग्नौ तीर्थे च प्रवासे पुत्रजन्मनि। आमश्राद्धं प्रकुर्वीत भार्यारजसि संक्रमे" इति॥ निर्णयसिन्धौ अपरार्कविज्ञानेश्वरादयः "पाकाभावे द्विजातीनामामश्राद्धं विधीयते' इति सुमन्तूक्तेः साग्निकैर्निरग्निकैश्च प्रवासादौ सर्वत्र पाकाभावे आमादिना कार्यम्, पाकसम्भवे त्वन्नेनेवेत्याहुः अत एव पाकश्राद्धमुक्त्वा 'एतच्चानुपनीतोऽपि कुर्यत्सर्वेषु कर्मसु। भार्याविरहितोऽप्येतत्प्रवासस्थोऽपि

नित्यशः" इति ॥ धर्मप्रदीपोक्त आवाहनार्घ्यदानविकिरनिषेधाः शखान्तरविषयमिति भाति "आवाहनं भवेत्कार्यमर्घ्यदानं तथैव च' इति स्मरणात्। विकिरोऽप्यामेनेति हेमाद्रिः ॥ [299]"आवाहने स्वधाकारे मन्त्रा ऊह्या विसर्जने। अन्यकर्मण्यनूह्यः स्युरामश्राद्धविधः स्मृतः"इति ॥ आवाहने "हविषे अत्तवे' इत्यत्र 'स्वीकर्तवे' इत्यूहः। स्वधाकारे 'नमो वः पितर इषे' इत्यत्र 'इषे' पदस्थाने 'आमद्रव्याय' इत्यूहः। यद्यपि 'तस्मादृचं नोहेत्'इति ऋच्यूहो निषिद्धः तथापि वचनाद्भवति ॥[300]पृथ्विचन्द्रोदये व्यासः "आमश्राद्धं यदा कुर्याद्विधिज्ञः श्राद्धदः सदा। हस्तेऽग्नौकरणं कुर्याद्ब्राह्मणस्य विधानतः" इति ॥ [303]हेमाद्रौ व्यासः "आमं ददतु कौन्तेय दद्यादन्नं चतुर्गुणम्। द्विगुणं त्रिगुणं वाऽपि नत्वेकगुणमर्पयेत्॥ सिद्धान्ने तु विधिर्यः स्यादामश्राद्धेऽसौ विधिः। आवाहनादिः सर्वं स्यापिण्डदानञ्च भारत॥ दद्याद्यच्च द्विजातिभ्यः श्रृतं वाऽश्रृतमेव वा। तेनाग्नौकरणं कुर्यात्पिण्डांस्तेनैव निर्बपेत् "इति ॥ [304]"तृप्तिप्रश्नोऽवगाहश्च जुषप्रश्नो यथासुखम्। आमश्राद्धे भवेन्नेतदपोशनञ्च पञ्चकम्" इति ॥ [305]षड्त्रिंशन्मते "आमश्राद्धं यदा कुर्यात्पिण्डदानं कथं भवेत्। गृहपाकात्समुद्धृत्य सक्तुभिः पायसेन वा ॥ पिण्डान्दद्याद्यथलाभं तिलैः सह विमत्सरः" इति। [306]हेमाद्रौ मरीचिः"आमान्नस्याप्यभावे तु श्राद्धं कुर्वीत बुद्धिमान्। धान्याच्चतुर्गुणेनैव हिरण्येन सुरोचिषा"इति ॥ स्मृत्यर्थसारेऽपि "हिरण्यमष्टगुणं समं वा दद्यादि"ति ॥[307] निर्णयसिन्धौ भविष्ये "गृहपाकात्समुद्धृत्य सक्तुभिः पायसेन वा। पिण्डदानं प्रकुर्वीतहेमश्राद्धे कृते सती"इति ॥ हेमश्राद्धे पिण्डदानं नेति दिवोकसः। स्मृत्यर्थसारे तु विकल्प उक्तः ॥

## ब्रह्मार्पणश्राद्धम्

[308]पद्मपुराणे"ब्रह्मार्पणेन विधिना कुर्याद्वा भक्तिमान्सुतः। निमन्त्य ब्राह्मणान्शक्त्या द्वावेकं व यथा विधि ॥ पादप्रक्षालनं कृत्वा पीठादावुपवेश्य च। परिविष्य त्यजेदन्नं ब्रह्मार्पणविधानतः ॥ गोविन्दं पुण्डरीकाक्षं गङ्गां काशीं गयां ततः। गदाधरं स्मरेद्भक्त्या श्राद्धसाद्गुण्यहेतवे" इति ॥

## श्राद्धानुकल्पाः

[310]बृहन्नारदीये "द्रव्याभावे द्विजाभावे अन्नमात्रं तु पाचयेत्। पैतृकेण तु सूक्तेन होमं कुर्याद्विचक्षणः" इति॥ [311]देवलः "पिण्डमात्रं प्रदातव्यमभावे द्रव्यविप्रयोः" इति। वृद्धवसिष्ठः"किञ्चिद्दद्यादशक्तस्तु उदकुम्भादिकं द्विजे। [313]किञ्चिदन्नं तिलान्वाऽपि दक्षिणमात्रमेव वा। असमर्थोऽन्नदानस्य धान्यमात्रं स्वशक्तितः। [314]तृणानि वा गवे दद्यात्पिण्डान्वाऽप्यथ निर्वपेत्॥ [315]तिलोदकैः पितॄन्वापि तर्पयेत्स्नानपूर्वकम्"इ-ति॥ भविष्ये "[316]अग्निना वा दहेत्कक्षं श्राद्धकालसमागमे। [317]तस्मिंश्चोपवसेदह्नि जपेद्वा श्राद्धसंहिताम्" इति॥ [318]सर्वाभावे वनं गत्वा कक्षमूलप्रदर्शकः। सूर्यादि-लोकपालानामिदमुच्चैः पठिष्यति॥ न मेऽस्ति वित्तं न धनं न चान्यच्छ्राद्धस्य योग्यं स्वपितॄन्नतोऽस्मि। तृप्यन्तु भक्त्या पितरौ मयैतौ भुजौ ततौ वर्त्मनि मारुतस्य॥ इत्येतत्पितृभिर्गीतं भावाभावप्रयोजनम्। यः करोति कृतं तेन श्राद्धं भवति भारत" इति॥

## अतिक्रान्तश्राद्धम्

[319] व्यासः"श्राद्धविघ्ने समुत्पन्ने अन्तरा मृतसूतके। अमायां तत्प्रकर्तव्यं शुद्धावेके मनीषिणः" इति। मरीचिः"श्राद्धविघ्ने समुत्पन्ने अविज्ञाते मृतेऽहनि। एकादश्यां तु कर्तव्यं कृष्णपक्षे विशेषतः" इति॥ विशेषत इत्युक्तेः शुक्लायामपि। "श्राद्धविघ्ने समुत्पत्रे चाविज्ञाते मृतेऽहनि। कुर्यादन्नेन कृष्णायामेकादश्यां विधुक्षये। आपद्य-पि च नामेन तन्मासे हरिवासरे। कृष्णे त्विन्दुक्षये वाथ अष्टम्यां वापि कारयेत्। ज्ञानिनोऽज्ञानिने वापि मूर्खः पण्डित एव वा। मृताहं समतिक्रम्य चण्डालः को-टिजन्मसु" इति॥

## अनुपनीतस्त्रीकर्तृकश्राद्धम्

[320]निर्णयसिन्धौ "अनुपनीतस्त्रीशूद्रादेस्तूत्तरीयेणैव सव्यापसव्ये ज्ञेये; तस्योपवित-स्थनीयत्वात्, 'अपसव्यं क्रमाद्वस्त्रं कृत्वा कश्चित्सगोत्रजः' इति ब्राह्माच्चेति वाचस्प-तिः। यत्तु केचित् 'सदोपवीतिना भाव्यम्' इत्यस्य पुरुषार्थत्वात् प्राचीनावीतका-लेऽप्युपवीतान्तरेण तत्कार्यमेवेति, तन्न; विशेषेण बाधात्"इति॥

## पुराणैकोद्दिष्टश्राद्धम्

[322]ಕೆಲವರು"एकोद्दिष्टं दैवहीनमेकार्घ्यैकपवित्रकम्। आवाहनाग्नौकरणरहितं ह्यपसव्यवत्" ಎಂಬ ಯಾಜ್ಞವಲ್ಕ್ಯಾದಿ ವಚನದಂತೆ ಪುರಾಣಕೋದ್ದಿಷ್ಟದಲ್ಲೂ ಅವಾಹನಾದಿಗಳು ಇಲ್ಲವೆನ್ನುವರು ಇದು ಯುಕ್ತವಲ್ಲ ಆಶ್ವಲಾಯನಗೃಹ್ಯಪರಿಶಿಷ್ಟದ "अथपुराणमेकोद्दिष्टं प्रेतचतुर्दश्यां शस्त्रहतानामिष्यते प्रत्याब्दिके च...पार्वणैकदेशवत्तन्त्रं सर्वं पितृशब्दमेकवदूहेत्पाणौ सोमाग्निमन्त्राभ्यामेव होमो नैकेत्रापि दैवं कुर्वन्ति नार्घ्यपिण्डावित्येके" ಎಂಬ ವಚನದಂತೆ ಆಶ್ವಲಾಯನಿಗಳಿಗೆ ದೈವವರಣ ಅರ್ಘ್ಯ,ಪಿಂಡದಾನಗಳು ವಿಕಲ್ಪವಾಗಿ ಹೇಳಲ್ಪಟ್ಟಿರುತ್ತದ. ಹಾಗೆಯೇ ಪುರಾಣಕೋದ್ದಿಷ್ಟದಲ್ಲಿ ಅಮಂತ್ರಕಾವಾಹನೆಯೂ ಯುಕ್ತವೆಂದು ಕಾಣುತ್ತದೆ. ಚಂದ್ರಿಕಾಕಾರ, ಹೇಮಾದ್ರ್ಯಾದಿಗಳು ಸಂಕಲ್ಪಶ್ರಾದ್ಧವಿಷಯದಲ್ಲಿ "ಆವಾಹನೆ ಇಲ್ಲದಿದ್ದರೆ ದೇವಪಿತೃಸಾನ್ನಿಧ್ಯಲೋಪವಾಗುವುದರಿಂದ ಅಮಂತ್ರಕಾವಾಹನೆಯು ಅವಶ್ಯ"ವೆಂದಿರುವುದು ಇಲ್ಲಿಯೂ ಸ್ವೀಕರಣಾರ್ಹ. ಹಾಗೆಯೇ ಮೇಲ್ಕಂಡ ಯಾಜ್ಞವಲ್ಕ್ಯವಚನಕ್ಕೆ ಅಪರಾರ್ಕಕಾರರು "आवाहनमन्त्रेणाग्नौकरणेन होमेन च रहितम्" ಎಂದೂ, ಸ್ಮೃತಿಮುಕ್ತಾಫಲಕಾರರು "आवाहनेन अग्नौकरणेन होमेन च समन्त्रकेणरहितम्" ಎಂದೂ ವಿಶ್ಲೇಷಣೆಯನ್ನಿತ್ತಿರುವುದನ್ನು ಗಮನಿಸಿದಾಗ ಅಮಂತ್ರಕಾವಾಹನೆಯು ಯುಕ್ತವೆನಿಸುತ್ತದೆ ॥ [323]"नवश्राद्धं दशाहानि नवमिश्रन्तु षड्क्रतून्। अतःपरं पुराणं वै त्रिविधं श्राद्धमुच्यते। यस्मिन्नेव पुराणे वा विश्वेदेवा न लेभिरे। आसुरं तद्भवेच्छ्राद्धं वृषलं मन्त्रवर्जितम्" इति बह्वृचपरिशिष्टात्। एतच्च बह्वृचानामेव। तेन तेषानेवोक्तेः अन्येषां तु नात्र विश्वेदेवा कात्यायनोक्तेस्तन्निषेध एवेति पृथ्वीचन्द्रोदयः। "एकोद्दिष्टं यत्र यत्र सपिण्डीकरणात् परम् । देवयुक्तं तु तत्कार्यं दैवहीनं न तद्भवेत्" इति सुमन्तुः॥

### महालयश्राद्धम्

[327]पृथ्वीचन्द्रोदये वृद्धमनुः"आषाढीमवधिं कृत्वा पञ्चमं पक्षमाश्रिताः। काङ्क्षन्ति पितरः क्लिष्टा अन्नमप्यन्वहं जलम्" इति॥ [328]मार्कण्डेयः"कन्यागते सवितरि दिनानि [329]दशपञ्च च। पार्वणेनैव विधिना तत्र श्राद्धं विधीयते॥ प्रतिपद्धनलाभाय द्वितीया हि प्रजाप्रदा। चरार्थिनी तृतीया च चतुर्थी शत्रुनाशिनी। श्रियं प्राप्नोति पञ्चम्यां षष्ठ्यां पूज्यो भवेन्नरः। गणाधिपत्यं सप्तम्यामष्टम्यां बुद्धिमुत्तमाम्। शिवं

नवम्यां प्राप्नोति दशम्यां पूर्णकामताम्। वेदांस्तथाऽऽप्नुयात् सर्वान् एकादश्यां क्रियापरः॥ द्वादश्यां हेमलाभं तु प्राप्नोति पितृपूजकः। प्रज्ञां मेधां पशुं पुष्टिं स्वातन्त्र्यं वृद्धिमुत्तमाम्। दीर्घमायुरथैश्वर्यं कुर्वाणस्तु त्रयोदशीम्। अवाप्नोति न सन्देहः श्रद्धे श्रद्धपरो नरः॥ युवानः पितरो यस्य मृताः शस्त्रगा वै हताः। तेन कार्यं चतुर्दश्यां तेषां तृप्तिमभीप्सता। श्राद्धं कुर्वन्नमावास्यां यत्नेन पुरुषः शुचिः। सर्वान् कामानत्राप्नोति स्वर्गे वासं समश्नुते" इति॥ [330]देवलः"अहः षोडशकं यत्तु शुक्लप्रतिपदा सह। चन्द्रक्षयाविशेषेण सापि दर्शात्मिका स्मृता" इति॥ [331]कालादर्शे "पक्षाद्यादि च दर्शान्तं पंचम्यादि दिगादि च। अष्टम्यादि यथाशक्ति कुर्यादापरपक्षिकम्"॥ पितृमेधसारेऽपि "पंचम्यादि दशम्यादि अष्टम्यादि वा दर्शान्तं क्वचिद्दिने वा"इति। [332]अत्र सर्वत्र दर्शान्तमिति सम्बध्यते॥ [333,343]संस्काररत्नमालायम् कात्यायनोऽपि "या तिथिर्यस्य मासस्य मृताहे तु प्रवर्तते। सा तिथिः पितृपक्षे तु पूजनीया प्रयत्नतः॥ तिथिच्छेदो न कर्तव्यो विनाऽऽशौचं यदृच्छया। पिण्डश्राद्धं च कर्तव्यं विच्छित्तिं नैव कारयेत्" इति॥ [333*]अत्र विनाऽऽशौचमिति वचनात्पितृमृताहे सकृन्महालयपक्षपरिग्राहिणो भार्यायां रजस्वलायामपि तद्दिने महालयश्राद्धं भवत्येवेति केचित्। वस्तुतस्तु यावद्वृश्चिकदर्शनादितिकालान्तरस्य सत्त्वादनिषिद्धे दिनान्तर एव महालयश्राद्धं कार्यम्। तत्रापि रजस्वलायां तु कालान्तराभावात्तत्रैव श्राद्धं पञ्चमदिने वेति मतद्वयं दर्शादिवदत्रापि द्रष्टव्यम्। इदं निषेधतत्प्रतिप्रसवपर्यालोचनं महालयपक्षान्तर्गततिथौ सकृन्महालयासंभवेन यदा तिथ्यन्तरेऽनुष्ठानं तदैव। महालयान्तर्गतमृततिथौ सकृन्महालयानुष्ठानं मुख्यं तत्र न निषेधः। "अशक्तः पक्षमध्ये तु करोत्येकदिने यदि। निषिद्धेऽपि दिने कुर्यात्पिण्डदानं यथाविधि" इतिकात्यायनोक्तेः। अत एव निषेधप्रयोजकनक्षत्रादियुक्तायामपि तिथौ सकलदेशीयशिष्टानामनुष्ठानम्। [334]भरणी पितृपक्षे तु महती परिकीर्तिता। अस्यां श्राद्धं कृतं येन स गयाश्राद्धकृद्भवेत्॥ [335]ब्रह्माण्डपुराणे "आषाढ्याः पञ्चमे पक्षे गयामध्याष्टमीस्मृता। त्रयोदशी गजच्छाया गयास्तुल्या तु पैतृकी"इति॥ [337]वैद्यनाथीये वसिष्ठः "ऊर्ध्वं चतुर्थ्याः पितृभ्यो दद्यात्" इति॥ [341]पारिजाते वसिष्ठः“नन्दायां भार्गवदिने चतुर्दश्यां त्रि-

जन्मसु। एषु श्राद्धं न कुर्वीत गृही पुत्रधनक्षयात्” इति॥ नारदः "कृत्तिकायां च नन्दायां भृगुवासरे त्रिजन्मसु। पिण्डदानं न कर्तव्यं कुलक्षयकरं यतः॥ त्रिजन्मसु त्रिपादेषु नन्दासु भृगुवासरे। धातृपौष्णभयोः श्राद्धं न कर्तव्यं कुलक्षयात्" इति। ’कृत्तिकापुनर्वसूत्तरफल्गुनीविशाखोत्तराषाढापूर्वाभाद्रपदास्त्रिपादनक्षत्राणि। धातृनक्षत्रं रोहिणी। पौष्णं रेवती’॥ वृद्धगार्ग्यः“प्राजापत्ये च पौष्णे च पित्रर्क्षे भार्गवे तथा। यस्तु श्रद्धं प्रकुर्वीत तस्य पुत्रो विनश्यति”। ’प्राजापत्यं रोहिणी। पौष्णं रेवती, पित्रर्क्षं मघाः’। [342]पराशरमाधवीये कार्ष्णाजिनिः"नभस्यस्यापरे पक्षे श्राद्धं कुर्याद्दिने दिने। नैव नन्दादि वर्ज्यं स्यान्नैव निन्द्या चतुर्दशी" इति॥ [344]संग्रहे "अमापाते भरण्यां च द्वादश्यां पक्षमध्यके। तथा तिथिं च नक्षत्रं वारं च न विचारयेत्” इति॥ [345]वैद्यनाथीये शाट्यायनिः"पुण्यः कन्यागतः सूर्यः पुण्यः पक्षश्च पञ्चमः। कन्यास्थार्कान्वितः पक्षः सोऽत्यन्तं पुण्यमुच्यते" इति॥ [336]हेमाद्रौ नागरखण्डे"आषाढ्याः पञ्चमे पक्षे कन्यासंस्थे दिवाकरे। यो वै श्राद्धं पितुर्दद्यादेकस्मिन्नपि वासरे॥ तस्य संवत्सरं यावत्संतुष्टाः पितरो ध्रुवम्” इति। स्मृत्यन्तरे "आषाढ्याः पञ्चमे पक्षे कन्यासंस्थे दिवाकरे। मृताहनि पितुर्यो वै श्राद्धं दास्यति मानवः॥ तस्य संवत्सरं यावत्संतुष्टाः पितरो ध्रुवम्” इति। [346]पक्षे श्राद्धाकरणे गौणकालमाह हेमाद्रौ यमः "हंसे वषासु कन्यास्थे शाकेनापि गृहे वसन्। पञ्चम्योरन्तरे दद्यादुभयोरपि पक्षयोः’ आश्विनकृष्णशुक्लपञ्चम्योर्मध्य इत्यर्थः"॥ [347]तत्राप्यसम्भवे कालविशेषमाह सुमन्तुः- "येयं दीपान्विता राजन् ख्याता पञ्चदशी भुवि। तस्यां दद्यान्न चेद्दत्तं पितॄणां वै महालये"इति॥ [348]तत्राप्यसम्भवे भारते "यावच्च कन्यातुलयोः क्रमादास्ते दिवाकरः। शून्यं प्रेतपुरं तावद्वृश्चिकं यावदागतः"॥ ब्राह्मे "वृश्चिके समतिक्रान्ते पितरौ दैवतैः सह। निःश्वस्य प्रतिगच्छन्ति शापं दत्वा सुदारुणम्"॥ [349]निर्णयसिन्धौ नारदः "पक्षश्राद्धं यदा कुर्यात्तर्पणं तु दिने दिने। सकृन्महालये चैव परेऽहनि तिलोदकम्" इति॥ [350]वैद्यनाथीये स्मृत्यन्तरे "पित्रोर्मृतदिनात्पूर्वं न तन्मासे महालयम्। पित्रोः श्राद्धं तु निर्वर्त्य महालयमथाचरेत्"इति॥ [351]हेमाद्रावादित्यपुराणे "अपि कन्यागते सूर्ये काम्ये च धुरिलोचनौ"इति॥ [352]संग्रहे "ताताम्बात्रितयं सपत्नजननी माता-

महादित्रयम्। सस्त्रि स्त्रीतनयादि तातजननीस्वभ्रातरः सस्त्रियः। ताताम्बात्मभगिन्यपत्यधवयुग्जायापिता सद्गुरुः शिष्याप्ताः पितरो महालयविधौ तीर्थे तथा तर्पणे" इति॥ व्याघ्रपादस्तु "आदौ पिता तथा माता सापत्नजननी तथा॥ मातामहाः सपत्नीका आत्मपत्न्यस्तदन्तरम्। सुतभ्रातृपितृव्याश्च मातुलाश्च सपत्निकाः॥ दुहिता च स्वसा प्रोक्ता दौहित्रो भागिनेयकः। पितृष्वसा मातृष्वसा श्वशुरो गुरवस्तथा॥ एते स्युः पितरस्तीर्थे तर्पणे च महालये"इति। [357]निर्णयसिन्धौ स्मृतिदर्पणे "अनेका मातरो यस्य श्राद्धे चापरपक्षके। अर्घ्यदानं पृथक्कुर्यात् पिण्डमेकं निर्वपेत्"। 'जीवन्मातृकस्तु सापत्नमातुरेकोद्दिष्टं कुर्यान्न पार्वणम्'इति॥ [364]निर्णयसिन्धौ बृहन्मनुः "आन्वष्टक्यं च यन्मातुर्गयाश्राद्धं महालयम्। पितृपत्नीष च श्राद्धं कार्यं पार्वणवद्भवेत्"इति॥ सङ्ग्रहे मातृत्रयानन्तरं सापत्नमातुरुक्तेः सापत्नामातॄणामेकोद्दिष्टं न पार्वणमिति बहवः। [365]**वैद्यनाथीये बैजावापः "कीर्त्वा पितॄणां त्रीण्येव कुर्यात्पात्राणि धर्मवित्। एकस्मिन्वा बहुषु वा ब्राह्मणेषु यथाविधि" पित्रादीनां त्रयाणामेकैकस्थानेकब्राह्मणनिमन्त्रने सर्वेषामेकब्राह्मणनिमन्त्रणेऽपि त्रीण्येवार्घ्यपात्राणि तिलान् कीर्त्वा प्रक्षिप्य कुर्यान्न तु ब्राह्मण संख्ययेत्यर्थः**"ಇತ್ಯಾದಿ ಅನೇಕ ವಚನಗಳಂತೆ ಪಿತೃಸ್ಥಾನಗಳಲ್ಲಿ ಒಬ್ಬಬ್ರಾಹ್ಮಣನೇ ನಿಯುಕ್ತನಾಗಿದ್ದರೂ ಅರ್ಘ್ಯಪಾತ್ರೆಯು ಪ್ರತ್ಯೇಕವಾಗಿರಬೇಕು ಎಂಬ ನಿಯಮವು ಇಲ್ಲಿಯೂ ಅನ್ವಯವಾಗುತ್ತದೆ. **स्मृत्यर्थसारे "द्रव्याभावे द्विजाभावे यद्येको ब्राह्मणो भवेत्। पात्राणि सादयेत्त्रीणि न तु ब्राह्मणसंख्यया"** ಇತ್ಯಾದಿ ವಚನಗಳಂತೆ ಬ್ರಾಹ್ಮಣಸಂಖ್ಯೆಯನ್ನನುಸರಿಸಿ ಪಾತ್ರಯೋಜನೆಯುಕ್ತವಾಗುವುದಿಲ್ಲ. ಎಂಟು ಬ್ರಾಹ್ಮಣರ ಪಕ್ಷಾದಿಗಳಲ್ಲಿ ಪತ್ನಿಯಸ್ಥಾನಕ್ಕೆ ಪ್ರತ್ಯೇಕ ಬ್ರಾಹ್ಮಣರನ್ನು ಯೋಜಿಸುವಾಗ 'ಪತ್ನಿಯರಿಗೆ ಪ್ರತ್ಯೇಕ ಪಾತ್ರೆಯೋ ಅಥವಾ ಏಕೋದ್ದಿಷ್ಟರಿಗಿರಿಸಿದ ಪಾತ್ರೆಯೋ' ಎಂಬ ಪ್ರಶ್ನೆಯು ಉತ್ಪನ್ನವಾಗುತ್ತದೆ.

[359]निर्णयसिन्धौ हेमाद्रौ पुराणान्तरे "उपाध्यायगुरुश्वश्रूपितृव्याचार्यमातुलाः। श्वशुरभ्रातृतत्पुत्रपुत्रर्त्विक्शिष्यपोषकाः॥ भगिनीस्वामिदुहितृजामातृभगिनीसुताः। पितरौ पितृपत्नीनां पितुर्मातुश्च या स्वसा॥ सखिद्रव्यदशिष्याद्यास्तीर्थे चैव महालये। एकोद्दिष्टविधानेन पूजनीयाः प्रयत्नतः'। इति॥ इतरेषां पित्रादीनां पार्वणमर्थसिद्धम्। [368]अत्र क्रमान्यत्वेऽप्याचाराद्व्यवस्था" इति॥ पृथिवीचन्द्रोदये चतुर्विंशतिमते

"एकस्मिन्ब्राह्मणे सर्वानाचार्यान्तान्प्रपूजयेत्। दश द्वादश वा पिण्डान्दद्यादकरणं न तु" इति। निर्णयामृते "आचार्यगुरुशिष्येभ्यः सखिज्ञातिभ्य एवच। तत्पत्नीभ्यश्च सर्वाभ्यस्तथैव च जलांजलीन्। पिंडांस्तेभ्यः सदा दद्यात्पृथग्भाद्रपदे नरः। तीर्थेषु चैव सर्वेषु माघमासे मघासु च। एकस्मिन्ब्राह्मणे सर्वानाचार्यादीन्प्रपूजयेत्" इति॥ [369]वैद्यनीये "जीवेद्यदि तु वर्गादिस्तद्वर्गं परिवर्जयेत्" इति। [370]दैवलः "दैवाद्यं नैव कुर्वीत दैवान्तं नैव कुत्रचित्। दैवाद्यन्तं हि कुर्वीत श्राद्धरक्षणहेतुना" आदौ देवा विश्वेदेवा अन्ते देवा महाविष्णुरिति व्याख्यातं निर्णयामृते। [371]विधवायास्तु विशेषः संग्रहे "चत्वारि पार्वणानीह विधवायाः सदैव हि। स्वभर्तृश्वशुरादीनां मातापित्रोस्तथैव च॥ ततो मातामहानां च श्राद्धदानमुपक्रमेत्" इति। [372]अशक्तौ तु स्मृतिरत्नावल्याम् "स्वभर्तृप्रभृतित्रिभ्यः स्वपितृभ्यस्तथैव च। विधवा कारयेच्छ्राद्धं यथाकालमतन्द्रिता" इति॥

## तीर्थश्राद्धम्

[373]चन्द्रिकायां देवीपुराणे "श्राद्धं च तत्र कर्तव्यमर्घ्यावाहनवर्जितम्"। हेमाद्रौ "अर्घ्यमावाहनं चैव द्विजांगुष्ठनिवेशनम्। तृप्तिप्रश्नं च विकिरं तीर्थश्राद्धे विवर्जयेत्"॥ भविष्ये "आवाहनं विसृष्टिश्च तत्र तेषां न विद्यते। आवाहनं न तीर्थे स्यान्नर्घ्यदानं तथा भवेत्॥ आहूताः पितरस्तीर्थे कृताघ्याः सन्ति वै यतः"इति॥ [374]चन्द्रिकायां पद्मपुराणे "तीर्थश्राद्धं प्रकुर्वीत पक्वान्नेन विशेषतः। आमान्नेन हिरण्येन कन्दमूलफलैरपि" इति॥ [375]स्कन्दपुराणे "ब्राह्मणान्न परीक्षेत तीर्थक्षेत्रनिवासिनः" एतच्च श्राद्धार्हब्राह्मणालाभे वेदितव्यमिति त्रिस्थलीसेतुसारे॥ [376]तथा "आवाहनं न दिग्बन्धो न दोषो दृष्टिसम्भवः। सकारुण्यं च कर्तव्यं तीर्थश्राद्धं विचक्षणैः" इति॥ [377]देवीपुराणे हेमाद्रौ ब्राह्मे च "सक्तुभिः पिण्डदानं च संयावैः पायसेन वा। कर्तव्यमृषिभिः प्रोक्तं पिण्याकेन गुडेन वा"इति

## अभिश्रवणम्

380नारायणीये "श्राद्धभोजनकाले तु कर्ता भ्राता सुतोऽपि वा। दौहित्रो वाऽथ पौत्रो वा सपिण्डो वा विचक्षणः॥ यत्राभिश्रावयेद्धोक्तॄन् तच्छ्राद्धं पावनं भवेत्। अन्यं वाऽऽहूय तं वृत्वा श्रावयेत्तं निरीक्षयेत्॥ श्राद्धक्रिया समाप्तौ तु प्रदद्याज्जपदक्षिणाम्। अत्युच्चैरतिशीघ्रञ्च हित्वेव श्रावयेद्बुधः॥ रक्षोघ्नं पैतृकञ्चैव दिवाकीर्त्ययुतं तथ॥ वैष्णवं त्रिसुपर्णञ्च नाचिकेतं तथा पठेत्। राक्षोघ्नानि जपेऽशक्तौ जपेत्पुरुषसूक्तकम्॥ तत्राप्यशक्तः गायत्रीमातृप्तेरसकृज्जपेत्"इति

## ಶ್ರಾದ್ಧೋಪಯೋಗಿ ವಿಷಯಗಳು

**ಶ್ರಾದ್ಧಾರ್ಥ**;ಸೂಕ್ತ ದೇಶ ಮತ್ತು ಕಾಲಗಳಲ್ಲಿ ಶ್ರದ್ಧೆಯಿಂದ ಶಾಸ್ತ್ರೋಕ್ತ ರೀತಿಯಲ್ಲಿ ಪಿತೃಗಳನ್ನುದ್ದೇಶಿಸಿ ಸತ್ಪಾತ್ರರಿಗೆ ಕೊಡುವ ದಾನವು ಶ್ರಾದ್ಧವೆನಿಸುತ್ತದೆ. **ಭೋಕ್ತೃಬ್ರಾಹ್ಮಣಸಂಖ್ಯೆ**; ದೇವಸ್ಥಾನಕ್ಕೆ ಎರಡು ಪಿತ್ರ್ಯಸ್ಥಾನಕ್ಕೆ ಮೂರು ಅಥವಾ ಪ್ರತಿಸ್ಥಾನಕ್ಕೆ ಒಬ್ಬೊಬ್ಬ ವಿಪ್ರ ಹೀಗೆ ವರಿಸಬೇಕ ಆಶ್ವಲಾಯನಿಗಳು ದೇವಸ್ಥಾನಕ್ಕೆ ಒಬ್ಬರು ಅಥವಾ ಇಬ್ಬರಿದ್ದರೂ ವರಣಾದಿಗಳಲ್ಲಿ ಪೂರೂರವಾರ್ದ್ರವರನ್ನು ಸಮಷ್ಟಿಯಾಗಿ ಏಕ ದೇವತಾತ್ವದಿಂದ ವರಿಸಬೇಕು. **ವಿಶ್ವೇದೇವರು**; ಇಷ್ಟಿಶ್ರಾದ್ಧದಲ್ಲಿ ಕ್ರತುದಕ್ಷರು, ವೃದ್ಧಿಯಲ್ಲಿ ಸತ್ಯವಸುಗಳು, ನೈಮಿತ್ತಿಕದಲ್ಲಿ ಮತ್ತು ನವಾನ್ನಾಲಂಭನದಲ್ಲಿಕಾಮಕಾಲರು, ಮಹಾಲಯದಲ್ಲಿಮತ್ತ ಕಾಮ್ಯದಲ್ಲಿಧುರಿಲೋಚನರು, ಪಾರ್ವಣದಲ್ಲಿ ಮತ್ತು ಉಳಿದೆಲ್ಲ ನಿರ್ದೇಶಿಸಲ್ಪಡದ ಶ್ರಾದ್ಧಗಳಲ್ಲಿ ಪುರೂರವಾರ್ದ್ರವಕರು ವರಣೀಯರು. **ಶ್ರಾದ್ಧಯೋಗ್ಯಬ್ರಾಹ್ಮಣರು**; ವೇದಪಾರಗನೂ, ಸಂಧ್ಯಾವಂದನಾದಿ ಸ್ವಕರ್ಮಾನುಷ್ಠಾನ ನಿರತನೂ, ಶೀಲಗುಣಸಂಪನ್ನನೂ, ಸತ್ಕುಲಪ್ರಸೂತನೂ, ಕುಷ್ಠಾಪಸ್ಮಾರಾದಿ ರೋಗರಹಿತನೂ ಆದ ಬ್ರಾಹ್ಮಣನನ್ನು ಶ್ರಾದ್ಧದಲ್ಲಿ ವರಿಸಬೇಕು. ಅಂತಹ ವಿಪ್ರಾಭಾವದಲ್ಲಿ ಸದ್ಗುಗುಣಸಂಪನ್ನರಾದ ಬಂಧು, ಶಿಷ್ಯ, ಸಮಾನಪ್ರವರ, ಅಳಿಯ,ಸೋದರಮಾವ,ಮಗಳಮಗ ಇವರು ಗ್ರಾಹ್ಯರು, ದೌಹಿತ್ರನು ಸದ್ಗುಣಯುಕ್ತನೂ ವೇದಪಾರಗನೂ ಆಗಿದ್ದರೆ ಅವನು ಅತಿಪ್ರಶಸ್ತನು. **ವರ್ಜನೀಯ ಬ್ರಾಹ್ಮಣರು**; ಕುಷ್ಠಾಪಸ್ಮಾರಾದಿ ರೋಗವುಳ್ಳವನನ್ನು, ದ್ವೇಷಿಯನ್ನು,ಗಾಯಕನನ್ನು,ವೈದ್ಯನನ್ನು, ಪತಿತನನ್ನು, ಸ್ವಾನುಷ್ಠಾನರಹಿತನನ್ನು, ರಜಸ್ವಲಾಭರ್ತೃವನ್ನು, ಗರ್ಭಿಣೀಪತಿಯನ್ನು, ನಾಸ್ತಿಕನನ್ನು, ದುಶ್ಚರಿತನನ್ನು, ಆಚಾರಹೀನನನ್ನು, ಸೋದರರನ್ನು, ಸಗೋತ್ರನನ್ನು, ಸಮಾನಪ್ರವರನ್ನು, ಮಿತ್ರನನ್ನು, ಬಂಧುಗಳನ್ನು ಶ್ರಾದ್ಧದಲ್ಲಿವರಿಸಬಾರದು. ಒಂದು ಶ್ರಾದ್ಧದಲ್ಲಿ ತಂದೇ ಮಕ್ಕಳು, ಭ್ರಾತೃಗಳು ಇವರನ್ನುವರಿಸಬಾರದು. **ಶ್ರಾದ್ಧಪೂರ್ವಾಹ್ಣಕೃತ್ಯ**; ಶ್ರಾದ್ಧದ ಪೂರ್ವದಿನದಂದು ಶ್ರಾದ್ಧಭೂಮಿಯನ್ನು ಗೋಮಯಲೇಪನಾದಿಗಳಿಂದ ಶುದ್ಧಿಗೊಳಿಸಿ, ವಸ್ತ್ರಾದಿಗಳನ್ನು ಒಗೆದು ಅಣಿಗೊಳಿಸಬೇಕು, ಮತ್ತು ಏಕಭುಕ್ತನಾಗಿರಬೇಕು. **ಶ್ರಾದ್ಧಕರ್ತೃನಿಯಮ**; ಶ್ರಾದ್ಧಕರ್ತೃವು ಶ್ರಾದ್ಧದಂದು ಮತ್ತು ಪೂರ್ವದಿನದಂದು ಏಕಭುಕ್ತನಾಗಿರಬೇಕು (ಒಂದೇ ಹೊತ್ತು ಭೋಜನಮಾಡಬೇಕು) ಮತ್ತು ದಂತಧಾವನ ತಾಂಬೂಲಸೇವನ ಅಭ್ಯಂಜನಸ್ನಾನ ಸ್ತ್ರೀಸಂಗ ಪರಾನ್ನಗಳನ್ನು ತ್ಯಜಿಸಬೇಕು. ನಿಮಂತ್ರಿತ ವಿಪ್ರನನ್ನು ತ್ಯಾಗವನ್ನು ಮಾಡಬಾರದು. ಮರೆತು ತ್ಯಾಗ ಮಾಡಿದರೆ ಅವನನ್ನೂ ವಿಪ್ರರೊಂದಿಗೆ ಕುಳ್ಳಿರಿಸಿ ಊಟಮಾಡಿಸಬೇಕು. ಬುದ್ಧಿಪೂರ್ವಕತ್ಯಾಗಕ್ಕೆ ಚಾಂದ್ರಾಯಣಕೃಚ್ಛ್ರ ಆನುಷ್ಠಾನ **ಭೋಕ್ತೃನಿಯಮ**; ಶ್ರಾದ್ಧದಂದು ಪುನರ್ಭೋಜನ, ಪ್ರಯಾಣ, ಭಾರಹೊರುವುದು,

ಪ್ರತಿಗ್ರಹ, ಅಧ್ಯಯನ, ಹೋಮ ಇವುಗಳನ್ನು ತ್ಯಜಿಸಬೇಕು ಮತ್ತು ಶ್ರಾದ್ಧದ ಪೂರ್ವ ಮತ್ತು ಶ್ರಾದ್ಧದಂದು ಸ್ತ್ರೀಸಂಗವನ್ನು ತ್ಯಜಿಸಬೇಕು. ನೀರನ್ನು ಹತ್ತು ಗಾಯತ್ರಿಯಿಂದ ಅಭಿಮಂತ್ರಿತ ನೀರನ್ನು ಕುಡಿದು ಸಾಯಂ ಸಂಧ್ಯೆ ಮತ್ತು ಔಪಾಸನವನ್ನ ಅನುಷ್ಠಿಸಬೇಕು. **ನಾಮಾದ್ಯುಚ್ಚಾರಣೆ;** ಆವಾಹನೆ, ಸಂಕಲ್ಪ, ಅರ್ಘ್ಯ ಪಿಂಡದಾನ ಆಸನದಾನ, ಪಿಂಡಾಂಜನಾಭ್ಯಂಜನ, ಗಂಧಧೂಪಾದಿದಾನ, ಪಾದ್ಯ, ಕ್ಷಣ, ಅಕ್ಷಯ್ಯವಾಚನ ಇವುಗಳಲ್ಲಿ ನಾಮಗೋತ್ರಸಂಬಂಧಗಳ ನ್ನುಚ್ಚರಿಸಬೇಕು (ಆಶ್ವಲಾಯನಿಗಳಿಗೆ ಅರ್ಘ್ಯದಾನದಲ್ಲಿ ನಾಮಾದ್ಯುಚ್ಚಾರಣೆಯಿಲ್ಲ.). **ವಿಭಕ್ತಿ ನಿಯಮ;**ಸಂಕಲ್ಪ ಆಸನದಾನ ಮತ್ತು ಅಕ್ಷಯ್ಯವಾಚನದಲ್ಲಿ ಷಷ್ಠೀ, ಆವಾಹನೆಗೆ ದ್ವಿತೀಯಾ, ಅನ್ನಾದಾನಕ್ಕೆ ಚತುರ್ಥೀ, ಉಳಿದಕಡೆ ಸಂಬೋಧನಾವಿಭಕ್ತಿಯನ್ನು ಬಳಸಬೇಕು. **ಆಚಮನಕಾಲ;** ಕರ್ತವು ಶ್ರಾದ್ಧಾರಂಭದಲ್ಲಿ ಮತ್ತು ಕೊನೆಗೆ ಪಾದಪ್ರಕ್ಷಾಲನಾನಂತರ ಅರ್ಚನಾನಂತರ ವಿಕಿರ ಪಿಂಡಪ್ರದಾನಗಳ ಆನಂತರ ಹೀಗೆ ಆರು ಬಾರಿ ಆಚಮನವನ್ನು ಮಾಡಬೇಕು ಶ್ರಾದ್ಧಾರಂಭದಲ್ಲಿ ಮತ್ತು ಅವಸಾನದಲ್ಲಿ ಎರಡು ಬಾರಿಯೂ ಉಳಿದೆಲ್ಲ ಕಡೆಗೆ ಒಂದೊಂದು ಬಾರಿಯೂ ಆಚಮನವನ್ನು ಮಾಡಬೇಕು. ಹಾಗೆಯೆ ಪಾದಪ್ರಕ್ಷಾಳನಾನಂತರ ಬ್ರಾಹ್ಮಣರಿಗಿಂತ ಮೊದಲು ಮತ್ತು ಬ್ರಾಹ್ಮಣಭೋಜನಾನಂತರ ಬ್ರಾಹ್ಮಣರ ಆಚಮನದಪರದಲ್ಲೂ ಅಚಮನ ಮಾಡಬೇಕು. **ವರಣ;**ಶ್ರಾದ್ಧದ ಮೊದಲ ದಿನ ಬ್ರಾಹ್ಮಣರ ಬೋಜನಾನಂತರ ಅಥವಾ ಶ್ರಾದ್ಧದಂದು ಪೂರ್ವಾಹ್ಣದಲ್ಲಿ ಪ್ರಥಮವರಣ. ಯವತಿಲೋದಕ ಬ್ರಹ್ಮದಂಡಗಳ ಆನಂತರ ಎರಡನೇ ವರಣ. ಶ್ರಾದ್ಧದಪ್ರಧಾನ ಸಂಕಲ್ಪಾನಂತರ ಮೂರನೇ ವರಣ ಹೀಗೆ ಮೂರು ಬಾರಿ ಬ್ರಾಹ್ಮಣವರಣವನ್ನು ಮಾಡಬೇಕು.**ಸಂಕಲ್ಪ;**ವಿಪ್ರೋಪವೇಶನಾನಂತರ ಪ್ರಧಾನಸಂಕಲ್ಪವೆಂದು ಪರಿಶಿಷ್ಟವಚನ, ಕೆಲವರು ಎರಡು ಬಾರಿ ಸಂಕಲ್ಪ ಅವಶ್ಯವೆನ್ನುವರು ಆಗ ನಿಮಂತ್ರಣೋತ್ತರ ಪ್ರಥಮ ಸಂಕಲ್ಪವು ಮತ್ತು ಉಪವೇಶನಾನಂತರ ದ್ವಿತೀಯ ಸಂಕಲ್ಪವು. ಮತ್ತು ಕೆಲವರಪಕ್ಷದಲ್ಲಿ ಮೂರುಬಾರಿ ಸಂಕಲ್ಪವು ಅವಶ್ಯ ಆಗ ನಿಮಂತ್ರಣಪೂರ್ವಪ್ರಥಮ, ನಿಮಂತ್ರಣೋತ್ತರ ದ್ವಿತೀಯ, ಉಪವೇಶನಾನಂತರ ತೃತೀಯ ಸಂಕಲ್ಪವು. ಆಗ ಪ್ರಯೋಗದಲ್ಲಿ ವಿವರಿಸಿದಂತೆ ಪ್ರಥಮ ಸಂಕಲ್ಪವು. ಎರಡನೇ ಸಂಕಲ್ಪವು ಉಪಕ್ರಾನ್ತಂಶ್ರಾದ್ಧಂ ಕರಿಷ್ಯೇ ಎಂಬುದು, ಮೂರನೆಯಸಂಕಲ್ಪವು ಪ್ರಕ್ರಾನ್ತಂ ಶ್ರಾದ್ಧಂ ಕರಿಷ್ಯೇ ಎಂದು ಹೀಗೆ ಚಂದ್ರಿಕಾಕಾರ ಮತ್ತು ಗೃಹ್ಯಾಗ್ನಿಕಾರರ ಮತ. **ಪಾದ್ಯ;**ಗೃಹಾಂಗಣದಲ್ಲಿ ಗೋಮಯದಿಂದ ದೇವಸ್ಥಾನಕ್ಕೆ ಚತುರಸ್ರ ಮತ್ತು ಪಿತೃಸ್ಥಾನಕ್ಕೆ ವರ್ತುಲಮಂಡಲಗಳನ್ನು ಮಾಡಿ, ಬ್ರಾಹ್ಮಣಪಾದಪ್ರಕ್ಷಾಳನೆ ಮಾಡಬೇಕು. **ನೀವೀಬಂಧ;**ಶ್ರಾದ್ಧಗಳಲ್ಲಿ ಬಲಕಟಿಯಲ್ಲೂ ನಾಂದಿಯಲ್ಲಿ ಎಡಕಟಿದೇಶದಲ್ಲೂ ನಿವೀಯನ್ನೂ (ದರ್ಬೆಮತ್ತು ಎಳ್ಳನ್ನು)ಧರಿಸಬೇಕು. **ಪ್ರತಿವಚನ;**ಬ್ರಾಹ್ಮಣರು ಆಸನಾದ್ಯುಪಚಾರಗಳಲ್ಲಿ

ಸ್ವಾಸನಂ,ಸ್ವರ್ಘ್ಯಂ,ಸುಗಂಧಃ' ಇತ್ಯಾದಿ ಯಥೋಕ್ತ ಪ್ರತಿವಚನವನ್ನೀಯಬೇಕು ಬ್ರಾಹ್ಮಣಾಭಾವದಲ್ಲಿ ಮಾಡುವ ಚಟಕಶ್ರಾದ್ಧದಲ್ಲಿ ವಚನ ಪ್ರತಿವಚನಗಳೆರಡನ್ನೂ ಕರ್ತೃವೇ ಹೇಳುವುದು. **ಆಸನ**;ಸುವರ್ಣ,ರಜತ,ತಾಮ್ರನಿರ್ಮಿತಾಸನವು ಪ್ರಶಸ್ತ ಅದಿಲ್ಲದಿದ್ದರೆ ಕಂಬಲಾಸನ ಅಥವಾ ಮಾವು,ಹಲಸು,ಶಮಿ ಇತ್ಯಾದಿ ಮರಗಳ ಮಣೆ ಅದೂ ಲಭ್ಯವಿಲ್ಲದಿದ್ದರೆ ಹುಲ್ಲಿನ ಅಥವಾ ಎಲೆಯ ದರ್ಭೆಯ ಆಸನಗಳು ಗ್ರಾಹ್ಯ. ಕಬ್ಬಿಣದ, ಮುರಿದ, ಸುಟ್ಟ ಆಸನಗಳು ತ್ಯಾಜ್ಯ. **ಅರ್ಘ್ಯಪಾತ್ರೆ**;ದೇವಾರ್ಘ್ಯಕ್ಕೆ ಸುವರ್ಣ ಮತ್ತು ಪಿತ್ರರ್ಘ್ಯಕ್ಕೆ ರಜತಪಾತ್ರೆಯು ಅತ್ಯುತ್ತಮ ಅದು ಲಭ್ಯವಿಲ್ಲದಿದ್ದರೆ ತಾಮ್ರಪಾತ್ರೆ, ಕೈಯ್ಯಿಂದ ಮಾಡಿದ ಮಣ್ಣಿನಪಾತ್ರೆ, ಪಲಾಶಪರ್ಣದ ದೊನ್ನೆ, ಇವುಗಳು ಪ್ರಶಸ್ತವು. ದೇವಪಾತ್ರೆಯು ಅಷ್ಟಾಂಗುಲ ಮತ್ತು ಪಿತ್ಯ್ರಪಾತ್ರೆಯು ದಶಾಂಗುಲ ಪ್ರಮಾಣದ್ದಾಗಿರಬೇಕು, ದೇವಾರ್ಘ್ಯಕ್ಕೆ ಒಂದು ಅಥವಾ ಎರಡು ಪಾತ್ರೆಗಳು. ಪಿತ್ರರ್ಘ್ಯಕ್ಕೆ ಮೂರು ಪಾತ್ರೆಗಳನ್ನು ಬಳಸಬೇಕು. **ಪುಷ್ಪ**; ಸಂಪಿಗೆ,ತಾವರೆ,ಮಲ್ಲಿಗೆ,ಅಶೋಕ.ತಿಲಪುಷ್ಪ ಇವುಗಳುಪ್ರಶಸ್ತ, ಕೇತಕೀ,ದ್ರೊಣ,ಕರವೀರ,ಧತ್ತೂರ,ದಾಸವಾಳ,ಪಗಡೆ,ಕುಂದ ಇವುಗಳು ವರ್ಜ್ಯ ಹಾಗೆಯೇ ಪರಿಮಳವಿಲ್ಲದ ಅತಿಸುಗಂಧವಾದ, ಕೆಂಪು ಹೂವುಗಳು ವರ್ಜ್ಯ, ಕಮಲ ಕೆಂಪಾಗಿದ್ದರೂ ಗ್ರಾಹ್ಯ. **ಪತ್ರಗಳು**; ತುಲಸಿ,ಭೃಂಗರಾಜ,ದೂರ್ವೆ ಇವುಗಳು ಪ್ರಶಸ್ತ, ಬಿಲ್ವವು ನಿಷಿದ್ಧ. **ಅಗ್ನೌಕರಣ**;ಆಶ್ವಲಾಯನಿಗಳಲ್ಲಿ ಔಪಾಸನಾಗ್ನಿ (ಅತಿಪ್ರಣೀತಾಗ್ನಿ)ಯಲ್ಲಿ ಹೋಮಿಸುವ ಮತ್ತು ಪಾಣಿಯಲ್ಲಿ ಹೋಮಿಸುವ ಎರಡು ಕ್ರಮವಿದ್ದು ಎರಡೂ ಶಾಸ್ತ್ರವಿಹಿತವಾಗಿದ್ದು ಇಲ್ಲಿ ಕುಲಾಚಾರವು ವ್ಯವಸ್ಥಾಪಕವಾಗಿದೆ. ಪಾಣಿಹೋಮಪಕ್ಷದಲ್ಲಿ ಬ್ರಹ್ಮಚಾರಿ ಗೃಹಸ್ಥರು ಪಿತ್ರ್ಯ ಪಾಣಿಯಲ್ಲೂ, ವಿಧುರನು ದೇವವಿಪ್ರಪಾಣಿಯಲ್ಲೂ ಹೋಮಿಸಬೇಕು. ಉಭಯ ಪಕ್ಷದಲ್ಲೂ ಶೇಷವನ್ನು ಪಿತ್ರ್ಯಪಾತ್ರೆಗೆ ಬಡಿಸಬೇಕು. **ಭೋಜನಪಾತ್ರೆ**; ಸುವರ್ಣ ರಾಜತ,ಕಾಂಸ್ಯಪಾತ್ರೆಗಳು ಪ್ರಶಸ್ತ, ಅದಿಲ್ಲದಿದ್ದರೆ ಪಲಾಶ,ಮಾವು,ಹಲಸು,ಸಂಪಿಗೆ, ಔದುಂಬರ ಪರ್ಣಗಳಿಂದಾದಎಲೆ. ತಾಮ್ರ, ಹಿತ್ತಾಳೆ,ಕಬ್ಬಿಣ,ಸೀಸಪಾತ್ರೆಗಳು ನಿಷಿದ್ಧ. ಯಾವುದೂ ಸಿಗದಿದ್ದಾಗ ಬಾಳೆಎಲೆಯು ಗ್ರಾಹ್ಯ. **ಪಾಕಕರ್ತೃಗಳು**; ಶ್ರಾದ್ಧಪಾಕವನ್ನು ಕರ್ತೃವು ಸ್ವಯಂ ಅಥವಾ ಪತ್ನಿಯು ಮಾಡಬೇಕು. ಅದು ಸಾಧ್ಯವಾಗದಿದ್ದರೆ ಬಂಧುಗಳು, ಸಪಿಂಡರು, ಸಗೋತ್ರರು, ಸಮಾನಪ್ರವರರು ಅವರಿಲ್ಲದಿದ್ದರೆ ಪಿತೃಮಾತೃವಂಶಜರು. ಅದಿಲ್ಲದಿದ್ದರೆ ಪತಿಪುತ್ರವತಿಯಾದ ಸ್ತ್ರೀಯು ಮಾಡಬೇಕು.**ಬಡಿಸುವಕ್ರಮ**; ಅನ್ನಾದಿ ಸರ್ವಪಾಕಗಳನ್ನು ಕೈಯ್ಯಿಂದ ಬಡಿಸದೇ ಸೌಟಿಂದಲೇ ಬಡಿಸಬೇಕು. ಬೇಯಿಸದ ಮತ್ತು ಎಣ್ಣೆತುಪ್ಪಗಳಲ್ಲಿ ಕರಿದವುಗಳನ್ನು ಕೈಯ್ಯಿಂದ ಬಡಿಸಬಹುದು. ಎಳ್ಳನ್ನು ಬಡಿಸಬಾರದು. ತುಪ್ಪ ಇತ್ಯಾದಿಯ ಪಾತ್ರೆ ಅಥವಾ ದೊನ್ನೆಯನ್ನು ನೆಲದ ಮೇಲಿರಿಸಬೇಕು ಎಲೆಯ ಮೇಲಲ್ಲ. ಅನ್ನ,ಪಾಯಸ,ಭಕ್ಷಣ, ವ್ಯಂಜನ, ತುಪ್ಪ, ತೊವ್ವೆ..

ಈಕ್ರಮದಲ್ಲಿ ಬಡಿಸಬೇಕು. ಉಪ್ಪನ್ನು ಸಾಕ್ಷಾತ್ತಾಗಿ ಎಲೆಗೆ ಬಡಿಸಬಾರದು, ತುಪ್ಪವನ್ನು ಪ್ರತ್ಯೇಕ ಪಾತ್ರೆಗೆ ಬಡಿಸಬೇಕು. **ಭೋಜನಕಾಲದಲ್ಲಿ ಬ್ರಾಹ್ಮಣನಿಯಮ;** ವಿಪ್ರರು ಪವಿತ್ರವನ್ನು ಧರಿಸಿ ಪರಸ್ಪರ ಸ್ಪರ್ಷಿಸದೆ. ಮೌನದಿಂದ ಭೋಜನ ಮಾಡಬೇಕು. ಅಪೇಕ್ಷಿತ ಪದಾರ್ಥಗಳನ್ನು ಕೇಳುವುದರಿಂದ ಮೌನಕ್ಕೆ ಭಂಗವಿಲ್ಲ. **ಶ್ರಾದ್ಧಶೇಷಭೋಜನವಿಷಯ;** ಜ್ಞಾತಿಯ,ಸಗೋತ್ರನ,ಗುರುವಿನ,ಮಾತುಲನ,ಶ್ವಶುರನ, ಅಣ್ಣನ, ಪುತ್ರನ, ಮಹಾತ್ಮರ, ಬ್ರಹ್ಮನಿಷ್ಠಯೋಗಿಯ ಶ್ರಾದ್ಧಶೇಷಾನ್ನ ಭೋಜನ ದೋಷವಲ್ಲ ಉಳಿದವರ ಶ್ರಾದ್ಧಶೇಷಾನ್ನವನ್ನು ಭೋಜನ ಮಾಡಿದರೆ ಪ್ರಾಜಾಪತ್ಯ ಕೃಚ್ಛ್ರವನ್ನಾಚರಿಸಬೇಕು. ಹಾಗೆಯೇ ಶ್ರಾದ್ಧಾನ್ನಶೇಷವನ್ನು ಶೂದ್ರನಿಗೆ ಕೊಡಬಾರದು. **ಶ್ರಾದ್ಧಾಂಗತರ್ಪಣ;** ಪ್ರತ್ಯಾಬ್ದಿಕದಲ್ಲಿ ಮತ್ತು ಸಕೃನ್ಮಹಾಲಯದಲ್ಲಿ ಮರುದಿನ ತಿಲತರ್ಪಣವನ್ನು ಮಾಡಬೇಕು. ಪಕ್ಷಮಹಾಲಯದಲ್ಲಿಯೂ, ಹಿರಣ್ಯ, ಅಷ್ಟಕಾದಿಶ್ರಾದ್ಧದಲ್ಲಿ ಅಂದೇ ತಿಲತರ್ಪಣವನ್ನು ಮಾಡುವುದು. ವೃದ್ಧಿ, ಸಪಿಂಡೀಕರಣ, ಮಾಸಿಕ,ಆಬ್ದಿಕಶ್ರಾದ್ಧಗಳಲ್ಲಿ ತಿಲತರ್ಪಣವಿಲ್ಲ.

★★★★★★★★★★★★ಶಂ★★★★★★★★★★★★

ಈ ಗ್ರಂಥದಲ್ಲಿನ ಲೋಪದೋಷಗಳನ್ನು ಅಥವಾ ಅಶಾಸ್ತ್ರೀಯ ವಿಷಯಗಳನ್ನು ಗಮನಕ್ಕೆ ತಂದರೆ ಪುನ-ರ್ಮುದ್ರಣ ಸಮಯದಲ್ಲಿ ಅವುಗಳನ್ನು ನಿವಾರಿಸಲಾಗುವುದು.

ಸಜ್ಜನವಿದ್ವಜ್ಜನವಿಧೇಯ

ಸಂಪಾದಕ : ಬಾಲಸುಬ್ರಮಹ್ಮಣ್ಯ ಭಟ್ ದೂರವಾಣಿ- 9886193144